
ಸುಮಧುರ ಮಾಸಿಕ

ಭಾವನಾ

ಅಕ್ಟೋಬರ್ 2000 ರೂ.7




ಭಾವನಾ




ಯಾಕೆ ಬರೆಯಬೇಕು?

ಯಾಕೂ ಇಲ್ಲ. ಸುಮ್ಮನೆ ಬರೆಯಬೇಕು. ಖಾಲಿ ಪುಟಗಳಲ್ಲಿ ಯಾವ ಗೋಡೆಗಳೂ ಇರುವುದಿಲ್ಲ. ಎಲ್ಲ ಸ್ವಚ್ಛ ಸರಳ. ಈ ತುದಿಯಿಂದ ಮನುಜಲೋಕದ ಆ ತುದಿಯ ತನಕ ಎಲ್ಲ ತೋರುತ್ತದೆ. 'ಕೀಸರ ಬಾಸರ'ದ ಹೊಗೆಯಿಂದೆದ್ದು ಮನುಜಾಕೃತಿಗಳು ಬೆಚ್ಚನೆ ಪುಟದ ತೆಕ್ಕೆಗೆ ನಡೆದುಬರುತ್ತವೆ. ತನ್ನೆಲ್ಲ ಬರ, ನೆರೆ, ಕಾಯಿಲೆ, ವಿಕೃತಿಗಳೊಂದಿಗೇ ಇಡೀ ವಿಶ್ವ ತೊಟ್ಟಿಲ ಕೂಸಾಗಿ ನಿಮ್ಮ ಕೈಲಿ ತೂಗುತ್ತದೆ. ನಚ್ಚುಗೆಯ ಜೋಗುಳದಲ್ಲಿ, ಆತ್ಮ ಅಳಿಸಿ ಹೋಗುತ್ತದೆ. ಕಣ್ಣು ನಿರ್ಮಲವಾಗುತ್ತದೆ.

ಬರವಣಿಗೆ, ಬರೇ ಹಕ್ಕು ಬಾಧ್ಯತೆಯಲ್ಲ. ಅದೊಂದು ಶುದ್ಧ ಮಾನವೀಯ ಸಾಧ್ಯತೆ. ಅಂಗೈಕನ್ನಡಿಯಲ್ಲಿ ಜಗದ 'ಹಣ್ಣು' ಕಾಣುವ ಸಣ್ಣ ಮುಗ್ಧತೆ. ಪ್ರತಿಯೊಬ್ಬನೂ ಬರೆಯಬಲ್ಲ.

ವ್ಯಾಸರಾಯ ಬಲ್ಲಾಳರ ಕಾದಂಬರಿ 'ಹೆಜ್ಜೆ' ಹೊರಬಂದಿದೆ. ಚಿತ್ತಾಲರೂ ತಮ್ಮ ಹೊಸ ಕಾದಂಬರಿ 'ದಿಗಂಬರ' ಬರೆಯುತ್ತಿದ್ದಾರೆ. ಭೈರಪ್ಪನವರ, ಸಂಗೀತಕ್ಕೆ ಸಂಬಂಧಿಸಿದ ಕಾದಂಬರಿ ಅಚ್ಚಿಗೆ ಸಿದ್ಧಗೊಳ್ಳುತ್ತಿದೆ. ಈ 'ಕಾದಂಬರಿ ಪ್ರಕಾರ' ಇನ್ನೂ ನಮ್ಮ veteranಗಳನ್ನೇ ಯಾಕೆ ನೆಚ್ಚಿಕೊಂಡಿದೆ? ಕುಂ.ವೀ



(ಶಾಮಣ್ಣ), ಕೆ.ಸತ್ಯನಾರಾಯಣ (ಸನ್ನಿಧಾನ), ಉಮಾರಾವ್ (ನೂರುಸ್ವರ), ಎಚ್.ನಾಗವೇಣಿ (ಗಾಂಧಿ ಬಂದ), ಕಾ.ತ.ಚಿಕ್ಕಣ್ಣ (ದಂಡೆ), ಶ್ರೀಧರ ಮೂರ್ತಿ (ಕ್ರೋಧ), ಎಚ್.ಎಸ್. ಚಂಪಾವತಿ (ಶಿವಗಂಗಾ), ಮಹಾಬಲಮೂರ್ತಿ, (ಸದ್ದು), ಉದಯಕುಮಾರ್ ಹಬ್ಬು (ಕಪ್ಪು ದೇವತೆ)... ಇಂಥವರ ಬಿಡಿಪ್ರಯತ್ನಗಳನ್ನು ಬಿಟ್ಟರೆ, ಹೊಸ ತಲೆಮಾರಿನ ಲೇಖಕರಿಗೆ ಕಾದಂಬರಿ, ಅಭಿವ್ಯಕ್ತಿಯ ಮೇರು ದಾರಿ ಯಾಕಾಗಿಲ್ಲ? ಈ ಬಾರಿಯ 'ಕಥನ ಕುತೂಹಲ'ದಲ್ಲಿ, ವಿವೇಕ ಈ ಪ್ರಶ್ನೆ ಎತ್ತಿದ್ದಾರೆ.

ಕುಂ.ವೀ. ಅವರ 'ಮಜೇದಾರ್' ಅಂಕಣ ''ಭಳಾರೇ ವಿಚಿತ್ರಂ'' ಆರಂಭಗೊಂಡಿದೆ. ಪ್ರವಾಹದ ವಿರುದ್ಧ 'ನಡೆದು' ಅಮೆರಿಕಾವನ್ನು ಬಿಟ್ಟು ಮೈಸೂರಿಗೆ ಮರಳಿರುವ 'ಗಣಕಜ್ಞ' ಎಂ.ಆರ್. ರಾಮಶೇಷ, ಬಹುಮುಖಿ ಕಲಾವಿದ ಪ.ಸ.ಕುಮಾರ್ ಈ ಸಂಚಿಕೆಯ ಹೆಮ್ಮೆಯ ಅತಿಥಿಗಳು.

ಉತ್ತರ ಕನ್ನಡದ ಗುಣಗ್ರಾಹಿ ಸಾಹಿತಿ, ಹಟಮಾರಿ ಸ್ನೇಹಿತ ಜಿ.ಎಸ್. ಅವಧಾನಿ 52ರ ವಯಸ್ಸಿಗೇ ತೀರಿಕೊಂಡಿದ್ದಾರೆ. ಅವರನ್ನು ನೆನೆಯುತ್ತ ಅವರ ಮನೆಯವರಿಗೆ ಸಾಂತ್ವನ ಕೋರುತ್ತೇವೆ. ಮುಂದಿನ ಸಂಚಿಕೆಯಲ್ಲಿ ಅವರ ಅಪ್ರಕಟಿತ ಕವಿತೆಗಳನ್ನು ನೀಡಲಿದ್ದೇವೆ.

ಸಿಡ್ನಿ ಒಲಿಂಪಿಕ್ಸ್‌ನ ಜ್ವಾಲೆ, ಕ್ಷುದ್ರತೆಯನ್ನು ಸುಟ್ಟು, ಚೈತನ್ಯವನ್ನು ಬೆಳಗಿಸಲಿ.

ಸಂಪಾದಕ

ಕಾ ತ ಚಿಕ್ಕಣ್ಣ

ಕವಳ





ಆಹಾ! ಇದೇನು ಕವಳ! ಏಟು ಚಳಿ!! ಅಂತ ವಟಗುಟ್ಟುತ್ತ, ಹೊದ್ದಿದ್ದ ಓಬಿರಾಯನ ಕಾಲದ ಕಂಬಳಿಯನ್ನೇ ಇನ್ನೋಟು ಮೈ ತುಂಬ ಎಳಕೊಂಡು, ಜೇಬಿನಲ್ಲಿ ಇಲ್ಲದ ಹಾಳು ಬೀಡಿ ಮೋಟಿಗಾಗಿ ಬೈದುಕೊಳ್ಳುತ್ತ, ನರಪೇತಲ ನಾರಾಯಣನಾದ ಬೆಟ್ಟ, ಕೆರೆ ಕಡೆಗೆ ಹೆಜ್ಜೆ ಹಾಕುತ್ತಿದ್ದ. ಮಾಲಿಂಗೇಗೌಡ್ರ ಕಣದ ಬಳಿ ಯಾರೊ ಬೆಂಕಿ ಹಾಕಿದ್ದು, ಈ ದೂರದಿಂದಲೇ ಕಣ್ಣು ಕುಕ್ಕಿತು. ತಿವಿಯೊ ಕವಳದಲ್ಲಿ ಬೆಂಕಿ ಕಾವಿಗೆ ಮೈಯೊಡ್ಡಿದರೆ ಅದೇಟು ಹಿತ ಅಂತ ಮನಸ್ಸು ಹಲ್ಲಿಯ ಬಾಯಿಯಂತಾಡಿತು. ಹಟ್ಟಿ ಬುಟ್ಟಾಗ ಕಂಡಿದ್ದ 'ಎಂಡ'ದ ಅವಸರ ಈಗೇನು ಇಲ್ಲ, ಬೆಂಕಿ ಕಾಯಿಸಿಕೊಂಡೇ ಮಾಡಿದರಾಯ್ತು ಅಂತ ಏಕಾನ ಹಾಕುತ್ತ, ಅತ್ತಲೇ ಹೆಜ್ಜೆ ಊರಿದ. ಆ ಕವಗುಡುವ ಕವಳವನ್ನು ತಿವಿದು ತಿವಿದೂ, ಆ ಬೆಂಕಿಯ ಹೊಗೆ ನಲುಗಾಡುತ್ತ ಮೇಲೇರುತ್ತಿತ್ತು.

ರಾತ್ರಿ ಕಣದಲ್ಲಿ ರಾಶಿ ಕಾಯುತ್ತ ಮಲಗಿದ್ದ ಮಾಲಿಂಗೇಗೌಡ್ರ ಮನೆ ಅಳಿಯ ಚೆಲುವಪ್ಪ, ಅವನ ದಾಯಾದಿ ಸಣ್ಣ, ಮನೆಯಾಳು ನಿಂಗ ಅಲ್ಲದೆ ಪಕ್ಕದ ಸೂರೇಗೌಡನ ಕಣದ ರಾಚ ಮತ್ತು ಸುಬ್ಬಪ್ಪ ಬೆಂಕಿ ಸುತ್ತ ಕಾಲು ಚಾಚಿಕೊಂಡು, ಕೈಹಸ್ತವ ಬೆಂಕಿ ಮುಂದಾರಕ್ಕಿಟ್ಟು, ಅಹಹಾ... ಅಂತ ಕಾವು ಹೀರುತ್ತ, ಮಧ್ಯೆ ಬೀಡಿ ದಂ ಎಳೆಯುತ್ತ ಊರೊಳಗಿನ ಸಂದಿಗೊಂದಿಗಳ ಕತೆಯೊಳಗೆ ಮುಳುಗಿಹೋಗಿದ್ದರು. ಆ ರೋಚಕ ವೇಳೆಯಲ್ಲಿ, ಕರಿಕಂಬಳಿ ಹೊದ್ದುಕೊಂಡು ಬಂದ ಬೆಟ್ಟದ ಸುಳಿವು ಬಕಪಟ್ಟಿಗೆ ಸಿಕ್ಕಲಿಲ್ಲ. ಅವನು ನಿಂಗನ ಹಿಂದೆ ಬಂದು ನಿಂತಾಗಲೇ ನಿಗಾ!

''ಅಯ್ಯೋ! ದೈಯ್‌ನನ್ಮಗ್‌ನೇ? ರಾವು ತಗದುಬುಟ್ಟಲ್ಲೊ ಅಡ್ನಾಡಿ. ಮಾತಾಡ್ಕೊಂಡು ಬರೋದಲ್ವಾ?'' ಅಂತ ಚೆಲುವಪ್ಪ ಗದರಿಸಿದ. ಉಳಿದವರು ಆತರಿಸಿ ನೋಡಿದರು.

''ಅಯ್! ವಸಿ ಚಳಿನಾ ಚೆಲುವಪ್ಪಣ್ಣ. ಕವಳ ನೋಡು. ಮಕ ಹೂದ್ರ ಮಕ ಕಾಣಾಕ್ಕಿಲ್ಲ. ಬೆಂಕಿ ಕಂಡ್‌ನಲ್ಲ ಅದ್ಕೆ ಬಂದೆಕಂತೆ, ವಸಿ ಅತ್ತತ್ತ ಚೆಗಿಯೊ ನಿಂಗಾ'' ಅಂದು ಬೆಟ್ಟ, ಆ ನಿಂಗ ಒತ್ತುವವರೆಗೂ ಕಾಯದೆ ಕಬಕ್ಕನೆ ಕುಂತ. ಕುಕ್ಕರಗಾಲಲ್ಲಿ ನಿಂತಿದ್ದ ನಿಂಗ ಮುಗ್ಗರಿಸಿ ದಂಗಾಡಿ, ಕೊನೆಗೆ ನೆಲಕ್ಕಂಡೂರಿ, ''ಅಯ್! ಮಕ್‌ದಲ್ಲೇನು ಕಣ್ಣಿಲ್ವಾ ನಿಂಗೆ'' ಅಂತ ಕೊಸ ರಾಡಿಕೊಂಡು ಬೊಗಸೆ ಅಗಲ ಜಾಗಬಿಟ್ಟ.

ಬೆಟ್ಟ, ''ಆಯ್ತು ಬುಡಪ್ಪ ಅದ್ಯಾಕಂಗಾಡಿ. ಹಹಾಹ್ಹಾ... ಈ ಕವಳ ನೋಡು! ಇದೇನು ಒಳ್ಳೇದ್ಕಲ್ಲ ಬುಡು. ಇರೊ ಅವ್ರೆ, ತೊಗ್ರಿ, ಹುವ್ವ ಚೊಟ್ಟಿಲ್ಲ ಉದುರೋಯ್ತವೆ'' ಅಂತ ಪರಕೀಯ ತನದ ಪೊರೆ ಕಳಚಿ ಇವರೊಳಗೊಂದಾಗಲು ಪೀಠಿಕೆ ಹಾಕಿದ.

ಆದರೆ ನಿಂಗ ಮುಗ್ಗರಿಸಿ, ಅದು ಸುಬ್ಬಪ್ಪನಿಗೆ ತಾಕಿ, ಅವನು, ನಡುವೆ ಬಂದ ಬೆಟ್ಟನ ಈ ಬಗೆಯ ದಾಳಿಯ ಸೈಸೋದಿಕ್ಕೆ ಆಗದೆ, ''ಏನ್ಲಾ ಬೆಟ್ಟ! ಒಡ್ಡು ಬಡಿಯಾಕ್ಕೆ ಕರುದ್ರೂ ಬರ್ನಿಲ್ಲ. ನಾವೇನು ನಿನ್ಗೆ ಕಾಳು ಕೊಡ್‌ದೆ ಕಲ್ಲು ಕೊಡ್ತಿದ್ದುವ್ಲಾ?'' ಅಂತ ನೆವರಾಡಿದ.

ಬೆಟ್ಟ ಬಕಪಟ್ಟಿಗೆ ಬಗ್ಗೋನಲ್ಲ. ''ಹಂಗಲ್ಲ ಸುಬ್ಬಪ್ಪಣ್ಣ, ಎಮ್ಮೆ ಕಾಯಕ್ಕೆ ಅಂತ ನೀಲ್ ಕಂಠಪ್ಪನೋರ ಮನ್ಗೆ ಸೇರ್ಕ್ಕೊಂಡಿದ್ದ ನನ್ಸೈದ ಬುಟ್‌ಬುಡ್ತಲ್ಲ. ಇನ್ನು ಈಸ್ಕೊಂಡು ಬಂದುದ್ದ ತೀರಿಸ್ದೆ ಹೋದ್ರೆ, ಬುಡ್ತರಾ ಅವ್‌ರು? ಅದು ನ್ನಾದ್ರು ತೀರ್ಸರ್ವಾ ಅಂತ ಅವರ ಕಣಕ್ಕೆ ಒಡ್ ಬಡಿಯಾಕ್ಕೆ ನಾವಿಬ್ರು ಹೋಯ್ತಾ ಇವಿ ಕನಪ್ಪ'' ಅಂತ ಬೆಣ್ಣೆ ಮೇಲೆ ಕೂದಲು ತೆಗೆದಂಗೆ ಹೇಳಿದ.

''ಹು! ಹೂ! ಏನಾದ್ರು, ಒಂದುಕ್ಕೊಂದು ಹೆಣೀದೆ ಇದ್ರೆ, ನಿನ್ಗೆ ತಿಂದುದ್ದೆಲ್ಲಿ ಮೈಗೆ ಹತ್ತಾದು'' ಅಂತ ಸುಬ್ಬಪ್ಪ, ನೆವರಾಡುತ್ತಲೇ, ರಭಸವಾಗಿ ಒಂದು ದಂ ಎಳೆದು, ಜೋರಾಗಿ ಹೊಗೆ ಬಿಟ್ಟ. ಅದು ಬೆಂಕಿಹೊಗೆ ಮತ್ತು ಕವಳದ ಮಬ್ಬಿನೊಳಗೆ ನುಲಿದಾಡುತ್ತಾ ಹೋದಂಗೆ, ಬೆಟ್ಟನ ಮೈಯೊಳಗೆ ಕಚಗುಳಿ ಇಟ್ಟಂತಾಗತೊಡಗಿತು. ಅವನು ಹಂಗೇ ಇನ್ನೊಂದಪ ಅಡಿಗಣ್ಣಾಡಿಸಿದ. ನಿಂಗನ ಬಿಟ್ಟರೆ ಎಲ್ಲರೂ ಬೀಡಿ ದಂನ ಪರಮಾನಂದ ಶಿಖರದಲ್ಲಿದ್ದರು. ಇನ್ನು ಸೈಸೋದಿಕ್ಕಾಗದೆ, ಇವರೆಲ್ಲರಿಗಿಂತ ಆಳುತನದಲ್ಲಿ ಬಡಕಲನಾಗಿದ್ದ ರಾಚನಿಗೆ, ''ಒಂದು ಬೀಡಿ ತುಂಡಿದ್ರೆ ತತ್ತಾ ರಾಚಣ್ಣ'' ಅಂತ ಕೈ ನೀಡಿ ಕೇಳಿಯೇಬಿಟ್ಟ.

ಚೆಲುವಪ್ಪ, ಬೆಂಕಿ ತಳಸೇರಿದ ಬೀಡಿ ತುಂಡನ್ನು ಬೆರಳ ತುದಿಯಿಂದ ಚಿಮ್ಮಿಸುತ್ತ, ''ಪುಗ್‌ಸಟ್ಟೆ ಬೆಂಕಿ, ಪುಗ್‌ಸಟ್ಟೆ ಬೀಡಿ! ಈ ಚಳೀಗೆ ಯಾರ್ಗೆ ಬೇಕು ಯಾರ್ಗೆ ಬ್ಯಾಡ ಮತ್ತೆ'' ಅಂತ ಹುಬ್ಬೇರಿಸಿದ.

ಸುಬ್ಬಪ್ಪ ಒಂದು ಹುಸಲುಗೆಮ್ಮು ಕೆಮ್ಮಿ, ''ಈ ಚಳೀಗೆ ಅದೂ ಒಂದು ಆಗಿಬುಟ್ರೆ ಅದೇಟು ಹಿತ ಅಲುವ್ಲಾ ಬೆಟ್ಟ? ನೋಡು ಅದೂ ಪುಗ್‌ಸಟ್ಟೆಯೇ ಸಿಕ್ಕೊದಾದ್ರೆ ಯಾಕಾಗ್ ಬಾರ್‌ದು ಮತ್ತೆ'' ಅಂತ ಗೇಲಿ ಮಾಡಿದ.

ಹಿಂಡೊಳಗೆ ಕೂಡದೆ ಹೋದ ಕಾಗೆಮರಿ ಯಂಗಾದ ಬೆಟ್ಟ, ಆದರೂ ನಿಮಗೇನು ನಾನು ಅನ್ಯ ಅಲ್ಲ ಅನ್ನೋಥರ, ಬಲವಂತದಿಂದ ಮೋರೆ ಅಗಲಿಸಿ, ಹಲ್ಲುಬಿಟ್ಟ. ತನ್ನ ಕಥಾ ಗುಂಗಿನಲ್ಲೇ ಇದ್ದ ಸಣ್ಣ, ''ಆ ಕತೆ ಮುಗಿಸ್ ಬುಡ್ತೀನಿ ಕೇಳ್ರೊ! ಬೆಟ್ಟನ ಕತೆಯೇನು ದೂರ ಯಿಲ್ಲಕನಂತೆ'' ಅಂದ.

ರಾಚ, ''ದಿಟ, ಅದು ಅರ್ಧಕ್ಕೇ ನಿಂತೋಗ್‌ಬುಡ್ತಲ್ಲ ಮತ್ತೆ. ಹು ಹೂ ಹೇಳು ಸಣ್ಣ'' ಅಂತ ಅವಸರಿಸಿದ. ಮುಳುಗೋನಿಗೆ ಹುಲ್ಲುಕಡ್ಡಿ ಸಿಕ್ಕಂತಾಗಿ ಬೆಟ್ಟ ಕೊಂಚ ಸಡಿಲ ವಾದ. ಸಣ್ಣ ಈಗ ಒಂಥರ ನಕ್ಕು, ''ಅದೇ, ಆ ಹಿತ್ಲೊಳ್‌ಗೆ ತನ್ನ ಹೈದುನ್ಗೆ ಸಿಕ್ಕಾಕೊಂಡು ಬುಟ್ಟನಂತೆ ಅವ್‌ನು'' ಅಂದ.

ಚೆಲುವಪ್ಪ: ''ಒಳ್ಳೆ ಮಜಾ ಅದೆ ಬುಡು. ಮಗುನ ಕೈಗೆ ಅಪ್ಪ ಸಿಕ್ಕಾಕ್ಕೊಳ್ಳೋದು''

ರಾಚ ಚಿಲುಕವರೆ ಚಿಮುಕಿಸಿದಂಗೆ, ''ಆ ಹೈದ ಆಗ್ಲೇ ಆ ಹಿತ್ಲುಗೆ ಬರ್‌ಬೇಕಾ?'' ಅಂದ.

ಸಣ್ಣ: ''ಅದೂ ಕಳ್‌ಬಡ್ಡೀದು! ಕದ್ದು ಹಳಸ್ಲಕಾಯ ಹುಲ್ಲು ಮೆದೆಯೊಳ್ಗೆ ಅವುಸಿತಂತೆ! ಅದು ಹಣ್ಣಾಗ್ಯಾದಾ ಅಂತ ಬಂದ್ರೆ ಅಪ್ಪ ಇವುಳ್ಗೆ ಹಣ್ಮಾಡ್ತಾ ಅವ್‌ನೆ!''

ಎಲ್ಲರೂ ಹೊಟ್ಟೆ ಹುಣ್ಣಾಗುವಂತೆ ನಕ್ಕರು. ಸುತ್ತ ಕವಿದ ಕವಳ ಒಂಥರ ರಕ್ಷಣೆ ಒದಗಿಸಿತ್ತು. ಈ ವಿಷಯದಿಂದಲಾದರೂ ಈಗ ಇವರೊಳಗೆ ಒಂದಾಗಬೌದು ಅನ್ನೋ ಏಕೈಕ ಆಸೆಯಿಂದ ಬೆಟ್ಟ, ತಾನೂ ಬಿದ್ದು ಬಿದ್ದು ನಕ್ಕ.

ಮಾತಿಗೆ ಮುಂಚೆ ಪಕ್ಕೆ, ಎಲುಬಿಗೆ ಹೆಟ್ಟಿ ಹೆಟ್ಟಿಯೇ ಮಾತಾಡಿಸೊ ಚಾಳಿಯ ಸುಬ್ಬಪ್ಪ, ''ತಕ್ಕೊಳ್ರಪ್ಪ! ಈ ಗಿರೇಸ್ಥನ್ಗೂ ಈಗ ಹೈಲು ಹತ್‌ಬುಡ್ತು'' ಅಂತ ತಿವಿದ ಏಟಿಗೆ ಬೆಟ್ಟ ಮುಗ್ಗರಿಸಿ ಉಳ್ಳಾಡಿದ.

ಸಣ್ಣ, ''ಈ ಬೆಟ್ಟಯೇನು ಕಮ್ಮಿಯಿಲ್ಲ, ಮಳ್ಳಿಯಂಗೆ ಯಾರ್‍ಯಾರ್‍ಗೊ ಹತ್ತಿಸಿಬುಡ್ತಾನೆ...'' ಅಂತ ಬೆಟ್ಟನ ಮೋರೆ ನೋಡಿದ. ಬೆಟ್ಟ ಈಗ್ಯಾಕೊ ಮಾತುಗಳು ತನ್ನ ಕಡೆಗೇ ತಿರುಗುತ್ತಿರುವುದು ಕಂಡು, ಕಾವಿಗೆ ಕುಂತ ಕೋಳಿಯಂಗೆ, ದೇಹವ ಹಿಡಿ ಮಾಡಿಕೊಂಡ.

ಸುಬ್ಬಪ್ಪ, ತಲೆತುಂಬ ಹೊದ್ದುಕೊಂಡಿದ್ದ ಬೆಟ್ಟನ ಕಂಬಳಿ ಎಳೆಯುತ್ತಾ, ''ಅಯ್! ಇವು ನೇನು ಸಾಮಾನ್ಯದೋನಾ? ಈಗ ಮಗುನ್ನ ಜೀತ ಬುಡ್ಸಿ ಓದಕ್ಕೆ ಹಾಕ್ಯವ್‌ನೆ...'' ಅಂದ.

ಸಣ್ಣ: ''ಹಂಗಲ್ಲ ಕನೋ ಸುಬ್ಬಪ್ಪ, ಮಗುನ್ನ ಓದ್‌ಸೊ ಹುಚ್ಚು ಹೆಂಡ್ತೀದು! ರಂಪ ಮಾಡಿ ಇಸ್ಕೂಲ್ಗೆ ಸೇರಿಸಿಬುಟ್ಟಂತೆ! ಅಲ್ಲಾ, ಆ ಹುಚ್ಚು ಹೇಗೆ ಬಂತು ಅವುಳ್‌ಗೆ? ಅಲುವ್ಲಾ ಬೆಟ್ಟ?''

ಬೆಟ್ಟ, ಹೆಂಗಾದ್ರು ಮಾಡಿ ಇವರ ಸಲುಗೆ ಸಂಪಾದಿಸಿಬುಟ್ರೆ, ಬೀಡಿ ತುಂಡನೂ ಗಿಟ್ಟಿಸಿಕೊಬೌದು; ಇಂಥ ಮಾತುಗಳ ಬಾಣವೂ ತನ್ನ ಕಡೆಗೆ ತಿರುಗೋದಿಲ್ಲ ಅನ್ನೋ ಆಸೆಯಿಂದ ಕೊನೆಯ ಯತ್ನವಾಗಿ, ''ಹೂ ಕನೊ ಸಣ್ಣಣ್ಣ. ಅಪ್ಪ, ಮಗ ಸೇರ್‍ಕೊಂಡು ನನ್ನ ಹೆಡ್ಡ ಮಾಡ್‌ಬುಟ್ರು... ನಾನು ಹೆಡ್‌ನಾಗಿ ಬುಟ್ಟೆ...'' ಅಂತ ಮರುಗಿದ.

ಚೆಲುವಪ್ಪ ಉರಿಯುತ್ತಾ ಬಂದ ಗೊಬ್ಬಳಿ ಕೊನೆ ತುದಿಯ ಮಧ್ಯಕ್ಕೆ ತಳ್ಳಿ, ''ಅಲ್ಲ ಕಲ್ಲ ಬೆಟ್ಟ, ನಿನ್ನ ಪಿರುಕ್‌ದಲ್ಲೇ ಒಂದು ನರಪಿಳ್ಳೆ ಒಂದಕ್ಷರ ಕಲ್ತಿದ್ದಿಲ್ಲ. ಅಂಥಾದ್ರಲ್ಲಿ ನಿನ್ನೆದುನ್ಗೆ ಅದೆಂಗೆ ಈ ಕಲಿಯೊ ಹುಚ್ಚು ಹಿಡೀತ್ಲಾ ಮತ್ತೆ'' ಅಂತ ನಗಾಡಿದ.

ಸುಬ್ಬಪ್ಪ: ''ಇವುನ ಪಿರುಕ್‌ದಲ್ಲೆಯೇನು, ಇವ್‌ನ ಹೆಂಡ್ತಿ ಕಡೆ ಸೈತ ಯಾರಪ್ಪ ಅದ್ರ ಗಂಧ ಕಂಡೋರು'', ಹುಬ್ಬೇರಿಸಿದ.


ಸಣ್ಣ ಜೋಗು ಹಿಡಿದ ಕಾಲನ್ನು ಇನ್ನೊಂದು ಮಗ್ಗಲಿಗೆ ಹೊರಳಿಸಿ, ''ಏನು ಹೆಡ್‌ರಂಗೆ ಆಡ್ತೀರಯ್ಯ? ಬೆರ್‌ಕೆ ಬಿದ್ರೇನು ಆಗಾಕ್ಕಿಲ್ಲ ಅನ್ಕೊಂಡ್ರಾ?'' ಅಂದು ಕಣ್ಣು ಮಿಟುಕಿಸಿದ.

ಬೆಟ್ಟ ಬೆದರಿದ ಹಕ್ಕಿಯಂಗೆ ಮಿಕಿಮಿಕಿ ನೋಡಿದ. ಕೊರೆಗಾಳಿ ಸುತ್ತಲಿಂದಲೂ ಅಮರಿಕೊಂಡು ಕಳ್ಳು ನಡುಗಿಸುವಂತಿತ್ತು.

ರಾಚ ತನ್ನ ಕೈ, ಕಾಲು ಇನ್ನಷ್ಟು ಮುಂದಕ್ಕೆ ಚಾಚುತ್ತಾ, ''ಎಲ್ಲ ಒಗುಟ್ನಂಗೆ ಹೇಳ್ತೀಯಲ್ಲ ಸಣ್ಣ ನೀನು'' ಅಂತ ದುಂಡು ಚಾಚಿದ.

ಕವಳ ಕಮ್ಮಿಯಾಗಿರಲಿಲ್ಲ ದಿಟವಾದರೂ ಕಾವು ಮಾತ್ರ ಈಗ ಬಿರುಸಾಗಿ ಏರತೊಡಗಿತು.

ಚೆಲುವಪ್ಪ ಒಟ್ಟಿದ್ದ ಕಡ್ಡಿಪುಳ್ಳೆಯಿಂದಾಗಿ ಕೆಂಪಗೆ ಓಲಾಡುತ್ತ ಏರುತ್ತಿದ್ದ ಬೆಂಕಿ ಜ್ವಾಲೆಯನ್ನು ನೋಡುತ್ತ ಸಣ್ಣ, ''ಒಗ್‌ಟೇನು ಬಂತೊ ಲಾಲ! ಆರೇಳು ವರ್ಸದ ಹಿಂದೆ ಈ ಊರ್‍ಗೆ ಮೇಟ್ರಾಗಿ ಬಂದಿದ್ದೋರು ಯಾರು? ಚಾಮಯ್ಯ ಅಲ್ವಾ! ಅವುನು ಯಾವೂರೋನು? ಬೆಟ್ಟನ ಹೆಂಡ್ತಿ ಊರ್‍ನೋನಲ್ವಾ? ಅವುನೇ ಈ ಊರ್‍ನ ಇಸ್ಕೂಲ್ಗೆ



ಮೇಟ್ರಾಗಿ ಬಂದ್ನಾ! ಇವುಳು ಇದೇ ಊರ್ಗೆ ಸೊಸೆಯಾಗಿ ಬಂದ್‌ಳಾ! ಇದೋಗ್ಲಿ, ಅವರೂ ರ್ನಲ್ಲೂ ಸೈತ ಈ ಮೇಟ್ರ ಹೊಲಮನೆ ಕೆಲ್ಸಕ್ಕೆ ಅಂತ ಇವುಳು ಹೊಗ್ತಾ ಬತ್ತಾ ಇದ್‌ಳಾ! ಇಲ್ಲೂ ಅದು ಇದು ನೆವ್‌ದಲ್ಲಿ ಇಸ್ಕೂಲ್‌ಪಸ್ಕೂಲ್ ಕಡೀಕ್ಕೆ ಹೋಗ್ತಾ ಬತ್ತಾ ಇದ್‌ಳಾ! ಇನ್ನೇನಪ್ಪ ಬೇಕು ನಿಮ್ಗೆ...!?'', ಗರಗಸ ಕೊರೆದು ಉದುರಿಸೊ ಮರದ ಹೊಟ್ಟಿನಂಥ ಹುಸಿ ನಗುವ ಮಾತೊಳಗೆ ಬೆರೆಬೆರೆಸಿ ಉಸುರಿದ.

ಸುಬ್ಬಪ್ಪ: ''ಲೋ ಸಣ್ಣ, ಕಲೀಬೇಕು ಕನ್ಲ ನಿನ್ನತ್ರ ತರ್ಕವ'' ಅಂತ ಕೈ ಸುಟ್ಟ ಬೀಡಿ ತುಂಡ ಚಣ್ಣನೆ ಮೇಲೆಗರಿಸಿ ನಕ್ಕ. ಎಲ್ಲರೂ ನಗ ತೊಡಗಿದರು. ಬೆಟ್ಟನ ಮೈನೂಕು ಮೂಲಿಂದ ಬೆವರು ಜಿನುಗತೊಡಗಿತು. ಹೊದ್ದಿದ್ದ ಕಂಬಳಿ ಸೈತ ಹಂಗೇ ಜಾರಿ ನೆಲಪೂರಿತು. ಚಳಿ ಅಂತ,

ಆಗ ನಿಂಗ ಏಟೇ ಕೊಸರಾಡಿದರೂ ಒತ್ತಲಿಸಿ ಮುಂದೆ ಬಂದಿದ್ದೋನು, ಈಗ ತಂತಾನೆ ಹಿಂದೆ ಸರಿದ.

ಬೆಂಕಿಯ ಹೊಗೆ ಮಾತ್ರ ತನ್ನ ಪಾಡಿಗೆ ತಾನು ಏರುತ್ತಿತ್ತು. ಅದು ಮಧ್ಯೆ ಮಧ್ಯೆ ಸೇರಿ ಕೊಂಡಿದ್ದ ಹಸಿಕಡ್ಡಿಯ ಚಿಟಿಚಿಟಿ ಗುಟ್ಟಿಸುತ್ತಾ, ಬಳುಕಾಡುತ್ತಾ, ಕವಳದಲ್ಲಿ ಕವಳವಾಗಿ ಸೇರುತ್ತಿತ್ತು.

ಚೆಲುವಪ್ಪ ಈಗ ಧೈರ್ಯ ತುಂಬುವವನಂತೆ, ''ಅದ್ಯಾಕ್ಲ ನೀನು ಹಂಗೆ ಗರ ಬಡ್‌ದೋನಂಗೆ ಕುಂತೆ. ಸಿಗೋಳು ರಾಜಪ್ಪ ಮಾಭಾರ್ತದ ಕತೆ ಓದ್ವಾಗ ಹೇಳ್ತಿತ್ತಿಲ್ವಾ? ವಂಶ ಬೆಳುಸಕ್ಕೆ ತಂತಮ್ಮ ಹೆಂಡುರ್ನೇ ಯಾರ್ಯಾರ್ಗೋ ಒಪ್ಸಿ ರಾಜ್ಯ ಆಳಿ ಮೆರೆದಿರೋದಾ? ದೊಡ್ಡ ದೊಡ್ಡೋರ್‌ದೆ ಹಂಗಿರೋವಾಗ ನಿಂದೇನು ಮಾ ಬುಡ್ಲ'' ಅಂತ ಒಳಗುದ್ದು ಹಾಕಿದ.

ಎಲ್ಲರೂ ''ಹೂನಪ್ಪ ಮತ್ತೆ'' ಅಂತ ತಾಳ ಹಾಕಿದರು.

ಬೆಟ್ಟನಿಗೆ ಮಾತು ಹೂತುಹೋಗಿತ್ತು. ಕಪ್ಪು ಹಿಡಿದಿದ್ದ ಮೋರೇಲಿ ಬೆವರು ಜಿನುಗುವುದು ನಿಂತಿರಲಿಲ್ಲ. ಎದ್ದವನೇ, ಜಡ್ಡನೆ ರಗ್ಗು ಒದರಿ ಕೊಳ್ಳುತ್ತಾ, ದಡದಡನೆ ಹೊರಟ. ಎರಡು ಮೂರು ಮಾಸಗಳ ಹಿಂದೆ, ಹಸಿರು ಮುಕ್ಕಳಿಸುತ್ತ ಮೈದುಂಬಿಕೊಂಡಿದ್ದ ಹೊಲ ಬದುಗಳ ಇಡೀ ಅಗಾಂತರವೇ ಹುಲ್ಲು, ರಾಗಿ, ಜೋಳ, ಹುರುಳಿ, ಹುಚ್ಚೆಳ್ಳು ಗಿಡಗಳ ಕೂಳೆ ಬಿಟ್ಟುಕೊಂಡು ಬರಡು ಬಡಲಾಗಿ ಮಲಗಿತ್ತು. ಬೆಟ್ಟ ಹೊಲಗಳನ್ನು ಬಳಸಿ, ಬದುಗಳನ್ನು ದಾಟಿ ಹೋಗುತ್ತಿದ್ದ. ಅವನಿಗೆ ಕೂಳೆ ಚುಚ್ಚಿದರೂ ನಿಗಾ ಇರಲಿಲ್ಲ. ತನ್ನ ಹೆಂಡತಿ ಬೋರಿ, ಅವತ್ತು ತನ್ನ ಹಟ್ಟಿಗಳ ಹೆಂಚುಗಳೆಲ್ಲ ಅದರಾಡುವಂತೆ ಒದರಾಡಿ, ತನ್ನ ಮೂಲೆಗೆ ಕೂರಿಸಿ, ನೀಲಕಂಠಪ್ಪನ ಹಟ್ಟಿಗೆ ಹೋಗಬೇಕಿದ್ದ ಮಗನ ಇಸ್ಕೂಲ ಬಾಗಿಲು

ಹತ್ತುವಂಗೆ ಮಾಡಿದ್ದು ಮಾತ್ರ ಈ ಕವಳದಂಗೆ ಮನಸ್ಸನ್ನೆಲ್ಲ ಅಮರಿಕೊಂಡುಬಿಟ್ಟಿತು!

'ಬಾಯಿ ಮುಂದು ಮಾಡೊ ಹೆಣ್ಣು; ಊರು ಮುಂದಿನ ಹೊಲ ಎರಡೂ ಹಾಳೆ!' ಅಂತ ಹಿರಿಚಿಕ್ಕಯ್ಯ ಹೇಳುತ್ತಿದ್ದ ಮಾತು, ಮನಸ್ಸಿನ ಮೂಲೆಯಿಂದ ಅನಾಮತ್ತು ನುಗ್ಗಿಬಂತು. ಆ ತನ್ನ ಹುಳುಕು ಮುಚ್ಚಿಕೊಳ್ಳಾಕ್ಕೆ ಅಂತ ಹಿಂಗೆ ಬಾಯಿ ಮುಂದು ಮಾಡ್ತಾಳಾ? ಆ ಇಸ್ಕೂಲ ಮೇಟ್ರು ಯಾಕೆ ತನ್ನ ಹೈದುನ್ನೇ ಇಸ್ಕೂಲ್ಗೆ ಸೇರಿಸಿ ಕೊಳ್ಳೋದ್ರಲ್ಲಿ ಈಟು ಉಸಾಬರಿ ತೋರ್ದ್ದಾ!? ಊರೊಳಗಿನ ಮಕ್ಕಳಿಗೆಲ್ಲ ಹಿಂಗೇ ತೋರ್ ತಾನಾ!?- ಯಾರೋ ಗಹಗಹಿಸಿ ನಕ್ಕಂತಾ ಯಿತು. ಕೊತ ಕೊತ ಕುದಿದ ಬೆಟ್ಟ, ಕಾರೆಗುತ್ತಿ ಎಡುವಿ ಧುಪ್ಪನೆ ಬಿದ್ದ. ಥು! ಇದರೌವ್ವನಾ ಅಂತ ಆ ಗುತ್ತಿಯ, ಅಲ್ಲೇ ಹಾರೆಯಂಗೆ ಬಿದ್ದಿದ್ದ ಕಲ್ಲು ತಗೊಂಡು, ಬುಡಸಮೇತ ಮೀಟಿ, ಆಚೆ ಎಸೆದು ಉಸಿರುಬಿಟ್ಟ. ಇವತ್ತು ಈ ಲೌಡಿಯ ಬುಡಬಾರದು ಅಂತ ಕಟಕಟ ಹಲ್ಲು ಕಡಿದ.



ನೀಲಕಂಠಪ್ಪನ ಹಟ್ಟಿಯಲ್ಲಿ ಮಗ ಮೂರು ವರ್ಷಕ್ಕೆ ಜೀತ ಇರಬೇಕಾಗಿತ್ತು. ಮುಂಗಡವಾಗಿ ಈಸಿಕೊಂಡಿದ್ದೇ ಇನ್ನೂ ಅರ್ಧದಷ್ಟು ಎದೆ ಮೇಲೆ ಹೆಣಭಾರವಾಗಿ ಕುಂತದೆ. ಅದನ್ನು ತೀರಿಸೋದುಬುಟ್ಟು ಈ ಬಡ್ಡೀವುಕ್ಕೆ ಓದೊ ಕೊದೆ ಹತ್ತುಬುಡ್ತು! ದುಡ್ಡು ಕೊಟ್ಟ ಧಣಿ ಬುಟ್ಟಾನಾ? ಒಂದೂವರೆ ವರ್ಷದ ಕೂಲಿ ಮಾತ್ರ ಉತ್ತಾರ ಹಾಕೊಂಡ. ಇನ್ನೂ ನೂರೈವತ್ತು ಹಂಗೇ ಕುಂತದೆ. ಹೆಂಗೆ? ಯಾವ ಬಾಬಿನಿಂದ ತೀರಿಸಬೇಕು? ಈ ಒಡ್ಡು ಬಡಿಯೋದ್ರಿಂದ ತೀರಲಿ ಅಂದ್ರೆ, ದಿನಸಿಗೆ ಸೊನ್ನೆ; ದಿನಸಿ ಬ್ಯಾಡ ಸಾಲಕ್ಕೆ ವಜಾ ಹಾಕ್ಕೊ ಅಂದ್ರೆ, ಒಂದೈವತ್ತು ತೀರಬೌದು. ಆದ್ರೆ ಇನ್ನೂ ನೂರು ಜಮಗಡವಾಗೇ ಉಳಿದಿರುತ್ತಲ್ಲಾ...?

ಬೆಟ್ಟನ ಕಾಲುಗಳು ರಭಸವಾಗಿದ್ದೊ. ನಾಮ ಕಾವಸ್ಥೆ ಮೈಮೇಲಿದ್ದ ಕಂಬಳಿ ಜಾರಿ ಕೆಳಬಿತ್ತು. ಅದನ್ನು ಎತ್ತಿ, ಒಂದಪ ಬೀಸಿ ಒದರಿ, ಹೆಗಲ ಮೇಲೆ ಒಗೆದುಕೊಂಡ. ಮೊದಲೇ ನವೆದಿದ್ದ ಅದು ಇನ್ನಷ್ಟು ಪಸಯಿತು. ''ಹೋಗ್ಲಿ, ಎಲ್ಲ ಹಾಳಾಗೋಗ್ಲಿ'' ಅಂತ ಗಟ್ಟಿಯಾಗೇ ಲೊಚ ಗುಟ್ಟಿದ. ಇವತ್ತು ಈ ಕವಳ ಯಾರನ್ನ ತಗೊಂಡು ಹೋಗೋದಿಕ್ಕೆ ಹಿಂಗೆ ಹಠ ಹಿಡಕೊಂಡದೆ...?

ಇಡೀ ಆಯಸ್ಸು ಪೂರ್ತಿ ಕೂಲಿನಾಲಿ ಮಾಡಿ, ಜೀವನ ನೀಸಿಕೊಂಡು ಬರೋದ್ಕೇ ಹರಾಕಷ್ಟಪಟ್ಟ ಅಪ್ಪ, ಅವರಪ್ಪ, ಮುತ್ತಾತಂದಿರೆಲ್ಲ ಈ ಓದೊ ಆಸೆ ಪಟ್ಟುದಾದ್ರು ಉಂಟಾ? ತನ್ನ ತಲೆವೊಳಗೂ ಒಂದು ದಿನವಾದ್ರು ಇದು ಸುಳೀತಾ? ಅಂಥಾದ್ರಲ್ಲಿ ಈ ನನ್ನ ಹೈದನಿಗೆ ಇದು ಹೆಂಗೆ ಬಂತು? ಸಣ್ಣ ಹೇಳೊಹಂಗೆ ಏನಾದ್ರು ಈ ಗರ್ತಿ...!?

ಯಾರೊ ಕದ್ದು ತಿಂದು ಎಸೆದಿದ್ದ ಹಲಸಿನ ಸೆದ್ರೆಹೋಳು ಕಾಲಿಗೆ ತೊಡರಿತು. ಝಾಡಿಸಿ ಒದ್ದ. ಅದು ದಮ್ಮಯ್ಯಾ ಅಂತ ಅರ್ಧ ಹೊಲದಾಚೆಗೆ ಹಾರಿಬಿತ್ತು.

ಸೋನೆಮಳೆಗಾಲದಲ್ಲಿ ಇಸ್ಕೂಲ ಕಿದ್ದಾರದಲ್ಲಿ ಎಮ್ಮೆ ಮೇಯಿಸುತ್ತಿದ್ದ ಮಗ, ಇಸ್ಕೂಲ ಮಕ್ಕಳು ಆಡೋದು, ಓದೋದು ಎಲ್ಲನೂ ಕಿಟಕೀಲಿ ನೋಡಿ, ತಾನು ಹಂಗೇ ಓದಕ್ಕೆ ಹೋಗಬೇಕು ಅಂತ ಹಠ ಹಿಡಿದುಬುಟ್ಟ ಅಂತ ಅಲ್ಲಿಂದ ರಾಗ ಹಾಡೋದಿಕ್ಕೆ ಸುರು ಮಾಡಿದ ಹೆಂಡ್ತಿ, ತನ್ನ ತಲೆಯ ಗೊಬ್ಬರ ಮಾಡಿಬುಟ್ಟಳು. ಆಗಂತು ಇದೇನು ತಿಳಿಲೇಯಿಲ್ಲ! ಆ ಸಣ್ಣ, ಚೆಲುವಪ್ಪ ಹೇಳಂಗೆ ಮನುಷ್ಯನ ಆಸೆ ಮಾನ ಮರ್ರಾದೆನೆಲ್ಲ ಹರಾಜು ಹಾಕಿಬುಡ್ತದೆ. ಅದೇನೊ ಹೇಳ್ತಾರಲ್ಲ ಎಲ್ಲನು ಬುಟ್ಟೋಳು ಊರಿಗೆ ದೊಡ್ಡೋಳು ಅಂತ...!

ಬೆಟ್ಟ ಕೆರೆದಂಡೆ ಮೇಲೆ ನಿಂತಿದ್ದ. ಗುಳುಮುಳುಕ, ಚ್ವಾರೆ ಹಕ್ಕಿಗಳೆಲ್ಲ ಈ ಥಂಡಿ ನೀರಿನ ಮೇಲೆ ಯಥಾವತ್ತು ತೇಲ್ತಾ ಇದ್ದವು. ಆ ಕಡೆಯಿಂದ ಕೊರೆಗಾಳಿ ಎದೆಬಿರಿಯೋ ಹಂಗೆ ಬೀಸಿ ಬರುತ್ತಿತ್ತು.

ಇವತ್ತು ಎರಡರಲ್ಲಿ ಒಂದಾಗಲೇಬೇಕು... ಒಂದು-ಅವ್ವ, ಮಗ ನನ್ನೊಟ್ಟಿಗೆ ಇರೋದಾದ್ರೆ, ಈ ಇಸ್ಕೂಲು ಪಸ್ಕೂಲು ಬುಟ್ಟು ನೀಲಕಂಠಪ್ಪ ನೋರ ಹಟ್ಟಿಗೋಗಿ ಸೇರ್ಕೋಬೇಕು! ಅದಾಗದು ಅನ್ನೋದಾದ್ರೆ, ಹಾದರಕ್ಕೆ ಹುಟ್ಟಿದೋವು ಹಟ್ಟಿ ಬುಟ್ಟು ಹೋಗಬೇಕು...

ಬೆಟ್ಟನ ದೇಹದ ನಾಕು ಮೂಲೆಯೊಳಗಿನ ನರನಾಡಿಗಳೆಲ್ಲ ಲೊಚಗುಟ್ಟಿದವು. ಬುಡೋದಿಲ್ಲ ಅಂತ ಪಲ್ಲಿಯಂಗೆ ಕಟಕಟ ಕಡಿದ. ಮೂಡಲ ದಿಕ್ಕಿನಿಂದ ಈ ಕೊರೆ-ಕವಳದೊಳಗೆ ಹೊತ್ತು, ಮಸಮಸಕಾಗಿ ಕೆಂಪು ಬೀರಿತ್ತು. 'ಎಂಡ' ಮಾಡಬೇಕು ಅಂತ ಬಂದೋನು, ಈಗ ಅದರ ಸುಳಿವೇ ಇಲ್ಲದೆ, ತಿರುಗಿ ಊರು ಕಡೆಗೆ ದಪದಪನೆ ಹೆಜ್ಜೆ ಹಾಕತೊಡಗಿದ.

'ಈ ಹೈದ ನನ್ಗೆ ಹುಟ್ಟೇಯಿಲ್ಲ ಅನ್ನೋದು ದಿಟವಾಗಿಬುಟ್ರೆ!' ಸಣ್ಣ ಬಿಟ್ಟ ಸರ್ಪ ತಿರುಗಿ ಭುಸ್ಸನೆ ಹೆಡೆ ಎತ್ತಿತು. ಮುಲುಗುಟ್ಟಿದ. ಹಂಗಾದ್ರೆ, ಇವಳನ್ನು ಒದ್ದು ಆಚೆ ಹಾಕಿ ಇನ್ನೊಂದು ಹೆಣ್ಣ ಗಂಟು ಹಾಕಿಕೊಳ್ಳೋದಾ! ಮತ್ತೊಂದು ಯೋಚನೆ ಬಾಣದಂಗೆ ಎದೆ ಕುಕ್ಕಿತು. ಯಾವ ಹೊಲ ಮನೆ ಮಠ ಕಂಡು ಈ ಪುರಂದ್ರನಿಗೆ ಹೆಣ್ಣು ಒಪ್ಪಿ ಬರಬೇಕು! ತಾನೇನು ಆ ನೀಲಕಂಠಪ್ಪ, ಮಾಲಿಂಗೇಗೌಡ್ರ, ಮನೆತನದೊನಾ? ಮತ್ತೆ ಅವನ ಮನಸ್ಸು ಕತ್ತು ಮುರಿದ ಕೋಳಿಯಂಗೆ ಮುದುರಿತು.

ಬೆಟ್ಟ ಹಂಗೇ ಗಕ್ಕನೆ ನಿಂತ. ಹೊಟ್ಟೆಗೆ ಅಂಬಲಿ ಇಲ್ಲದೆ ಇದ್ದರೂ ಸೈ, ಹೆಂಡ್ತಿಯ ಇನ್ನೊಬ್ಬನಿಗೆ ಬುಟ್ಕೊಂಡು ಊರೊಳಗೆ ತಲೆ ಎತ್ತಿಕೊಂಡು ಬದುಕೋದು ಉಂಟಾ? ಇಂಥಾದ್ದಕ್ಕೆಲ್ಲ ಹೇಳಿ ಮಾಡಿಸಂಗಿರೊ ಆ ಹೋಟಲ ಹಟ್ಟಿ, ಮಾನ ತೆಗೆಯೊ ಕೆಸರುಗದ್ದೆಯಾಗಿ ಬಿಡುತ್ತದಲ್ಲ...!!

ಬೆಟ್ಟನಿಗೆ ಹಗೇವಿಗಿಳಿಸಿ ಮುಚ್ಚಿದಂತಾ



ಯಿತು. ತಿರುಗಿ ಹೆಜ್ಜೆ ರಭಸಗೊಳಿಸಿದ. ಹೊತಾರೆಯೇ ಎದ್ದು, ಒಂದು ಬೀಡಿತುಂಡು, ಅರ್ಧ ಗಳಾಸು ಕಾಫಿ ನೀರಿಗಾಗಿ ಅವರಿವರ ಹಿಂದೆ ಅಲೆದು ಜೀವನ ಆರಂಭಿಸುತ್ತಿದ್ದೋನಿಗೆ ಇವತ್ತು, ಆ ಸಣ್ಣ, ಚೆಲುವಪ್ಪ, ಸುಬ್ಬಪ್ಪ, ರಾಚ ಎಲ್ಲ ಎದೆಯೊಳಕ್ಕೆ ನುಗ್ಗಿ ರಂಗ ಕಟ್ಟಬಿಟ್ಟಿದ್ದರು!

''ಏನ್ಲಾ ಬೆಟ್ಟ, ಇವತ್ತು ಅಪರೂಪ್ಕೆ ಈಟುಬಿರ್ನೆ ಕೆರೆಕಡೀಕ್ಕೆ ಹೋಗಿ ಬತ್ತಾ ಇದ್ದಿ. ಇವತ್ತೇನೊ ಕಾದದೆಕಂತೆ ಬುಡಪ್ಪ... ಹೊತ್ತು ಇವತ್ತೇನಾರ ಪಡೂಗಡಿಂದ ಮೂಡಿದ್ರೂ ಮೂಡ್‌ಬೌದು...''

ಬೆಟ್ಟ ಆತರಿಸಿ ನೋಡಿದ, ಮರಿದ್ಯಾವ ಎದುರಿಗೆ ನಗುತ್ತ ನಿಂತಿದ್ದ. ಮೈ ಉರಿದು ಹೋಯಿತು. ಎಲ್ಲ ಬಡ್ಡೀಮಕ್ಕಳು ಸೈತ, ತಾವು ಮಾತ್ರವೇ ಸಾಚ ಅಂತ ಭಾವ್ರುಣಸಿಕೊಂಡಂಗೆ ಆಡ್ತಾರೆ!!

''ಅದೇನು ಅಮ್ಮಿಕೊಂಡು ಹೋಗ್ಲ, ಕಂಡೀವಿನಿಕಂತೆ'' ಅಂದವನೇ ಈಗ ನಡುಗೆಯ ಜೋರು ಮಾಡಿದ.

ಆ ಮರಿದ್ಯಾವ, 'ಚೆಂಗೂಲಿ ನನ್ಮಗುನ್ಗೆ ಏನಪ್ಪ ಆಗ್ಯದೆ ಇವತ್ತು!' ಅಂದುಕೊಂಡೋನು, ಹೆಡ್ಗೆ ಗಾತ್ರ ಹಲಸ್ನಣ್ಣ, ಒಮ್ಮೆಕ್ಕೆ, ಒಬ್ಬನೇ ತಿಂದು ಈ ಹೊಟ್ಟೆ ನುಲಿತ ಸೈಸಕ್ಕಾಗದು ಅಂತ ಅಲ್ಲೇ ಬೇಲಿ ಮಗ್ಗಲಿಗೋಗಿ ಗಬಕ್ಕನೆ ಕುಂತುಕೊಂಡ.

ಬೆಟ್ಟನ ಎದೆ ಕೆಂಡದ ಹೊಂಡವಾಗಿತ್ತು. ಹಳ್ಳಕ್ಕೆ ಬಿದ್ರೆ, ಆಳಿಗೊಂದು ಕಲ್ಲು ಅಂತ, ಬಿದ್ದೋನ ತುಳ್ದು, ತಾವು ಮಾತ್ರ ಮಂತಾನಸ್ಥನ ಮೊಮ್ಮಕ್ಳು ಥರ ಆಡ್ತಾರೆ ಗಿರೇಸ್ಥರು ಅಂದುಕೊಂಡು ಇತ್ತ ತಿರುಗಿದರೆ, ಆ ಕಡೆಯಿಂದ ಸ್ಕೂಲ್ ಮೇಸ್ಟರು ಬರುತ್ತಿದ್ದು ಕಣ್ಣಗೆ ಬಿತ್ತು!

ಬೆಟ್ಟನ ಬುರುಡೆಯೊಳಗೆ ಏಕದಂ ಮದ್ದು ಸಿಡಿದಂಗಾಯಿತು. ಗಕ್ಕನೆ ನಿಂತ. ಆ ಮೇಸ್ಟರು ನಗುತ್ತಾ, ''ಏನು ಬೆಟ್ಟಪ್ಪ, ಚೆನ್ನಾಗಿದ್ದೀರಾ'' ಅಂತ ತಲೆ ಮೇಲಿಂದ ಜಾರಿದ ಟರ್ಕಿಟವೆಲ್ಲು ತೆಗೆದು ಒದರಿ, ಕೊರಳಸುತ್ತ ಹೊದ್ದುಕೊಂಡರು.

ಬೆಟ್ಟನಿಗೆ ಒಂದು ಕ್ಷಣ ಏನೂ ತಿಳಿಯದೆ ಚಟಪಟಿಸುತ್ತ ನಿಂತ.

ಮೇಸ್ಟರು ಇನ್ನಷ್ಟು ಹತ್ತಿರ ಬಂದು, ''ಏನು ಬೆಟ್ಟಪ್ಪ, ಮಗನ್ನ ಸ್ಕೂಲ್ಗೆ ಸೇರಿಸಿದ ಸಿಟ್ಟು ಇನ್ನೂ ಇಳಿದೇ ಇಲ್ವಾ? ದಿಟ-ಒಂದರಿಂದ ಇನ್ನೊಂದ್ಕೆ ಒಗ್ಗೋದು ಸ್ವಲ್ಪ ಕಷ್ಟ. ಅನಾಯಾಸ್ವಾಗಿ ಜೀತದ ಹಣ ತಪ್ಪೋಯ್ತಲ್ಲ ಅನ್ನೋ ಕೋಪ ಬೇರೆ, ಅಲ್ವಾ?'' ನಗುತ್ತ ಹೇಳುತ್ತಿದ್ದರು.

ಸಣ್ಣ ಹೇಳಿದ್ದು ದಿಟವಾ ಅಂತ ಕೊಳ್ಳಪಟ್ಟೆ ಹಿಡಿದು ಕೇಳಬೇಕೆಂದುಕೊಂಡಿದ್ದ ಬೆಟ್ಟನಿಗೆ, ಯಾಕೊ ಅದಾಗದೆ, ''ಹೋಗಯ್ಯ ನೀನ್ಯಾರು ನನ್ಗೆ ಹೇಳಕ್ಕೆ'' ಅಂತ ಗುಡುಗಿದ.

ಮೇಸ್ಟರು, ''ಅಲ್ಲಾ ಬೆಟ್ಟಪ್ಪ, ಈ ಸಿಟ್ಟು ಯಾರ ಮೇಲೆ? ಅಷ್ಟಕ್ಕೂ ಸ್ಕೂಲ್ಗೆ ಸೇರ್ಸಿರೋದು ನಿಮ್ಮ ಮಗನ್ನೆ ತಾನೆ...'' ಅಂದ್ರು. ಚಳಿ ಜಾಸ್ತಿ ಅನಿಸಿ, ಕೊಳ್ಳಿಗೆ ಸುತ್ತಿದ್ದ ಟವೆಲ್ಲನ್ನು ಬಿಚ್ಚಿ ತಲೆ ತುಂಬ ಹೊದ್ದುಕೊಳ್ಳುವಾಗ, ಅವರ ಕತ್ತಿನ ಎಡಭಾಗದಲ್ಲಿದ್ದ ಮಚ್ಚೆ ಇವನ ಕಣ್ಣಿಗೆ ಧುತ್ತನೆ ಬಿತ್ತು. ದುರುದುರು ನೋಡಿದ. ''ನೀತಿ ಹೇಳಕ್ಕೆ ಬರ್‌ಬ್ಯಾಡ ಹೋಗಯ್ಯ, ಕಂಡಿದ್ದೀನಿ ಈಗ್ಯಾಕೆ ಮಾತು'' ಎಂದವನೇ ಹಟ್ಟಿ ಕಡೆಗೆ, ಮಹಾ ಶೋಧಕ್ಕೆ ಹೊರಟವನಂತೆ, ಗೂಳಿಯಂಗೆ ನುಗ್ಗಿದ.

ಬೋರಿ ಪಾರ ಮಾಡಲು ಹಜಾರ ಸಾರಿಸು ತ್ತಿದ್ದಳು. ''ಲೋ ಸೂಳೆ ಮಗ್ನೆ ಎಲ್ಲಿದ್ದೀಯೊ'' ಅಂತ ಅಬ್ಬರಿಸಿದ ಸದ್ದಿಗೆ, ಅವಳು ಬೆಚ್ಚಿ ದಡಕ್ಕನೆ ತಿರುಗಿದಳು. ಗಂಡರಾಯ! ಇವುಂದು ತಪ್ಪನ್ನಿಲ್ಲ ಅಂದುಕೊಳ್ಳುತ್ತ, ಗಂಜಳ ತೊಪ್ಪೆ ಬೆರೆಸಿದ್ದ ನೀರಿನ ಜೋಸಿಯ ಹಿಡಕೊಂಡು ಈಚೆ ಬಂದಳು.

''ಎಲ್ನೆ ಅವುನು?'' ಅಂತ ಕಣ್ಣು ಮಿಡಿಕಿಸಿದ.

''ಏನು ಹೊತಾರಲೇ ಎದ್ದು ತಿರುಗಾ ರಂಗಕಟ್‌ದಂಗೆ ಕಾಣ್ತದೆ. ಇವತ್ತು ಸನಿವಾರಲ್ವ,

ಅದಾಗ್ಲೆ ಇಸ್ಕೂಲ್ಗೆ ಹೋಗ್ಯದೆ ಕಂತೆ, ಆ ನೀಲ್‌ಕಂಠಪ್ಪನೋರ ಮಗ ಬಂದಿದ್ರು, ನಿನ್ನ ಬರಾಕ್ಕೇಳಿದ್ರಂತೆ ಅದೇನು ಕೇಳೋಗು'' ಅಂತ ತನ್ನ ಪಾಡಿಗೆ ತಾನು ಬೀದಿಗೆ ಬಂದಳು.

''ನೀಲ್‌ಕಂಠಪ್ಪ-ಅವ್‌ನ ಹಣ, ನೀನು-ನಿನ್‌ಮಿಂಡ; ಮಿಂಡುನ್ಗೆ ಹುಟ್ಟಿದ ಮಗ... ಎಲ್ಲ ಹಲಾಲ್‌ಕೋರ್ರು ನನ್ಮಕ್ಕಳು. ಇಸ್ಕೂಲ್ಗೆ ಹೋದ್ನಾ ಇಸ್ಕೂಲ್ಗೆ! ಹೋಗ್ಲಿ ತಾಳು. ನಿಮ್ಗೆಲ್ಲ ಮಾಡ್ತೀನಿ...'' ಅಂದವನೆ ಅವಳ ಕೈಲಿದ್ದ ಬೋಸಿ ಕಿತ್ತು, ಅತ್ತ ಒಗೆದು, ದಡದಡ ಓಡಿದ.

''ಕೂಡಿದಾಗೀದ್ಲೂ ಇದೇ ಆಯ್ತು. ಕೈಲೇನು ಕಿಸಿಯಾಕ್ಕಿಲ್ಲ. ಬರೀ ಬಾಯಿ! ಮಗ ಹೋಗಿ ದುಡೀಬೇಕು ತಾನು ಮಾತ್ರ ಅವರಿವ್ರ ಹಿಂದೆ ಸುತ್ಕೊಂಡು ಯಾಚ್ಕ ಹಾಕ್‌ಬೇಕು. ಇದೊಂದು ಬಾಳಾ....'' ಅಂತ ಬೋರಿ, ಬಿದ್ದು ಉಳ್ಳಾಡುತ್ತಿದ್ದ ಬೋಸಿ ಎತ್ತಿಕೊಂಡು, ಅದರ ತಳದಲ್ಲಿದ್ದ ತೊಪ್ಪೆ ಗಂಜಲವ ಮೋರಿಗೆ ಸುರಿದು, ಒಳಬಂದಳು.

ಬೆಟ್ಟ, ನೀಲಕಂಠಪ್ಪನಿಗೆ ಸಿಗಲೇಬಾರದು ಅಂತ ನಿಚ್ಚಯ ಮಾಡಿಕೊಂಡಿದ್ದ. ಆದರೆ ನಡುಬೀದಿಯಲ್ಲಿ ಆ ನೀಲಕಂಠಪ್ಪನೇ ಕೊತ್ತಿಯಂತೆ ಎದುರಾಗಿಬಿಟ್ಟ.

''ಯಾಕ್ಲಾ ಬೆಟ್ಟ? ಹೇಳಿಕಳ್ಸಿ ಏಟೊತ್ತಾಯ್ತು ಬರ್ಲೇ ಬಾರ್‌ದ? ಈಗ ನೋಡಿದ್ರೆ, ಎತ್ಲಗೊ ಹೋಯ್ತಾ ಇದ್ದೀಯಲ್ಲ'' ಅಂತ ಅವರೇ ಅಡ್ಡಗಟ್ಟಿದರು.

ಬೆಟ್ಟನ ರಭಸ ನೀರು ಸುರಿದ ಹೆಂಟೆಯಂಗಾಯಿತು. ಉಸಿರುಬಿಡುತ್ತಾ ನಿಂತ. ತಿರುಗಿ ನೀಲಕಂಠಪ್ಪ, ''ಹತ್‌ಮೂಟೆ ಹುಳ್ಳಿ ಬಿದ್ದದೆ. ಹೊಳೆನರ್‌ಸೀಪುರಕ್ಕೆ ಹೋಗಿ ಆ ಮಂಡಿಗೆ ಹಾಕಿಬುಟ್ಟು ಬರ್‌ಬೇಕು. ನಿನ್‌ಜ್ತತೆ ಹಿರಿಯೋನು ಬತ್ತಾನೆ. ಒಡ್ಡು ಮುಗಿಸ್ಕೊಂಡು ಇವತ್ತು ರಾತ್ರಿ ಉಂಡು ಗಾಡಿಕಟ್‌ಬುಡಿ. ಅಂ...'' ಗಂಟಲು ಏರಿಸಿದರು.


ಛಾಯಾಚಿತ್ರ ರವಿರಾಜ್ ಎಂ.ಡಿ.

ಬೆಟ್ಟ ಹಂಗೇ ನಿಂತಿದ್ದ.

''ಅಯ್! ಇದ್ಯಾಕ್ಲ, ಹಿಂಗೆ ಗರ ಬಡ್‌ದೋನಂಗೆ ನಿಂತೆ. ಬುತ್ತಿಗಿತ್ತಿ ಕಟ್ಟಿಸ್ಕೊಂಡು ಹೊಂಡೀವ್ರಂತೆ, ಈಗ ನಡಿ, ಕಣದ ಕಡೀಕ್ಕೆ ಹುಲ್ಲು ಹಂಡಿವಂತೆ'', ನೀಲಕಂಠಪ್ಪ ಕೇಳಿದರು. ಈಗ ಬೆಟ್ಟ, ''ಆಯ್ತು ಬತ್ತೀನಿ ನಡೀರಿ'' ಅಂತ ಉಸಿರಿದ.

'ಹು! ಹಂಗೆ ಮಾಡು' ಅಂದ ನೀಲಕಂಠಪ್ಪ ಮುಂದೆ ನಡೆದರು. ಬೆಟ್ಟ ಈಗ ಸ್ಕೂಲಿನತ್ತ ಹೆಜ್ಜೆ ಹಾಕಿದ.

ಸುತ್ತ ಕಳ್ಳಿಬೇಲಿ ಬೆಳೆದಿದ್ದ ಸ್ಕೂಲಮಠ ಅದರೊಳಗೆ ಮುಳುಗಿಹೋದಂಗೆ ಕಾಣುತ್ತಿತ್ತು. ಬೇಲಿಗೆ ಅಂಟಿಸಿದ್ದ ಬಿದಿರು ಬಾಗಿಲನ್ನು ತಳ್ಳಿಕೊಂಡು ಇವನು ಒಳ ಬಂದ. ಸ್ಕೂಲಿ ಮಕ್ಕಳು ಆಗಲೇ ಮಠದ ಜಗುಲಿ ಮೇಲೆ, ಕೊಠಡಿ ಒಳಗೆಲ್ಲ ತುಂಬಿಕೊಂಡಿದ್ದವು. ಬೆಟ್ಟ

ತಾನು ಬರಬಾರದ ಜಾಗಕ್ಕೆ ಬಂದವನಂತೆ ತಳಾರಕ್ಕೆ ಹೆಜ್ಜೆ ಊರಿದ. ನಮ್ಮೂರ್ರೂಳ್ಗೆ ಈಟು ಮಕ್ಕಳವೆ ಅಂತ ಇಲ್ಲಿಗಂಟ ಗೊತ್ತಿರಲಿಲ್ಲ. ಒಳ್ಳೆ ಮುಂಗಾರು ಮಳೆಗೆ ಬಿದ್ದ ಮೀನಂಗೆ ಊರುತುಂಬ ಮರಿ ಮಾಡ್ಯಾವರೆ ಈ ಜನ! ಆ ಪಂಚಾಯ್ತಿ ಮೆಂಬ್ರು ತಮ್ಮಯ್ಯ, ಅವತ್ತು ಹೋಟ್ಲಲ್ಲಿ, ಈಗ ನಮ್ಮೂರ ಸ್ಕೂಲಿನ ಸೆಟ್ರೆಂತು ಯಾವ ಊರಿಗೂ ಕಮ್ಮಿಯಿಲ್ಲ ಅಂತ ಹೇಳಿಕೊಳ್ಳುತ್ತಿದ್ದ. ಅದು ದಿಟವೇ! ಇಲ್ಲಿ ಮಕ್ಕಳು ಕೆಲವು ಗುದ್ದುಮುರಿ ಆಡುತ್ತಿದ್ದವು. ಹಲವು ಬಾವುಟ ಹಾರಿಸಲು ನೆಟ್ಟಿದ್ದ ಕಂಬ ಏರುವ ಮತ್ತು ಜಾರುವ ಆಟ ಆಡುತ್ತಿದ್ದವು. ಇನ್ನೂ ಕೆಲವು ಕುಂಟೆಬಿಲ್ಲೆ ಆಡುತ್ತಿದ್ದವು. ಕೆಲವು ಮಾತ್ರ ಅಲ್ಲಲ್ಲೇ ಕುಂತು ಬರೆಯುತ್ತಿದ್ದವು.

ಬೆಟ್ಟ ಗೌಗ್ಗಲ್ಲಿನಂತೆ ನಿಂತು ನೋಡಿದ. ಮಗ ಕಣ್ಣಿಗೆ ಬೀಳಲಿಲ್ಲ. ಯಾವ ಹೈದ, ಯಾವ ಹೆಣ್ಣು ಸೈತ, ಯಾರು ಬಂದರು ಯಾರು ಬಿಟ್ಟರು ಅನ್ನೊ ಕಿಂಚಿತ್ತು ನಿಗವೂ ಇಲ್ಲದೆ ತಮ್ಮ ಲೋಕದಲ್ಲಿ ಮುಳುಗಿ ಹೋಗಿದ್ದವು. ಹಂಗೆಯೇ ಜಗುಲಿ ಮೇಲೆಲ್ಲ ಕಣ್ಣಾಡಿಸುತ್ತಾ ಕೊಠಡಿಯೊಳಕ್ಕೆ ಕಾಲಿರಿಸಿದ. ಮೂಲೆಯಲ್ಲಿ ಮಗ, ಕುಂಡಿಯ ಮುಗಿಲಿಗೇರಿಸಿ, ತಲೆಯ ನೆಲಕ್ಕೆ ಅಂಟಿಸಿ, ಎದೆಗೆ ಸ್ಲೇಟನ್ನು ಒತ್ತಿಕೊಂಡು ಏನನ್ನೋ ಬರೆಯುತ್ತಿದ್ದ.

ಬೆಟ್ಟ ಅವನ ಪಕ್ಕಕ್ಕೆ ಹೋದ. ಒಂದು ಕ್ಷಣ ಹಂಗೇ ನಿಂತು ಕವಕವನೆ ನೋಡಿದ. ಬಾಯಾರಿದ ಕುರಿಮರಿ ಕೊಣಕ್ಕೆ ಇಳಿದು ಲೊಚಲೊಚನೆ ನೀರು ಕುಡಿಯುವಂತೆ ಈ ಮಗ ಕಾಣುತ್ತಿದ್ದ.

''ಲೋ ಮರ್ಲಕ್ಕಾ''

ಮಾತಿಲ್ಲ.

''ಲೋ ಮರ್ಲಕ್ಕ ಎತ್ಲ ಕತ್ತು''

ಮರಿಲಕ್ಕನಿಗೆ ಕೇಳಿಸಿರಲಿಲ್ಲ. ಈಗ ಬೆಟ್ಟನೇ ಬಗ್ಗಿ, ಅವನ ಜುಟ್ಟು ಹಿಡಿದು ಮೇಲಕ್ಕೆತ್ತಿದ.

ಒಂದು ಕ್ಷಣ ತಬ್ಬಿಬ್ಬಾದ ಮರಿಲಕ್ಕ, ಈಗ ಉಸಿರು ತೆಗೆದುಕೊಂಡು, ''ಯಾಕಪ್ಪ ಬಂದೆ? ಅಆಇಈ ಎಲ್ಲ ಬರ್‌ದು ಮುಗುಸ್‌ಬೇಕು. ನಾತ್ರಿಯೂ ನೀನು 'ಬರಿಯಾಕ್ಕೆ ಬುಡ್‌ನಿಲ್ಲ. ಈಗ ಮೇಸ್ಟು ಬಂದ್ರೆ ಹೊಡೀತಾರೆ'' ಅಂತ ರಾಗ ಎಳೆದ.

ಆ ಮೇಸ್ಟರ ವೆನಪು ಮಾಡಿದೊಡನೆಯೇ ಬೆಟ್ಟ, ಕಟುವಾಗಿ ಮಗನನ್ನು ಅನಾಮತ್ತು ಮೇಲಕ್ಕೆತ್ತಿ ನಿಲ್ಲಿಸಿ, ಅಂಗಿ ಚಡ್ಡಿ ಊರಿ, ಅವನ ಕತ್ತು, ಮೈಯಿ, ಬೆನ್ನು, ತೊಡೆ, ತೋಳು, ಕಾಲುಗಳನ್ನೆಲ್ಲ ಶೋಧಿಸಿದ. ಆ ಮೇಸ್ಟರ ಕತ್ತಿನಲ್ಲಿದ್ದ ಅಂಥಾದ್ದೇ ಮಚ್ಚೆ ಎಲ್ಲೂ ಕಾಣಿಸಲಿಲ್ಲ. ಹಂಗಾದ್ರೆ ಎಲ್ಲಿ ನೋಡಿದ್ದು ಅಂತ ತಿರುಗಿ ನೋಡಿದ. ಯಾವ ಗುರ್ತೂ ಸಿಗಲಿಲ್ಲ. ಈಗ ಮಗನ ರವೋಟು ಹಿಂದಕ್ಕೆ ತಳ್ಳಿ, ದುರುದುರು ನೋಡಿದ. ಈ ಮೂಗು, ಈ ಕಣ್ಣು, ಈ ಮೋರೆ ಚಹರೆ ತನ್ನವು! ಬಣ್ಣ ಮಾತ್ರ ಅವನ ಅವ್ವನದು!! ಹಂಗಾದ್ರೆ ಎಲ್ಲಿ ವ್ಯತ್ಯಾಸ ಅದೆ?

ಮರಿಲಕ್ಕ ಮೈ ಮುದುರಿಕೊಂಡು, ಅಳುಮೋರೆಯಿಂದ, ''ಯಾಕಪ್ಪ ಹಿಂಗೆಲ್ಲ ಮಾಡ್ತಿ? ಇಲ್ಲಿ ನೋಡು...'' ಅಂತ ಕಣ್ಣೀರು ಹನಿಕಿಸುತ್ತಾ ಸುತ್ತ ನೋಡಿದ. ಹೈಕಳು ಭೀತಿ ಬಡಿದವರಂತೆ ಸುತ್ತ ನಿಂತಿದ್ದವು. ಬೆಟ್ಟನಿಗೆ ಇದ್ದಕ್ಕಿದ್ದಂತೆ ಪಿಚ್ಚಾದಂತನಿಸಿತು. ಸುತ್ತುವರಿದಿದ್ದ ಮಕ್ಕಳತ್ತ ಕಣ್ಣಾಡಿಸಿದ. ಮಾಲಿಂಗೇಗೌಡ್ರ ಮನೆಯಾಳು ನಿಂಗನ ಹೈದ, ಬೆದರಿದಂಗೆ ನಿಂತಿತ್ತು. ಅದರ ಪಕ್ಕ ಸುಬ್ಬಪ್ಪನ ಮಗಳು ಸಣ್ಣೆ ಕಳ್ಳಿಚೀಲದ ತುದಿ ಕಚ್ಚುತ್ತ ನೋಡುತ್ತಿತ್ತು. ರೋಷ, ನಿರಾಶೆ, ಸಂಕಟ, ಅವಮಾನ, ಅಸಹಾಯಕತೆ, ತಳಮಳಗಳಿಂದ ನಲುಗಿ ಹೋಗಿದ್ದ ಮನಸ್ಸಿಗೆ ಥಟ್ಟನೆ ಏನೊ ಹೊಳೆದಂಗಾಯಿತು. ತಿರುತಿರುಗಿ ನೋಡಿದ. ದಿಟ, ರಾಚನ ಮಗ ರಾಮನೂ ತನ್ನ ಪಕ್ಕದ ಹೈದನಿಗೆ ಗುದ್ದುತ್ತಿತ್ತು. ಸಣ್ಣನ ಹಿರಿಹೈದನೂ ಎದುರಿಗೇ ನಿಂತಿತ್ತು. ಆ ಘನಂದಾರಿ ಜನರ ಎಲ್ಲರ ಮಕ್ಕಳೂ ಇಲ್ಲೇ ಅವೆಯಲ್ಲ...!?

ಬೆಟ್ಟನ ಮನಸ್ಸು ಅಂಬಲಿಯಂತೆ ಕುದಿಯಿತು. ಹಂಗೆ ಹಂಗಿಸಿದ ಯಾರ ಅಪ್ಪ, ಅವರಪ್ಪಂದಿರು ಮಠಕ್ಕೆ ಮಣ್ಣೆ ಹೊತ್ತು ಅಕ್ಷರ ಕಲಿತೋರು!? ಅವರಪ್ಪಂದಿರು ಇರಲಿ, ಇವರೂ ಸೈತ ಹೆಬ್ಬೆಟ್ಟು ಒತ್ತಿಕೊಂಡೇ ಬಂದೋರಲ್ವಾ? ಹಂಗಾದ್ರೆ, ಇವರ ಮಕ್ಕಳು ಮಾತ್ರ, ಓದ ಬೌದಾ!? ಹಂಗಾದ್ರೆ ಇವು ಹೆಂಗೆ ಹುಟ್ಟಿದೋ!?

"ಅಪ್ಪ, ಅಕ್ಷರ ಬರ್‌ದು ತೋರುಸ್ಲಿಲ್ಲ ಅಂದ್ರೆ, ಮೇಸ್ಟ್ರು ಹೊಡೀತಾರೆ. ಅವ್‌ರು ಬರೂಹೊತ್ಗೆ ಮುಗುಸ್‌ಬೇಕು. ನನ್‌ಬುಡಪ್ಪ. ತಿರುಗಾ ಹಟ್ಟೀಗೆ ಎಳ್ಕೊಂಡು ಹೋಗ್ ಬ್ಯಾಡ...", ಮರಿಲಕ್ಕ ಅಪ್ಪನ ಕೈ ಬಿಡಿಸಿಕೊಳ್ಳುತ್ತ ಬಿಕ್ಕಿದ.

ಬೆಟ್ಟ ಮಗನ ಮುಖ ನೋಡಿದ. ಅದರ ಮೋರೆಯಿಂದ ಜಾರಿದ ಕಣ್ಣೀರು, ತನ್ನ ಕೈ ಮೇಲ ಇಳಿಯುತ್ತಿತ್ತು. ಆ ಕಣ್ಣೀರ ಬೆಚ್ಚನೆ ಕಾವು ಎದೆ ತುಂಬಿದ್ದ ಉಬ್ಬಸವನ್ನೆಲ್ಲ ಜರ‍್ರನೆ ಇಳಿಸಿದ ಅನುಭವ! ಏನಾಯ್ತು!!?

'ಮೇಸ್ಟ್ರು ಮೇಸ್ಟ್ರು' ಅಂತ ಹೈಕಳೆಲ್ಲ ಹೊಸ ನೀರಿಗೆ ಹತ್ತುವ ಮೀನಿನ ಹಿಂಡಿನಂತೆ ಕೊಠಡಿಯೊಳಕ್ಕೆ ನುಗ್ಗಿದವು. ಹಂಗೆ ಹಿಂಡು ಹಿಂಡಾಗಿ ನುಗ್ಗಿದವು ಕೊಠಡಿ ತುಂಬೆಲ್ಲ ತುಂಬಿಕೊಂಡವು. ಮರಿಲಕ್ಕನ ಮುಖ ಈಗ ತಿದಿ ಒತ್ತಿದಂಗೆ ಭರದಿಂದ ಏರಿಳಿಯತೊಡಗಿತು.

ಬೆಟ್ಟ ಮಗನ ತಲೆ ನೀವಿ, ಕಣ್ಣೀರು ಒರೆಸಿ, "ನೀನು ಬರ್ಕೊ ಮಗಾ" ಅಂದವನು, ಮಗನ ಕಣ್ಣೀರಿನ ಕೈಯನ್ನು ತನ್ನ ಅಂಗಿ ಸೆರಗಿಗೆ ಸೀಟಿಕೊಳ್ಳುತ್ತ ಆಚೆ ನಡೆದ. ಆಗಲೇ ಆಳುದ್ದ ಮೇಲೇರಿದ್ದ ಸೂರ್ಯನ ಬಿಸಿಲು ಹಾದಿಬೀದಿಯಲ್ಲಿ ಹಾಸಿಕೊಂಡಿತ್ತು.

"ಅಯ್ಯೋ! ದೈರ್ಯವನ್ನಾಗ್ನೇ? ರಾವು ತಗಲುಬುಟ್ಟಲ್ಲೋ ಅಪ್ಪನಾಕೆ. ಮಾತಾಡ್ಕೊಂಡು ಬರ್ತೀರಲ್ವಾ?" ಅಂತ ಚೆಲುವಲ್ಲ ಗರುಕಿದ. ಬೆಳಗದವರು ಹತ್ತಿರ ನೋಡಿದರು.

ಕಾ.ತ. ಚಿಕ್ಕಣ್ಣ



ಸೌಭಾಗ್ಯವತಿಯ ಸೌಂದರ್ಯಾಕರ್ಷಣೆ




"ಅಪ್ರತಿಹತವಾದ ಅಸ್ತ್ರವನ್ನು ನಾನೂ ಉಪಯೋಗಿಸಬೇಕು. ನಾನೂ ಹೆಚ್ಚು ಆಕರ್ಷಿತಳಾಗಿ ಕಾಣಬೇಕು. ಈ ಧೂಳು ಮುಸುಕಿದ ಮೋರೆಯಿಂದ ಅವರನ್ನು ಕಾಣಬಾರದು. ಅವರು ಮುಖ ಮುದುಡಿಸಿಬಿಟ್ಟಾರು. ಆಕರ್ಷಣೆಯಲ್ಲಿ ನಾನೇನೇನೂ ಕಡಿಮೆಯಾಗಬಾರದು'' ಎಂದವಳೇ, ಜಾನಕಿ, ನೇರವಾಗಿ ಬಚ್ಚಲಮನೆಗೆ ನುಗ್ಗಿದಳು. ಟಾವೆಲನ್ನು ನೀರಲ್ಲಿ ಅದ್ದಿ, ಕೂದಲುಗಳನ್ನು ತೋಯಿಸುತ್ತ, ತಿಕ್ಕಿ ತಿಕ್ಕಿ ಒರೆಸಿಕೊಂಡಳು. ಕುತ್ತಿಗೆಯನ್ನು ನೀರಿನಿಂದ ತೊಳೆದುಕೊಳ್ಳಲು ಮರೆಯಲಿಲ್ಲ. ಆಮೇಲೆ ನೇರವಾಗಿ ಕೋಣೆಗೆ ಬಂದು, 'ಜೆಸ್ಮಿನ್ ಹೇರ್ ಆಯಿಲ್'ದಿಂದ ಕೂದಲುಗಳನ್ನು ಬಾಚಿಕೊಂಡಳು. ಮುಖಕ್ಕೆ ಸ್ನೋ ಹಚ್ಚಿಕೊಂಡು ಹಣೆಯ ಮೇಲೆ ಕುಂಕುಮದ ಬಟ್ಟನಿಟ್ಟುಕೊಂಡಳು. ಕನ್ನಡಿ ನೋಡಿದಾಗ ಅವಳಿಗೆ ತುಸು ಸಮಾಧಾನವಾಯಿತು. ಕೂಡಲೇ ಮಲಿನವಾದ ಬಟ್ಟೆಯನ್ನು ಬದಲಾಯಿಸಿ, ರಾಘವೇಂದ್ರನಿಗೆ ಪ್ರಿಯವಾದ ತಿಳಿಹಸಿರು ಬಣ್ಣದ ಪತ್ತಲವನ್ನುಟ್ಟುಕೊಂಡು, ಅಂಥದೇ ರೌಕೆಯನ್ನು ತೊಟ್ಟುಕೊಂಡಳು. ಮುತ್ತಿನ ಹಾರವೊಂದನ್ನು ಕೊರಳಲ್ಲಿ ಹಾಕಿಕೊಂಡು, ಕನ್ನಡಿಯನ್ನು ಮತ್ತೊಮ್ಮೆ ನೋಡಿದಳು. ಅವಳಿಗೆ ತನ್ನ ಆಕಾರವನ್ನು ನೋಡಿ ನಗೆಯೇ ಬಂದಿತು. ತಾನಿಷ್ಟು ಸುಂದರಳೆಂಬ ಕಲ್ಪನೆಯು ಅವಳಿಗೆ ಹೊಸದಾಗಿ ಬಂದಂತೆ ಮನಸ್ಸು ಕುಣಿಯಿತು. ಆ ಕೂಡಲೇ ಅವಳ ಮನಸ್ಸಲ್ಲಿ ಮಲ್ಲಿಯ ಮುಖವು ತೇಲಿಬಂದಿತು. ತಾನು ಅವಳಿಗಿಂತ ಚೆಲುವೆಯೂ, ಹರೆಯದವಳೂ ಆಗಿ, ಹೆಚ್ಚು ಆಕರ್ಷಕವಾಗಿಲ್ಲವೇ ಎಂದು ವಿಚಾರಿಸಿದಳು. ಈ ವಿಚಾರದ ಸುಳಿ ಬರುತ್ತಲೇ ಅವಳು ಹುಬ್ಬು ಗಂಟುಹಾಕಿದಳು. ತನ್ನ ಮುಖವನ್ನು ಮಲ್ಲಿಯ ಮುಖದೊಡನೆ ಹೋಲಿಸಿಕೊಳ್ಳುವುದು ಅವಮಾನಕರವೆಂದು ಅವಳಿಗೆ ಅನ್ನಿಸತೊಡಗಿತು. ಅತೃಪ್ತಿಭಾವವು ಹೃದಯವನ್ನು ತುಂಬಹತ್ತಿತು. ನಾನು ಕೈಹಿಡಿದ ಮಡದಿ, ನನ್ನನ್ನು ಅವರು ಅಗ್ನಿ ಸಾಕ್ಷಾತ್ತಾಗಿ ಎಂದೋ ಸ್ವೀಕರಿಸಿದ್ದಾರೆ. ಹೀಗಿದ್ದರೂ, ಕೈಹಿಡಿದ ಗಂಡನನ್ನು ಒಲಿಸಿಕೊಳ್ಳಲು ನಾನು ಶೃಂಗಾರ ಪ್ರಸಾದನಗಳಿಗೆ ಶರಣುಹೋಗಬೇಕೆ? ಇದು ಶುದ್ಧ ಅವಮಾನ. ಮುತ್ತೈದೆಯ ಕೀರ್ತಿಗೆ ಕಲಂಕ. ನನ್ನ ಜೀವನಕ್ಕೊಂದು ದುರ್ಗತಿ. ಬೀದಿಯ ಹೆಣ್ಣಿನೊಡನೆ ಸೌಂದರ್ಯಾಕರ್ಷಣೆಯ ಸ್ಪರ್ಧೆಗೆ ನಿಲ್ಲಬೇಕೆ? ಸೌಭಾಗ್ಯವತಿಯ ಸ್ಥಾನಮಾನಕ್ಕಿದು ಘನತೆಯೇ? ಇದು ಸಲ್ಲದು. ಆಕರ್ಷಣೆಯಿಂದ ಮಾತ್ರ ಪತಿಯನ್ನು ಗೆಲ್ಲುವದು ಸತಿಯ ಸೋಲು. ನನಗಿದು ಬೇಡವೇ ಬೇಡ. ಹೀಗೆ ವಿಚಾರ ಮಾಡಿದ ಜಾನಕಿ, ಕೊರಳ ಹಾರವನ್ನು ಬಿಸಾಡಿಬಿಡಬೇಕೆಂದು ಮನಸ್ಸು ಮಾಡಿದಳು. ತನ್ನ ಚೆಲುವಾದ ಮುಖವನ್ನು ನಿಲುವುಗನ್ನಡಿಯಿಂದಾಚೆ ಸರಿಸಿಕೊಂಡಳು. ತನ್ನ ಅಧೋಗತಿಯನ್ನು ನೋಡುವುದವಳಿಗೆ ದುಸ್ಸಹವಾಯಿತೇನೋ!

(ಕೃಷ್ಣಮೂರ್ತಿ ಪುರಾಣಿಕರ 'ಮುತ್ತೈದೆ' ಕಾದಂಬರಿಯಿಂದ)

□ ಎ. ಪ್ರಮೀಳ ಕರುಂಬಯ್ಯ

ನರೇಂದ್ರ ಕಟ್ಟಿ

ಸಮರಸ



ಬೆಳಗಾಂ ಜಿಲ್ಲೆ, ಚಿಕ್ಕೋಡಿಯ ಅಪ್ಪಣ್ಣಾಚಾರ್ ಅವರದು ತುಂಬು ಸಂಸಾರ. ಪತ್ನಿ ವಿಮಲಾ ಬಾಯಿ, ಒಂಭತ್ತು ಮಕ್ಕಳು, ಇಬ್ಬರು ವಿಧವೆ ತಂಗಿಯರು, ಮಾನಸಿಕವಾಗಿ ಅಸ್ವಸ್ಥಗೊಂಡಿರುವ ಅಣ್ಣನ ಮಗ ಮತ್ತು ಗಂಡನೊಡನೆ ಜಗಳ ಮಾಡಿಕೊಂಡು ತವರು ಮನೆಯಲ್ಲಿ ಶಾಶ್ವತವಾಗಿ ಠಿಕಾಣಿ ಹೂಡಿರುವ ಒಬ್ಬಳು ಮಗಳು. ಇವರೆಲ್ಲರನ್ನು ಕಟ್ಟಿಕೊಂಡು ಏಗುತ್ತಿರುವ ಅಪ್ಪಣ್ಣಾಚಾರ್ ಶ್ರೀಮಂತರೇನಲ್ಲ. ಆದರೆ ಎರಡು ಹೊತ್ತಿನ ಊಟಕ್ಕೇನೂ ಕೊರತೆಯಿರಲಿಲ್ಲ.

ಅಪ್ಪಣ್ಣಾಚಾರ್ ಅವರ ಏಳನೆಯ ಮಗ ಮಾಧವ ಈ ಕತೆಯ ನಾಯಕ. ಹರಿದು ಹೋಗಿದ್ದ ಕನ್ನಡನಾಡು ಒಂದುಗೂಡಿ, ವಿಶಾಲ ಕರ್ನಾಟಕವಾಗುವ ಮುಂಚೆಯೇ ಮಾಧವ ಜನಿಸಿದ್ದು. ಆಗೆಲ್ಲ ಕಾನ್ವೆಂಟ್ ಹಾವಳಿ ಇರಲಿಲ್ಲ. ತಂದೆ-ತಾಯಂದಿರು ಮಕ್ಕಳಿಗೆ, ಓದು, ಬರಿ, ಹೋಂವರ್ಕ್ ಮಾಡು ಎಂದು ದುಂಬಾಲು ಬೀಳುತ್ತಿರಲಿಲ್ಲ. ಥರೇವಾರಿ ಶೂಸ್, ಯೂನಿ ಫಾರ್ಮ್‌ಗಳ ಕಾಟವಿರಲಿಲ್ಲ. ಎಲ್ಲ ಹುಡುಗರಂತೆ ಮಾಧವ 'ಕನ್ನಡಸಾಲಿ' ಸೇರಿದ. ಅಪ್ಪಣ್ಣಾಚಾರ್‌ಗೆ, ತನ್ನ ಮಕ್ಕಳು ಯಾವ ತರಗತಿಯಲ್ಲಿ ಓದುತ್ತಿದ್ದಾರೆ, ಯಾರ್‍ಯಾರ ಹೆಸರು ಏನೇನು ಎಂಬುದರ ಪರಿವೇ ಇರಲಿಲ್ಲ. ಅವರಿಗೆ ಅದನ್ನು ತಿಳಿದುಕೊಳ್ಳುವಷ್ಟು ತಾಳ್ಮೆ, ಸಮಯ ಎರಡೂ ಇರಲಿಲ್ಲ. ಅವರಿವರ ಮನೆಗೆ ಹೋಗಿ ಶ್ರಾದ್ಧ ಮಾಡಿಸುವುದು, ಪೂಜೆ, ಹೋಮ, ಹವನ, ವೆಂಕಟೇಶ ದೇವರ ಗುಡಿ... ಇಷ್ಟರೊಳಗೆ ಅವರ ಬದುಕು ಸೀಮಿತವಾಗಿತ್ತು. ಸೋಜಿಗದ ಸಂಗತಿಯೆಂದರೆ, ಅವರು ತಮ್ಮ ಮಕ್ಕಳಿಗೆ ಸಂಧ್ಯಾವಂದನೆ ಮಾಡು, ಪೂಜೆ ಮಾಡು, ಗುಡಿಗೆ ಹೋಗು ಎಂದು ಸಹ ಹೇಳುತ್ತಿರಲಿಲ್ಲ. ಮಕ್ಕಳನ್ನು ಸ್ವಚ್ಛಂದವಾಗಿ ಬಿಟ್ಟುಬಿಟ್ಟಿದ್ದರು.

ಈ ಕಾರಣದಿಂದಲೋ ಏನೋ, ಮಾಧವನ ಬಾಲ್ಯ ಅದ್ಭುತವಾಗಿತ್ತು. ಶುದ್ಧ ಹಳ್ಳಿಯ ಪಕ್ಕಾ ಹುಡುಗರಂತೆ ಗೆಳೆಯರೊಡನೆ ಗಲ್ಲಿ ಗಲ್ಲಿ ಸುತ್ತುತ್ತಿದ್ದ. ಊರಾಚೆಯ ತೋಟಗಳಲ್ಲಿ ಹಣ್ಣು ಕದಿಯುತ್ತಿದ್ದ. ಯಾವುದೋ ಪುರಾತನ ದೇವಸ್ಥಾನದ ಹಿಂಭಾಗದಲ್ಲಿ ಕುಳಿತು ಬೀಡಿ ಸೇದುತ್ತಿದ್ದ. ಹಳ್ಳದಲ್ಲಿ ಮನದಣಿಯೆ ಈಜುತ್ತಿದ್ದ. ಇಷ್ಟೆ

ಇದ್ದರೂ ಮಾಧವ ಎಂದೂ 'ಸಾಲಿ'ಯಲ್ಲಿ ದಡ್ಡ ಎಂದೆನಿಸಿಕೊಂಡಿರಲಿಲ್ಲ. ಅಪ್ಪಣ್ಣಾಚಾರ್‌ರ ಅದೃಷ್ಟವೋ ಏನೋ, ಅವರ ಎಲ್ಲ ಮಕ್ಕಳು 'ಶಾಣ್ಯಾ'ರೆನಿಸಿಕೊಂಡಿದ್ದರು.

ಮಾಧವನಿಗೆ ಹದಿನಾರು ವರ್ಷ ತುಂಬಿತು. ಮೆಟ್ರಿಕ್ ಪರೀಕ್ಷೆ ಮುಗಿಸಿದ. ಪ್ರಥಮ ದರ್ಜೆಯಲ್ಲಿ ಪಾಸಾಗುವನೆಂಬ ನಂಬಿಕೆಯೂ ಅವನಿಗಿತ್ತು. ಬೇಸಿಗೆ ರಜೆ ಬಂದಿದ್ದರಿಂದ ಉಂಡಾಡಿ ಗುಂಡನಂತೆ ಗೆಳೆಯರೊಡನೆ ಬೀದಿ ಬೀದಿ ಸುತ್ತುತ್ತಿದ್ದ.

❀ ❀ ❀ ❀ ❀ ❀

ಒಂದು ದಿನ ಮಾಧವ, ತನ್ನ ಮನೆಯಲ್ಲಿರುವ ಅಟ್ಟದ ಮೇಲೆ ಹತ್ತಿ, ಅಲ್ಲಿದ್ದ ಹಳೆಯ ಪೆಟ್ಟಿಗೆಗಳನ್ನು ತೆರೆದು ನೋಡುತ್ತಿದ್ದ. ಅವನಿಗೆ ಇಂಥದೇ ವಸ್ತು ನೋಡಬೇಕೆಂದಿರಲಿಲ್ಲ. ಧೂಳು ತುಂಬಿರುವ ಪೆಟ್ಟಿಗೆಯ ಒಳಗೆ ಏನಿರಬಹುದೆಂಬ ಕುತೂಹಲ! ಮಾಸಿದ ಹಳೆಯ ಫೋಟೋಗಳು, ಕಾಗದ -ಪತ್ರಗಳು ಕಾಣಿಸಿದವು. ಒಂದು ದಪ್ಪ ಪುಸ್ತಕ ಕಾಣಿಸಿತು. ಪುಟಗಳನ್ನು ತಿರುವುಹಾಕಿದ. ಅಬ್ಬಾ! ಒಂದು ಸಾವಿರಕ್ಕೂ ಹೆಚ್ಚು ಪುಟಗಳು ಎಂದು ಆಶ್ಚರ್ಯಗೊಂಡ.

''ಯಾರ್‍ಲೆ ಇದನ್ನ ಬರದಾವ'' ಎನ್ನುತ್ತ ಲೇಖಕರ ಹೆಸರು ಓದಿದ. ವಿ.ಕೃ.ಗೋಕಾಕ್ ಎಂದಿತ್ತು. ಕಾದಂಬರಿಯ ಹೆಸರು ನೋಡಿ, 'ಸಮರಸವೇ ಜೀವನ' ಎಂದು ಮನಸ್ಸಿನಲ್ಲೇ ಓದಿಕೊಂಡ. ತತ್‌ಕ್ಷಣ ಅವನಿಗೆ ಏನನಿಸಿತೋ ಏನೋ, ಇಲ್ಲಿ ಈ ಪುಸ್ತಕವನ್ನು ಓದಿಯೇ ಬಿಡೋಣ ಎನ್ನುತ್ತ ಒಂದು ಕಡೆ ತೆಗೆದಿಟ್ಟ. ಮತ್ತೆ ಪೆಟ್ಟಿಗೆಯಲ್ಲಿ ಕೈ ಹಾಕಿ ತಡಕಾಡಿದ. ಒಂದಷ್ಟು ಜಿರಳೆ, ತಗಣಿ, ಹಲ್ಲಿ ಓಡಾಡುತ್ತಿದ್ದವು. ದಢಾರ್ ಎಂದು ಪೆಟ್ಟಿಗೆಯನ್ನು ಮುಚ್ಚಿ, ಮೂಲೆಗೆ ತಳ್ಳಿ, ಕೆಳಗಿಳಿದುಬಂದ.

ಆ ದಿನ ರಾತ್ರಿ, ಮಾಧವ ಊಟ ಮುಗಿಸಿ, ಹಾಸಿಗೆಯ ಮೇಲೆ ಉರುಳಿಕೊಂಡ. 'ಸಮರಸವೇ ಜೀವನ' ಕಾದಂಬರಿ ನಿಧಾನವಾಗಿ ಓದತೊಡಗಿದ. ಆ ಪುಸ್ತಕ ಅವನನ್ನು ಬಹಳವಾಗಿ ಸೆಳೆದುಬಿಟ್ಟಿತು. ಎಡೆಬಿಡದೆ ಕುಳಿತು, ಮೂರು ದಿನಗಳಲ್ಲಿ ಕಾದಂಬರಿ ಓದಿ ಮುಗಿಸಿಬಿಟ್ಟಿದ್ದ. ಕಾದಂಬರಿಯ ವಸ್ತು, ಜೀವನದರ್ಶನ, 'ಕುಸುಮ', 'ನರಹರಿ' ಪಾತ್ರಗಳು... ಇವೆಲ್ಲವೂ ಮಾಧವನನ್ನು ಹೊಸ ಚಿಂತನೆಗೆ, ಹೊಸ ವಿಚಾರಗಳಿಗೆ ಹಚ್ಚಿತು. ಅವನಿಗೀಗ ಜಗತ್ತೇ ಬೇರೆಯಾಗಿ ಕಾಣಿಸತೊಡಗಿತು.

❀ ❀ ❀ ❀ ❀ ❀

ಈಗ ಮಾಧವನ ದಿನಚರಿ ಬದಲಾಯಿತು. ಊಟ, ನಿದ್ದೆ ಬಿಟ್ಟರೆ ಮಿಕ್ಕೆಲ್ಲ ಸಮಯ ಲೈಬ್ರರಿಯಲ್ಲಿ ಕಾಲ ಕಳೆಯತೊಡಗಿದ. ಕನ್ನಡದ ಹಲವಾರು ಸುಪ್ರಸಿದ್ಧರ ಕತೆ, ಕಾದಂಬರಿ, ಕವನ, ಲೇಖನ... ಹೀಗೆ ಒಂದೇ ಸಮನೆ ಓದತೊಡಗಿದ. ಬದುಕಿನ ಬಗ್ಗೆ ಗಂಭೀರವಾದ ಆಲೋಚನೆಗಳು ಶುರುವಾದವು. ಕವನಗಳು ಅವನ ಹೃದಯದಲ್ಲಿ ರಸಿಕತೆಯನ್ನು ಉಕ್ಕಿಸತೊಡಗಿದವು. ಸ್ನೇಹಿತರೊಡನೆ ತಿರುಗುವುದನ್ನು ಸಂಪೂರ್ಣವಾಗಿ ನಿಲ್ಲಿಸಿಬಿಟ್ಟ.

ದಿನಗಳು ಉರುಳಿದವು. ವರ್ಷಗಳು ಕಳೆದವು. ಅವನ ವಿದ್ಯಾಭ್ಯಾಸ ಸುಗಮವಾಗಿ ಸಾಗಿತು. ಇಂಗ್ಲಿಷ್ ಸಾಹಿತ್ಯದಲ್ಲಿ ಡಿಗ್ರಿ ಮುಗಿಸಿದ. ಧಾರವಾಡಕ್ಕೆ ಬಂದು, ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಎಂ.ಎಗೆ ಸೇರಿದ. ಐದೂವರೆ ಅಡಿ ಎತ್ತರ, ದುಂಡು ಮುಖ, ತುಂಟ ಕಣ್ಣುಗಳು, ಕೆಂಪು ಮೈಬಣ್ಣ ಹೊಂದಿದ್ದ ಮಾಧವ ಆಕರ್ಷಕವಾಗಿ ಕಾಣುತ್ತಿದ್ದ. ಜೊತೆಗೆ ಆಕರ್ಷಕ ವ್ಯಕ್ತಿತ್ವ ಬೆಳೆಸಿಕೊಂಡಿದ್ದ.

ಊರವರಿಗೆಲ್ಲ ಹಂಚುವಷ್ಟು ರಸಿಕತೆ ಅವನಲ್ಲಿತ್ತು. ಖರೇ ಹೇಳಬೇಕೆಂದರೆ, ಅವನಲ್ಲಿನ ರಸಿಕತೆ ಸಂಪೂರ್ಣವಾಗಿ ಅವರಪ್ಪನಿಂದ ಬಂದದ್ದು. ಅಪ್ಪಣ್ಣಾಚಾರ್‌ಗೆ, ಚಿಕ್ಕೋಡಿ ಊರಿನಲ್ಲಿ ನಾಲ್ಕಾರು ಹೆಂಗಸರ ಸಹವಾಸ ಇತ್ತೆಂದು ಗುಸುಗುಸು ಸುದ್ದಿ ಇತ್ತು. ತಾರುಣ್ಯದಲ್ಲಿ ಅಪ್ಪಣ್ಣಾಚಾರ್‌ರ ಕೆಂಪು ಬಣ್ಣದ ದೃಢಕಾಯ ಶರೀರ, ಚಿಕ್ಕೋಡಿಯ ಬ್ರಾಹ್ಮಣ ಹುಡುಗಿಯರನ್ನು ಪುಳಕಗೊಳಿಸಿತ್ತು. ಕೆಲವು ಧೈರ್ಯವಂತ ಹುಡುಗಿಯರು ಅಪ್ಪಣ್ಣಾಚಾರರ ಅಪ್ಪುಗೆಯ ರುಚಿಯೂ ಪಡೆಕೊಂಡಿದ್ದ

ರೆಂದು-ವೆಂಕಟೇಶ ದೇವರ ಗುಡಿಯ ಕಟ್ಟೆಯ ಮೇಲೆ ಕುಳಿತ ಮಡಿಹೆಂಗಸರ ಮಾತುಗಳಲ್ಲಿ ಕೇಳಿ ಬರುತ್ತಿತ್ತು. ತಮಗೆ ಅಂಥ ಸೌಭಾಗ್ಯ ಸಿಗಲಿಲ್ಲವೆಂದು ಅವರೆಲ್ಲ ಮನದಲ್ಲೇ ಕೊರಗುತ್ತಿದ್ದರು. ಅಪ್ಪಣ್ಣಾಚಾರರ ಆ ರಸಿಕತೆ ಮಾಧವನಲ್ಲಿ ಈಗ ಸಮೃದ್ಧವಾಗಿ ಹರಿಯುತ್ತಿತ್ತು.

❁ ❁ ❁ ❁ ❁ ❁

ಮಾಧವನ ಬದುಕು ಈಗ ಅತ್ಯಂತ ಸ್ವಾರಸ್ಯವಾಗಿತ್ತು. ಸೊಗಸಾಗಿತ್ತು. ಪುಸ್ತಕಗಳು, ಸ್ನೇಹಿತರು, ಸಾಹಿತ್ಯ ಗೋಷ್ಠಿ, ಕೆಲವೊಮ್ಮೆ ಹುಡುಗಿಯರ ಒಡನಾಟ... ಹೀಗೆ ಅವನ ಬದುಕು ಈಸ್ಟ್‌ಮನ್ ಕಲರ್‌ನಲ್ಲಿ, ಎಪ್ಪತ್ತು ಎಂ.ಎಂ.ನಲ್ಲಿ, ಡಿಟಿಎಸ್ ಎಫೆಕ್ಟ್‌ನಲ್ಲಿ ಸಾಗಿತ್ತು.

ಇಂಥ ಒಂದು ಸಂದರ್ಭದಲ್ಲಿ, ಶಾರದಾ ಎಂಬ ಹತ್ತೊಂಬತ್ತು ವರ್ಷದ ಹುಡುಗಿ, ಅವನ ಬದುಕಿನಲ್ಲಿ ಮತ್ಸ್ಯಕನ್ಯೆಯಂತೆ ಪ್ರವೇಶಿಸಿದಳು.

ಒಂದು ದಿನ ಮಾಧವ, ಶಾರದಾಳೊಡನೆ ಕರ್ನಾಟಕ ಕಾಲೇಜಿನ ಮೂಲೆಯೊಂದರಲ್ಲಿ ಹರಟುತ್ತ ಕುಳಿತಿದ್ದ.

"ಶಾರೂ, ನಾವಿಬ್ಬರೂ ಆದಷ್ಟು ಬೇಗ ಮದುವೆಯಾಗೋಣ."

ಶಾರದಾಗೆ ಖುಷಿಯಾಯಿತು.

ಅಂದಳು: "ಅಲ್ಲ ಮಾಧವ, ನಾನು ಬಿ.ಎ. ಮುಗಿಸಬೇಕು. ನೀನು ಎಂ.ಎ. ಮುಗಿಸಿ ಕೆಲಸ ಹಿಡಿಯಬೇಕು. ನಮ್ಮಪ್ಪ, ಅಮ್ಮ ಒಪ್ಪಬೇಕು. ಮದುವೆ ಅಂದ್ರೆ ಹುಡುಗಾಟಾನಾ?"

"ಹುಡುಗಾಟವಿದ್ದಾಗಲೇ ಮದುವೆಯಾಗಬೇಕು. ಬಿಳೀ ಕೂದಲು ಕಾಣಿಸಿಕೊಂಡಮೇಲೆ ಮದುವೆಯಾದ್ರೆ ಏನು ಚನ್ನ...?" ಹೀಗೆ ಅವರ ಮಾತುಗಳಲ್ಲಿ ತಮಾಷೆ, ರಸಿಕತೆ, ಇಮ್ಮೆಚುರಿಟಿ ಎಲ್ಲವೂ ಮಿಳಿತವಾಗಿರುತ್ತಿತ್ತು.

ಇಪ್ಪತ್ತೆರಡನೆಯ ವಯಸ್ಸಿಗೆ ಎಂ.ಎ. ಮುಗಿಸಿದ ಮಾಧವ, ಧಾರವಾಡದ ಖಾಸಗಿ ಕಾಲೇಜೊಂದರಲ್ಲಿ ಲೆಕ್ಚರರ್ ಕೆಲಸಕ್ಕೆ ಸೇರಿದ. ಆರು ತಿಂಗಳಲ್ಲಿ ಶಾರದಾಳನ್ನು ಮದುವೆಯೂ ಆಗಿಬಿಟ್ಟ.

ಮಾಧವನ ಮದುವೆಯ ನಂತರದ ದಿನಗಳು ಅತ್ಯಂತ ಸುಂದರವಾಗಿತ್ತು. ಗಂಡ-ಹೆಂಡತಿ ಇಬ್ಬರೂ, ಸಾಧನಕೇರಿಯಲ್ಲಿ ಒಂದು ಪುಟ್ಟಮನೆ ಮಾಡಿ, ರೊಮ್ಯಾಂಟಿಕ್ ಬದುಕನ್ನು ಉತ್ಕಟವಾಗಿ ಅನುಭವಿಸತೊಡಗಿದರು. ಧಾರವಾಡದ ಮಳೆಗಾಲ, ಹಳೆಯ ಕಾಲದ ಮನೆಗಳು, ಪುರಾತನ ದೇವಸ್ಥಾನಗಳು, ಪ್ರಕೃತಿ ಸೌಂದರ್ಯ, ಬೇಂದ್ರೆ-ಕೀಟ್ಸ್‌ರ ಕವನಗಳು, ಶ್ರೀರಂಗರ ನಾಟಕಗಳು, ಭೈರಪ್ಪನವರ ಕಾದಂಬರಿಗಳು.... ಇವೆಲ್ಲ ಅವರ ಬದುಕಿಗೆ ಸ್ಪೆಷಲ್ ಎಫೆಕ್ಟ್ ನೀಡಿದವು. ಒಂದುವರೆ ವರ್ಷದಲ್ಲಿ ಅವರ ಮನೆಯಲ್ಲಿ ಮುದ್ದಾದ ಗಂಡು ಮಗುವಿನ ಪ್ರವೇಶವಾಯಿತು. ಮಗನಿಗೆ ಕಾರ್ತಿಕ್ ಎಂದು ಹೆಸರಿಟ್ಟರು.

2

❁ ❁ ❁

ಕಾರ್ತಿಕ್‌ಗೆ ಈಗ ಇಪ್ಪತ್ತೆರಡು ವರ್ಷ ವಯಸ್ಸು. ಅದ್ಭುತ ನೆನಪಿನ ಶಕ್ತಿಯಿರುವ ಪ್ರತಿಭಾವಂತ ಯುವಕ. ತಂದೆಯಂತೆ ಭಾರಿ 'ಶಾಣ್ಯಾ'. ಅವನ ಶಾಲೆ-ಕಾಲೇಜ್ ವಿದ್ಯಾಭ್ಯಾಸ ಅತ್ಯಂತ ಸುಸೂತ್ರವಾಗಿ ಸಾಗಿತು. ಯಾವುದ್ಯಾವುದೋ ಕಂಪ್ಯೂಟರ್ ಕೋರ್ಸ್‌ಗಳನ್ನು ಮಾಡಿಕೊಂಡ. ರಾಜ್ಯದ ಶ್ರೇಷ್ಠ ಚೆಸ್ ಆಟಗಾರ ಎಂದೆನಿಸಿಕೊಂಡ. ಆದರೆ ಕಾರ್ತಿಕ್‌ಗೆ ದೇಶದ ಬಗ್ಗೆ ಮಾತ್ರ ತೀವ್ರ ಅಸಮಾಧಾನ. ಯಾವುದರಲ್ಲೂ ಒಂದು ವ್ಯವಸ್ಥೆಯಿಲ್ಲದ ಈ ದೇಶದಲ್ಲಿ ಇದ್ದು ಏನೂ ಪ್ರಯೋಜನವಿಲ್ಲವೆಂದು, ಅಮೆರಿಕಾಗೆ ಹಾರಿದ. ಕಾರ್ತಿಕ್‌ನಲ್ಲಿದ್ದ ಅದ್ಭುತ ಪ್ರತಿಭೆಯನ್ನು ಸೂಕ್ಷ್ಮವಾಗಿ ಗಮನಿಸಿದ ಮೈಕ್ರೊಸಾಫ್ಟ್‌ನ ಮುಖ್ಯಸ್ಥ ಬಿಲ್‌ಗೇಟ್ಸ್, ತನ್ನ ಕಂಪನಿಯಲ್ಲಿ ಪ್ರತಿಷ್ಠಿತ ನೌಕರಿ ನೀಡಿದ.

ದಿನಗಳು ಉರುಳಿದಂತೆ, ಕಾರ್ತಿಕ್ ಅಮೆರಿಕಾದಲ್ಲಿ 'ವೆಲ್ ಸೆಟ್ಲ್‌ಡ್' ಆಗಿಬಿಟ್ಟ.

"ಅಮೆರಿಕಾಗೆ ಬಂದು ಬಿಡಿ. ನನ್ನೊಡನೆ ಆರಾಮವಾಗಿ ಇಲ್ಲಿಯೇ ಜೀವನ ಕಳೆಯಿರಿ" ಎಂದು ಕಾರ್ತಿಕ್ ಅಪ್ಪ-ಅಮ್ಮನಿಗೆ ಪತ್ರ ಬರೆದ

ಪತ್ರ ಓದಿದ ಶಾರದಾಗೆ ಬೇಸರವಾಯಿತು. ಅಳು ಉಕ್ಕಿಬಂತು. ಅವಳಿಗೆ ಅಮೆರಿಕಾಗೆ ಹೋಗುವುದಕ್ಕೆ ಸ್ವಲ್ಪವೂ ಇಷ್ಟವಿರಲಿಲ್ಲ. ಗಂಡನಿಗೆ ಹೇಳಿದಳು.

''ಯಾವುದೇ ಕಾರಣಕ್ಕೂ ನಾವು ಅಮೆರಿಕಾಗೆ ಹೋಗುವುದು ಬೇಡಾರಿ. ಬೇಕಾದ್ರೆ, ಕಾರ್ತಿಕ್ ಇನ್ನೊಂದೆರಡು ವರ್ಷ ಅಲ್ಲಿ ನೌಕರಿ ಮಾಡಿ, ಚೆನ್ನಾಗಿ ಹಣ ಸಂಪಾದಿಸಿ ಇಲ್ಲಿಗೆ ವಾಪಸ್ ಬರ್ಲಿ. ಏನೇ ಆದರೂ ಅಲ್ಲಿಯ ಲೈಫ್ ನಮಗೆ ಸೆಟ್ ಆಗಲ್ಲ.''

ಆದರೆ ಮಾಧವ ಅಮೆರಿಕಾಗೆ ಹಾರಲು ತುದಿಗಾಲಿನಲ್ಲಿ ನಿಂತಿದ್ದ. ''ಅಲ್ಲ ಶಾರೂ, ಯಾಕೆ ಬೇಡಾಂತೀಯಾ? ಅಲ್ಲೂ ಲೈಫ್ ಒಂಥರ ಮಜ ಇರುತ್ತೆ. ಈಗಂತೂ ಮಗ ಪ್ರೀತಿಯಿಂದ ಕರ್ದಿದಾನೆ. ಹೋಗಿಬಿಡೋಣ. ಒಂದ್ವೇಳೆ ಅಲ್ಲಿಯ ಲೈಫ್ ನಮಗೆ ಅಡ್ಜಸ್ಟ್ ಆಗ್ಲಿಲ್ಲಾಂದ್ರೆ, ಬದುಕು ತೀರಾ ಅಸಹನೀಯವೆನಿಸಿದರೆ, ಇಂಡಿಯಾಗೆ ವಾಪಸ್ ಬಂದ್‌ಬಿಡೋಣ.''

ಮಾಧವನಿಗೆ ಕಾಲೇಜ್ ದಿನಗಳು ನೆನಪಾದವು. ಗೆಳೆಯರೊಡನೆ ಕದ್ದು ಬ್ಲೂಫಿಲಂ ನೋಡುತ್ತಿದ್ದಾಗೆಲ್ಲ, ತಾನೂ, ಹೇಗಾದರೂ ಮಾಡಿ ಎರಡು, ಮೂರು ಹೆಣ್ಣುಗಳನ್ನು ಒಟ್ಟಿಗೆ ಅನುಭವಿಸಬೇಕೆಂದು ಕನಸು ಕಾಣುತ್ತಿದ್ದ. ಒಂದು ರೀತಿಯ ವಾಂಛೆಯೂ ಅವನಲ್ಲಿ ಬೆಳೆದಿತ್ತು. ಈಗ ಅಮೆರಿಕಾಗೆ ಹೋದರೆ ತನ್ನ ಕನಸು ನನಸಾಗಬಹುದೇನೋ? ಎಂಬ ವಿಚಿತ್ರ ಆಸೆ ಅವನ ಮನಸ್ಸಿನಲ್ಲಿ ಬೆಳೆಯತೊಡಗಿತು.

ಆದರೆ ಶಾರದಾಳದು ಒಂದೇ ಹಠ

''ಬೇಡಾರಿ, ಅಲ್ಲಿ ಹಬ್ಬ ಹರಿದಿನ ಮಾಡಕ್ಕಾಗಲ್ಲ. ಅಲ್ಲಿ ಆಷಾಢ, ಶ್ರಾವಣ, ಚಾತುರ್ಮಾಸ ಇವೆಲ್ಲದರ ವ್ಯತ್ಯಾಸವೇ ಗೊತ್ತಾಗಲ್ಲ. ಬೇಕಾದಷ್ಟು ದುಡ್ಡಿರುತ್ತೆ. ಆದ್ರೆ ಸುಖ ಇರಲ್ಲ. ಈ ಧಾರವಾಡದ ಬೀದಿ ಬೀದಿಯಲ್ಲಿ ಸುತ್ತಾಡೋದರಲ್ಲಿ, ಗುರುವಾರ ಮಠಕ್ಕೆ ಹೋಗುವುದರಲ್ಲಿ, ಹೋಳಿ ಆಚರಿಸೋದರಲ್ಲಿ ಸಿಗೋ ಸುಖ, ನೆಮ್ಮದಿ ಅಲ್ಲಿ ಸಿಗಲ್ಲಾರಿ...''

''ನಿಜ ಶಾರೂ, ನೀನು ಹೇಳೋದು ನಿಜ. ಆದರೆ ಅವನ್ನೆಲ್ಲ ನಾವಿಬ್ಬರೂ ಇಷ್ಟು ವರ್ಷ ಅನುಭವಿಸಿದ್ದೀವಲ್ಲ! ಲೈಫ್‌ನಲ್ಲಿ ಏನಾದರೂ ಬದಲಾವಣೆ ಬೇಕು. ಅದು ನನ್ನ ಬದುಕಿನ ಫಿಲಾಸಫಿ.''

ಮಾಧವ ಮತ್ತು ಶಾರದಾಳ ಮಧ್ಯೆ ಈ ರೀತಿಯ ಚರ್ಚೆ ನಡೆಯುತ್ತಲೇ ಇತ್ತು. ಆದರೆ ಮಗನ ಮತ್ತು ಗಂಡನ ಬಲವಂತಕ್ಕೆ ಮಣಿದು, ಶಾರದ ಅಮೆರಿಕಕ್ಕೆ ಹೋಗಲೇಬೇಕಾಯಿತು.

ಮಾಧವ ಮಾತ್ರ ಬಹಳ ಖುಷಿಯಲ್ಲಿದ್ದ. ತೀರಾ ಚಿಕ್ಕ ವಯಸ್ಸಿನಲ್ಲಿ ಮದುವೆಯಾಗಿದ್ದರಿಂದ, ನಲ್ವತ್ತೇಳನೇ ವಯಸ್ಸಿಗೆಲ್ಲ ಮಗ ಸಂಪಾದಿಸುವಂತಾಗಿದ್ದ. ಹಾಗೆ ನೋಡಿದರೆ, ಮಾಧವ ನಲವತ್ತೇಳು ವರ್ಷ ವಯಸ್ಸಿನವನಂತೆ ಕಾಣುತ್ತಲೂ ಇರಲಿಲ್ಲ. ನಲವತ್ತರ ಒಳಗೆ ಎಂದು ಹೇಳುವಂಥ ಮೈಕಟ್ಟು, ಉತ್ಸಾಹ, ಹುರುಪು. ಅವನು ಮನಸ್ಸಿನಲ್ಲೇ ಅಂದುಕೊಳ್ಳುತ್ತಿದ್ದ. 'ಸಾಕು ಈ ಇಂಡಿಯಾ ಲೈಫು. ಬೇಕಾದಷ್ಟು ಎಂಜಾಯ್ ಮಾಡಿದೀನಿ. ಇನ್ನು ಅಮೆರಿಕಾ ಲೈಫು ಎಂಜಾಯ್ ಮಾಡೋಣ.'

ಈಗ ಮಾಧವನ ದಿನಚರಿ ಸಂಪೂರ್ಣವಾಗಿ ಬದಲಾಯಿತು. ದೊಡ್ಡ ಮನೆ, ಮೂರು ಕಾರುಗಳು, ಫೋನ್‌ಗಳು, ಇಂಟರ್‌ನೆಟ್, ಹತ್ತು ಹಲವಾರು ಸೌಕರ್ಯಗಳಿದ್ದುದು ಮಾಧವನನ್ನು ಖುಷಿಪಡಿಸಿತು.




ವಿಶಾಲವಾದ ರಸ್ತೆಗಳು, ಸುಂದರ ವಿನ್ಯಾಸದ ಕಟ್ಟಡಗಳು, ಭರದಿಂದ ಓಡುವ ಕಾರುಗಳು, ತುಂಬಿದೆದೆಯನ್ನು ಕುಣಿಸುತ್ತ ಓಡಾಡುವ ಹುಡುಗಿಯರು, ಹೆಂಗಸರು, ಪೊಲೀಸರ ಹೆದರಿಕೆಯಿಲ್ಲದೆ ನೋಡಬಹುದಾದ ಬ್ಲೂಫಿಲಂಗಳು, ಕ್ಯಾಸಿನೋಗಳು..., 'ಸಕತ್ ಬೊಂಬಾಟಾಗಿದೆ ಲೈಫು' ಎಂದು ನೂರು ಬಾರಿ ಮಾಧವ ಮನಸ್ಸಿನಲ್ಲೇ ಅಂದುಕೊಂಡು ಹಿಗ್ಗಿದ. ಮಾಧವ ಸದು ಕುತೂಹಲ ಸ್ವಭಾವ. ಎಷ್ಟೆಂದರೂ ಕನ್ನಡ ಸಾಹಿತ್ಯ ಓದಿದವನು! ಒಳಗಣ್ಣಿನಿಂದ ಜಗತ್ತನ್ನು, ಜನಗಳನ್ನು ನೋಡುವುದನ್ನು ಕಲಿತಿದ್ದ. ಅಮೆರಿಕಾದ ಜನ, ಜೀವನ, ಶಿಸ್ತು, ಶ್ರದ್ಧೆ ಎಲ್ಲವೂ ಅವನಿಗೆ ಹಿಡಿಸಿತು. ಆದರೆ ಗಾಢವಾದ ಮಾನವೀಯ ಸಂಬಂಧಗಳು ಇಲ್ಲದಿರುವುದು ಕಂಡು ಮಾಧವನ ಮನಸ್ಸು ಬೆಚ್ಚಿಬಿದ್ದಿತು. ಈಗ ಭಾರತದಲ್ಲೂ ಹಾಗೇ ಆಗಿದೆ ಅಲ್ಲವೇ? ಎಂದುಕೊಂಡ.

ದಿನಕಳೆದಂತೆ ಮಾಧವ, ಅಮೆರಿಕಾದ ಮಣ್ಣಿನಲ್ಲಿ ನಿಧಾನವಾಗಿ ಲೀನವಾಗತೊಡಗಿದ. ಆದರೆ, ಧಾರವಾಡದ ಮಣ್ಣಿನ ವಾಸನೆ, ಕಾಲೇಜಿನ ಕನಸಿನ ದಿನಗಳು ಅವನ ನೆನಪಿನ ಪುಟಗಳಿಂದ ಸ್ವಲ್ಪವೂ ಅಳಿಯಲಿಲ್ಲ. ಹಳೆಯ ನೆನಪುಗಳು ಅವನನ್ನು ಕಾಡುತ್ತಲೇ ಇದ್ದವು. 'ವೀರಕೇಸರಿ', 'ಕನ್ಯಾರತ್ನ', 'ಗಾಂಧೀನಗರ', 'ಕಸ್ತೂರಿ ನಿವಾಸ'... ಚಿತ್ರಗಳ ಸುಮಧುರ ಗೀತೆಗಳು ಅವನ ದೇಹದ ನರನಾಡಿಗಳಲ್ಲಿ ಪ್ರತಿಧ್ವನಿಸುತ್ತಿತ್ತು. ಭೈರಪ್ಪನವರ ಕಾದಂಬರಿಗಳು, ಬೇಂದ್ರೆ, ಗೋಕಾಕರ ಕವನಗಳು, ಶ್ರೀರಂಗರ ನಾಟಕಗಳು, ರಾಜ್‌ಕುಮಾರ್ ಸಿನಿಮಾಗಳು, ಪುಟ್ಟಣ್ಣ ಕಣಗಾಲ್‌ರ ಭಾವುಕ ಪಾತ್ರಗಳು, ನಾಗರಹಾವು ಚಿತ್ರದ ರಾಮಾಚಾರಿ, ಜಿ.ಆರ್. ವಿಶ್ವನಾಥ್‌ನ ಸ್ಕ್ವೇರ್ ಕಟ್, ಚಂದ್ರಶೇಖರನ ಗೂಗ್ಲಿ, ಗೋಕಾಕ್ ಚಳವಳಿ... ಎಲ್ಲವೂ, ಇವೆಲ್ಲವೂ ಅವನನ್ನು ಕೆಲವೊಮ್ಮೆ ಭಾವುಕನನ್ನಾಗಿ ಮಾಡಿಬಿಡುತ್ತಿತ್ತು.

ಒಂದು ದಿನ ಮಾಧವ, ತಾನು ಹೀಗೆ ಸುಮ್ಮನೆ ಕಾಲಹರಣ ಮಾಡುತ್ತ ಓಡಾಡುವುದರಲ್ಲಿ ಅರ್ಥವಿಲ್ಲ, ಏನಾದರೂ ಮಾಡಬೇಕೆಂದು ಯೋಚಿಸಿದ. ಫ್ರೀಲಾನ್ಸರ್ ಆದರೆ ಹೇಗೆ? ಎಂಬ ಯೋಚನೆ ಅವನಲ್ಲಿ ಸುಳಿಯಿತು. ತತ್‌ಕ್ಷಣ ಅದೇ ಸರಿಯಾದ ನಿರ್ಧಾರ ಎಂದು ನಿಶ್ಚಯಿಸಿದ. ಬರವಣಿಗೆಯಲ್ಲಿ ತೊಡಗಿದ.

'ಮಾನಸಿಕ ಆಸ್ಪತ್ರೆಯಿಂದಾಚೆ ಉಳಿದ ಹುಚ್ಚರು' ಎಂಬ ಶೀರ್ಷಿಕೆಯಡಿಯಲ್ಲಿ ಚಿತ್ರವಿಚಿತ್ರ ಜನಗಳ ಬಗ್ಗೆ ಲೇಖನ ಬರೆಯತೊಡಗಿದ. ಬರೆದು ಬಿಸಾಕತೊಡಗಿದ. ಮಾಧವನ ಲೇಖನಗಳು ಜನಪ್ರಿಯವಾಗತೊಡಗಿದವು. ಹಲವಾರು ಪತ್ರಿಕೆಗಳಿಂದ, ನಮಗೆ ಲೇಖನ ಕಳುಹಿಸಿಕೊಡಿ ಎಂಬ ಆಹ್ವಾನಗಳು ಬರತೊಡಗಿದವು.

ಈಗ ಮಾತ್ರ, ಮಾಧವನಿಗೆ ಬದುಕು ನಿಜವಾಗಿಯೂ ಥ್ರಿಲ್ಲಿಂಗ್ ಅನಿಸತೊಡಗಿತು. ಅಮೆರಿಕಾದ ಜನಗಳ ಬದುಕಿನಲ್ಲಿ ನಡೆಯುವ ಘಟನೆಗಳನ್ನು ಸೂಕ್ಷ್ಮವಾಗಿ ಗಮನಿಸತೊಡಗಿದ. ನಾರ್ಮಲ್ ವ್ಯಕ್ತಿಗಳೇ ಕಡಿಮೆ ಅನಿಸಿತು. ಅತೀ ಹುಚ್ಚರು, ಅತೀ ಬುದ್ಧಿವಂತರು, ಅತೀ ಭಾವುಕರು, ಅತೀ ದಡ್ಡರು, ಅತೀ ಕಾಮಿಗಳು.... ಇವರನ್ನೆಲ್ಲ ಕಂಡು ವಿಸ್ಮಯಗೊಂಡ. ಅವರೊಡನೆ ಮಾತನಾಡಿದ. ಚರ್ಚಿಸಿದ. ಹರಟಿಹೊಡೆದ. ಅವರ ಮಾತುಗಳನ್ನು ಕೇಳಿ ಮೈಯೆಲ್ಲ ಪರಚಿಕೊಂಡು ನಗಬೇಕೆನಿಸಿತ್ತು. ಎಷ್ಟೋ ಬಾರಿ ಅವರ ಮುಂದೆ ಪಕಪಕನೆ ನಕ್ಕುಬಿಟ್ಟಿದ್ದ. ಲೆಕ್ಕವಿಲ್ಲದಷ್ಟು ಬ್ಲೂಫಿಲಂಗಳನ್ನು ನೋಡಿದ. ತನ್ನ ಬದುಕಿನಲ್ಲಿ ಉಳಿದುಕೊಂಡಿದ್ದ ಒಂದು ವಾಂಛೆ-ಹಲವು ಹೆಣ್ಣುಗಳೊಡನೆ ಮಿಲನಸುಖ-ತೀರಿಸಿಕೊಂಡುಬಿಟ್ಟ. ಇಪ್ಪತ್ತು ವರ್ಷ ವಯಸ್ಸಿನ ಹುಡುಗಿಯರಿಂದ ಹಿಡಿದು, ಎಪ್ಪತ್ತು ವರ್ಷದ ಮುದುಕಿಯರನ್ನೂ ಭೇಟಿಮಾಡಿ, ಅವರ ವಿಚಾರಗಳನ್ನು ತಿಳಿದುಕೊಂಡ. ಭಾರತದ ಹೆಣ್ಣಿಗೂ, ಇಲ್ಲಿಯ ಹೆಣ್ಣಿಗೂ ಏನೇನೂ ವ್ಯತ್ಯಾಸವಿಲ್ಲ ಎಂದೆನಿಸಿತು. ಸೆಕ್ಸ್ ವಿಚಾರದಲ್ಲಿ ಮಾತ್ರ ಇಲ್ಲಿನ ಹೆಣ್ಣುಗಳು ಅದೃಷ್ಟವಂತರು ಎಂದುಕೊಂಡ. ಅದೇ ಭಾರತದಲ್ಲಿ, ಕಂಡ ಕಂಡ ಸುಂದರ ಪುರುಷರನ್ನು ನೆನೆಸಿಕೊಂಡು, ಇರುವ ಒಬ್ಬನೇ ಗಂಡನನ್ನು ತಬ್ಬಿಕೊಂಡು, ನಿಟ್ಟುಸಿರುಬಿಡುತ್ತ ನರಳುವ ಹೆಣ್ಣಿನ ಬದುಕು...? ಅಬ್ಬಾ! ಎಂಥ ವ್ಯತ್ಯಾಸ!



❀ ❀ ❀ ❀ ❀ ❀

ಮತ್ತಷ್ಟು ದಿನಗಳು ಉರುಳಿದವು.

ಅಂದು ಜನವರಿಯ ಮೊದಲನೆ ದಿನ. 2000 ಇಸವಿಯನ್ನು ಸ್ವಾಗತಿಸಿ, ಕುಣಿದು ಕುಪ್ಪಳಿಸಿದ ಅಮೆರಿಕಾದ ಜನಗಳು ಹುರುಪು ಉತ್ಸಾಹಗಳಿಂದ ಓಡಾಡುತ್ತಿದ್ದರು. ಅಂದು ಬೆಳಗ್ಗೆ ಮಾಧವ, ತನ್ನ ಮನೆಯಲ್ಲಿ ಕ್ಯಾಸೆಟ್ ಹಾಕಿಕೊಂಡು, 'ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ...' ಗೀತೆಯನ್ನು ಕೇಳುತ್ತ ಕುಳಿತಿದ್ದ.

ಅಷ್ಟರಲ್ಲಿ, ''ಡ್ಯಾಡಿ'' ಎನ್ನುತ್ತ ಮಗ ಕಾರ್ತಿಕ್, ಬಾಗಿಲನ್ನು ನೂಕಿಕೊಂಡು ಮನೆಯೊಳಗೆ ಬಂದ. ಅವನೊಡನೆ ಹೆಣ್ಣೊಬ್ಬಳು ಸಹ ಒಳಗೆ ಬಂದಳು. ವಯಸ್ಸಿನಲ್ಲಿ ಕಾರ್ತಿಕನಿಗಿಂತ ಹಿರಿಯಳಂತೆ ಕಾಣುತ್ತಿದ್ದ ಆ ಹೆಣ್ಣನ್ನು ಕಂಡ ತಕ್ಷಣ ಮಾಧವನಿಗೆ ಆಶ್ಚರ್ಯವಾಯಿತು! ಅರೇ... ಇವಳೊಡನೆ ನಾನು ಎರಡು ಮೂರು ಬಾರಿ ಸೆಕ್ಸ್ ಎಂಜಾಯ್ ಮಾಡಿದ್ದಲ್ವ? ಇವಳ್ಯಾಕೆ ಕಾರ್ತಿಕನೊಡನೆ ಬಂದಿದ್ದಾಳೆ?

ಅಷ್ಟರಲ್ಲಿ ಅಡಿಗೆ ಮನೆಯಿಂದ ಶಾರದಾ ಸಹ ಹೊರಬಂದಳು.

ಕಾರ್ತಿಕ ಹೇಳಿದ:


''ಡ್ಯಾಡಿ, ಇವಳು ಮೋನಿಕಾ ಅಂತ. ನನ್ನ ಗರ್ಲ್‌ಫ್ರೆಂಡ್. ನನಗಿಂತ ವಯಸ್ಸಿನಲ್ಲಿ ಎಂಟು ವರ್ಷ ದೊಡ್ಡವಳಾದ್ರೂ, ನನ್ನನ್ನ ತುಂಬಾ ಪ್ರೀತಿಸ್ತಾಳೆ. ನಾನೂ ಇವಳನ್ನು ತುಂಬಾ ಪ್ರೀತಿಸ್ತಿದೀನಿ. ಕ್ರಿಯೇಟಿವ್ ಜರ್ನಲಿಸ್ಟ್. ತುಂಬಾ ಇಂಟೆಲಿಜೆಂಟ್. ನಾನು ನಿಮ್ಮನ್ನು ಮತ್ತು ಅಮ್ಮನ್ನ ಇಬ್ಬರನ್ನೂ ಕರೆಯಬೇಕು ಅಂತ ನೂರು ಸಲ ಅಂದ್ಕೊಂಡೆ. ಆದ್ರೆ ನಿಮ್ಮ ಮನಸ್ಸಿಗೆ ಬೇಜಾರಾಗಬಹುದು ಅಂತ ಕರೀಲಿಲ್ಲ. ಮಧ್ಯರಾತ್ರಿ ಸರಿಯಾಗಿ ಹನ್ನೆರಡು ಗಂಟೆಗೆ ನಾನು, ಇವಳು ಮದುವೆ ಮಾಡ್ಕೊಂಡ್ವಿ...''

ಮಾಧವನ ನಾಲಿಗೆಯಲ್ಲಿ ರಕ್ತಸಂಚಾರ ಸ್ಥಗಿತಗೊಂಡಿತು. ಹುಚ್ಚನಂತೆ ತಲೆ ಕೆರೆದುಕೊಂಡ. ಮೂಕನಂತೆ ಕುಳಿತುಬಿಟ್ಟ. ಶಾರದಾ ಇಡೀ ಅಮೆರಿಕಾ ದೇಶಕ್ಕೆ ಕೇಳಿಸುವಂತೆ ರೋದಿಸ ತೊಡಗಿದಳು.

ಆ ದಿನ ರಾತ್ರಿ, ಮಾಧವ ಒಬ್ಬಂಟಿಗನೆ ಹಾಸಿಗೆಯ ಮೇಲೆ ಉರುಳಿಕೊಂಡ. [illegible] ಜೀವನ [illegible] ನಿಧಾನವಾಗಿ ಓಡತೊಡಗಿದ.

—ನರೇಂದ್ರ ರೆಡ್ಡಿ





ಮನೆತನಕೆ ಕಣ್ಣಾಗು...

ಗಂಗಾಳಿಗೆ



ಚೆನ್ನಾಗಿದ್ದೀಯಲ್ಲವೆ? ಹೌದು, ಸಿರಿತನದ ಮಂಪರಿನಲ್ಲಿ ಚೆನ್ನಾಗಿದ್ದೇನೆಂದು ಭಾವಿಸಿರುವೆ. ತಾಳಿ ಕಟ್ಟಿಕೊಂಡ ಹೆಣ್ಣು, ಗಂಡನ ಮನೇಲಿದ್ದರೇನೇ ಚೆನ್ನ. ತವರೂರಿನಲ್ಲಿ ತಳ ಊರುವುದು ಸರಿಯಲ್ಲ. ಈ ಕಟು ಸತ್ಯವನ್ನರ್ಥಮಾಡಿಕೋ. ಇಷ್ಟಕ್ಕೂ ಸರಳ ಸ್ವಭಾವದ ನನ್ನ ಮಗ ಮಾಡಿದ ತಪ್ಪಾದರೂ ಏನು? ಹಿರಿಯರ ಮಾತಿಗೆ ಮನ್ನಣೆ ಕೊಟ್ಟು ನಿನ್ನ ಕೊರಳಿಗೆ ತಾಳಿ ಕಟ್ಟಿದ್ದು ತಪ್ಪೆ?

ಆದಾಗ್ಯೂ, ಒಂದು ಹೆಣ್ಣಿಗೆ ಮೋಸ ಮಾಡಬಾರದೆಂಬ ಸದುದ್ದೇಶದಿಂದ ಬೇರೆ ರೀತಿಯ ವಿಚಾರ ಮಾಡದೇ ತನ್ನ ಕೆಲಸದಲ್ಲಿಯೇ ಮಗ್ನನಾಗಿದ್ದಾನೆ. ಸೊರಗಿ ಸಣ್ಣಗಾಗಿದ್ದಾನೆ. ಜೀವನವನ್ನು ರಸಮಯವನ್ನಾಗಿಸುವ ಅಥವಾ ನೀರಸಗೊಳಿಸುವ ವಿಚಾರ ನಿನ್ನ ನಿರ್ಧಾರಕ್ಕೆ ಬಿಟ್ಟದ್ದು. ಮನೆತನಕ್ಕೆ ಕಣ್ಣಾಗು. ಹುಣ್ಣಾಗದಿರು. ಇದನ್ನೆಲ್ಲಾ ಅರ್ಥಮಾಡಿಕೋ. ವಿಳಂಬ ಮಾಡದೇ ಮನೆಗೆ ಬಂದು ಸೇರಿಕೋ. ಬಡವನ ಮನೆಗೆ ಬರುವ ಮನಸ್ಸಿಲ್ಲವೇ, ಅದನ್ನಾದರೂ ಸ್ಪಷ್ಟವಾಗಿ ತಿಳಿಸು.

ನಿನ್ನ ಹಿತೈಷಿ,
ಗೌರಿ

ಕಲಬುರ್ಗಿ

ಮರಳಿ ಬಾ ತಮ್ಮಾ...

ಸಹೋದರ ಚಿ॥ ಪ್ರಕಾಶ ಬಾಬು,

ನೀನು ಎಲ್ಲೇ ಇದ್ದರೂ ಚೆನ್ನಾಗಿದ್ದೀಯ ಎನ್ನುವುದೇ ನನ್ನ ನಂಬಿಕೆ. ನಾನು ಪೂಜೆ, ವ್ರತ ಮಾಡಿದಾಗಲೆಲ್ಲ ನೀನು ಚೆನ್ನಾಗಿರಬೇಕೆಂಬುದೇ ದೇವರಲ್ಲಿ ನನ್ನ ಬೇಡಿಕೆ.

ಹದಿನೈದು ವರ್ಷಗಳ ಹಿಂದಿನ ನೆನಪುಗಳು ಸುರುಳಿಯಾಗಿ ನನ್ನಲ್ಲಿ ಸುತ್ತುತ್ತಿವೆ. ಅದರಲ್ಲಿ ನಿನ್ನ ತುಂಟಾಟ, ಮುದ್ದು ನುಡಿಗಳೇ ಪ್ರತಿಧ್ವನಿಸುತ್ತಿವೆ. ಆ ಘಟನೆಗಳು ಇನ್ನೂ ಹಚ್ಚ ಹಸುರಾಗಿವೆ. ಮೂವರು ಅಣ್ಣಂದಿರು, ಮೂವರು ಅಕ್ಕಂದಿರು ನಾವು. ಎಲ್ಲರಿಗಿಂತ ಚಿಕ್ಕವನಾದ ನಿನ್ನನ್ನು ಎಷ್ಟು ಅಕ್ಕರೆಯಿಂದ ನೋಡಿಕೊಳ್ಳುತ್ತಿದ್ದೆವು. ಅಮ್ಮನೊಂದಿಗೆ ಕಳೆದ ಆ ಕ್ಷಣಗಳು ಎಂತಹ ಆನಂದಮಯ. ಯುಗಾದಿ ಹಬ್ಬದಲ್ಲಿ, ಎಣ್ಣೆಸ್ನಾನ ಮಾಡಿಸಿ, ಹೊಸ ಬಟ್ಟೆ ತೊಡಿಸಿ, ನಮ್ಮನ್ನು ನೋಡಿ ಅಮ್ಮ ಅದೆಷ್ಟು ಸಂತೋಷಪಡುತ್ತಿದ್ದಳು. ಅಪ್ಪ ದೈವಾಧೀನನಾದಂದಿನಿಂದ ಅಮ್ಮನ ಸುಖ, ದುಃಖ, ಸರ್ವಸ್ವವೇ ನಾವಾಗಿದ್ದೆವು. ನಮ್ಮೊಂದಿಗೆ ಬೆರೆತು ದುಃಖ ಮರೆಯುತ್ತಿದ್ದಳು. ಅಣ್ಣ, ಅತ್ತಿಗೆಯರು ಮತ್ತು ಅಂಬೆಗಾಲಿಡುವ ಪುಟ್ಟ ಮಕ್ಕಳಿಂದ ಮನೆ ತುಂಬಿ ತುಳುಕುತ್ತಿತ್ತು. ಕಾಳು ತುಂಬಿದ ತೆನೆಯಂತಿತ್ತು.

ನೀನೋ ತುಂಟರ ಗೆಳೆಯ. ಜಿಗಿಯುವ ಜಿಂಕೆಯನ್ನು ನಾಚಿಸುವಂಥವನು. ನಮ್ಮ ಪಾಲಿಗೆ ಆ ದೇವರು ಅಷ್ಟು ಕರುಣಾಳುವಾಗಲಿಲ್ಲ. ಅಪ್ಪನನ್ನು ಕಳೆದುಕೊಂಡು, ದುಃಖ ಮರೆತು, ಅಮ್ಮನ ಮಡಿಲಲ್ಲಿ, ಆನಂದದ ಗೋಪುರದಲ್ಲಿ ಜೀವಿಸುತ್ತಿದ್ದ ನಮ್ಮನ್ನು ಕಂಡು ಹೊಟ್ಟೆಕಿಚ್ಚುಪಟ್ಟನೋ ಏನೋ, ಅಮ್ಮನನ್ನು ಕಸಿದುಕೊಂಡ. ಅಲ್ಲಿಂದ ನಮ್ಮನ್ನು, ದುಃಖದ, ದೂರಾಗುವ ದೃಶ್ಯಗಳು ಒಂದರ ಮೇಲೊಂದು ಕಾಡಹತ್ತಿದವು. ಸಣ್ಣಣ್ಣ ಹೆಂಡತಿಯೊಂದಿಗೆ ಹುಬ್ಬಳ್ಳಿಗೆ ಹೋದ. ದೊಡ್ಡಣ್ಣ ಹರಪನಹಳ್ಳಿಗೆ ಕೆಲಸದ ಮೇಲೆ ಹೋದರು. ನಾನು ನನ್ನ ಗಂಡನ ಮನೆಗೆ ಬಂದೆ, ಅಕ್ಕನೋ ಮೊದಲೇ ಹೋಗಿದ್ದಳು. ಚಿಕ್ಕ ತಂಗಿ ಚಿಕ್ಕಪ್ಪ ಚಿಕ್ಕಮ್ಮನ ಮಡಿಲಲ್ಲಿ ಬೆಳೆಯುವವಳು. ಬರಿದಾದ ಮನೆಯಲ್ಲಿ ನೀನು ಮತ್ತು ಶಿವಣ್ಣ ಮಾತ್ರ. ನೀನು ಎಲ್ಲರ ಊರುಗಳಲ್ಲಿ ಕಾಲ ಕಳೆಯುತ್ತಿದ್ದೆ. ನಮ್ಮ ಊರಿಗೆ ಬಂದಾಗ ನಿನ್ನ ತುಂಟತನಗಳನ್ನು ಮರೆಯಲು ಸಾಧ್ಯವೆ? ನಾನು ನಿಮ್ಮಾವನೊಂದಿಗೆ ಹೊಲಕ್ಕೆ ಕೆಲಸಕ್ಕೆ ಹೋಗುತ್ತಿದ್ದಾಗ ನೀನದೆಷ್ಟು ಮರುಗುತ್ತಿದ್ದೆ. ಎಂದೂ ಕೆಲಸ ಮಾಡದೆ ಸುಖದ ಸುಪ್ಪತ್ತಿಗೆಯಲ್ಲಿ ಬೆಳೆದ ನೀನು, ಈ ಅಕ್ಕನಿಗೋಸ್ಕರ ಹೊಲದಲ್ಲಿ ಕೆಲಸ ಮಾಡುತ್ತಿದ್ದೆ.

ನಮ್ಮೂರಿನಿಂದ ಹುಬ್ಬಳ್ಳಿಗೆ ಅಣ್ಣನ ಮನೆಗ್ಹೋದ ನೀನು ನಮ್ಮನ್ನೆಲ್ಲ ಬಿಟ್ಟು ಎಲ್ಲಿ ಹೋದೆ? ಏಕೆ ಹೀಗೆ ಮಾಡಿದೆ? ಹೋದ ದಿನದಿಂದ ಇಂದಿನವರೆವಿಗೂ ಒಂದು ಪತ್ರವಿಲ್ಲ, ನಿನ್ನ ಸುಳಿವೇ ಇಲ್ಲ. ನಾವು ನಿನ್ನನ್ನು ಎಷ್ಟು ಹುಡುಕಿದೆವು ಗೊತ್ತಾ? ನಮ್ಮ ದುಃಖದ ನಿಟ್ಟುಸಿರು ನಿನಗೆ ತಾಗಲಿಲ್ಲವೆ? ನೀನು ನಮಗೆ ಕೊನೆಗೂ ಸಿಗಲಿಲ್ಲ. ಹದಿನೈದು ವರ್ಷಗಳುರುಳಿದವು. ಇನ್ನೂ ನಾವು ನೆನಪಿಗೆ ಬರುತ್ತಿಲ್ಲವೆ?

ಪ್ರೀತಿಯ ಸಹೋದರ, ನೋಡು ಈ ನಿನ್ನ ಅಕ್ಕನ ಅಕ್ಕರೆಯ ಮಾತಿಗೆ ಓಗೊಟ್ಟು ಬರುತ್ತೀಯಾ? ಮರೆಯಬೇಡ, ತಪ್ಪದೇ ಬಾ...

ಇಂತಿ ನಿನ್ನ ಪ್ರೀತಿಯ ಅಕ್ಕ

ಹಾರಕನಾಳು, ಕೂಡ್ಲಿಗಿ ತಾಲೂಕು ಬಳ್ಳಾರಿ ಎಸ್. ನಾಗರತ್ನಮ್ಮ





‘ಅಭಿನಯದ ಸರದಾರ’ನ ಹೃದಯವೇಕೆ ದುರ್ಬಲವಾಯಿತು?

ಪ್ರೀತಿಯ ಸಂಜೂ

ಇಂದು ನಿನ್ನ ಅಭಿನಯದ ‘ಕೋಶಿಶ್’ ಮತ್ತೆ ನೋಡಿದೆ. ಈ ಚಿತ್ರವನ್ನು ನಾನು ನನ್ನ ಕಾಲೇಜು ದಿನಗಳಲ್ಲಿ ನೋಡಿದ್ದು. ಆದ್ರೂ ಇನ್ನೂ ಮರೆತಿಲ್ಲ ನೋಡು. ಈವರೆಗೆ ಎಷ್ಟೋ ಸಾವಿರ ಸಿನಿಮಾಗಳನ್ನು ನೋಡಿರಬಹುದು. ಆದ್ರೆ ಸಿನಿಮಾ ಮುಗಿದ ಐದೇ ಐದು ನಿಮಿಷಗಳ ತರುವಾಯ, ಆ ಸಿನಿಮಾದ ಒಂದೇ ಒಂದು ಘಟನೆಯಾಗಲೀ, ಅಭಿನಯವಾಗಲೀ, ಉಹುಂ ಜ್ಞಾಪಕವೇ ಇರಲ್ಲ. ಅಂಥಾದ್ದರಲ್ಲಿ ‘ಕೋಶಿಶ್’ನ ಪ್ರತಿಯೊಂದು ಘಟನೆ, ದೃಶ್ಯ, ಸಂಭಾಷಣೆ, ಹಾಸ್ಯ, ಮೊನಚು, ವಿಷಾದ ಎಲ್ಲ, ಎಲ್ಲಾ ಮನಸ್ಸಿನಾಳದಲ್ಲಿ ಅಚ್ಚೊತ್ತಿ ಕೂತುಬಿಟ್ಟಿತ್ತು.

ಈ ನಗರದ ಅತಂತ್ರ ಬದುಕಿನ ನಡುವೆ, ಸಂಸಾರ, ಮಕ್ಕಳು, ಗಂಡ, ಬದುಕು ಮತ್ತು ಅದರ ಜಂಜಾಟ ಎಲ್ಲದರ ನಡುವೆ ಸಹ ‘ಕೋಶಿಶ್’ ಮನದ ಮೂಲೆಯಲ್ಲಿ ಸೇರಿ ಶಾಶ್ವತವಾಗಿ ಉಳಿದದ್ದು ನನಗೇ ಆಶ್ಚರ್ಯ!

ಇಡೀ ಸಿನಿಮಾ ಒಂದು ಸಾಹಿತ್ಯಕೃತಿಯಂತಿದೆ ಅನ್ನಿಸ್ತು. ಒಂದು ಒಳ್ಳೆಯ ಕವಿತೆ ಓದಿದಾಗ, ಕತೆ ಓದಿದಾಗ ಸಿಗೋ ತೃಪ್ತಿ ‘ಕೋಶಿಶ್’ನಿಂದ ದಕ್ಕಿತು. ಗುಲ್ಜಾರ್‌ರ ನಿರ್ದೇಶನ ಅಮೋಘ.

‘ಕೋಶಿಶ್’ನಲ್ಲಿ ನಿನ್ನ ಅಭಿನಯದ ಬಗ್ಗೆ ಏನು ಹೇಳಲಿ ಸಂಜೂ! ತಾವು ಪ್ರತಿಯೊಂದು ಸೀನ್‌ನಲ್ಲಿ ತೊಡುವ ಬಟ್ಟೆಗಳೂ ದುಬಾರಿಯಾಗಿರಬೇಕು, ಹಾಗಿರಬೇಕು, ಹೀಗಿರಬೇಕು ಅನ್ನೋ ಚಾಕೊಲೇಟ್ ಹೀರೋಗಳೇ ಹೆಚ್ಚಿರುವಾಗ, ಹರಕುಬಟ್ಟೆ ಹಾಕಿಕೊಂಡು, ಯಾವುದೇ ಇಮೇಜ್, ದೊಡ್ಡಸ್ತಿಕೆಯೂ ಇಲ್ಲದೇ ಆ ಪಾತ್ರ ಮಾಡಿದ ನೀನು, ನಿಜವಾಗಿ ಕಲಾವಿದ. ಕೋಶಿಶ್‌ನ ‘ಹರಿಚರಣ್’ ಮಾತೇ ಬಾರದ ಮೂಕ. ಹಾಸ್ಯದ ಸನ್ನಿವೇಶ, ಸಿಟ್ಟಿನ ಸನ್ನಿವೇಶ, ದುಗುಡ, ದುಃಖ, ಓಹ್ ಎಲ್ಲವನ್ನೂ ಎಷ್ಟು ಅದ್ಭುತವಾಗಿ ಅಭಿನಯಿಸಿದ್ದೀ. ಅಭಿನಯವೆಂದರೆ ನಿನ್ನನ್ನೇ ಅಪಮಾನ ಮಾಡಿದಂತೆ ಅನ್ನಿಸ್ತಿದೆ. ಹರಿಚರಣ್‌ನೇ ನೀನಾಗಿಬಿಟ್ಟಿದ್ದೀ.

ಭಾವನಾ ಅಕ್ಟೋಬರ್, 2000

ಕೋಶಿಶ್‌ನ ದೃಶ್ಯವೊಂದರಲ್ಲಿ-ನೀನೂ ಆರತಿ (ಜಯಾ ಬಚ್ಚನ್ ಆಗಿನ್ನೂ ಜಯಬಾಧುರಿ) ಬರುವಾಗ ಯಾರೋ ಒಬ್ಬ ಟೆಲಿಫೋನಿನಲ್ಲಿ ಮಾತಾಡುತ್ತಿರುತ್ತಾನೆ. ಇದೇನೆಂಬ ಕುತೂಹಲ ಜಯಾಗೆ (ಅವಳೂ ನಿನ್ನಂತೆ ಮೂಕಿ, ಕಿವುಡಿ). ನೀನು, ಮನಸ್ಸಿಗೆ ಬಂದ ನಂಬರ್‌ಗಳನ್ನು ಡಯಲ್ ಮಾಡಿ, ಥೇಟು ಮಾತು ಬರುವವರಂತೇ ಹಾಂ, ಹೂಂ ಅಂತ ಮಾತಾಡೋದು ಎಂತಹ ಸನ್ನಿವೇಶ! ನಿನ್ನ ಸೈಕಲ್‌ನ ಹಾರನ್ ನೋಡಿ ಇದೇನೆಂದು ಕೇಳುವ ಆರತಿಗೆ, ಅಲ್ಲೇ ಕಾಫಿ ಕುಡೀತಾ ಕೂತ ಒಬ್ಬನ ಕಿವಿಯ ಬಳಿ ಹಾರ್ನ್ ಮಾಡೋ ಮೂಲಕ ಅವನನ್ನ ಬೆಚ್ಚಿಬೀಳಿಸೋದು, ಅವನ ಕಿವಿ ಬಳಿ ವಿಷಲ್ ಊದೋದು. ಎಷ್ಟೋ ಬಾರಿ ಅಪಹಾಸ್ಯಕ್ಕೀಡಾಗೋ ಅಂಗವಿಕಲರಿಂದ ಎಲ್ಲವೂ ಚೆನ್ನಾಗಿರೋರ ಫಜೀತಿಗಳನ್ನು ವಿಡಂಬಿಸೋ ಸೀನ್ ಎಂಥಾ ನವಿರು ಹಾಸ್ಯದ್ದು, ಸಂಜೂ.

ನೀನೂ, ಆರತಿ ಇಬ್ಬರೂ ಕಿವುಡ, ಮೂಗರಾದ್ದರಿಂದ ತಮಗೆ ಹುಟ್ಟೋ ಮಗು ಸಹ ಮೂಕನಾಗಬಹುದೇ ಎಂಬ ಆತಂಕಗಳ ನಡುವೆಯೇ ನಿಮಗೊಂದು ಮಗು ಹುಟ್ಟಿದಾಗ, ಅದಕ್ಕೆ ಕಿವಿ ಕೇಳುತ್ತೋ ಇಲ್ಲವೋ, ಮಾತಾಡುತ್ತೋ ಇಲ್ಲವೋ ಎಂಬ ನಿಮ್ಮ ಆತಂಕದ ನೋಟ ಯಾವುದೇ ಸಂಭಾಷಣೆಗಿಂತಲೂ ಬರೀ ಒಂದು ನೋಟದಲ್ಲೇ ಎಷ್ಟು ಮಾತಾಡಬಹುದೆಂಬುದನ್ನು ಆ ದೃಶ್ಯದಲ್ಲಿ ಎಷ್ಟು ಚೆನ್ನಾಗಿ ಮನದಟ್ಟು ಮಾಡಿಕೊಟ್ಟಿದ್ದೀರಿ. ರೇಡಿಯೋದ ಹಾಡಿಗೆ ನಿಮ್ಮ ಮಗ ಡ್ಯಾನ್ಸ್ ಮಾಡೋವಾಗ ಅದರ ಕಲ್ಪನೆಯೇ ಇಲ್ಲದೇ ಗಾಬರಿಪಡೋದು, ನಂತರ ರೇಡಿಯೋದ ಶಬ್ದವನ್ನು ರೇಡಿಯೋ ಮೇಲೆ ಕೈ ಇಡೋದರ ಮೂಲಕ ತಿಳಿದು, ತಮ್ಮ ಮಗು ಈ ಹಾಡಿಗೆ ತಾಳ ಹಾಕುತ್ತಾ ನೃತ್ಯ ಮಾಡುತ್ತಿದ್ದಾನೆಂದು ಅದನ್ನ ಮನಸಾರೆ ಆನಂದಿಸೋದು, ಎಲ್ಲ ಅವಿಸ್ಮರಣೀಯ.

ಸಂಜೂ ನೀನು ಇನ್ನೂ ಬದುಕಬೇಕಿತ್ತು. ನೀನು ಬದಕಿದ್ದಿದ್ದರೂ ಈಗಿನ ಚಿತ್ರರಂಗ ನಿನ್ನನ್ನು ಸಮರ್ಥವಾಗಿ ಬಳಸಿಕೊಳ್ಳುತ್ತಿತ್ತೇ? ಎಂಬ ಅನುಮಾನ ಸಹ ಹುಟ್ಟುತ್ತಿದೆ. ತಾಜ್‌ಮಹಲ್‌ನ ಪ್ರದೀಪ್ ಕುಮಾರ್, ಮೊಘಲ್-ಯೆ-ಆಜಂನ ದಿಲೀಪ್‌ಕುಮಾರನ್ನ ಬಾಲಿವುಡ್ ಹೇಗೆ ಬಳಸಿಕೊಳ್ತಿದೆ ನೋಡು. ಆದ್ರೂ ನೀನು ಇನ್ನೂ ಇರಬೇಕಿತ್ತು. ನೀನು ಹೃದಯ ಬೇನೆಯಿಂದ ಬಳಲುತ್ತಿದ್ದೆ ಎಂದು ಓದಿದ್ದ ನೆನಪು. ನಿನಗ್ಯಾಕೆ ಹೃದಯ ದುರ್ಬಲವಾಯ್ತು? ನಿನ್ನ ಹೃದಯಕ್ಕೆ ಅಧಿಪತಿಯೊಬ್ಬಳು ಕಡೆಗೂ ಸಿಗಲಿಲ್ಲ ಅಂತಲೇ?

ನಿನ್ನನ್ನು, ನಿನ್ನ ಅಭಿನಯವನ್ನು ಇಷ್ಟಪಡುತ್ತಿದ್ದ ಸಾವಿರಾರು ಮಂದಿ ಈಗಲೂ ಇದ್ದಾರೆ. ಈ ಯಾರ ಪ್ರೀತಿ, ಆದರ, ಅಭಿಮಾನಗಳೂ ಈಗ ನಿನಗೆ ತಲುಪಲಾರವು. ಆದ್ರೆ, ನಿನ್ನ ಕುರಿತ ಆ ಭಾವನೆಗಳನ್ನ ನಾವುಗಳು ಮಾತಾಡಿಕೊಳ್ಳೋದ್ರ ಮೂಲಕ ಸಮಾಧಾನ ಮಾಡಿಕೊಳ್ತೀವಿ.


ಬೆಂಗಳೂರು-70 **ಪಾರ್ವತಿ ಶಂಭೂ**



ಜನಪದ ತಮಿಳು

ಸಂಗ್ರಹ: ಎ.ಕೆ. ರಾಮಾನುಜನ್
ಕನ್ನಡಕ್ಕೆ: ಮಹಾಬಲೇಶ್ವರರಾವ್

ಮಲ್ಲಿಗೆ ನಗೆಯ ದೊರೆ




ಒಂದಾನೊಂದು ಕಾಲದಲ್ಲಿ ಒಬ್ಬ ರಾಜನಿದ್ದ. ಅವನನ್ನು ಎಲ್ಲರೂ 'ಮಲ್ಲಿಗೆ ನಗೆಯ ದೊರೆ' ಎಂದು ಕರೆಯುತ್ತಿದ್ದರು. ಅವನು ನಕ್ಕರೆ ಸಾಕು, ಮಲ್ಲಿಗೆಯ ಪರಿಮಳ ಹತ್ತಾರು ಮೈಲಿ ಪಸರಿಸುತ್ತಿತ್ತು. ಮಲ್ಲಿಗೆಯ ಪರಿಮಳ ಹೀಗೆ ಹರಡಬೇಕಾದರೆ ಅವನು ತನ್ನಷ್ಟಕ್ಕೆ ತಾನೇ ಸಹಜವಾಗಿ ನಗಬೇಕು. ಬಲಾತ್ಕಾರ ಅಥವಾ ಒತ್ತಾಯಕ್ಕೆ ಮಣಿದು ನಕ್ಕರೆ ಮಲ್ಲಿಗೆಯ ಪರಿಮಳ ಬರುತ್ತಿರಲಿಲ್ಲ.

ಮಲ್ಲಿಗೆಯ ದೊರೆ ಚಕ್ರವರ್ತಿಗಳಿಗೆ ಕಾಲಕಾಲಕ್ಕೆ ಕಪ್ಪ ಒಪ್ಪಿಸುತ್ತಿದ್ದ. ಚಕ್ರವರ್ತಿಗೆ ಈ ರಾಜನ ನಗು ಅದರಿಂದ ಹೊಮ್ಮುವ ಮಲ್ಲಿಗೆಯ ಪರಿಮಳದ ವಿಷಯ ಅದು ಹೇಗೋ ತಿಳಿಯಿತು. ಈ ಚಮತ್ಕಾರವನ್ನು ತನ್ನ ಕಣ್ಣಾರೆ ಕಾಣಬೇಕೆಂದು ಆತ ಬಯಸಿದ. ಮಲ್ಲಿಗೆ ದೊರೆಯನ್ನು ತನ್ನ ಆಸ್ಥಾನಕ್ಕೆ ಆಹ್ವಾನಿಸಿ ನಗಲು ಹೇಳಿದ. ಆದರೆ ಚಕ್ರವರ್ತಿಯ ಆಜ್ಞಾನುಸಾರ ರಾಜನಿಗೆ ನಗಲಾಗಲಿಲ್ಲ. ಅವನು ನಗಲು ಬಹಳ ಪ್ರಯತ್ನ ಮಾಡಿದ; ಪ್ರಯೋಜನವಾಗಲಿಲ್ಲ. ಚಕ್ರವರ್ತಿಗೆ ಕೋಪ ಉಕ್ಕೇರಿತು. ''ಈ ರಾಜ ನನ್ನ ಆಜ್ಞೆಯನ್ನು ಉಲ್ಲಂಘಿಸಿ ನನಗೆ ಅವಮಾನ ಮಾಡುತ್ತಿದ್ದಾನೆ. ಇವನು ನಗುವವರೆಗೆ ಸೆರೆಮನೆಯಲ್ಲಿ ಕೂಡಿಹಾಕಿ'' ಎಂದು ಆಜ್ಞಾಪಿಸಿದ.

ಸೆರೆಮನೆಯ ಎದುರಲ್ಲೇ ಕುಂಟನೊಬ್ಬನ ಗುಡಿಸಲಿದ್ದಿತು. ಚಕ್ರವರ್ತಿಯ ಪತ್ನಿ ಈ ಕುಂಟನನ್ನು ಪ್ರೀತಿಸುತ್ತಿದ್ದಳು. ಅವಳು ಪ್ರತಿ ರಾತ್ರಿ ಕುಂಟನ ಗುಡಿಸಲಿಗೆ ಬರುತ್ತಿದ್ದಳು. ಮಲ್ಲಿಗೆ ದೊರೆ ಸೆರೆಮನೆಯ ಕಿಟಕಿಯಿಂದ ಇದನ್ನೆಲ್ಲ ನಿತ್ಯವೂ ನೋಡುತ್ತಿದ್ದ. ಆದರೆ ಇದರ ಬಗೆಗೆ ತಲೆಕೆಡಿಸಿಕೊಳ್ಳದೆ ಏನೂ ಅರಿಯದವನಂತೆ ಇದ್ದುಬಿಟ್ಟ. ಒಂದು ರಾತ್ರಿ, ರಾಣಿ ಕುಂಟನ ಗುಡಿಸಲಿಗೆ ತಡವಾಗಿ ಬಂದಳು. ಅಂದು ಕುಂಟನಿಗೆ ಬಹಳ ಕೋಪ ಬಂದಿತ್ತು. ಕೋಪದಿಂದ ಅವನು ರಾಣಿಗೆ ತನ್ನ ಊರುಗೋಲುಗಳಿಂದ ಚೆನ್ನಾಗಿ ಹೊಡೆದ, ಚೊಂಟುಕಾಲುಗಳಿಂದ ಒದೆದ. ರಾಣಿ ಇದೆಲ್ಲವನ್ನೂ ಬಾಯಿಮುಚ್ಚಿಕೊಂಡು ಸಹಿಸಿಕೊಂಡಳು. ಆಕೆ ತಾನು ತಂದಿದ್ದ ಭಕ್ಷ್ಯಭೋಜ್ಯಗಳನ್ನೆಲ್ಲ ಅವನಿಗೆ ಪ್ರೀತಿಯಿಂದ ಬಡಿಸಿದಳು. ಸ್ವಲ್ಪ ಹೊತ್ತಿನ ಮೇಲೆ ಕುಂಟನ ಮನಸ್ಸು ಕರಗಿತು. ''ನಿನಗೆ ನನ್ನ ಮೇಲೆ ಕೋಪ ಬರಲಿಲ್ಲವೇ?'' ಎಂದು ಕೇಳಿದ. ಈಗ ರಾಣಿ, ''ಇಲ್ಲ, ಇಲ್ಲ ನನಗೆ ಬಹಳ ಸಂತೋಷವಾಯಿತು. ಒಂದೇ ಸಲ ಹದಿನಾಲ್ಕು ಲೋಕಗಳನ್ನು ನೋಡಿದಷ್ಟು ಖುಷಿ ಆಯಿತು'' ಎಂದಳು.

ಕುಂಟ ಮತ್ತು ರಾಣಿ ಹೀಗೆ ಮಾತನಾಡಿಕೊಳ್ಳುತ್ತಿರುವಾಗ, ಗೋಡೆಯ ಆಚೆಕಡೆ ಒಬ್ಬ ಬಡ ಮಡಿವಾಳ ಚಳಿಯಲ್ಲಿ ನಡುಗುತ್ತಾ ಮುದ್ದೆಯಾಗಿ ಮಲಗಿಕೊಂಡಿದ್ದ. ಅವನ ಕತ್ತೆ ಕಳೆದುಹೋಗಿತ್ತು. ಕಳೆದ ನಾಲ್ಕೈದು ದಿನಗಳಿಂದ ಅದನ್ನು ಹುಡುಕಿ ಹುಡುಕಿ ಸುಸ್ತಾಗಿದ್ದ. ಇನ್ನೆಂದೂ ತನಗೆ ಅದು ಸಿಗುವುದಿಲ್ಲವೇನೋ ಎಂದು ನಿರಾಶನಾಗಿದ್ದ. 'ಹದಿನಾಲ್ಕು ಲೋಕ ಕಂಡಷ್ಟು ಖುಷಿ ಆಯಿತು ಎಂಬ



ಮಾತು' ಕೇಳಿದಾಗ ಆತ, ಈ ರಾಣಿಗೆ ತನ್ನ ಕತ್ತೆ ಎಲ್ಲಿದೆ ಎಂಬುದು ಖಂಡಿತ ಗೊತ್ತಿರಬಹುದು ಎಂದುಕೊಂಡ. ಹೀಗಾಗಿ ಆ ಮಡಿವಾಳ, ''ರಾಣಿಯವರೆ, ನೀವು ನನ್ನ ಕತ್ತೆಯನ್ನು ಎಲ್ಲಿಯಾದರೂ ಕಂಡಿರುವಿರಾ?'' ಎಂದು ಗಟ್ಟಿಯಾಗಿ ಕೇಳಿದ.

ಇದನ್ನೆಲ್ಲಾ ನೋಡುತ್ತಾ, ಕೇಳುತ್ತಾ ಇದ್ದ ಮಲ್ಲಿಗೆಯ ದೊರೆಗೆ ನಗು ತಡೆಯಲಾಗಲಿಲ್ಲ. ಅವನು ಗಹಗಹಿಸಿ ನಗತೊಡಗಿದ. ನಗುವಿನ ಅಲೆಗಳು ಒಂದರ ಮೇಲೊಂದರಂತೆ ಬಂದವು. ಮಲ್ಲಿಗೆಯ ಸುವಾಸನೆ ಗಾಳಿಯಲ್ಲಿ ದೂರದೂರದವರೆಗೆ ಪಸರಿಸಿತು. ಬೆಳಗಾಗುವುದಕ್ಕೆ ಇನ್ನೂ ಸಾಕಷ್ಟು ಸಮಯವಿತ್ತು. ಆದರೆ ಸೆರೆಮನೆಯ ಕಾವಲುಗಾರರು ಚಕ್ರವರ್ತಿಯ ಬಳಿಗೆ ಓಡಿಹೋಗಿ, ರಾಜನ ನಗು ಹಾಗೂ ಮಲ್ಲಿಗೆಯ ಸುವಾಸನೆ ಹಬ್ಬಿದ ವರ್ತಮಾನವನ್ನು ತಿಳಿಸಿದರು. ಚಕ್ರವರ್ತಿ ಒಂದಿಷ್ಟೂ ತಡಮಾಡದೆ ರಾಜನನ್ನು ಅರಮನೆಗೆ ಕರೆಯಿಸಿಕೊಂಡ. ''ನಗಬೇಕು ಎಂದು ನಾನು ಹೇಳಿದಾಗ ನೀನು ನಗಲಿಲ್ಲ. ಈಗ ಈ ಮಧ್ಯರಾತ್ರಿಯಲ್ಲಿ ನಗುವಂಥದ್ದು ಏನಾಗಿದೆ ನಿನಗೆ?'' ಎಂದು ಕೇಳಿದ.

ಮಲ್ಲಿಗೆ ನಗೆಯ ದೊರೆ ತುಟಿಯ ಅಂಚಿನವರೆಗೆ ಬಂದ ಮಾತನ್ನು ತಡೆಹಿಡಿದ. ಆದರೆ ಚಕ್ರವರ್ತಿ ಕಾರಣ ಹೇಳಲೇಬೇಕೆಂದು ಬಹಳ ಒತ್ತಾಯಿಸಿದ. ರಾಜ ಗತ್ಯಂತರವಿಲ್ಲದೆ ಎಲ್ಲ ವಿಷಯ ತಿಳಿಸಿದ. ಚಕ್ರವರ್ತಿ ಮಲ್ಲಿಗೆ ರಾಜನನ್ನು ಸಕಲ ರಾಜ ಮರ್ಯಾದೆಗಳೊಂದಿಗೆ ಮರಳಿ ಅವನ ರಾಜಧಾನಿಗೆ ಕಳುಹಿಸಿದ. ರಾಣಿಯನ್ನು ಸುಣ್ಣದ ಮಡುವಿಗೆ ದೂಡಿ ಕೊಲ್ಲಬೇಕೆಂದು ಆಜ್ಞೆ ಮಾಡಿದ.

ಎಚ್. ಗಿರಿಜಮ್ಮ

ಹಳೆಯ ಮಧುರ ಹಾಡು



ರಾಮಕೃಷ್ಣ

ಬಾಲ್ಕನಿಯಲ್ಲಿ ಒಬ್ಬಳೇ ನಿಂತಿದ್ದೆ.

ಹುಣ್ಣಿಮೆಯ ರಾತ್ರಿಯಿರಬೇಕು. ಚಂದ್ರ ಅದೆಷ್ಟು ದೊಡ್ಡದಾಗಿ, ಸುಂದರವಾಗಿ, ಬೆಳ್ಳಿ ಬಟ್ಟಲಿನಂತೆ ಹೊಳೆಯುತ್ತಿದ್ದ! ಅಲ್ಲಲ್ಲಿ ಮಿನುಗುವ ನಕ್ಷತ್ರಗಳು ಮಂಕಾದಂತೆ ಕಂಡವು.

ಮಂದವಾದ ಗಾಳಿ, ದೇಹಕ್ಕೆ ಹಿತವಾಗುವಂತೆ ಬೀಸಿಬಂದು ನನ್ನನ್ನು ಆಲಂಗಿಸಿಕೊಳ್ಳುತ್ತಿರುವಂತೆ ಭಾಸವಾಯಿತು. ರಾತ್ರಿಗಳನ್ನು ಹೆಚ್ಚು ಪ್ರೀತಿಸುವ ನನಗೆ, ತಾರಸಿಯ ಮೇಲೆ ಅಂಗಾತವಾಗಿ ಮಲಗಿ, ಆಕಾಶದಲ್ಲಿ ಮಿನುಗುವ ತಾರೆಗಳನ್ನು ಎಣಿಸುವುದೆಂದರೆ 'ಹುಚ್ಚು' ಎನ್ನಿಸುವಷ್ಟು ಪ್ರೀತಿ... ಅಷ್ಟೇ ಪ್ರೀತಿ, ಮೈ ಬೆಚ್ಚಗಾಗಿಸುವ, ಕಲ್ಲು ಹೃದಯಗಳಲ್ಲೂ ಮಾರ್ದವತೆಯ ವೀಣೆಯನ್ನಿಟ್ಟು ಮೃದು ಮಧುರವಾಗಿ ಪ್ರೇಮದ ನಾದವನ್ನು ಹೊರಡಿಸುವಂತೆ ಮಾಡುವ, ಆಕಾಶದಲ್ಲಿ ಓಡುವಂತೆ ಕಾಣುವ, ಮೋಡಗಳಿಗೆ ಬೆದರಿಸುವಂತೆ ನಟಿಸುವ, ಆ ಚಂದಿರನನ್ನು ಕಂಡರೆ!

ಬೀದಿಗಳಲ್ಲಿ ಓಡಾಡುತ್ತಿರುವ ಸ್ತ್ರೀಯರೇ ಇಷ್ಟು ಸುಂದರಿಯರಾಗಿರಬೇಕಾದರೆ, ಇನ್ನು ಮನೆಯಲ್ಲಿ, ಕೋಣೆಯೊಳಗೆ, ಮರೆಯಾಗಿ ಇರುವ ಸ್ತ್ರೀಯರು ಇನ್ನೆಷ್ಟು ಸುಂದರವಾಗಿರುತ್ತಾರೋ ಏನೋ ಎನ್ನುವ ಕುತೂಹಲದಿಂದ ಚಂದ್ರ, ಬಾಗಿಲು ಕಿಟಕಿಗಳ ಮೂಲಕ ಬೆಳದಿಂಗಳಾಗಿ ಇಣುಕುತ್ತಾನೆ.

ಶಾಂತಿ ಬಂದುಹೋದನಂತರ ಮನಸ್ಸು ಅಶಾಂತಿಯ ಕೊಳವಾಗಿತ್ತು... ಎರಡು ವರ್ಷಗಳ ಹಿಂದೆ ನೋಡಿದ್ದ ಶಾಂತಿ, ಈಗ ತುಂಬಾ ಬದಲಾಗಿದ್ದಳು. ಬೆಳೆದ ಹೆಂಗಸಿನಂತೆ, ಪ್ರೌಢೆಯಂತೆ ಕಂಡಳು. ವಿಶಾಲವಾದ ಅವಳ ಕಣ್ಣುಗಳಲ್ಲಿ ಮೊದಲಿನ ಚಂಚಲತೆ, ಹೊಳಪು ಕಾಣಲಿಲ್ಲ. ತಳದಲ್ಲಿ ಹೆಪ್ಪುಗಟ್ಟಿದ ದುಃಖವನ್ನಿಟ್ಟುಕೊಂಡು ಮೇಲೆ ನಗೆಯ ಬೆಳಕನ್ನು ಚೆಲ್ಲುವಂತೆ ಮಾತನಾಡಿದರೂ, ಕಣ್ಣುಗಳು ಮಾತ್ರ ಭಾವನಾರಹಿತ ಗಾಜಿನಂತೆ ಕಂಡವು.

''ಹೇಗಿದ್ದೀಯಾ ಶಾಂತಿ?'' ಎಂದು ಕೇಳಿದ್ದೆ. ಅದುವರೆಗೂ ಏನೇನೋ ವಿಷಯಗಳನ್ನು ತೇಲಿಸಿ ಮಾತನಾಡುತ್ತಾ, ನನ್ನ ಅಮ್ಮನೊಂದಿಗೆ ಹರಟುತ್ತಿದ್ದ ಶಾಂತಿಯ ಕಣ್ಣುಗಳಲ್ಲಿ ನೀರು ತುಂಬಿಬಂದಿತು.

''ಈ ಕರೀಮಣಿಯ ತಾಳಿಯೊಂದರಿಂದ ಇಷ್ಟು ಧೈರ್ಯ, ಭದ್ರತೆಯ ಭಾವ ಬರಬಹುದೂಂತ ನಾನಂದುಕೊಂಡಿರಲಿಲ್ಲ... ನೀವೇ ನನ್ನ ಭಾಗದ ದೇವರಾಗಿದ್ದೀರಿ'' ಎಂದು ಅಮ್ಮನ ಕೈಹಿಡಿದು, ಉತ್ಕಂಠಿತಳಾಗಿ ಹೇಳಿದಳು.

''ನಾವೇನೂ ಅಂಥಾದ್ದನ್ನು ಮಾಡಲಿಲ್ಲ... ನನ್ನ ಮಗಳ ಜೊತೆಗೆ ನೀನೂ ಒಬ್ಬಳು ಅಂದ್ಕೊಂಡಿದ್ದೆ... ಹೀಗಾಗಿ ನಿನ್ನ ನೋವು ನಮ್ಮ ನೋವೆಂದು ಭಾವಿಸಿದ್ದೆವೂಂತ ಕಾಣುತ್ತೆ... ಏನೇ ಇರಲಿ ಬಿಡು, ಅಂತೂ ಅವನು ಮೋಸ ಮಾಡದೆ ಮದುವೆಯಾದನಲ್ಲ.... ಹಳೆಯದನ್ನು ಮರೆತುಬಿಡು. ಈಗ ನೀನು ಗೃಹಿಣಿ, ಒಂದು ಮಗುವಿನ ತಾಯಿ ಕೂಡಾ...'', ಅಮ್ಮ ಶಾಂತಿಯ ಕೈಗಳನ್ನು ತನ್ನ ಕೈಯೊಳಗಿಟ್ಟುಕೊಂಡು ಮಾತನಾಡಿದ್ದಳು.

ನಾನು ಮೂಕಪ್ರೇಕ್ಷಕಳಾಗಿ ನಿಂತಿದ್ದೆ.

ನಾನೂ, ಶಾಂತಿ ಪಿ.ಯು.ಸಿ.ಯವರೆಗೂ ಜೊತೆಜೊತೆಯಾಗಿ ಓಡಾಡುತ್ತಿದ್ದೆವು. ಆಡುತ್ತಿದ್ದೆವು. ಓದುತ್ತಿದ್ದೆವು. ಪರೀಕ್ಷೇಲಿ ಹೆಚ್ಚು ಅಂಕಗಳನ್ನು ತೆಗೆದುಕೊಳ್ಳಬೇಕೂಂತ, ಮನೇಲಿ ಓದೋಕಾಗೋಲ್ಲಾಂತ ಶಾಂತಿ, ಹಾಸ್ಟೆಲ್ ಸೇರಿದಳು. ನನಗದರ ಅವಶ್ಯಕತೆ ಬೀಳಲಿಲ್ಲ.

ಅಪ್ಪ ಟೂರ್ ಅಂತ ಹೋಗುತ್ತಿದ್ದರು, ಅಮ್ಮ ಆ ದೊಡ್ಡ ಬಂಗಲೆಯಲ್ಲಿ ಎಲ್ಲೋ ಒಂದು ಕಡೆ ಮಾಯವಾಗಿಬಿಡುತ್ತಿದ್ದಳು. ಇಡೀ ಮನೆ ತುಂಬಾ, ಒಬ್ಬಳೇ, ಎಲ್ಲಿ ಬೇಕಾದರೂ ಕುಳಿತು, ಹೇಗೆ ಬೇಕಾದರೂ ಓದುವ ಸ್ವಾತಂತ್ರ್ಯವಿತ್ತು, ಅನುಕೂಲವಿತ್ತು ಶಾಂತಿ ನಮ್ಮ ಮನೆಯಲ್ಲಿರಲು ಒಪ್ಪಲಿಲ್ಲ. ನನಗೂ ಹಾಸ್ಟೆಲ್ ಜೀವನಾಂದ್ರೆ ಏಕೋ ಇಷ್ಟವೇ ಆಗುತ್ತಿರಲಿಲ್ಲ.

ದಿಢೀರನೆ ಸಿಕ್ಕ ಸ್ವಾತಂತ್ರ್ಯವನ್ನು, ಲಂಗುಲಗಾಮಿಲ್ಲದೆ ಸ್ವಚ್ಛಂದವಾಗಿಸುವ ಕೆಲವು ಹುಡುಗಿಯರನ್ನು ಕಂಡು ನನಗೆ ಸಿಟ್ಟು ಬರುತ್ತಿತ್ತು. ಹಾಸ್ಟೆಲ್‌ಹುಡುಗಿಯರಿಗೆ ಹಿತಶತ್ರುವಾಗಿದ್ದ ಪದವೆಂದರೆ 'ಕಸಿನ್', 'ಬಾರ್', 'ಬೀರು' 'ಹೋಟೆಲ್'. ಇತ್ಯಾದಿ.

ಎಲ್ಲಾ ಮುಗಿಸಿಕೊಂಡು ಹಾಸ್ಟೆಲಿನ ಗೋಡೆ ಹಾರಿಬಿಡುವ ಕೆಲ ಹುಡುಗಿಯರಲ್ಲಿ ಒಬ್ಬಳನ್ನು ಹಿಡಿದು ಕೇಳಿದರೆ, ''ನನ್ನ ಕಸಿನ್ ಬಂದಿದ್ದ ಕಣೆ... ಬಿಡಲೇ ಇಲ್ಲ...'' ಎಂದುಬಿಟ್ಟು ಕೈತೊಳೆದುಕೊಳ್ಳುತ್ತಿದ್ದರೆ, ತಮ್ಮ ಅಂತರಂಗದ ಭಾವನೆಗಳನ್ನು ವ್ಯಕ್ತಪಡಿಸಲಾರದೆ, ಮೌನವಾಗಿ ಆರಾಧಿಸುವವರೂ ಇದ್ದರು. ಇದಾವುದರ ಪರಿವೇ ಇಲ್ಲದವರಂತೆ, ದೊಡ್ಡ ದೊಡ್ಡ ಪುಸ್ತಕದೊಳಗೆ ತಲೆ ಮರೆಸಿಕೊಂಡು ಓದುವವರೂ ಇದ್ದರು. ಆದರೆ ಶಾಂತಿ ಅಕ್ಷರಶಃ ಪ್ರೀತಿಯಲ್ಲಿ ಬಿದ್ದುಬಿಟ್ಟಳು. ಮೇಲೇಳುವಷ್ಟರಲ್ಲಿ ಅವಳ ಹೊಟ್ಟೆಯಲ್ಲಿ ಅದರ ಫಲ ಬೆಳೆಯಲು ಆರಂಭಿಸಿತ್ತು!

ವಿಷಯ ಕೇಳಿದ ನಾನು ದಿಗ್ಭ್ರಾಂತಳಾಗಿದ್ದೆ! ಹೆದರಿ ನಡುಗಿಹೋಗಿದ್ದ ಶಾಂತಿಗೆ, ಮತ್ತೊಂದು ಆಘಾತವನ್ನು ಅವನು ನೀಡಿದ್ದ, ಅವಳನ್ನು ಮದುವೆಯಾಗಲು ನಿರಾಕರಿಸಿದ್ದ! ಶಾಂತಿ ನಮ್ಮ

ಮನೆಗೆ ಬಂದು ಎದೆಯೊಡೆಯುವಂತೆ ಅತ್ತಿದ್ದಳು. ನಾನು ಗಾಬರಿಯಾಗಿ ನೋಡುತ್ತಿದ್ದೆ. ಅಮ್ಮ ಶಾಂತವಾಗಿ ಎಲ್ಲವನ್ನು ಕೇಳಿಸಿಕೊಂಡಿದ್ದುದು ನನಗೆ ಆಶ್ಚರ್ಯವಾಗಿತ್ತು. ಮತ್ತೂ ಆಶ್ಚರ್ಯವಾಗಿದ್ದು ಅಮ್ಮ ಶಾಂತಿಗಾಗಿ ಸಂಧಾನ ನಡೆಸಿದಾಗ. ಅಮ್ಮನ, ಸಂಧಾನಕ್ಕೋ, ಶಾಂತಿಯ ಮೇಲಿನ ಪ್ರೇಮಕ್ಕೋ ಅಥವಾ ತನ್ನ ಮನಸ್ಸಾಕ್ಷಿಗೆ ಹೆದರಿಯೋ ಏನೋ ಆತ, ಗರ್ಭಿಣಿಯಾಗಿದ್ದ ಪ್ರೇಯಸಿಯನ್ನು ಮದುವೆಯಾಗಲು ತಯಾರಾಗಿ ಬಂದಿದ್ದ.

''ನೀವು ನನ್ನನ್ನು ಮಾತ್ರ ಉಳಿಸಲಿಲ್ಲ. ಎರಡು ಅಮಾಯಕ ಜೀವಗಳನ್ನುಳಿಸಿದ್ದೀರಿ. ಇನ್ನು ಹೇಗಾದರೂ ಇರಲಿ ಬದುಕನ್ನು ಎದುರಿಸ್ತೀನಿ...'', ಶಾಂತಿ ನನ್ನ ಅಮ್ಮನ ಕಾಲಿಗೆ ಬಿದ್ದು, ನೀರು ತುಂಬಿದ ಕಣ್ಣುಗಳಿಂದ ತನ್ನ ಕೃತಜ್ಞತೆಯನ್ನು ವ್ಯಕ್ತಪಡಿಸಿ ಹೋಗಿದ್ದಳು.

ಅವತ್ತು ಹೋಗಿದ್ದವಳು ಪುನಃ ಬಂದದ್ದು ಈ ದಿನ. ಇಡೀ ದಿನ ಹೊರಗಡೆ ಹೋಗಿ, ಸ್ನೇಹಿತರನ್ನು ಮಾತನಾಡಿಸಿಕೊಂಡು ಬಂದಿದ್ದಳು. ಮನೆಯವರನ್ನು ದೂರದಿಂದಲೇ ನೋಡಿ ಕೊಂಡು ಬಂದು, ಕೆಲಹೊತ್ತು ಕಳೆದು ಹೋಗುವಾಗ, ಗಂಭೀರವಾಗಿ ಹೇಳಿದ್ದಳು, ''ಒಂದು ವೇಳೆ ಮದುವೆಯಾಗದೆ ನಾನೇನಾದ್ರೂ ಆ ಮಗುವನ್ನು ಹೆತ್ತಿದ್ದರೆ... ಈ ಸಮಾಜ ನನ್ನನ್ನು ಬದುಕಲು ಬಿಡುತ್ತಿತ್ತಾ?''

''.....''

''ನಾನು ಮದುವೆಯ ಲೇಪನ ಹಚ್ಚಿ, ಅದೇ ಮಗುವನ್ನು ಹೆತ್ತುಕೊಟ್ಟಿದ್ದಕ್ಕೆ ಅದೆಷ್ಟು ವಿಜೃಂಭಣೆಯಿಂದ ತೊಟ್ಟಿಲಿನಲ್ಲಿ ಹಾಕಿ ಜನರನ್ನು ಸೇರಿಸಿ... ಹಾಡಿ ಹರಸಿದರು ಗೊತ್ತಾ? ಈ ಸಮಾಜಕ್ಕೊಂದು ಘನವಾದ ಕೊಡುಗೆ ಎನ್ನುವಂತೆ ಬೀಗುತ್ತಿದ್ದಾರೆ.''

ಅವಳು ಉದ್ವೇಗವನ್ನು ಹತ್ತಿಕ್ಕಿಕೊಂಡು ಮಾತನಾಡಲು ಯತ್ನಿಸುವಂತೆ ಕಂಡಿತು.

''ಮದುವೆಯ ಲೇಪನದ ಈ ದಾಂಪತ್ಯದಲ್ಲಿ ನನಗೆ ಪ್ರೀತಿಯ ರೋಮಾಂಚನವಿಲ್ಲ, ಕುತೂಹಲವಿಲ್ಲ, ಆಸಕ್ತಿಯಿಲ್ಲ, ಸರಸ ಸಂಭಾಷಣೆಗಳೂ ತೀರಾ ಕೃತಕವಾಗಿ ಕೇಳಿಸುತ್ತವೆ. ನನ್ನನ್ನು ಪ್ರೀತಿಸಿ, ನಂತರ ತಿರಸ್ಕರಿಸಿ ಹೀನಾಯವಾಗಿ ಮಾತನಾಡಿದ ನನ್ನ ಗಂಡನ ಆ ಮುಖವೇ ನೆನಪಾಗುತ್ತದೆ. ಭಾವುಕತೆಯ ದರ್ಪಣದಲ್ಲಿ ಬಿರುಕು ಮೂಡಿಸಿಬಿಟ್ಟು, ನನ್ನ ಭಾವನೆಗಳನ್ನೇ ಕೊಂದುಬಿಟ್ಟರೆಂದು ಅನ್ನಿಸಿಬಿಟ್ಟಿದೆ.''

ಈಗ ಅವಳಿಗೆ ಅಳು ಬಂದಿತು.

''ಪ್ರೇಮದ ಸುಂದರ ಬುನಾದಿಯ ಮೇಲೆ ದಾಂಪತ್ಯ ಕಟ್ಟಿ, ಕ್ಷಣ ಕ್ಷಣವನ್ನು ಆಚರಿಸಬೇಕೆಂದುಕೊಂಡಿದ್ದೆ. ಆದರೆ ಈಗ, ಸತ್ತ ಸ್ವಪ್ನಗಳ ಮೇಲೆ ಕಟ್ಟಿದ ಈ 'ಮದುವೆ'ಯಲ್ಲಿ, ಈ ಜೀವನದಲ್ಲಿ ಎಲ್ಲವೂ ಖಾಲಿ... ಅನ್ನಿಸ್ತಾಯಿದೆ... ಆದರೂ ಬದುಕಬೇಕಾಗಿದೆ... ಎಂಥಾ ಆಷಾಡಭೂತಿತನ ನೋಡು...'' ಎಂದವಳು ಹೇಳಿ ಕಣ್ಣೀರನ್ನೊರಸಿಕೊಂಡು ಹೋದ ಎಷ್ಟೋ ಹೊತ್ತಿನವರೆಗೂ, ಆ ಕೋಣೆಯಲ್ಲಿ, ಇನ್ನೂ ಅವಳ ಮಾತು, ಅಳು ಇದೆಯೇನೋ ಎನ್ನಿಸಹತ್ತಿತ್ತು.

ಅಮ್ಮ ಒಂದೂ ಮಾತು ಆಡಿರಲಿಲ್ಲ. ಮುಖ ಗಂಭೀರವಾಗಿತ್ತು. ನಾನೆಂದೂ ಆ ವಿಧದ ಅಮ್ಮನ ಮುಖ ನೋಡಿರಲೇ ಇಲ್ಲ. ಅಮ್ಮ ಎದ್ದು ಒಳಗೆ ಹೋದ ಮೇಲೆ, ನಾನು ಮಾಮೂಲಿನಂತೆ ಕಂಪ್ಯೂಟರಿನ ಮುಂದೆ ಕುಳಿತೆ. ಶಾಂತಿಯ ಘಟನೆಯ ಪ್ರತಿಫಲನವನ್ನು ಅಮ್ಮನ ಮುಖದಲ್ಲಿ ಕಂಡ ಭಾವನೆಯಿಂದ ತಳಮಳಿಸಿದೆ. ಕೀಬೋರ್ಡನ್ನು ಮುಟ್ಟಲು ಆಗದಂತೆ ನನ್ನ ಕೈಗಳು ಜಡವಾಗಿಬಿಟ್ಟಿವೆಯೇನೋಂತ ಅನ್ನಿಸಿತು. ಎದ್ದು ಬಂದು ಬಾಲ್ಕನಿಯಲ್ಲಿ ನಿಂತೆ, ಕುಳಿತೆ, ಓಡಾಡಿದೆ, ಎಂತಹುದ್ದೋ ಅರಿಯದ ಸಂಕಟ, ತಳಮಳ.

ಅಮ್ಮನ ರೂಮಿನಿಂದ, ರಾತ್ರಿ ನಿದ್ದೆ ಬಾರದಾಗ ಹಾಕುವ ಹಳೆಯ ಮಧುರ ಹಾಡುಗಳಲ್ಲೊಂದು ಮೆಲುವಾಗಿ ತೇಲಿಬರುತ್ತಿತ್ತು.

ಆದರೆ ಇಂದು ಆ ಹಾಡು ಬೇರೆ ಅರ್ಥವನ್ನೇ ಹುಟ್ಟುಹಾಕತೊಡಗಿತ್ತು. ಅಪ್ಪ ಇಲ್ಲದಾಗ.

ನಿದ್ದೆ ಬಾರದಾಗ, ಅಮ್ಮ ಕೇಳುವ ಹಾಡುಗಳಲ್ಲಿ ಅಡಗಿಕೊಂಡ ಪ್ರೀತಿ, ನೋವು, ನಿರಾಶೆ ಹಾಡಿಗಿಂತ ಜೋರಾಗಿ ಕೇಳಿಸತೊಡಗಿತ್ತು! ಏನನ್ನೋ ಕಂಡು ಹಿಡಿದವಳಂತೆ ಉದ್ವೇಗದಿಂದ ಕೆಳಗಿಳಿದು, ಅಮ್ಮನ ರೂಮಿನತ್ತ ಧಾವಿಸಿದೆ.

ರಾತ್ರಿ ಹತ್ತುಗಂಟೆಯ ಮೇಲಾಗಿ ಹೋಗಿತ್ತು. ಹಿತವಾಗಿ, ಮಂದವಾಗಿ ಬೀಸಿ ಬರುತ್ತಿದ್ದ ಗಾಳಿ, ತನ್ನೊಂದಿಗೆ ಆಗತಾನೆ ಪರಿಮಳ ಬೀಸುತ್ತಿದ್ದ ಮಲ್ಲಿಗೆಯ ಕಂಪನ್ನು ತರುತ್ತಿತ್ತು. ಅಮ್ಮ ಇಷ್ಟಪಟ್ಟು ಕಿಟಕಿಯ ಬಳಿಯೇ ಬೆಳೆಸಿದ್ದ ಮಲ್ಲಿಗೆಯ ಗಿಡ ಚಪ್ಪರವಾಗಿ ಬೆಳೆದು, ಚಪ್ಪರದ ತುಂಬೆಲ್ಲಾ ಅರೆಬಿರಿದ ಹೂಗಳನ್ನು ತುಂಬಿಸಿಕೊಂಡಿತ್ತು. ನಿಧಾನವಾಗಿ ಒಳಗೆ ಹೋಗಿ, ಅಮ್ಮನ ಬಳಿ ನಿಂತೆ.

ಅಮ್ಮ ಎರಡೂ ಕಣ್ಣುಗಳನ್ನು ಮುಚ್ಚಿ, ಕನಸಿನ ಲೋಕದಲ್ಲಿದ್ದವಳಂತೆ ತನ್ಮಯಳಾಗಿ ಕುಳಿತು ಕೇಳಿಸಿಕೊಳ್ಳುತ್ತಿದ್ದಳು.

ಉಸಿರು ಬಿಗಿಹಿಡಿದು, ಮೆಲುವಾದ ಹೆಜ್ಜೆ ಹಾಕಿ ಅಮ್ಮನನ್ನು ಸಮೀಪಿಸಿದೆ.

ಬೆಚ್ಚಿಬಿದ್ದವಳಂತೆ ಅಮ್ಮ ಕಣ್ಣುಬಿಟ್ಟಳು.



ನೇರವಾಗಿ ಅವಳನ್ನೇ ನೋಡುತ್ತಿದ್ದ ನನ್ನ ಕಣ್ಣುಗಳನ್ನು ಓದಿಕೊಳ್ಳುವುದು ಅಮ್ಮನಿಗೆ ಕಷ್ಟ ವಾಗಲಿಲ್ಲ. ಕಣ್ಣು ತಪ್ಪಿಸಿದಳು. ಭಾರವಾಗಿ ಬಾಗಿದ ಅವಳ ರೆಪ್ಪೆಗಳು ಏನೇನೋ ಕತೆಗಳನ್ನು ಹೇಳಿದವು.

''ಅಮ್ಮಾ ನೀನೂ...'' ಮೃದುವಾಗಿ ಕೇಳಿದೆ. ಗಂಟಲು ಕಟ್ಟಿ ಬಂದಂತಾಗಿ ಧ್ವನಿ ನನಗೇ ಕೇಳಿಸಿದಷ್ಟು ಮೆಲ್ಲಗಾಗಿತ್ತು.

''ಹೂಂ...'' ಎಂದಳು.

''ಆಂ? ಹೌದಾ... ನಂಗೊತ್ತಾಯ್ತು...''

''ಅಮ್ಮ, ನಾನೀಗ ನಿನ್ನಷ್ಟೇ ಎತ್ತರಕ್ಕೆ ಬೆಳೆದು ನಿಂತಿದ್ದೇನೆ. ಇನ್ನೆರಡು ವರ್ಷಕ್ಕೆ ದುಡಿದು ಸಂಪಾದಿಸುವಷ್ಟಾಗುತ್ತೇನೆ... ನಂಗೆಲ್ಲಾ ಅರ್ಥವಾಗುತ್ತೆ.''

''ಮತ್ಯಾಕೆ ಕೇಳ್ತೀಯಾ?''

''ಪುಣ್ಯವಂತ ಅನ್ನು ಅಥವಾ ನಿನ್ನಂತಹವಳನ್ನು ಕಳೆದುಕೊಂಡ ದುರಾದೃಷ್ಟವಂತ ಅನ್ನು... ಅವರಾರೂಂತ ಗೊತ್ತಾಗಬೇಕು''

''ಎಂಥಾದ್ದೂ ಇಲ್ಲ...''

''ಅಮ್ಮಾ... ಪ್ಲೀಸ್''

ನನ್ನ ಕೋರಿಕೆಯಲ್ಲಿದ್ದ ಹಠವನ್ನು ಗುರುತಿಸಿದ ಅಮ್ಮ,

''ನೀನಂದುಕೊಂಡ ಹಾಗೆ... ಪ್ರೀತಿ ಪ್ರೇಮಾಂತ ತಿರುಗಾಡಲಿಲ್ಲ. ಶಾಂತಿ ತರಹಾ ಎಂದೂ ವರ್ತಿಸಿರಲಿಲ್ಲ. ಹಾಗಂದ ಮಾತ್ರಕ್ಕೆ ಏನೂ ಇರಲಿಲ್ಲ ಅಂತಾನೂ ಹೇಳಲಾರೆ...''

ಕಿಟಕಿಯ ಬಳಿ ಮುಖಮಾಡಿ ನಿಂತಿದ್ದುದರಿಂದ, ನನಗೆ ಅವಳ ಮುಖ ಓದಲಾಗಲಿಲ್ಲ. ಮೂವತ್ತೆಂಟು-ನಲವತ್ತರ ಅಂಚಿನಲ್ಲಿದ್ದ ಅಮ್ಮ, ಇನ್ನೂ ಹತ್ತು ವರ್ಷ ಚಿಕ್ಕವಳಾಗಿ ಕಂಡಳು. ತೆರೆದ ಕಿಟಕಿಯಿಂದ ಬೀಸಿಬಂದ ಮಂದವಾದ ಗಾಳಿಗೆ ಅರಳಿನಿಂತ ಮಲ್ಲಿಗೆಯ ಗೊಂಚಲು ಗಿಡದಲ್ಲಿಯೇ ತೂಗಾಡುತ್ತಿತ್ತು. ಮೊದಲ ಬಾರಿಗೆ, ಅಮ್ಮನ ಜಾಗದಲ್ಲಿ ಯಾವುದೋ ಪ್ರೇಮ ದೇವತೆಯನ್ನು ಕಂಡೆ.

ಅಡುಗೆ ಮನೆಯಲ್ಲಿ ಸೊಂಟಕ್ಕೆ ಸೆರಗುಕಟ್ಟಿ ದುಡಿಯುತ್ತಿದ್ದ, ಆಳುಗಳೊಂದಿಗೆ ಅವರಷ್ಟೇ ಉತ್ಸಾಹದಿಂದ ಓಡಾಡುತ್ತಿದ್ದ, ಅಪ್ಪನ ಎಲ್ಲಾ ಕೆಲಸಗಳನ್ನು ಸದ್ದಿಲ್ಲದೇ ಮುಗಿಸಿಕೊಡುತ್ತಿದ್ದ, ರಾತ್ರಿ ಮಲಗುವ ವೇಳೆಗೆ ಪೂರಾ ದಣಿದು ಹೋಗಿದ್ದರೂ, ನನ್ನನ್ನು ತೊಡೆಯ ಮೇಲೆ ಕ್ಷಣಹೊತ್ತು ಮಲಗಿಸಿ, ಪ್ರೀತಿಯ ಮಹಾಪೂರವನ್ನೇ ಹರಿಯಿಸುವಂತೆ ಮೃದುವಾಗಿ ಮುತ್ತಿಟ್ಟು ಹೋಗುತ್ತಿದ್ದ ಆ ಅಮ್ಮ ಎಲ್ಲಿ? ಈ ಅಮ್ಮ ಎಲ್ಲಿ?

ಮೇರು ಪರ್ವತದ ಎದುರು ನಿಂತ ಶಿಶುವಿನಂತಾಗಿದ್ದೆ! ಆ ಆಶ್ಚರ್ಯ ಆನಂದ, ಉದ್ವೇಗದ ಕ್ಷಣಗಳನ್ನು ಇನ್ನೂ ಅದೆಷ್ಟು ಹೊತ್ತು ಅನುಭವಿಸುತ್ತಿದ್ದೆನೋ ಏನೋ, ಕಾರು ಬಂದ ಶಬ್ದಕ್ಕೆ ಬೆಚ್ಚಿಬಿದ್ದು ನೋಡಿದೆ.

''ಅಮ್ಮ... ಅಪ್ಪಾ ಬಂದ್ರೂಂತ ಕಾಣುತ್ತೆ'' ಎಂದೆ ಉಸಿರುಕಟ್ಟಿ.

''ಹೂಂ...'' ಅಮ್ಮನ ಕೈಗಳು ಕಿಟಕಿಯ ಸರಳನ್ನು ಬಿಗಿಯಾಗಿ ಹಿಡಿದಿದ್ದವು.

''ನಾನು ಹೋಗಲಾ?'' ಬಹು ಪ್ರಯಾಸದಿಂದ ಕೇಳಿದ್ದೆ.

''ಬೇಡಾ... ನೀನು ನಿನ್ನ ರೂಮಿಗೆ ಹೋಗು.'' ರೇಷ್ಮೆಯಂತೆ ಮೃದು ಆದರೆ ಅಷ್ಟೇ ದೃಢವಾದ ಸ್ವರದಲ್ಲಿ ಹೇಳಿದಳು.

ಆಳುಗಳು ಗೇಟು ತೆರೆಯುವ ಶಬ್ದ, ಅಪ್ಪನ ಎತ್ತರದ ಧ್ವನಿ ಕೇಳಿಬಂದಿತು.

ಬಿರಿಯುವಂತಾದ ಹೃದಯವನ್ನೊತ್ತಿಕೊಂಡು ನನ್ನ ರೂಮಿಗೆ ಓಡಿ ಬಂದು ಬಾಗಿಲು ಹಾಕಿಕೊಂಡೆ.

ಈ ಪ್ರಪಂಚದಲ್ಲಿ ಅಮ್ಮನಿಗೆ ಆತ್ಮೀಯರಾಗಿದ್ದವರೆಂದರೆ ಅಪ್ಪ ಮಾತ್ರ. ಅವರ ಅಭಿರುಚಿಗಳಿಗೆ ತನ್ನನ್ನು ಒಡ್ಡಿಕೊಳ್ಳುತ್ತ, ಹೊಂದಿಕೊಂಡು ಹೋಗಲು ಪ್ರಯತ್ನಿಸುತ್ತಿದ್ದಳು. ವಿಚಿತ್ರವೆಂದರೆ, ನನಗೆ ಬುದ್ಧಿ ಬಂದಾಗಿನಿಂದಲೂ ನಾನು ಗಮನಿಸಿದ್ದು, ಅಮ್ಮನ ಶಾಂತಚಿತ್ತ, ಸ್ವಭಾವ. ಅಪ್ಪನಿಗೆ ಇಷ್ಟವಾದುದನ್ನೆಲ್ಲಾ ಅವಳು ಇಷ್ಟಪಡುತ್ತಿದ್ದಳು. ಇತರರಂತೆ ಎಂದೂ ಆಭರಣ, ಸೀರೆಗಳು, ಸಿನಿಮಾ ಅಂತ ಕಾಡುತ್ತಿರಲಿಲ್ಲ. ಅಪ್ಪನಿಗಿಂತ ಬೇರೆ ಯಾವುದೂ ಅವಳಿಗೆ ಬೇಕಾಗಿರಲಿಲ್ಲ. ಕೆಲಸದವಳಿದ್ದರೂ ತನ್ನ ಗಂಡನ ಎಲ್ಲಾ ಕೆಲಸಗಳನ್ನು ಅವಳೇ ಮಾಡುತ್ತಿದ್ದಳು. ಮುಖಕ್ಷೌರಕ್ಕೆ ಜೋಡಿಸುವುದರಿಂದ ಹಿಡಿದು, ಅವರು ಸ್ನಾನ ಮಾಡಿ, ತಿಂಡಿ ತಿಂದು, ಹೊರಗೆ ಹೋಗುವವರೆಗೂ ಹಿಂದುಮುಂದೆಯೇ ಓಡಾಡುತ್ತಿರುತ್ತಿದ್ದಳು. ಎಲ್ಲಿ, ಯಾವಾಗ, ಏನು ಕೇಳುವರೋ ಎಂಬ ಆತಂಕವಿರಬೇಕು. ಅಮ್ಮನ ಈ ಅತಿಹೆಚ್ಚು ಮುದ್ದು ಮಾಡುವಿಕೆಯಿಂದ ಮಗ ಹಾಳಾಗುತ್ತಿದ್ದಾನೆ ಅನ್ನೋ ಸಿಟ್ಟು ಅಜ್ಜಿಗೆ.

''ಅತಿಯಾಯ್ತು ನಿಂದು. ಅವನು ಕೈಕಾಲು ಆಡಿಸ್ಕೊಂಡು ಓಡಾಡ್ಲಿ ಬಿಡು. ಮೈಗೆ ಕೊಬ್ಬು ಬರುತ್ತೆ...'' ಎಂದು ಎರಡು ಅರ್ಥದಲ್ಲಿ ಟೀಕಿಸುತ್ತಿದ್ದರೆ, ''ನಂಗಿಷ್ಟವಾಗುತ್ತೆ'', ಅಮ್ಮ ಮೃದುವಾಗಿ ಹೇಳುತ್ತಿದ್ದಳು.

ಅದ್ಹೇಗೆ ಕಲಿತರೋ, ಅದ್ಯಾಕೆ ಕಲಿತರೋ, ಏನೋ, ಅಪ್ಪ ದಿನಾ ಕುಡಿದು ಬರೋಕೆ ಪ್ರಾರಂಭಿಸಿದ್ದರು. 'ಅರಸನ ಅಂಕೆಯಿಲ್ಲ, ದೆವ್ವದ ಕಾಟವಿಲ್ಲ' ಅನ್ನೋ ಹಾಗೆ, ಅಜ್ಜಿ ತೀರಿಕೊಂಡಿದ್ದು ಅವರಿಗೆ ಮೈಚಳಿ ಬಿಟ್ಟಂತಾಗಿತ್ತು. ಹಗಲಿಡೀ ತುಂಬಾ ಚೆನ್ನಾಗಿ ವರ್ತಿಸುತ್ತಿದ್ದರು. ಮನೆಯಲ್ಲಿ ಯಾವುದೇ ಕೊರತೆ ಮಾಡುತ್ತಿರಲಿಲ್ಲ... ಆದರೆ ನಿಜವಾಗಿ ಇರಬೇಕಾದುದ್ದೇ ಇರಲಿಲ್ಲವೆಂದು ನಿಧಾನವಾಗಿ ತಿಳಿಯತೊಡಗಿತ್ತು. ನಾನು ಓದು, ಪರೀಕ್ಷೆ, ಕಾಲೇಜು ಅಂತ ನನ್ನದೇ ಆದ ಪ್ರಪಂಚದಲ್ಲಿದ್ದುದರಿಂದ ಮನೆಯೊಳಗಿನ ವಾತಾವರಣದ ಬಿಸಿ ಅಷ್ಟು ತಟ್ಟಿರಲಿಲ್ಲವೆಂದೇ ಅಂದುಕೊಳ್ಳಬೇಕು. ಶಾಂತಿಯ ಪ್ರಕರಣ, ನಂತರದಲ್ಲಿ ನನ್ನ ಅಮ್ಮನ ಪ್ರತಿಕ್ರಿಯೆ, ಸಹಾಯ, ಇವುಗಳಿಂದ ನನಗೆ, ನನ್ನ ಮನೆಯ, ಮುಚ್ಚಿದ್ದ, ನಿಗೂಢವಾದ ಬಾಗಿಲೊಂದನ್ನು ತೆರೆದಿಟ್ಟಂತಾಯಿತು.



ಪ್ರತಿಯೊಂದು ಪ್ರಶ್ನೆಗಳಿಗೂ ಉತ್ತರ ಸಿಗಲಾರಂಭಿಸಿತ್ತು. ರಾತ್ರಿ, ಕುಡಿದು ತಡವಾಗಿ ಬರುತ್ತಿದ್ದ ಅಪ್ಪನಿಗಾಗಿ, ಅಮ್ಮ ಊಟ ಮಾಡದೇ ಕಾಯುತ್ತಾ ಕುಳಿತು, ಒರಟಾಗಿ ವರ್ತಿಸಿದರೆ ತುಟಿ ಕಚ್ಚಿ ನೋವನ್ನು ಸಹಿಸಿಕೊಳ್ಳುತ್ತಿದ್ದಳು. ಭಾವನೆಗಳಿಲ್ಲದ ಕಲ್ಲಿನ ಗೋಡೆಯಂತೆ ನಿಂತುಬಿಡುತ್ತಿದ್ದಳು. ದಾಳಿಗೆ ಮೈಯೊಡ್ಡುತ್ತಿದ್ದಳು. ಕುಡಿದು ಬರುತ್ತಿದ್ದ ಅಪ್ಪ, ರಾತ್ರಿಯಿಡೀ ಅಮಲಿನಲ್ಲಿ ಏನೇನೋ ಬಡಬಡಿಸುತ್ತಿದ್ದರು. ಹೊಟ್ಟೆಯೊಳಗೇನಾಗುತ್ತಿತ್ತೋ ಏನೋ, ತುಂಬಾ ಸಂಕಟದಿಂದೆಂಬಂತೆ ಹೊರಳಾಡುತ್ತಿದ್ದರು. ಎಲ್ಲವನ್ನು ನಾನು, ದೂರ ನಿಂತು, ಸ್ಕ್ರೀನಿನ ಮರೆಯಲ್ಲಿ ನೋಡಬೇಕಾಗುತ್ತಿತ್ತು. ಅಪ್ಪ ಎಷ್ಟೇ ಸಾರಿ ವಾಂತಿ ಮಾಡಿದರೂ, ಅಮ್ಮ ಸೆರಗೊಡ್ಡಿ ಹಿಡಿದು, ಬಾಯಿ ತೊಳೆಯುತ್ತಿದ್ದಳು. ಇಂತಹ ಸಂದರ್ಭ ನಮ್ಮ ಮನೆಯಲ್ಲಿ ಆಗುತ್ತಿರುವುದು ಆಘಾತ ತರುವಂತಿತ್ತು. ಬೆಳಿಗ್ಗೆ, ಅಮ್ಮ, ಆಫೀಸಿಗೆ ಹೊರಟಿದ್ದ ಅಪ್ಪನನ್ನು ತಡೆದು ನಿಲ್ಲಿಸಿ,

“ನಿಮಗೆ ನನ್ನ ಮೇಲೆ ಜಿಗುಪ್ಸೆ ಬಂದಿದ್ದರೆ ಅಥವಾ ಬೇರೆ ಯಾರನ್ನಾದರೂ ನೀವು ಪ್ರೀತಿಸಿದ್ದರೆ ಖಂಡಿತಾ ಅವರನ್ನೇ ಮದ್ವೆ ಮಾಡ್ಕೊಳ್ಳಿ. ಸುಮ್ಮನೆ ಕುಡಿದು ಈ ಮನೇನ ಹಾಳು ಮಾಡಬೇಡಿ” ಎಂದಳು.

“ನೀನು ಕೇಳಿದ ಪ್ರಶ್ನೆಗಳನ್ನು ನಾನು, ನಿನಗೇ ಕೇಳ್ತೀನಿ ಉತ್ತರ ಕೊಡ್ತೀಯಾ?... ಆಂ?... ಹೌದು... ನೀನು ಹೌದೆಂದು ಕೊಡೋ ಉತ್ತರ ನನ್ನನ್ನು ಬುಡ ಸಮೇತ ಅಲುಗಾಡಿಸಬಹುದೂಂತ ನಾನು ಕೇಳ್ತಾಯಿಲ್ಲ, ಕೇಳೋದು ಇಲ್ಲ... ಕೆಲವು ಉತ್ತರಗಳಿಗೆ ಪ್ರಶ್ನೆಗಳೇ ಬೇಕಂದೇನಿಲ್ಲ, ಹಾಗೇ ಎದ್ದು ಕಾಣಸುತ್ತವೆ. ಅದರ ಅನುಭವ ನನಗಾಗ್ತಾ ಇದೆ... ನಂಗೇನೂ ಗೊತ್ತಿಲ್ಲಾಂತ ಅಂದ್ಕೋಬೇಡಾ.”

ಅಮ್ಮ ಹಿಮದಲ್ಲಿ ನೆನೆದವಳಂತೆ ನಿಂತಿದ್ದಳು.

ಅಪ್ಪ ದಢದಢನೆ ಹೊರಗೆ ನಡೆದು, ಕಾರು ಹತ್ತಿದರು. ನಾನು ನಿಧಾನವಾಗಿ ಹಿಂದಕ್ಕೆ ಹೆಜ್ಜೆ ಹಾಕಿದೆ....

ಅಪ್ಪನ ಕಾರು ಹೊರಟ ಶಬ್ದವಾಯಿತು. ನಾನು ಮಂಚವೊಂದರ ಮೇಲೆ ಕುಸಿದು ಕುಳಿತೆ. ನನ್ನ ದೇಹವಿಡೀ ಕಂಪಿಸುತ್ತಿತ್ತು. ನನ್ನ ಇರವು ತಿಳಿಯದವರಂತೆ, ಒಬ್ಬರನ್ನೊಬ್ಬರು ಬೆತ್ತಲೆ ಮಾಡಿಕೊಂಡಿದ್ದರು. ಇಬ್ಬರೂ ಸುಖವಾಗಿರಲಿಲ್ಲ.

ಅಮ್ಮ ಹಾಡಿನ ಕ್ಯಾಸೆಟ್ಟುಗಳನ್ನಿಟ್ಟಿದ್ದ ಪೆಟ್ಟಿಗೆಯತ್ತ ನೋಡಿದೆ. ಹಾಗೆಯೇ ತೆರೆದಿಟ್ಟಿದ್ದಳು. ಕ್ಯಾಸೆಟ್ಟುಗಳು ಅಡ್ಡಾದಿಡ್ಡಿಯಾಗಿ ಬಿದ್ದಿದ್ದವು. ಅಪ್ಪನ ಅನಿರೀಕ್ಷಿತ ಆಗಮನ, ಗಲಾಟೆಯಿಂದ ಅದರ ಕಡೆ ಗಮನ ಹರಿಸಿರಲಿಲ್ಲವೆಂದುಕೊಂಡೆ. ಒಂದೊಂದೆ ಕ್ಯಾಸೆಟ್ಟುಗಳನ್ನು ಎತ್ತಿಕೊಂಡೆ.

ಎಲ್ಲವೂ ಪ್ರೇಮಗೀತೆಗಳು, ವಿರಹ ಗೀತೆಗಳು, ಭಾವಗೀತೆಗಳು. ಪೆಟ್ಟಿಗೆಯನ್ನು ಬಾಗಿ ಎತ್ತಿಕೊಂಡು, ಒಮ್ಮೆ ಕೆಳಗೆ ಬಗ್ಗಿಸಿದೆ. ಹಳೆಯ ದಿನ ಪತ್ರಿಕೆಯೊಳಗೆ ಅಂಟಿಕೊಂಡಂತಿದ್ದ ನಾಲ್ಕಾರು ಕವರುಗಳು ಕೆಳಗೆ ಬಿದ್ದವು. ಆಶ್ಚರ್ಯದಿಂದ ಎಲ್ಲವನ್ನು ಎತ್ತಿಕೊಂಡು ನೋಡಿದೆ. ಎಷ್ಟೋ

ವರ್ಷಗಳ, ಕಂದು ಬಣ್ಣಕ್ಕೆ ತಿರುಗಿದ್ದ ಕವರುಗಳು. ಒಂದು ಕವರಿನ ಮೇಲೆ ಏನೂ ಬರೆದಿರಲಿಲ್ಲ.

ಅದರೊಳಗೊಂದು ಹುಡುಗನ ಫೋಟೋ ಇತ್ತು, ದಿಟ್ಟಿಸಿ ನೋಡಿದೆ. ಕಪ್ಪು-ಬಿಳುಪು ಫೋಟೋ ಹಳದಿವರ್ಣಕ್ಕೆ ತಿರುಗಿತ್ತು.

ಹದಿನಾರರ ಹರೆಯದ ಹಾಲುಗೆನ್ನೆಯ ಮುಂಡುಮುಖದ ಹುಡುಗ... ಅಗಲವಾದ ಕಣ್ಣುಗಳು... ಸುಂದರ ಮುಖ. ಚೆಂದದ ತುಟಿಗಳು... ಶರಟು... ನಿಕ್ಕರನ್ನು ಧರಿಸಿದ್ದ. ಮುದ್ದುಹುಡುಗ!

''ಏನು ಮಾಡ್ತಾಯಿದ್ದೀಯಾ?'', ಗಡಸು ಧ್ವನಿಗೆ ಬೆಚ್ಚಿಬಿದ್ದು ನೋಡಿದೆ.

ಅಮ್ಮ ನಿಂತಿದ್ದಳು.

ನನ್ನ ಕೈಗಳಲ್ಲಿದ್ದ ಕಾಗದಗಳು, ಫೋಟೋ, ಜಾರಿ ಕೆಳಗೆ ಬಿದ್ದವು... ಗಾಬರಿಯಿಂದ ಎದ್ದು ನಿಂತೆ.

ಅಮ್ಮ ಮಾತನಾಡದೆ, ಬಿದ್ದಿದ್ದ ಕಾಗದ ಫೋಟೋವನ್ನು ಜೋಡಿಸಿ ಎತ್ತಿಕೊಂಡಳು.


ಅಪೂರ್ವಶೋಭೆಯಿಂದ ಹೊಳೆಯುತ್ತಿತ್ತು ಅಮ್ಮನ ಮುಖ. ನಾನು ಕಿಟಕಿಯಿಂದ ಕಾಣುತ್ತಿದ್ದ ಮಲ್ಲಿಗೆ ಚಪ್ಪರದತ್ತ ನೋಡಿದೆ. ಹಸಿರು ಚಪ್ಪರದ ತುಂಬಾ ಮೊಸರು ಚೆಲ್ಲಿದಂತೆ ಮಲ್ಲಿಗೆ ಹೂಗಳು ಅರಳಿ, ಅಲುಗಾಡುತ್ತಿದ್ದವು. ನನ್ನ ಹೃದಯದಲ್ಲಿ ಕ್ಷೀಣವಾಗಿ ಕಾಣಿಸಿಕೊಂಡ ನೋವಿನ ಅಲೆ, ಕ್ರಮೇಣವಾಗಿ ಆವರಿಸಿಕೊಳ್ಳುವಂತೆ ಭಾಸವಾಗಿ, ನೋವಿನಿಂದ ಕಣ್ಣು ಮುಚ್ಚಿದೆ. ಮುಚ್ಚಿದ ಕಣ್ಣುಗಳು ಒದ್ದೆಯಾಗಿ, ಕಣ್ಣುಗಳಿಂದ ನೀರು ಹನಿಯಿಕ್ಕಿತು.

ಅಮ್ಮ ಏನನ್ನೂ ನೋಡದವಳಂತೆ ನಿಂತಿದ್ದಳು!
ಅಪ್ಪ ದಢಕ್ಕನೆ. ಹೊರಗೆ ನಡೆದು [illegible] [illegible]. ನಾನು
ನಿಧಾನವಾಗಿ ಒಂದಷ್ಟು ಹೆಜ್ಜೆ ಹಾಕಿದೆ..



ಕಾರಂತಜ್ಜರ ಜತೆ, ಕೆಲ ವರ್ಷಗಳ ಹಿಂದ.

ಮುಖ್ಯಮಂತ್ರಿ ಮಹಿಮೆ



ಆ ದಿನ ನನಗೆ ರಾತ್ರಿ ಪಾಳಿಯ ಡ್ಯೂಟಿ. ಜೊತೆಯಲ್ಲಿ ಒಬ್ಬ ಹೆಡ್ ಕಾನ್ಸ್‌ಟೇಬಲ್. ಮಧ್ಯರಾತ್ರಿಯಾಗಿದೆ. ಬೆಂಗಳೂರಿನಿಂದ ಹುಬ್ಬಳ್ಳಿಗೆ ಹೋಗಬೇಕಿದ್ದ ರೈಲುಗಾಡಿ, ತುಮಕೂರಿಗೆ ಇನ್ನೇನು ಆಗಮಿಸುವ ಸಮಯ. ಹಿಂದಿನ ನಿಲ್ದಾಣವೊಂದರ ಸ್ಟೇಶನ್ ಮಾಸ್ತರರಿಂದ ಸಂದೇಶವೊಂದು ಬಂದಿತು: ''ತಕ್ಷಣ ನಿಲ್ದಾಣದಲ್ಲಿ ವೈದ್ಯರೊಬ್ಬರ ವ್ಯವಸ್ಥೆ ಮಾಡಿರಿ, ಹುಬ್ಬಳ್ಳಿ ಗಾಡಿಯಲ್ಲಿ ಪ್ರಯಾಣಕರೊಬ್ಬರಿಗೆ ಹೃದಯಾಘಾತವಾಗಿದೆ. ಬೋಗಿ ನಂಬರ್ ....''

ಕೂಡಲೇ ಸ್ಟೇಶನ್ ಮಾಸ್ತರರ ಕಛೇರಿಯಲ್ಲಿ ಲಭ್ಯವಿದ್ದ ಎಲ್ಲಾ ಆಸ್ಪತ್ರೆಗಳ ದೂರವಾಣಿ ನಂಬರುಗಳಿಗೂ ಕರೆಮಾಡಿ ವಿಷಯ ತಿಳಿಸಿದೆವು. ಒಬ್ಬೊಬ್ಬರದು ಒಂದೊಂದು ಬಗೆಯ ಪ್ರತಿಕ್ರಿಯೆ. ಸರ್ಕಾರಿ ಆಸ್ಪತ್ರೆಯ ವೈದ್ಯರು, 'ನಾನು ಇಲ್ಲಿ ಇರೋದು ಒಬ್ಬನೇ. ನಾನೂ ಬಂದರೆ ಇಲ್ಲಿ ಪೇಶೆಂಟ್‌ಗಳ ಗತಿ?' ಎಂದು ನಮ್ಮನ್ನೇ ಪ್ರಶ್ನಿಸಿದರೆ ಮತ್ತೊಬ್ಬರು, 'ನಿಲ್ದಾಣಕ್ಕೆ ಬರಲಾರೆ, ಇಲ್ಲಿಗೇ ಕರೆತನ್ನಿ' ಎಂದರು. ಇನ್ನೊಬ್ಬ ವೈದ್ಯ ಮಹಾಶಯ, 'ನಾನು ಬರೀ ಎಂಬಿಬಿಎಸ್ಸು, ಹಾರ್ಟ್‌ಪೇಶೆಂಟ್ ನೋಡಲಾರೆ' ಎಂದು ಫೋನಿಟ್ಟರು. ಸ್ಟೇಶನ್ ಮಾಸ್ತರು ನಿಸ್ಸಹಾಯಕರಾಗಿ ಕೂತರು. ಇನ್ನು ಉಳಿದಿರುವುದು ಒಂದೇ ಒಂದು ದೂರವಾಣಿ ಸಂಖ್ಯೆ. ತಕ್ಷಣವೇ ಫೋನೆತ್ತಿ, ಆ ನರ್ಸಿಂಗ್ ಹೋಂನ ವೈದ್ಯರಿಗೆ ಹೇಳಿದೆ: ''ಮುಖ್ಯಮಂತ್ರಿಗಳ ಸೋದರನಿಗೆ ಹೃದಯಾಘಾತವಾಗಿದೆ, ಕೂಡಲೇ ರೈಲುನಿಲ್ದಾಣಕ್ಕೆ ಬನ್ನಿ.''

ಹಾಗೆ ಹೇಳಿದ ಕೆಲವೇ ನಿಮಿಷಗಳಲ್ಲಿ ವೈದ್ಯರು ಅಂಬುಲೆನ್ಸ್‌ನೊಂದಿಗೆ ಹಾಜರಾದರು. ಅಷ್ಟು ಹೊತ್ತಿಗೆ ರೈಲೂ ಬಂದಿತು. ಮೊದಲೇ ತಿಳಿಸಿದ್ದ ಬೋಗಿಯ ಬಳಿ ಹೋಗಿ, ರೋಗಿಯನ್ನೂ ಅವರ ಲಗೇಜುಗಳನ್ನೂ ಇಳಿಸಿಕೊಂಡೆವು. ವೈದ್ಯರು ಅಗತ್ಯ ಚಿಕಿತ್ಸೆ ಮಾಡಿದ ನಂತರ ಅವರ ಪರಿಸ್ಥಿತಿ ಸ್ವಲ್ಪ ಸುಧಾರಿಸಿತು. ಆಸ್ಪತ್ರೆಗೆ ಕೊಂಡೊಯ್ದೆವು. ಅವರನ್ನು ದಾಖಲು ಮಾಡಿ ಹಿಂತಿರುಗಿದೆ.

ಬೆಳಗ್ಗೆ ಠಾಣೆಯಲ್ಲಿ ಕೂತು, 'ವೈದ್ಯರಿಗೆ ಸುಳ್ಳು ಹೇಳಿ ತಪ್ಪುಮಾಡಿದೆನೆ' ಎಂದು ಆಲೋಚಿಸುತ್ತಿರುವಾಗಲೇ, ಹೃದಯಾಘಾತಕ್ಕೊಳಗಾದ ವ್ಯಕ್ತಿ ನಗುನಗುತ್ತಲೇ ಠಾಣೆಯೊಳಕ್ಕೆ ಬಂದರು. ನನ್ನ ಎರಡೂ ಕೈಹಿಡಿದು, ''ನಾನು ಹುಬ್ಬಳ್ಳಿಯವನು. ನೀವು ಸುಳ್ಳು ಹೇಳಿದ ವಿಚಾರ ಆಸ್ಪತ್ರೆಯಲ್ಲಿ ತಿಳಿಯಿತು. ಆದರೆ ಆ ಸುಳ್ಳಿನಿಂದಲೇ ನನ್ನ ಜೀವ ಉಳಿಯಿತು. ನಿಮ್ಮ ಉಪಕಾರ ಮರೆಯಲಾರೆ'' ಎಂದರು.

ಅವರ ಮಾತಿನಿಂದ ಮನಸ್ಸು ಹಗುರವಾದಂತಾಗಿ ಮನದಲ್ಲೇ ನನ್ನ ಸುಳ್ಳಿಗೊಂದು ಸೆಲ್ಯೂಟ್ ಹೊಡೆದೆ.

ಸೋಣಪ್ಪನಕೆರೆ — ಎನ್. ಡಿ. ವಿಜಯಕುಮಾರ್



ನಾ. ಮೊಗಸಾಲೆ

ಸುಂದರಿಯ ಎರಡನೇ ಅವತಾರ

ಸೀತಾಪುರದ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಸಾರ್ಕುಡೇಲ್, ಊಟಕ್ಕೆ ಕುಳಿತು, ಇನ್ನೇನು ಬಾಯಿಗೆ ಒಂದು ತುತ್ತು ಇಡಬೇಕು ಅನ್ನುವಾಗ, ಕಾಲಿಂಗ್ ಬೆಲ್ಲಿನ ಸದ್ದು. 'ಯಾರು ಈ ಹೊತ್ತಿಗೆ ವಕ್ರಿಸಿದರಪ್ಪ ಅನ್ನ ಕಂಟಕರು?' ಎಂದು ತುಸು ಅಸಮಾಧಾನದಿಂದ ಅನ್ನವನ್ನು ಕಲಸುತ್ತಿದ್ದ ಕೈತೊಳೆದು ಬಾಗಿಲು ತೆರೆದರೆ, ಇದಿರು ನಿಂತಿದ್ದಾರೆ ರಂಗಪ್ಪಯ್ಯ ಮಾಸ್ಟ್ರು!

ರಂಗಪ್ಪಯ್ಯ, ಡಾ. ಸಾರ್ಕುಡೇಲ್ ಅವರ ಅಂತರಂಗಕ್ಕೆ ಸೇರಿದವರು. ಅವರನ್ನು ನೋಡಿದ ಕೂಡಲೇ ಡಾಕ್ಟರ್‌ರ ಅಸಮಾಧಾನ ಇಳಿದುಹೋಯಿತು. ''ಬನ್ನಿ, ಮಾಸ್ಟ್ರೇ ಬನ್ನಿ, ಏನು ಈ ಹೊತ್ತಿಗೆ?'' ಎಂದರು ಸಾರ್ಕುಡೇಲ್, ಸ್ವಾಗತಿಸುತ್ತಾ.

''ವಿಶೇಷ ಏನೂ ಇಲ್ಲ, ಸ್ವಲ್ಪ ಖಾಸಗಿ ವಿಷಯ ಮಾತನಾಡಲಿಕ್ಕಿದೆ'' ಎಂದು ಒಳಗೆ ಕಾಲಿರಿಸಿದ ರಂಗಪ್ಪಯ್ಯ ಮಾಸ್ಟ್ರು, ಹಜಾರದಲ್ಲಿದ್ದ ಕುರ್ಚಿಯಲ್ಲಿ ಕೂರುತ್ತಾ, ''ಊಟ ಆಯಿತೇ?'' ಎಂದರು. ''ಹೊರಟಿದ್ದೆ, ಅಷ್ಟರಲ್ಲಿ ನೀವು ಬಂದಿರಿ'' ಎಂದರು, ಸಾರ್ಕುಡೇಲ್. ''ಹಾಗೋ, ಊಟ ತೀರಿಸಿ ಬನ್ನಿ, ಆಮೇಲೆ ಮಾತನಾಡೋಣ'' ಎಂಬ ರಂಗಪ್ಪಯ್ಯ ಮಾಸ್ಟ್ರ ಮಾತಿಗೆ ಸಾರ್ಕುಡೇಲ್ ಪ್ರತಿಯಾಡದೆ ಊಟ ಮುಗಿಸಿ ಬಂದರು.

ರಂಗಪ್ಪಯ್ಯ ಮಾಸ್ಟ್ರು, ಪೇಪರು ಓದುತ್ತಿದ್ದವರು ಇದಿರಿಗೆ ಬಂದು ಕುಳಿತ ಸಾರ್ಕುಡೇಲ್ ಅವರ ಮುಖವನ್ನೊಮ್ಮೆ ನೋಡಿ, ಏನು ಹೇಳುವುದು, ಹೇಗೆ ಹೇಳುವುದು ಎಂದು ತಿಳಿಯದವರ ಹಾಗೆ, ಬಾಯಿ ತೆರೆದರೂ ಮಾತನಾಡದೇ ಹೋದಾಗ, ''ಹೇಳಿ ಮಾಸ್ಟ್ರೇ'', ಎಂದು ಸಾರ್ಕುಡೇಲ್ ಇನ್ನಷ್ಟು ಕುತೂಹಲ ತೋರಿಸಿದರು. ''ಧರ್ಮಪ್ಪ ಮುಂಬಯಿಯಿಂದ ಬಂದಿದ್ದಾನೆ! ತುಂಬಾ ಅಪಾಯಕಾರಿಯಾದ ಗೂಂಡಾ. ಮುಂಬಯಿಗೆ ಹೋಗಿ ಆರೇಳು ವರ್ಷ ಆಯ್ತು ಅಂತ ಕಾಣುತ್ತೆ. ಊರಲ್ಲಿದ್ದಾಗ ಒಬ್ಬನ ತಲೆ ಒಡೆದು, ಇನ್ನೊಬ್ಬನನ್ನು ಇರಿದು ಕೊಂದು, ನಾಲ್ಕು ತಿಂಗಳು ಜೈಲಲ್ಲಿ ಇದ್ದು ಬಂದ ಅಸಾಮಿ. ಮತ್ತೆ ಊರಿಗೆ ವಾಪಾಸಾದ ಅಂದರೆ ಮೈ ಜುಮ್ಮೆನ್ನುತ್ತದೆ'' ಎಂದರು ರಂಗಪ್ಪಯ್ಯ - ಕತೆ ಹೇಳಲು ಹೊರಟವರ ಹಾಗೆ.

''ಹೌದಾ? ಬರಲಿ ಬಿಡಿ ಅದಕ್ಕೂ ನನಗೂ ಏನು ಸಂಬಂಧ? ಅಥವಾ ನಿಮಗಾದರೂ ಕೂಡಾ?'' ಸಾರ್ಕುಡೇಲ್ ಕೇಳಿದರು.

''ಸಂಬಂಧ ಇದೆ ಅಂದರೆ ಇದೆ ಡಾಕ್ಟ್ರೇ! ಇಲ್ಲ ಅಂದರೆ ಇಲ್ಲ. ಅದನ್ನೇ ನಿಮಗೆ ಹೇಳಿ ಬಿಟ್ಟು ಹೋಗೋಣ ಅಂತ ಬಂದೆ. ಇಲ್ಲವಾದರೆ ಈ ಹೊತ್ತಿಗೆ ಯಾವತ್ತಾದರೂ ನಿಮ್ಮನ್ನು ಡಿಸ್ಟರ್ಬ್ ಮಾಡಿದ್ದುಂಟಾ ನಾನು?''''

''ಅಂದರೆ?''

''ನೋಡಿ ಡಾಕ್ಟ್ರೇ, ಮೂರು ತಿಂಗಳ ಹಿಂದೆ, ವೆಂಕಪ್ಪನ ಹನ್ನೆರಡು ವರ್ಷದ ಹುಡುಗಿ ಶೋಭಾನ ಅತ್ಯಾಚಾರ ಮಾಡಿದ ಸುರೇಶ್ ಇದ್ದಾನಲ್ಲ, ಆತನ ಖಾಸಾ ಸೋದರ ಮಾವ ಈತ. ಅಂದರೆ ಶಾಂತಪ್ಪನ ಭಾವ.''

''ಹೌದಾ?''

''ಅದೇ ಮತ್ತೆ! ಈಗ ರಾತ್ರೆ ಏಳೂವರೆಗೆ ಮುಂಬಯಿಯಿಂದ ಬಂದ ಬಸ್ಸಿನಲ್ಲಿ ಬಂದಿಳಿದ. ಇಳಿದವನೇ, ನೇರವಾಗಿ ನನ್ನ ಅಂಗಡಿಗೇ ಬಂದು, ನಮ್ಮ ಎಸ್.ಟಿ.ಡಿ. ಬೂತಿನಿಂದಲೇ ನಾಲ್ಕಾರು ಕಡೆ ಫೋನು ಮಾಡಿದ. ಮೊದಲು ಯಾರು ಅಂತ ನನಗೆ ಪಕ್ಕನೆ ಗುರ್ತು ಹತ್ತಲಿಲ್ಲ. ನಿಧಾನವಾಗಿ ಧರ್ಣಪ್ಪ ಅಂತ ಅರ್ಥವಾಯ್ತು. ಆತ ದುಡ್ಡು ಕೊಡುವಾಗ, 'ಒಳ್ಳೆ ಕೆಲಸ ಮಾಡಿದಿರಿ ಮಾಸ್ಟ್ರೇ, ಎಸ್.ಟಿ.ಡಿ. ಬೂತು ನಮ್ಮೂರಿಗೂ ಬಂದದ್ದು ಒಳ್ಳೇದಾಯ್ತು' ಅಂದ. ಆಮೇಲೆ, ನನ್ನ ಅಂಗಡಿಯಲ್ಲಿ ಏನೇನಿದೆ ಅಂತ ಕಣ್ಣಾಡಿಸಿ, ಎರಡು ಪ್ಯಾಕ್ ಬರ್ಕ್ಲಿ ಸಿಗರೇಟು ತಗೊಂಡ. ಆಗ ಅವನ ಅಪಾಯದ ಅರಿವಿನಿಂದ ಮೆತ್ತಗೆ ಕೇಳಿದೆ, ''ಏನು ಅಪರೂಪದಲ್ಲಿ ಊರಿಗೆ ಇಳಿದಿದ್ದೀರಿ?'' ಎಂದು. 'ಬರ್ಬೇಕಾಯ್ತು ಬಂದೆ' ಎಂದ ಮೊದಲಿಗೆ, ಆಮೇಲೆ, 'ನಮ್ಮ ಊರಲ್ಲೂ ಆಸ್ಪತ್ರೆ ಆಗಿದೆಯಂತಲ್ಲ, ಅದನ್ನೂ, ಅದರ ಡಾಕ್ಟರನ್ನೂ ನೋಡಿ ಹೋಗಬೇಕು ಅಂತ ಮನಸ್ಸಾಯಿತು. ಅದಕ್ಕೆ!' ಎಂದ, ನಾನು, ಆಶ್ಚರ್ಯದಲ್ಲಿ, ''ನಮ್ಮ ಊರಿನ ಆಸ್ಪತ್ರೆ, ಮತ್ತು ಡಾಕ್ಟರನ್ನು ನೋಡುವುದು ಅಂದರೆ ಏನು ಮಾರಾಯ?'' ಎಂದು ಕುತೂಹಲ ತೋರಿಸಿದೆ. 'ನೋಡುವ ಹಾಗೆ ಡಾಕ್ಟ್ರು ಮಾಡಿಕೊಂಡಿದ್ದಾರಲ್ಲ, ಅದಕ್ಕೆ!' ಎಂದ ಸಿಗರೇಟು ಸುಡುತ್ತಾ. ನಾನು ಅದಕ್ಕೆ ಪ್ರತಿಕ್ರಿಯಿಸದೆ ಆ ವಿಚಾರ ಬಿಟ್ಟ ಹಾಗೆ, ''ಸರಿಯಪ್ಪ ಅದೆಲ್ಲ ನಿಮ್ಮ ಖಾಸಗಿ ವಿಷಯ. ಎಷ್ಟು ದಿನ ಇರ್ತೀರಿ ಊರಲ್ಲಿ?'' ಅಂದರೆ, 'ಅಷ್ಟು ಇಷ್ಟು ಅಂತ ಹೇಗೆ ಹೇಳಲಿ? ಒಂದು ವಾರದೊಳಗೆ ಏನಾದರೊಂದು ಇತ್ಯರ್ಥ ಮಾಡಿ ಹೋಗ್ಬೇಕೆಂದಿದ್ದೇನೆ' ಎಂದ ಧರ್ಣಪ್ಪ. ಮುಂದೆ ನಾನು ಮಾತು ಬೆಳೆಸಲಿಲ್ಲ, ಅವನೂ ಕೂಡಾ. ಕೈಯಲ್ಲಿದ್ದ ದೊಡ್ಡ ಸೂಟುಕೇಸನ್ನು, 'ಒಳಗಿಡಿ ಮಾಸ್ಟ್ರೇ, ನಾಳೆ ಜನ ಕಳುಹಿಸಿ ತರ್ಸಿಕೊಳ್ತೇನೆ' ಎಂದು, ನಮಸ್ಕಾರ ಹೊಡೆದು, ಹೊರಟು ಹೋದ. ವಿಷಯ ಇಷ್ಟು. ಒಬ್ಬ ಗೂಂಡಾ, 'ಡಾಕ್ಟ್ರನ್ನು ನೋಡ್ಕೊಳ್ಳೋದು' ಅಂದರೆ ಏನು ಅಂತ ನಿಮಗೂ ಗೊತ್ತು. ಆ ಆತಂಕದಿಂದ ತಲೆ ಕೆಟ್ಟು ಹೋಯಿತು. ಅದರ ಕ್ಲೂ ನಿಮಗೂ ಕೊಟ್ಟು ಹೋಗೋಣ ಅಂತ ಬಂದೆ''.

ರಂಗಪ್ಪಯ್ಯ ಮಾಸ್ಟ್ರ ಮಾತು ಕೇಳಿ, ಡಾ.ಸಾರ್ಕುಡೇಲ್ ಅವರಿಗೆ ಆಶ್ಚರ್ಯ, ಆತಂಕ ಒಟ್ಟೊಟ್ಟಿಗೆ ಆಯ್ತು. ಅವರ ವೃತ್ತಿ ಜೀವನದಲ್ಲಿ ಇದು ಹೊಸ ಅನುಭವ. ಇಷ್ಟಕ್ಕೂ ಸುರೇಶ ಮಾಡಿದ ಅತ್ಯಾಚಾರದಲ್ಲಿ ಅವರು ನಡೆದುಕೊಂಡದ್ದು ಒಬ್ಬ ವೈದ್ಯ ಏನು ಮಾಡಬೇಕೋ ಹಾಗೆ. ಅದು ತನ್ನ ಕರ್ತವ್ಯ. ಆದರೆ ಈ ಕರ್ತವ್ಯವನ್ನೇ ಅನ್ಯಾಯ ಎಂದು ಈ ಮಂದಿ ಭಾವಿಸುವುದಾದರೆ ತಾನೇನು ಮಾಡಬಲ್ಲೆ? ಸಾರ್ಕುಡೇಲ್ ಅವರ ಮೌನ ನೋಡಿ ಮಾಸ್ಟ್ರು ಮತ್ತೆ ಮುಂದುವರಿಸಿದರು, ''ನಿಮ್ಮ ಹಿಂದೆ ಊರಿಗೆ ಊರೇ ಇದೆ ಡಾಕ್ಟ್ರೇ. ಆದರೆ ಈ ಗೂಂಡಾಗಳ ಇದಿರು ಊರು ಬಿಡಿ, ಯಾವ ದೇಶವೂ ನಿಲ್ಲುವುದಿಲ್ಲ ನೋಡಿ'' ಎಂದರು ಮೆತ್ತಗೆ.

''ಹೌದು'' ಎಂದು ಕ್ಷೀಣ ಸ್ವರದಲ್ಲಿ ಹೇಳಿದ ಸಾರ್ಕುಡೇಲ್, ''ನೀವು ಅನುಭವಸ್ಥರು, ನಾನು ಡಾಕ್ಟ್ರಾಗಿರಬಹುದು, ಆದರೆ ಹುಡುಗ. ಹೇಗೆ ಇದಿರಿಸಬೇಕು ಅವನನ್ನು ಅಂತ ಹೇಳಿ?'' ಎಂದರು.

ರಂಗಪ್ಪಯ್ಯ ಮಾಸ್ಟ್ರು ತಲೆ ತುರಿಸಿಕೊಳ್ಳುತ್ತಾ, ''ಹೇಳಿ ಕೇಳಿ ಆತ ಗೂಂಡಾ, ಅಂಥವನನ್ನು ಹೇಗೆ ಇದಿರಿಸಬೇಕೆನ್ನುವುದು ನಿಮಗೆ ಏನು, ನನಗೂ ಹೊಳೆಯೋದು ಕಷ್ಟ. ಅಂಥವರಿಗೆ ಜೈಲಿನ ಒಳಗಿರುವುದೂ ಒಂದೇ, ಹೊರಗಿರುವುದೂ ಒಂದೇ! ಸುರೇಶನ ಅತ್ಯಾಚಾರ ಪ್ರಕರಣದಲ್ಲಿ ನಿಮ್ಮದೇನೂ ತಪ್ಪಿಲ್ಲ ಅಂದರೆ, ಕೇಳಬೇಕಲ್ಲ ಆತ? ಹೇಗೆ ಇದಿರಿಸುವುದು ಅಂತ ನಾನೂ ಯೋಚಿಸ್ತೇನೆ. ನೀವೂ ಯೋಚಿಸಿ'' ಎಂದವರೆ ಮೆಲ್ಲನೆ ಎದ್ದು, ''ನಾಳೆ ಸಿಗ್ತೇನೆ.

ನೀವೀಗ ಹುಷಾರಾಗಿರಿ ಅಷ್ಟೆ'' ಎಂದು ಹೊರಟರು.

ಡಾ. ಸಾರ್ಕುಡೇಲ್, ರಂಗಪ್ಪಯ್ಯನವರನ್ನು ಕಂಪೌಂಡಿನ ಗೇಟಿನ ತನಕ ಬಂದು ಬೀಳ್ಕೊಟ್ಟರು. ಒಳಗೆ ಬಂದು ಕುಳಿತರೆ, ಯಾವತ್ತೂ ಬಿಕೋ ಅನಿಸದ ಮನೆ, ಹೆದರಿಕೆ ಹುಟ್ಟಿಸುವ ಹಾಗೆ ಕಂಡಿತು. ಹೆಂಡತಿಯನ್ನು ಹೆರಿಗೆಗಾಗಿ ತವರಿಗೆ ಕಳುಹಿಸಿ ತಿಂಗಳು ಮೂರಾಗುತ್ತಾ ಬಂದರೂ, ಆಕೆಯ ನೆನಪಾಗುತ್ತಿತ್ತೇ ವಿನಾ, ಒಂದು ಕ್ಷಣವೂ ತಾನು ಒಬ್ಬನೇ ಅಂತ ಅನಿಸಿರಲಿಲ್ಲ. ಈಗ ಮೊದಲ ಬಾರಿಗೆ ಅವರಿಗೆ ತನಗೆ ಯಾರೂ ಇಲ್ಲ ಅನಿಸಿ, ಅನಿರೀಕ್ಷಿತವಾಗಿ ಇದಿರಾದ ಸಮಸ್ಯೆ ಬೃಹದಾಕಾರವಾಗಿ ಬೆಳೆಯತೊಡಗಿತು. ಹಾಸಿಗೆಯಲ್ಲಿ ಬೋರಲಾಗಿ ಬಿದ್ದುಕೊಂಡು, ಬೆಳಕು ಆರಿಸಿದರೂ, ನಿದ್ದೆ ಅವರ ಕಡೆಗೆ ಸುಳಿಯಲೇ ಇಲ್ಲ.

ಹಾಸಿಗೆಯಲ್ಲಿ ಬಿದ್ದುಕೊಂಡ ಡಾ. ಸಾರ್ಕುಡೇಲ್ ಅವರಿಗೆ, ಮೂರು ತಿಂಗಳ ಹಿಂದೆ ನಡೆದ ಘಟನೆ ಕಣ್ಣೆದುರಿಗೆ ಬಂತು. ಆಗತಾನೇ ಆಸ್ಪತ್ರೆಯ ಡ್ಯೂಟಿ ಮುಗಿಸಿ ಬಂದು, ಕಾಫಿ ಕುಡಿದು, ತವರಿಗೆ ಹೆರಿಗೆಗೆ ಹೋದ ಹೆಂಡತಿಗೆ ಒಂದು ಪತ್ರ ಬರೆಯಲು ಕುಳಿತ ಅವರಿಗೆ, ಅದು ವಿರಹಪತ್ರವಾಗಿ ಪರಿವರ್ತನೆಗೊಂಡು, ದೀರ್ಘವಾಗಿ, ಸಂಜೆಗತ್ತಲು ಆವರಿಸುವ ತನಕವೂ ಬೆಳೆಯಿತು. 'ಸ್ವಾಮಿ ಡಾಕ್ಟ್ರೇ' ಎಂದು ಅಂಗಳದಲ್ಲಿ ಯಾರೋ ಕರೆದ ಸದ್ದು ಕೇಳಿದಾಗ, 'ಯಾರದು?' ಎಂದು ಹೊರಗೆ ಇಣುಕಿದರೆ, ಸುಮಾರು ಮೂವತ್ತೈದು-ನಲುವತ್ತು ವರುಷದ ಹೆಣ್ಮಗಳೊಬ್ಬಳು, ಹನ್ನೆರಡು-ಹದಿನಾಲ್ಕರ ಒಳಗಿನ ಮಗಳನ್ನು ಮುಂದಿಟ್ಟುಕೊಂಡು ಕೈಮುಗಿದು ನಿಂತಿದ್ದಾಳೆ. 'ಏನು?' ಎಂದವರೇ ಸಾರ್ಕುಡೇಲ್, ''ಇಷ್ಟು ಹೊತ್ತಿಗೆ ನೀವು ಇಲ್ಲಿಗೆ ಬಂದರೆ ನನ್ನಲ್ಲೇನಿದೆ ಔಷಧ ಅಮ್ಮಾ? ಆಸ್ಪತ್ರೆಗೆ ಆಗಲೇ ಬರಬಹುದಿತ್ತಲ್ಲ?'' ಎಂದು ಆಕ್ಷೇಪಿಸಿದರು.

ಆಕೆ ಸಾರ್ಕುಡೇಲ್ ಅವರ ಆಕ್ಷೇಪವನ್ನು ನಿರಾಕರಿಸುವ ಹಾಗೆ ವಿನೀತಳಾಗಿ ಹೇಳಿದಳು. ''ನಾನು ಕೂಲಿ ಹೆಂಗ್ಸು ಸ್ವಾಮಿ. ಕೆಲಸಕ್ಕೆ ಹೋಗಿದ್ದೆ, ಕೆಲಸ ಬಿಟ್ಟು ಮನೆಗೆ ಬಂದಾಗ ಇವಳು - ನನ್ನ ಮಗಳು- ಅಳುತ್ತಾ ಕುಳಿತಿದ್ದಳು. ಏನು ಅಂದರೆ ಏನೂ ಹೇಳಲಿಲ್ಲ. ತಲೆ ಮುಟ್ಟಿ ನೋಡಿದೆ. ಸ್ವಲ್ಪ ಜ್ವರದ ಹಾಗೆ ಇತ್ತು. ಅಂಗಡಿಗೆ ಹೋಗಿ ಮಾತ್ರೆ ತರ್ತೇನೆ ಅಂದೆ. ಬೇಡ ಅಂದ್ಲು. ಮತ್ತೇನು ಎಂದು ಗದರಿದೆ. ಮೂತ್ರ ಮಾಡ್ಲಿಕ್ಕೆ ಆಗ್ತಾ ಇಲ್ಲ. ಉರಿ ಉರಿ ಎಂದ್ಲು. ಗಾಬರಿ ಆಯ್ತು. 'ಡಾಕ್ಟ್ರ ಹತ್ರ ಹೋಗೋಣ' ಅಂದರೆ ಒಲ್ಲೆ ಎಂದ್ಲು. ಒಂದು ಕೋಲು ಎತ್ತಿ ಹೊಡೆಯಲು ಹೊರಟೆ. ಬೊಬ್ಬೆ ಹೊಡೆದು 'ಅಯ್ಯೊ ಸತ್ತೆ' ಎಂದಳು. ಹಾಗಾದರೆ ಹೇಳು ಅಂದೆ. ಅವಳು ಅಳುತ್ತಾ, 'ನಿನ್ನೆ ನೀವು ಯಾರೂ ಇಲ್ಲದ ಹೊತ್ತಲ್ಲಿ, ಸುರೇಶಣ್ಣ ಬಂದು ಕೈತುಂಬಾ ಚಾಕಲೇಟ್ ಕೊಟ್ಟ. ಹಿಂದೆಯೂ ಹೀಗೆ ಕೊಡುತ್ತಿದ್ದ. ನಾನು ಶಾಲೆಗೆ ಹೋಗುವಾಗ ಸಿಕ್ಕಿದರೆ ಮುದ್ದು ಮುದ್ದು ಮಾಡ್ತಿದ್ದ. ನಾನು ಚಾಕಲೇಟು ತೆಗೆದುಕೊಂಡು ತಿನ್ನಲು ಹೊರಟರೆ, ಅಪ್ಪ-ಅಮ್ಮ ಎಲ್ಲಿ ಎಂದ. ಇಬ್ಬರೂ ಕೆಲಸಕ್ಕೆ ಹೋಗಿದ್ದಾರೆ ಎಂದೆ. ಅವನು 'ನಿನಗೆ ಒಂದು ತಮಾಷೆ ತೋರಿಸಲಿಕ್ಕೆ ಇದೆ ಬರ್ತಿಯಾ' ಎಂದ. 'ಹ್ಞೂಂ' ಎಂದೆ. ಸರಿ ಎಂದು ಅವನು ಮನೆ ಹಿಂದೆ ನನ್ನ ಕರಕೊಂಡು ಹೋದ. ಮೊದಲು ಬಿಗಿದಪ್ಪಿ ಲೊಟ ಲೊಟ ಮುತ್ತು ಕೊಟ್ಟು ಮಲಗು ಎಂದ. ಬೇಡ ಅಂದರೆ ಒತ್ತಾಯಿಸಿ ಮಲಗಿಸಿ, ನನ್ನ ಕಾಚಾ ಎಳೆದು ತೆಗೆದ. ನಾಚಿಕೆಯಿಂದ 'ಬೇಡ' ಎಂದೆ. ದೊಡ್ಡದಾಗಿ ಬೊಬ್ಬೆ ಹೊಡೆದರೆ,

ಏಳಲು ಪ್ರಯತ್ನಿಸಿದರೆ ಕೊಲ್ಲುತ್ತೇನೆ ಎಂದು ಹೆದರಿಸಿದ. ಆಮೇಲೆ ಅವನು ಪ್ಯಾಂಟು ಕಳಚಿದ. ನಾನು ಹೆದರಿ ಕಣ್ಣು ಮುಚ್ಚಿದೆ. ಕ್ಷಣಾರ್ಧದಲ್ಲಿ ನಾನು ಮೂತ್ರ ಮಾಡುವ ಜಾಗದಲ್ಲಿ ಏನನ್ನೋ ತುರುಕಿಸಿದ ಹಾಗೆ ಆಯ್ತು. ಅಸಾಧ್ಯ ನೋವು, ಉರಿ. ಆತ ಅಷ್ಟರಲ್ಲೇ ನನ್ನ ಮೇಲೆ ಮಲಗಿ, ಏದುಸಿರು ಬಿಡ್ತಿದ್ದ. ಆಮೇಲೆ ಎದ್ದು ಹೊರಟ. ಹೊರಡುವಾಗ, 'ಈ ವಿಷಯ ಯಾರಿಗಾದರೂ ಹೇಳಿದ್ರೆ ನಿನ್ನನ್ನೂ, ನಿನ್ನ ಅಮ್ಮನನ್ನೂ ಕೊಲ್ತೇನೆ, ನಾನು ಶಾಂತಯ್ಯನ ಮಗ ನೆನಪಿಟ್ಟುಕೋ' ಅಂದ. ಹಾಗೆ ನಾನು ನಿನಗೆ ಹೇಳಲಿಲ್ಲ. ಈಗ ಮೂತ್ರ ಮಾಡಲಿಕ್ಕೆ ಆಗದೇ ಇದ್ದುದರಿಂದ ಹೇಳಿದೆ' ಎಂದ್ಲು. ನನಗೆ ಹೆದರಿಕೆ ಆಯ್ತು ಡಾಕ್ಟ್ರೆ, ಮೂತ್ರ ಮಾಡುವ ಸ್ಥಳದಲ್ಲಿ ಏನಾಗಿದೆ ನೋಡೋಣ ಅಂದೆ. ಅವಳು ಒಪ್ಪಲೇ ಇಲ್ಲ. ಅದಕ್ಕೆ ನಿಮ್ಮ ಹತ್ರ ಕರಕೊಂಡು ಬಂದೆ!''

ಡಾ. ಸಾರ್ಕುಡೇಲ್ ದಂಗಾಗಿ ಹೋದರು. 'ನಿಮ್ಮ ಮನೆ ಎಲ್ಲಿ? ಹೆಸರೇನು?' ಇತ್ಯಾದಿ ಮಾಹಿತಿ ಕಲೆ ಹಾಕಿ, ''ನೋಡಮ್ಮ ಗಿರಿಜ, ಇದು ಅತ್ಯಾಚಾರದ ಕೇಸು. ಇದಕ್ಕೆ ನಾನು ಚಿಕಿತ್ಸೆ ಮಾಡುವ ಹಾಗೆ ಇಲ್ಲ. ಏನಿದ್ದರೂ ದೊಡ್ಡಾಸ್ಪತ್ರೆಯೇ ಗತಿ. ನಾಳೆ ಪೊಲೀಸೂ ಬರಬಹುದು. ಕೋರ್ಟಿಗೂ ಹೋಗಬೇಕಾದೀತು. ಇದಕ್ಕೆಲ್ಲ ನೀವು ಹೆದರಬೇಕಾಗಿಲ್ಲ. ನಿಮಗೆ ಆದ ಅನ್ಯಾಯಕ್ಕೆ ನಾನು ನೆರವಾಗುತ್ತೇನೆ. ಈ ಹುಡುಗಿಯನ್ನು ಬಲಾತ್ಕರಿಸಿದವನಿಗೆ ಸರಿಯಾದ ಶಿಕ್ಷೆಯಾಗಬೇಕು'' ಎಂದು, ತಾಲೂಕು ಆಸ್ಪತ್ರೆಯ ವೈದ್ಯಾಧಿಕಾರಿಯವರಿಗೆ ಒಂದು ಪತ್ರ ಕೊಡುವುದಾಗಿಯೂ, ಮುಂದೆಲ್ಲ ಸರಿ ಹೋಗುವುದೆಂದೂ ಭರವಸೆ ನೀಡಿದರು.

ಶೋಭಾಳ ತಾಯಿ ಗಿರಿಜಕ್ಕ, ''ನಮಗೆ ಅದ್ಯಾವುದೂ ಬೇಡ ಡಾಕ್ಟ್ರೇ. ಬರೇ ಔಷಧ ಸಾಕು. ದುಡ್ಡು ಎಷ್ಟಾದರೂ ಕೊಡ್ತೇವೆ. ಈಗ ನಾನು ತಂದಿಲ್ಲದಿರಬಹುದು. ನಾಳೆ ಕೊಡ್ತೇನೆ!'' ಎಂದು ಕೈಮುಗಿದಳು.

ಡಾ. ಸಾರ್ಕುಡೇಲ್ ಇಬ್ಬರನ್ನೂ ಮನೆಯೊಳಗೆ ಕರೆದು, ಕುಳ್ಳಿರಿಸಿ, ಒಂದು ಪುಟ್ಟ ಭಾಷಣ ಬಿಗಿದರು. ಆದರೆ ಗಿರಿಜನಿಗೆ ಆ ಆಶ್ವಾಸನೆ ಬೇಕಿರಲಿಲ್ಲ. ''ಶಾಂತಪ್ಪ ದೊಡ್ಡ ಮನುಷ್ಯರು ಸ್ವಾಮಿ. ಎರಡೆರಡು ಸಲ ಓಟಿನಲ್ಲಿ ಗೆದ್ದೋರು. ಅವರ ಮಗ ತಪ್ಪು ಮಾಡಿದ ಅಂತ ನಾವು ಸ್ಟೇಶನ್ನು ಕೋರ್ಟು ಅಂತ ಹೋದರೆ ಹೊಟ್ಟೆ ತುಂಬಿಸೋದು ಹೇಗೆ?'' ಎಂದು ಬಿಕ್ಕಿದಳು.

ಡಾ. ಸಾರ್ಕುಡೇಲ್ ಅವರಿಗೆ ಕೋಪವೂ ದುಃಖವೂ ಬಂತು. ಏನು ಹೇಳಿದರೂ ಈಕೆಗೆ ಅರ್ಥ ಆಗುವುದಿಲ್ಲ! ಅಂತ ಅನಿಸಿ ನಿರಾಶರಾದರೂ ಬಿಡದೆ, ''ಸರಿಯಮ್ಮ, ನಿನ್ನ ಮಗಳು ಇಲ್ಲೇ ಇರಲಿ. ನಿನ್ನ ಗಂಡನನ್ನು ಕರಕೊಂಡು ಬಾ. ಔಷಧ ಕೊಡೋಣ'' ಎಂದರು. ಗಿರಿಜ ಅನಿವಾರ್ಯವಾಗಿ ಅದಕ್ಕೆ ಒಪ್ಪಿ, ಈ ಹೊತ್ತಿಗೆ ಗಂಡ ಮನೆಗೆ ಬಂದಿರಲಾರ ಎಂದು ತರ್ಕಿಸಿ, ನೇರವಾಗಿ ಶರಾಬು ಅಂಗಡಿಯಾಚೆ ಧಾವಿಸಿದಳು. ಹದವಾಗಿ ನಶೆ ಏರಿದ್ದ ಆಕೆಯ ಗಂಡ ವೆಂಕಪ್ಪ, ಶರಾಬಿನ ಅಂಗಡಿ ಬಾಗಿಲಿಗೆ ಏದುಸಿರು ಬಿಡುತ್ತಾ ಬಂದ ಪತ್ನಿಯನ್ನು ನೋಡಿ, ಮುಜುಗರ ಮತ್ತು ಆಶ್ಚರ್ಯದಿಂದ 'ಏನು?' ಎಂದ ಕೋಪದಲ್ಲಿ.

ಗಿರಿಜ, ಶೋಭಾಳ ಅಸ್ವಸ್ಥತೆಯ ವಿಚಾರ ಹೇಳಿ, 'ಡಾಕ್ಟ್ರು ನಿಮ್ಮನ್ನು ಕರಕೊಂಡು ಬರಲು ಹೇಳಿದ್ರು' ಎಂದಳು. ವೆಂಕಪ್ಪನಿಗೆ ಒಬ್ಬಳೇ ಮಗಳು. ಕುಡುಕನಾದರೂ ಅವಳೆಂದರೆ ಅವನಿಗೆ ಪಂಚಪ್ರಾಣ. ಆಕೆಗೇ ಮೈ ಚೆನ್ನಾಗಿಲ್ಲ ಎಂದ ಕೂಡಲೇ ಅವನ ನಶೆ ಜರ್ರನೆ ಇಳಿಯಿತು. 'ಹೌದಾ? ನಡಿ' ಎಂದು ದಾಪುಗಾಲಲ್ಲಿ ಆತ ಡಾ. ಸಾರ್ಕುಡೇಲ್ ಮನೆಯತ್ತ ಧಾವಿಸಿದ.

ಸಾರ್ಕುಡೇಲ್ ಕಂಗಾಲಾಗಿ ಬಂದು ನಿಂತ

ವೆಂಕಪ್ಪನನ್ನು ನೋಡಿ, "ಇವಳು ನಿನ್ನ ಮಗಳಾ?" ಎಂದರು. 'ಹೌದು ಸ್ವಾಮಿ' ಎಂದ ವೆಂಕಪ್ಪ, ಕೈಮುಗಿಯುತ್ತ. "ನಿನ್ನ ಮಗಳನ್ನು ಈಗಿಂದೀಗಲೇ ತಾಲೂಕಾಸ್ಪತ್ರೆಗೆ ಕೊಂಡು ಹೋಗಬೇಕು" ಎಂದರು ಸಾರ್ಕುಡೇಲ್. 'ದುಡ್ಡೆಷ್ಟೇ ಆಗಲಿ, ಕೊಡ್ತೇನೆ' ಎಂದು ವೆಂಕಪ್ಪ ಸಾರ್ಕುಡೇಲ್ ಅವರ ಕಾಲಿಗೆ ಬಿದ್ದ. ಸಾರ್ಕುಡೇಲ್ ಅವರು ಅವನನ್ನು ಹಿಡಿದೆತ್ತಿ, "ಇದೆಲ್ಲ ಮಾಡಬಾರದು! ವಿಷಯ ಏನು ಎಂದು ನಿನ್ನ ಹೆಂಡ್ತಿಯನ್ನೇ ಕೇಳು!" ಎಂದರು.

ಗಿರಿಜ ಅಳಲಿಕ್ಕೆ ಹತ್ತಿದಳು. ಅಮ್ಮ ಅಳುವುದು ನೋಡಿ ಶೋಭಾಳೂ ಅಳಹತ್ತಿದಳು. ವೆಂಕಪ್ಪ ನಿಗೂ ಅಳಬೇಕೆನಿಸಿತು-ಯಾಕೆಂದು ತಿಳಿಯದೇ. ಆದರೆ ಅವನೊಳಗಿದ್ದ ಆಲ್ಕೋಹಾಲ್, ಅಳು ವಿನ ಬದಲು ಕೋಪದ ರೂಪದಲ್ಲಿ ಹೊರ ಬಂತು. ಹೆಂಡತಿಯನ್ನು ತಿವಿದು ಕೇಳಿದ, "ಏನಾಯಿತು ಹೇಳೇ?"

ಗಿರಿಜ ಅಳುತ್ತಾ ಹೇಳಿದಳು, "ಶೋಭಾಳಿಗೆ ಮೂತ್ರ ಮಾಡಲಿಕ್ಕೆ ಆಗ್ತಾ ಇಲ್ಲ. ಉರಿಯಂತ ಉರಿ!"

ವೆಂಕಪ್ಪ ಹೆದರಿದ. ಕ್ಯಾನ್ಸರ್ ಗ್ಯಾಂಗ್ರೀನ್ ಆಗಿರಲಿಕ್ಕೂ ಸಾಕು. ಅದಕ್ಕೆ ಡಾಕ್ಟ್ರು ಇಲ್ಲಿ ಆಗ್ತಾ ಇಲ್ಲ, ದೊಡ್ಡಾಸ್ಪತ್ರೆಗೆ ಹೋಗ್ಬೇಕು ಅನ್ನೋದು ಅಂತ ಊಹಿಸಿ, ಮತ್ತೆ ಕೈಮುಗಿದು ಪ್ರಾರ್ಥಿಸಿದ, "ಹೇಳಿ ಸ್ವಾಮಿ ಏನಾಗಿದೆ ನನ್ನ ಮಗಳಿಗೆ?"

ಸಾರ್ಕುಡೇಲ್ ವೆಂಕಪ್ಪನನ್ನು ಪಕ್ಕಕ್ಕೆ ಕರೆದರು. ಶೋಭಾ ಅತ್ಯಾಚಾರಕ್ಕೆ ಒಳಗಾದ ವಿಚಾರವನ್ನು ಸಂಕ್ಷಿಪ್ತವಾಗಿ ವಿವರಿಸಿದರು.

ವೆಂಕಪ್ಪ ಹಲ್ಲು ಕಡಿದ. "ಡಾಕ್ಟ್ರೇ ಈ ಬೋಸುಡಿ ರಂಡೆಗೆ ಏನು ಅರ್ಥ ಆಗುತ್ತೆ. ಇಂಥ ನೀಚ ಕೆಲಸ ಮಾಡಿದವನನ್ನು ಇಂಚಿಂಚು ಕಡಿದು ಕೊಲ್ಲಬೇಕು!" ಎಂದ. ಸಾರ್ಕುಡೇಲ್, "ಸಮಾಧಾನ ಮಾಡಿಕೋ. ಈಗ ಅದಾವುದೂ ಬೇಡ. ಮೊದಲು ದೊಡ್ಡಾಸ್ಪತ್ರೆಗೆ ಕೊಂಡುಹೋಗು!"



ಎಂದು ಸಂತೈಸಿದರು. ವೆಂಕಪ್ಪ ಸಮಾಧಾನ ಗೊಳ್ಳಲಿಲ್ಲ. "ಬಡವರ ಮಕ್ಳು ಅಂದ್ರೆ ಅಷ್ಟು ಅಗ್ಗ ಹೇಗೆ ಸ್ವಾಮಿ ಇವರಿಗೆ? ಇವರ ಮಕ್ಕಳ ಅಥವಾ ಹೆಂಡಂದಿರ ಸೆರಗಿನ ಮೇಲೆ ನಮ್ಮ ನೆರಳು ಬಿದ್ರೂ ಕೊಂದುಹಾಕುವ ಈ ಮಂದಿಯನ್ನು ಸುಮ್ಮನೆ ಬಿಡೋಕಾಗುತ್ತಾ? ಎಂದ.

ಸಾರ್ಕುಡೇಲ್ ಅವರಿಗೆ ಸಿಟ್ಟು ಬಂತು. "ನಿನಗೆ ಭಾಷೆ ಅರ್ಥ ಆಗೋದಿಲ್ಲ. ಮೊದಲು ಚಿಕಿತ್ಸೆ ಮಾಡಿಸು!" ಎಂದರು ಸ್ವಲ್ಪ ದೊಡ್ಡ ಸ್ವರದಲ್ಲೇ.

ಅಷ್ಟರಲ್ಲಿ ಗಿರಿಜ, ಶೋಭಾಳನ್ನು ತಬ್ಬಿ ಕೊಂಡು ನಡೆಸುತ್ತಾ ಸಾರ್ಕುಡೇಲ್ ಅವರ ಕ್ವಾರ್ಟರ್ಸ್‌ಗೆ ಬಂದದ್ದು, ಅಲ್ಲಿ ತಾಯಿ ಮಕ್ಕಳಿಬ್ಬರೂ ಅಳಹತ್ತಿದ್ದು, ಆಮೇಲೆ ಗಿರಿಜ ಓಡಿ ಹೋಗಿ ವೆಂಕಪ್ಪನನ್ನು ಕರೆತಂದದ್ದು, ವೆಂಕಪ್ಪ ತಾರಕದಲ್ಲಿ 'ಬಡಿಬೇಕು, ಕಡಿಬೇಕು', ಅಂದದ್ದು -ಎಲ್ಲವನ್ನು ತನ್ನ ಮನೆಯ ಕಿಟಕಿಯಲ್ಲಿ ನೋಡಿದ ಟೀಚರ್ ಲೀಲಾಬಾಯಿ, ಆಫೀಸಿನಿಂದ ಬಂದು ಪೇಪರು ಓದುತ್ತಾ ಕುಳಿತ ಗಂಡನಿಗೆ ಅದನ್ನೆಲ್ಲ ಹೇಳಿದಳು. ಆತ 'ಹೌದಾ? ಅತ್ಯಾಚಾರ?' ಎಂದು ಪಕ್ಕದ ಮನೆಯ ಶೀನಪ್ಪಯ್ಯನನ್ನು ಕರೆದು ಹೇಳಿದ. ಶೀನಪ್ಪಯ್ಯನಿಂದ ಪೋಸ್ಟ್‌ಮಾಸ್ಟರ್ ಶಿವರಾಯರಿಗೆ, ಶಿವರಾಯರಿಂದ, ನಿವೃತ್ತ ಪಂಚಾಯತ್ ಕ್ಲರ್ಕ್ ರಾಮಪ್ಪಯ್ಯನಿಗೆ,

ಅವರಿಂದ ಕೂಲಿ ಶಿವಣ್ಣನಿಗೆ-ಹೀಗೆ ಶೋಭಾಳ ಅತ್ಯಾಚಾರದ ಸುದ್ದಿ ಕೃಷ್ಣಯ್ಯನವರ ದುರ್ಗಾ ಭವನಕ್ಕೆ ಬಂತು. ಅಲ್ಲಿ ಅದು ಪ್ರಸಾರ ಭಾರತಿಯ ಹಾಗೆ ಪ್ರಸಾರವಾಗಿ, ಕ್ಷಣಾರ್ಧದಲ್ಲಿ ಹತ್ತಾರು ಕಣ್ಣುಗಳು ಡಾ. ಸಾರ್ಕುಡೇಲ್ ಅವರ ಕ್ವಾರ್ಟರ್ಸ್‌ನತ್ತ ಧಾವಿಸಿದುವು. ಜನ, ತಮ್ಮ ಕ್ವಾರ್ಟರ್ಸ್‌ನ ಕಂಪೌಂಡಿನ ಹೊರಗೆ ಜಮಾಯಿಸುವುದನ್ನು ನೋಡಿ, "ಹೋಗಿ" ಎಂದು ಹೇಳಲಾರದೆ, ಹೇಳದಿದ್ದರೆ ನೋಡುವವರ ಕಣ್ಣಿಗೆಲ್ಲ ಉತ್ತರ ಹೇಳಬೇಕಾದಿತೆಂದು ಹೆದರಿ, ಆತಂಕಿತರಾದ ಡಾ. ಸಾರ್ಕುಡೇಲ್, ನೂರರ ಎರಡು ನೋಟನ್ನೂ, ತಾಲೂಕು ಆಸ್ಪತ್ರೆಯ ವೈದ್ಯಾಧಿಕಾರಿಯವರಿಗೆ ಒಂದು ಕಾಗದವನ್ನೂ ಬರೆದು, ವೆಂಕಪ್ಪನ ಕೈಯಲ್ಲಿ ತೂರಿ, "ಒಂದು ರಿಕ್ಷಾ ಮಾಡಿಕೊಂಡು ಬೇಗ ಆಸ್ಪತ್ರೆಗೆ ಹೋಗಿ" ಎಂದರು.

ವೆಂಕಪ್ಪನಿಗೆ, ಜನ ಜಮಾಯಿಸುತ್ತಿದ್ದುದರಿಂದ ತನ್ನ ಮಗಳ ಜೀವ ಅಪಾಯದಲ್ಲಿದೆ ಎಂಬ ಭಯವಾಯ್ತು. ತಾನು ಕೇಳದೇ ಡಾಕ್ಟರರೂ ಹಣ ನೀಡಿದ್ದಲ್ಲದೆ, ಕಾಗದವನ್ನು ದೊಡ್ಡಾಸ್ಪತ್ರೆಯ ಡಾಕ್ಟರರಿಗೆ ಬರೆದುಕೊಡಬೇಕಾದರೆ ಡಾಕ್ಟರರಿಗೂ ಶೋಭಾಳ ಜೀವ ಅಪಾಯದಲ್ಲಿದೆ ಎಂಬ ಗುಮಾನಿ ಇದೆ ಎಂದು ಆಯಿತು. ಆವೇಶ ಬಂದವನ ಹಾಗೆ ಬಾಗಿ, ಡಾ. ಸಾರ್ಕುಡೇಲರನ್ನು ತಬ್ಬಿಕೊಂಡ ಆತ, "ಶೋಭಾಳಿಗೆ ಜೀವಾಪಾಯ ಇಲ್ಲ ತಾನೇ?" ಎಂದ ದೈನ್ಯವಾಗಿ.

ವೆಂಕಪ್ಪ, ಮಗಳನ್ನು ಪ್ರೀತಿಯಿಂದ ಎತ್ತಿಕೊಂಡೇ ರಥಬೀದಿಗೆ ಇಳಿದ. ಹತ್ತಾರು ಜನ ಅವನನ್ನು ಸುತ್ತುವರಿದದ್ದನ್ನು ಸಾರ್ಕುಡೇಲ್ ನೋಡಿದರು. ಆ ರಾತ್ರ ಜಿಲ್ಲಾ ಪೊಲೀಸ್ ಅಧಿಕಾರಿಯೇ ಸ್ವತಃ ಜೀಪಿನಲ್ಲಿ ಬಂದು ಶಾಂತಪ್ಪನ ಮಗ ಸುರೇಶನನ್ನು ಅರೆಸ್ಟ್ ಮಾಡಿದರೆಂಬ ವಾರ್ತೆ ಮರುದಿನ ಬೆಳಿಗ್ಗೆ ಸೀತಾಪುರದಲ್ಲಿ ಪೂರ್ತಿ ಹಬ್ಬಿತು.

ಮರುದಿನ ಡಾ. ಸಾರ್ಕುಡೇಲ್ ಅವರನ್ನು ಎಲ್ಲರೂ ಹೊಸಬರ ಹಾಗ ನೋಡುತ್ತಿದ್ದಂತೆ ಅವರಿಗೆ ಅನಿಸಿತು. ತಾನು ಏನನ್ನೋ ಸಾಧಿಸಿದೆ ಎಂಬ ಸಂತೋಷವೂ ಅವರ ಎದೆಯೊಳಗೆ ಕುಣಿಯುತ್ತಿತ್ತು. ಆದರೆ ಈಗ? ಆಗ ತಾನು ಅನುಭವಿಸಿದ ಸಂತೋಷವನ್ನು ಕಿತ್ತುಕೊಳ್ಳಲು ಧರ್ನಪ್ಪ ಈಗ ಹುಲಿಯ ಹಾಗೆ ಬಂದಿದ್ದಾನೆ!

2

ಹಾಸಿಗೆಯಲ್ಲಿ ಬಂದುಬಿದ್ದುಕೊಂಡ ರಂಗಪ್ಪಯ್ಯ ಮಾಸ್ಟ್ರಿಗೆ, ಡಾ. ಸಾರ್ಕುಡೇಲ್ ಅವರದ್ದೇ ಚಿಂತೆ. ಧರ್ನಪ್ಪ ಖಂಡಿತ ಅವರಿಗೆ ಏನಾದರೂ ಅಪಾಯ ಮಾಡುತ್ತಾನೆ ಎಂಬ ಆತಂಕ. ಪರಿಹಾರ ಹೇಗೆ ಎನ್ನುವುದು ಎಷ್ಟು ಯೋಚಿಸಿದರೂ ಹೊಳೆಯದು.

ಸಾರ್ಕುಡೇಲ್ ಅಂದರೆ ಅವರಿಗೆ ಎಲ್ಲಿಲ್ಲದ ಗೌರವ. ನಾಲ್ಕು ವರುಷಗಳಿಂದಲೂ ತನ್ನನ್ನು ಮೂತ್ರ ಸಂಬಂಧಿ ಕಾಯಿಲೆಯೊಂದು ಕಾಡುತ್ತಿತ್ತು. ಆಗಾಗ ಮೂತ್ರ ಮಾಡಬೇಕು ಅನಿಸುವುದು, ಹೆಚ್ಚು ಹೊತ್ತು ಮೂತ್ರವನ್ನು ತಡೆಹಿಡಿಯಲಿಕ್ಕೆ ಆಗದೇ ಇರುವುದು, ಜತೆಗೆ ವಿಚಿತ್ರ, ಅಕಾಲ ಕಾಮ ವ್ಯಾಮೋಹ, ಹೀಗೆ. ರಂಗಪ್ಪಯ್ಯನವರ ಹೆಂಡತಿ ಸತ್ತು ಆಗಲೇ ಆರು ವರ್ಷ ಆಗಿದೆ. ಹೆಂಡತಿ ಇದ್ದ ದಿನಗಳಲ್ಲಿ ಇಷ್ಟು ಕಾಡದ ಕಾಮ, ಈಗ ಅರವತ್ತರ ನಂತರ ಯಾಕೆ ಕಾಡುತ್ತದೆ ಎಂದು ಅವರು ಯೋಚಿಸಿದ್ದುಂಟು. ಡಾ. ಸಾರ್ಕುಡೇಲ್ ಅವರ ಪರಿಚಯ ಆದ ಮೇಲೆ, ಪರಿಚಯ ಸ್ನೇಹಕ್ಕೆ ತಿರುಗಿದಮೇಲೆ, ಅವರಲ್ಲಿ ತನ್ನ ಸಮಸ್ಯೆಯನ್ನು ಮುಂದಿಟ್ಟರು. ಸಾರ್ಕುಡೇಲ್, "ಮಾಸ್ಟ್ರೇ ಇದು ಪ್ರಾಯ ಸಹಜ ಕಾಯಿಲೆ. ನಿಮ್ಮ ಪ್ರಾಸ್ಟೇಟ್‌ಗ್ರಂಥಿ ದೊಡ್ಡದಾಗಿದೆ. ನಿಮ್ಮ ಮೂತ್ರದ ಸಮಸ್ಯೆಗೂ, ಕಾಮದಾಹಕ್ಕೂ ಇದೇ ಕಾರಣ" ಎಂದು. "ನೀವು ತಪ್ಪು ತಿಳಿಯದಿದ್ದರೆ ಒಂದು ಮಾತು ಹೇಳುವೆ. ನೀವ್ಯಾಕೆ ಮರುಮದುವೆ ಮಾಡಿಕೊಳ್ಳಬಾರದು?" ಎಂದರು.

ರಂಗಪ್ಪಯ್ಯ ಮಾಸ್ತ್ರಿಗೆ ಮದುವೆ ಆಗುವ ಉತ್ಸಾಹ ಇದ್ದರೂ, ಜನ ನಕ್ಕಾರು ಎಂಬ ಭಯದಿಂದ ಅದರ ಯೋಚನೆ ಬಿಟ್ಟರು. ಡಾಕ್ಟರರ ಸೂಚನೆಯಂತೆ ಮುಷ್ಟಿಮೈಥುನಕ್ಕೂ ಪ್ರಯತ್ನಿಸಿ ವಿಫಲರಾದರು. ಉಳಿದಿದ್ದು ಸೂಳೆಗಾರಿಕೆ. ಅದರ ಬಗ್ಗೆ ಅವರಿಗೆ ಭಯ ಇತ್ತು. ಪೇಟೆಗೆ ಹೋದಾಗ ಅವರು, ಒಂದೆರಡು ಬಾರಿ, ಈ ಉದ್ಯೋಗದವರ ಮನೆಬಾಗಿಲಿನ ತನಕವೂ ಪಾದ ಬೆಳೆಸಿದ್ದುಂಟು. ಆದರೆ ಬಾಗಿಲು ತಟ್ಟಲು ಯಾಕೋ ಮನಸ್ಸು ಬರಲಿಲ್ಲ.

ಈ ನಡುವೆ, ಅಚಾನಕವಾಗಿ, ರಂಗಪ್ಪಯ್ಯ ಮಾಸ್ತ್ರಿಗೆ, ಸುಂದರಿಯ ಸಂಗದ ಅವಕಾಶ ತಾನಾಗಿ ಒದಗಿಬಂತು. ಸುಮಾರು ನಲುವತ್ತರ ಒಳಗಿನ ಸುಂದರಿ, ನಿಜಕ್ಕೂ ಸುಂದರಿಯೇ. ಈ ಪ್ರಾಯದಲ್ಲೂ ಅವಳನ್ನು ಒಮ್ಮೆ ನೋಡಿದರೆ ಮತ್ತೊಮ್ಮೆ ನೋಡಬೇಕೆನಿಸು ವಷ್ಟು ಅವಳ ಅಂಗಸೌಷ್ಠವ ಇನ್ನೂ ಇದೆ. ಕೆಲವರು ಹೇಳುವ ಪ್ರಕಾರ ಅವಳು ಕೇರಳದವಳೆಂದೂ, ಇನ್ನು ಕೆಲವರು ಹೇಳುವ ಪ್ರಕಾರ ಘಟ್ಟದ ಮೇಲಿನವಳೆಂದೂ ಊಹೆ. ಮೊದಲು ಅವರು ಕಾಣಸಿಕೊಂಡದ್ದು, ಸೀತಾ ಪುರದಲ್ಲಿರುವ 'ಕಾಮತ್ ರೈಸ್ ಮಿಲ್ಲಿ'ನವರ ಮನೆಯಲ್ಲಿ ಮಕ್ಕಳ ಲಾಲನೆ ಪಾಲನೆಗಾಗಿ ಬಂದ ವಳು ಎಂದು. ಅವಳು ಅನಾಥೆಯಾದ್ದ ರಿಂದಲೋ ಅಥವಾ ಕಾಮತರೇ ಅವಳಿಗೆ ಮರುಳಾದರೋ, ಅವಳಿಗೆ ಸುಮಾರು ಮೂವತ್ತರ ತನಕ ಮದುವೆ ಆಗಲಿಲ್ಲ. ಆ ಸುಮಾರಿಗೆ ನಡೆದ ಕಾರು ಅಪಘಾತದಲ್ಲಿ ಕಾಮತ್ ಕುಟುಂಬ ಇಡೀ ನಿರ್ನಾಮ ಆದಾಗ, ಅವಳನ್ನು ಕೆಳಗಿನ ಮನೆ ಶೀನಪ್ಪಯ್ಯ ತಮ್ಮ ಮನೆಗೆಲಸಕ್ಕೆ ನೇಮಿಸಿಕೊಂಡರು. ಅಲ್ಲಿಂದ ಅವರು ವಾಸುದೇವ ಕಾಮತರಲ್ಲಿಗೆ, ಕಾಮತರ ಲ್ಲಿಂದ ಧರ್ಮರಾಜ ಅಧಿಕಾರಿಯವರಲ್ಲಿಗೆ- ಹೀಗೆ ಮನೆ ಬದಲಾಯಿಸುತ್ತಾ ಹೋದಳು. ಈಗ ಅವಳಿಗೆ ಸೀತಾಪುರದ ರಥಬೀದಿಯಲ್ಲೇ 'ಆಶ್ರಯ' ಯೋಜನೆಯ ಮನೆ ಇದೆ. ಯಾರಲ್ಲೂ ಕೆಲಸಕ್ಕೆ ಹೋಗದೆ, ಅವಳೇ ಬೀಡಿ ಕಟ್ಟಿ ದಿನತೆಗೆಯುತ್ತಿದ್ದಾಳೆ.

ಈಚೆಗೆ ಅವಳು ಟೈಫಾಯ್ಡ್ ಕಾಯಿಲೆಯಲ್ಲಿ ಬಿದ್ದಾಗ, ರಂಗಪ್ಪಯ್ಯ ಮಾಸ್ಟ್ರು ಅವಳಿಗೆ ನೆರವಾದರು. ಡಾ. ಸಾಲ್ಡಾನ್ಹಾ ಅವರಿಗೂ ಅವಳ ಬಗ್ಗೆ ಕರುಣೆ. ದಿನಾ ಆಸ್ಪತ್ರೆಗೆ ಬಂದು ಔಷಧ ಕೊಂಡುಹೋಗುವಾಗ ಇದಿರಾದ ರಂಗಪ್ಪಯ್ಯ ಮಾಸ್ಟ್ರು, "ನೀನು ಬರುವುದು ಬೇಡ, ನಾನೇ ನಿನಗೆ ಬೇಕಾದ್ದನ್ನೆಲ್ಲ ತರುತ್ತೇನೆ" ಎಂದರು, ಮಾನವಸಹಜ ಅಂತಃಕರಣದಲ್ಲಿ. ಆಕೆಗೂ ಒಬ್ಬರ ಆಶ್ರಯ ಬೇಕಾಗಿತ್ತು. ಬೇಡ ಅನ್ನಲಿಲ್ಲ ಆಕೆ. ಹೀಗೆ ಬೆಳೆದ ಸ್ನೇಹ, ನಿಧಾನವಾಗಿ, ಒಂದು ರಾತ್ರೆ ಅವರಿಬ್ಬರೂ ಕೂಡುವ ತನಕ ಮುಂದುವರಿಯಿತು. ಜನರ ಕಣ್ಣು ಈ ಕಡೆ ಬಿದ್ದರೂ, ಇಬ್ಬರೂ, ಅದು ತಮಗೆ ಸಂಬಂಧಪಟ್ಟುದಲ್ಲ ಎನ್ನುವ ಹಾಗೆ ನಿರ್ಲಕ್ಷಿಸಿದರು.

ಬೆಳಗ್ಗೆ ಎದ್ದವರೇ ರಂಗಪ್ಪಯ್ಯ, ಸುಂದರಿಯ ಮನೆಬಾಗಿಲು ತಟ್ಟಿದರು. ಧರ್ನಪ್ಪ ಊರಿಗೆ ಬಂದ ವಿಷಯ ತಿಳಿಸಿ, ಡಾ. ಸಾಲ್ಡಾನ್ಹಾ ಅವರಿಗೆ ಆಗಬಹುದಾದ ಅಪಾಯವನ್ನು ತರ್ಕಿಸಿ, "ನಿನ್ನ ತಲೆಗೇನಾದರೂ ಹೊಳೆಯುವು ದಿದ್ದರೆ ಹೇಳು?" ಎಂದರು ಅಸಹಾಯಕರಾಗಿ.

ಸುಂದರಿ ಕೈಕೈ ಹಿಸುಕಿದಳು. "ಏನಾದರೂ ಮಾಡಬೇಕು!" ಎಂದು ತನ್ನೊಳಗೇ ಹೇಳಿ ಕೊಂಡಳು. ಏನು ಅನ್ನುವುದು ಆಕೆಗೂ ತಿಳಿಯದು.

ರಂಗಪ್ಪಯ್ಯ ಮಾಸ್ಟ್ರು, ಸುಂದರಿ ಮನೆ ಯಿಂದ, ನೇರವಾಗಿ ಪ್ರಾಥಮಿಕ ಆರೋಗ್ಯ ಕೇಂದ್ರದ ಕಡೆ ಹೆಜ್ಜೆಹಾಕಿದರು. ಆಸ್ಪತ್ರೆಯ ಕ್ಲಾಸ್.ಡಿ. ನೌಕರ ಲಿಂಗಪ್ಪ ಆಗತಾನೇ ಬಾಗಿಲು ತೆರೆದು, ಕಸಪೊರಕೆ ಹಿಡಿದು ನಿಂತಿದ್ದ. ಮಾಸ್ಟ್ರು, ಧರ್ನಪ್ಪ ಬಂದ ವಿಚಾರ ತಿಳಿಸಿ ಪರಿಸ್ಥಿತಿ ಕಳವಳಕಾರಕ ಇದೆ ಎಂದರು. ಲಿಂಗಪ್ಪನೂ

ಹೌಹಾರಿದ. ಡಾಕ್ಟ್ರಿಗೆ ಗಂಡಾಂತರ ಕಾದಿದೆ ಎಂದು ಅವನ ಕರುಳು ಚುರುಗುಟ್ಟಿತು.

ಮಾಸ್ಕು, "ಮುಂದೇನು ಅನ್ನುವುದು ನನಗೇನೂ ಹೊಳೆಯುತ್ತಿಲ್ಲ ಮಾರಾಯ, ಅವರಲ್ಲಿ ಹೇಳಿ, ಕೇಳೋಣ ಅಂತ ಹೊರಟಿದ್ದೇನೆ. ಒಟ್ಟಿನಲ್ಲಿ ಹುಚ್ಚು ಹಿಡಿದ ಹಾಗಾಗಿದೆ!" ಎಂದು ಮುಂದೆ ಮಾತಿಗೆ ಅವಕಾಶ ಕೊಡದೆ ರಸ್ತೆಗೆ ಇಳಿದರು.


ಲಿಂಗಪ್ಪ ಕಸಗುಡಿಸುತ್ತಿದ್ದರೂ ಅವನ ತಲೆ ತುಂಬ ಧರ್ನಪ್ಪನೇ. ಮೇಲ್ವರ್ಗದವರ ದೌರ್ಜನ್ಯವನ್ನು ಯಾರೂ ಪ್ರತಿಭಟಿಸುವವರಿಲ್ಲವಲ್ಲ, ಈ ಊರಲ್ಲಿ ಎಂದು ಕೊರಗಿದ. ದಲಿತ ಸಂಘರ್ಷ ಸಮಿತಿಯ ಸದಸ್ಯನಾದ ಅವನಿಗೆ ಶೋಷಣೆ ಅಂದರೆ ಏನು ಎಂದು ಗೊತ್ತು. ಸಾರ್ಕುಡೇಲ್ ತಮ್ಮವರೇ ಆಗಿದ್ದರೆ, ಅವರ ವಿರುದ್ಧದ ಅನ್ಯಾಯವನ್ನು ತಾವೆಲ್ಲ ಸೇರಿ ಪ್ರತಿಭಟಿಸಬಹುದಿತ್ತು. ಆದರೆ ಸಾರ್ಕುಡೇಲ್ ತಮ್ಮವರಲ್ಲ, ಮೇಲ್ವರ್ಗದವರು. ಮೇಲ್ವರ್ಗದವರೂ ಹೇಗೆ ಶೋಷಣೆಯ ಅನ್ಯಾಯಕ್ಕೆ ಒಳಗಾಗುತ್ತಿದ್ದಾರೆಂಬ ಸತ್ಯವನ್ನು ಆತ ಮೊದಲ ಬಾರಿ ನೋಡಿ, 'ಅಯ್ಯೋ' ಎಂದ.

ಅಷ್ಟರಲ್ಲಿ ಡಾ. ಸಾರ್ಕುಡೇಲ್ ಬಂದರು. ಯಾವಾಗಲೂ ಹಸನ್ಮುಖರಾಗಿರುತ್ತಿದ್ದ ಅವರ ಇಂದಿನ ಮುಖ ನೋಡಿ, ಆಳುಕಿನಿಂದಲೇ ನಮಸ್ಕರಿಸಿದ. ಪ್ರತಿ ನಮಸ್ಕಾರ ನೀಡಿ, ಮೌನವಾಗಿ ಕೋಣೆಯೊಳಗೆ ಹೊಕ್ಕರು. ಅವರ ಹಿಂದೆಯೇ ಹೊಕ್ಕ ಲಿಂಗಪ್ಪ, ಸಾರ್ಕುಡೇಲ್ ಹಾಜರಿ ವಹಿಯಲ್ಲಿ ಸಹಿ ಹಾಕುವ ತನಕ ನಿಂತು, ನಿಧಾನವಾಗಿ ಹೇಳಿದ. "ಮಾಸ್ಕು ಬಂದಿದ್ರು ಸರ್, ಎಲ್ಲ ವಿಚಾರ ಹೇಳಿದ್ರು!" ಸಾರ್ಕುಡೇಲ್ ಪ್ರತಿಕ್ರಿಯಿಸಲಿಲ್ಲ.

ಲಿಂಗಪ್ಪ ಮತ್ತೆ ಮತ್ತಗೆ ಹೇಳಿದ, "ಒಂದು ಪೊಲೀಸ್ ಕಂಪ್ಲೈಂಟ್ ಕೊಟ್ಟುಬಿಡಿ ಸರ್, ಎಸ್.ಪಿ. ಸಾಹೇಬರು ನಮ್ಮವರೇ, ನಾನೂ ಬೇಕಾದರೆ ಬರ್ತೇನೆ".

ಸಾರ್ಕುಡೇಲ್ ನಕ್ಕರು. "ನಾವಿಬ್ಬರು ಒಂದೇ ಕಛೇರಿಯವರಾಗಿರುವುದರಿಂದ ಆ ಕಂಪ್ಲೈಂಟ್‌ಗೆ ಬೆಲೆ ಬರುವುದಿಲ್ಲ ಲಿಂಗಪ್ಪ. ಸಾರ್ವಜನಿಕರು ಯಾರಾದರೂ ನಮ್ಮ ಹಿಂದೆ ಇದ್ದರೆ ಅಥವಾ ಬಂದರೆ, ಅವರು ಕಂಪ್ಲೈಂಟ್ ಸ್ವೀಕರಿಸಿದ್ದಕ್ಕೆ ಅರ್ಥ!"

"ರಂಗಪ್ಪಯ್ಯ ಮಾಸ್ಕು ಹೇಳ್ಬಹುದು ಸರ್. ಅವರನ್ನೇ ಕರ್ಕೊಂಡು ಹೋಗಿ!"



ಸಾರ್ಕುಡೇಲ್ ಅವರಿಗೆ ಖುಶಿಯಾಯಿತು. "ಹೌದು ಗುಡ್ ಐಡಿಯಾ. ಮಾಸ್ತ್ರ ಅಂಗಡಿಯಲ್ಲೇ ಧರ್ನಪ್ಪ, 'ಡಾಕ್ಟ್ರನ್ನು ನೋಡಿಕೊಳ್ತೇನ' ಅಂತ ಹೇಳಿದ ಅಂತ ಕಂಪ್ಲೈಂಟ್ ಕೊಟ್ರೆ ಆಗುತ್ತೆ. ಹಾಗೇ ಮಾಡೋಣ. ಹೋಗು ಅವರನ್ನು ಕರಿ" ಎಂದರು.

ಲಿಂಗಪ್ಪನೊಂದಿಗೆ ರಂಗಪ್ಪಯ್ಯ ಮಾಸ್ತ್ರೂ, ಸುಂದರಿಯೂ ಜೊತೆ ಜೊತೆಯಾಗಿ ಬಂದರು. ಸಾರ್ಕುಡೇಲ್, ಬರೆದಿಟ್ಟ ಪೊಲೀಸ್ ಕಂಪ್ಲೈಂಟ್‌ನ್ನು ಮಾಸ್ತ್ರ ಮುಂದೆ ಇರಿಸಿ ಅಂದರು, "ನೋಡಿ ಮಾಸ್ತ್ರೇ ಈಗ ನನ್ನ ಸುರಕ್ಷತೆ ನಿಮ್ಮ ಕೈಯಲ್ಲಿದೆ. ನೀವು ಸ್ಟೇಶನ್ನಿಗೆ ಬಂದರೆ ಒಳ್ಳೇದಿತ್ತು".

ರಂಗಪ್ಪಯ್ಯ ಮಾಸ್ತ್ರು ಬೆವರತೊಡಗಿದರು. ಹೋದರೆ ಅಪಾಯ, ಹೋಗದಿದ್ದರೆ ಡಾಕ್ಟ್ರಿಗೆ ಅಸಮಾಧಾನ. ಈ ಯೋಚನೆ ತನ್ನದೆಂದು ಹೇಳಿ ಬೀಗುತ್ತಿದ್ದ ಲಿಂಗಪ್ಪನ ಮೇಲೆ ಅವರಿಗೆ ಕೋಪ ಬಂತು. ಆದರೆ ಅದನ್ನು ತೀರಿಸಲು ಇದು ಸಮಯ ಅಲ್ಲ. ಮೌನವಾಗಿ ಒಂದು ನಿಮಿಷ ಕಳೆದ ಮೇಲೆ, "ಸಾರಿ ಡಾಕ್ಟರ್, ದಯವಿಟ್ಟು ಕ್ಷಮಿಸಬೇಕು" ಎಂದರು.

ಸಾರ್ಕುಡೇಲ್ ಏನೂ ಹೇಳಲಿಲ್ಲ.

ಮಾಸ್ತ್ರೇ ಮುಂದುವರಿಸಿದರು "ನಿಮಗೆ ಅನ್ಯಾಯ ಆಗುತ್ತದೆ ನಿಜ. ಅದು ಆಗಲೂ ಬಾರದು, ಆದರೆ ನಾನು ಈ ಊರಲ್ಲೇ ಶೇಷಾಯುಷ್ಯ ಕಳೆಯಬೇಕಲ್ಲ. ಅದಕ್ಕೇ ನನ್ನ ಹೆಸರು ಬೇಡ".

ಹೊರಗೆ ಇದನ್ನೆಲ್ಲ ಕೇಳಿಸಿಕೊಂಡು ನಿಂತಿದ್ದ ಸುಂದರಿ, ಒಳಗೆ ಬಂದು ಕೈಮುಗಿದು, ಸಾರ್ಕುಡೇಲ್‌ಗೆ ಹೇಳಿದಳು, "ಮಾಸ್ತ್ರು ಸಹಿ ಹಾಕದಿದ್ದರೆ ಬೇಡ ಡಾಕ್ಟ್ರೇ, ನಾನೇ ಧರ್ನಪ್ಪ ನಿಮ್ಮನ್ನು ಕೊಲ್ತೇನೆ ಅಂತ ಮಾಸ್ತ್ರ ಅಂಗಡೀಲಿ ಹೇಳಿದ್ದನ್ನು ಕೇಳಿದ ಅಂತ ಬರ್ಕೊಳ್ಳಿ."

ಸಾರ್ಕುಡೇಲ್, ಲಿಂಗಪ್ಪ, ರಂಗಪ್ಪಯ್ಯ ಎಲ್ಲರೂ ಒಂದು ಕ್ಷಣ ದಂಗಾದರು. ಸಾವರಿಸಿಕೊಂಡ ಮೇಲೆ ಸಾರ್ಕುಡೇಲ್ ಹೇಳಿದರು, "ಅದು ಹೇಗಾಗುತ್ತೆ ಅಮ್ಮ, ನೀನು ಕೇಳದ ವಿಚಾರವನ್ನು, ಕೇಳಿದ್ದಿ ಅಂತ ಹೇಳಿಕೊಂಡು ದೂರು ಕೊಡಲು ನಾನು ಸಿದ್ಧನಿಲ್ಲ!"

ಸುಂದರಿಯ ಬಾಯಿ ಕಟ್ಟಿತು. ಅವಳು ಸ್ವಗತದ ಹಾಗೆ ಹೇಳಿದಳು, "ಈ ಊರಲ್ಲಿ ಗಂಡಸರು ಇರುವುದು ಬರೇ ಹೆಂಗಸರ ಜೊತೆ ಮಲಗಲಿಕ್ಕೆ ಮಾತ್ರ!"

3

ಸೀತಾಪುರದಿಂದ ಒಬ್ಬರೇ ಮೋಟಾರ್ ಬೈಕಿನಲ್ಲಿ ಹೊರಟ ಡಾ. ಸಾರ್ಕುಡೇಲ್, ಪೊಲೀಸ್ ಸ್ಟೇಶನ್ನಿಗೆ ಹೋಗದೆ, ನೇರವಾಗಿ ತಾಲೂಕು ಆರೋಗ್ಯಾಧಿಕಾರಿಯವರ ಕಛೇರಿಯತ್ತ ದೌಡಾಯಿಸಿದರು. ತಾಲೂಕು ವೈದ್ಯಾಧಿಕಾರಿ, ಡಾ. ಸಾರ್ಕುಡೇಲ್ ಹೇಳಿದ ವಿಷಯಗಳನ್ನೆಲ್ಲ ಕೇಳಿ, "ನಮ್ಮ ತಾಲೂಕಿನಲ್ಲಿ ನೀವು ಇರುವಂತಹ ಇಪ್ಪತ್ತೆರಡು ಪಿ.ಎಚ್.ಸಿ.ಗಳಿವೆ. ಅವುಗಳ ಆಡಳಿತಾತ್ಮಕ ಹೊಣೆ ಬಿಟ್ಟು ನಿಮ್ಮ ಪರ್ಸನಲ್ ವಿಚಾರವಲ್ಲಿ ನಾನು ಹೇಗೆ ಕೈ ಹಾಕುವುದು?", ಎಂದರು ತುಸು ಅಸಮಾಧಾನದಲ್ಲಿ.

"ಇದು ನನ್ನ ಪರ್ಸನಲ್ ವಿಷಯ ಆದದ್ದು ಈಗ ಸರ್. ನಾನು ನನ್ನ ಡ್ಯೂಟಿ ಅಂತ ತಿಳಿದು ಶೋಭಾಳ ಕೇಸನ್ನು ತಾಲೂಕ್ ಹೆಡ್‌ಕ್ವಾರ್ಟರ್ಸ್ ಹಾಸ್ಪಿಟಲಿಗೆ ರೆಫರ್ ಮಾಡಿದೆ. ನನಗೆ ಆ ಕೇಸಿನಲ್ಲಿ ಪರ್ಸನಲ್ ಇಂಟರೆಸ್ಟ್ ಇರಲಿಲ್ಲ. ಈಗಲೂ ಇಲ್ಲ. ನಾನು ನನ್ನ ಡ್ಯೂಟಿ ಮಾಡಿದ್ದಕ್ಕೆ ಈಗ ಇನ್‌ಸೆಕ್ಯೂರಿಟಿ ಅಂದರೆ, ಸರಕಾರ ಇರುವುದು ಯಾರಿಗೆ ಸರ್?", ಸಾರ್ಕುಡೇಲ್ ಸ್ವಲ್ಪ ಏರು ಸ್ವರದಲ್ಲಿ ಹೇಳಿದರು.

ತಾಲೂಕು ವೈದ್ಯಾಧಿಕಾರಿ, "ಆಫ್ ಕೋರ್ಸ್, ನಿಮ್ಮ ವಾದ ಸರಿ ಇರಬಹುದು

ಡಾಕ್ಟ್ರೇ. ನಾನು ಏನೂ ಮಾಡುವ ಸ್ಥಿತಿಯಲ್ಲಿಲ್ಲ'' ಎಂದು, ಆ ಅಧ್ಯಾಯ ಅಲ್ಲಿಗೆ ಮುಗಿಯಿತು ಎಂಬಂತೆ ಫ್ಯೂನ್‌ಗೆ ಬೆಲ್ ಮಾಡಿದರು.

ಡಾ. ಸಾರ್ಕುಡೇಲ್ ನಿರಾಶರಾಗಿ ತಾಲೂಕು ಆರೋಗ್ಯಾಧಿಕಾರಿಯವರ ಕಛೇರಿಯಿಂದ ಹೊರಬರುವಾಗ, ತಾಕೂರು ಪಿ.ಎಚ್.ಸಿ.ಯ ಹೆಲ್ತ್ ಇನ್ಸ್‌ಪೆಕ್ಟರ್ ಸುವರ್ಣ ಇದಿರಾದರು, ''ಏನ್ಸಾರ್ ಇಲ್ಲಿ?'' ಎಂದು ದೇಶಾವರಿ ನಗುತ್ತಾ.

ಸಾರ್ಕುಡೇಲ್ ತನ್ನ 'ಕತೆ'ಯನ್ನು ಸಂಕ್ಷಿಪ್ತವಾಗಿ ಸುವರ್ಣರಿಗೆ ವಿವರಿಸಿದರು. ಸುವರ್ಣ ನಗುತ್ತಾ, ''ಸರ್, ನೀವು ನಮ್ಮ ಇಲಾಖೆಗೆ ಇನ್ನೂ ಹೊಸಬರು. ಐದು ನೂರು ರೂಪಾಯಿ ಕೊಡುತ್ತಿದ್ದರೆ, ನಮ್ಮ ಸಾಹೇಬರೇ ಸ್ಟೇಶನ್ನಿಗೆ ಫೋನು ಮಾಡ್ತಿದ್ರು. ಏನೂ ಇಲ್ಲ ಸರ್, ನೀವು ಹೆದರಬೇಕಾದ್ದಿಲ್ಲ. ನಮ್ಮ ಜಿಲ್ಲಾ ಆರೋಗ್ಯಾಧಿಕಾರಿಯವರನ್ನೋ ಅಥವಾ ಜಿಲ್ಲಾ ಪೊಲೀಸ್ ಅಧಿಕಾರಿಯವರನ್ನೋ ಖುದ್ದಾಗಿ ಭೇಟಿಯಾಗಿ ಲಿಖಿತ ದೂರು ನೀಡಿ. ಸುಮ್ಮನೇ ಇರ್ಬೇಡಿ. ಧರ್ನಪ್ಪ ಎಷ್ಟು ದೊಡ್ಡ ರೌಡಿ ಅಂತ ಇಡೀ ತಾಲೂಕಿಗೇ ಗೊತ್ತು!''

ಸಾರ್ಕುಡೇಲ್‌ಗೆ ಈಗ ನಿಜಕ್ಕೂ ಧರ್ನಪ್ಪ ಇದಿರಾದ ಹಾಗೆ ಅನಿಸಿತು. ಈಗ ಜಿಲ್ಲಾ ಕೇಂದ್ರಕ್ಕೆ ಹೋಗುವುದೋ ಬೇಡವೋ ಎಂದು ಎರಡು ನಿಮಿಷ ನಿಂತು, ಬೈಕ್ ಸ್ಟಾರ್ಟ್ ಮಾಡಿ, ಬಸ್‌ಸ್ಟ್ಯಾಂಡಿಗೆ ಬಂದು, ಬೈಕನ್ನು ಪರಿಚಯಸ್ಥರ ಅಂಗಡಿ ಪಕ್ಕದಲ್ಲಿ ಇಟ್ಟು, ಬಸ್ಸು ಹತ್ತಬೇಕು ಎನ್ನುವಾಗ ಕೆರ್ವ ಪಿ.ಎಚ್.ಸಿ.ಯ ವೈದ್ಯಾಧಿಕಾರಿ ಚೆಂಗಪ್ಪ, 'ಹಲೋ ಸರ್, ಸಾರ್ಕುಡೇಲ್' ಎಂದು ಪ್ರತ್ಯಕ್ಷರಾಗಿ ಕೂಗಿದರು.

ಸಾರ್ಕುಡೇಲ್ ಚೆಂಗಪ್ಪನವರಿಗೆ ಮತ್ತೆ ಎಲ್ಲವನ್ನೂ ವಿವರಿಸಬೇಕಾಯ್ತು. ''ಬನ್ನಿ ಒಂದು ಕಾಫಿ ಕುಡಿದು ಪ್ಲಾನ್ ಹಾಕೋಣ'', ಡಾ. ಚೆಂಗಪ್ಪ, ಡಾ. ಸಾರ್ಕುಡೇಲ್ ಅವರನ್ನು 'ಶಾಂತಿ ಸಾಗರ್'ಕ್ಕೆ ಕರೆದೊಯ್ದರು. ಕಾಫಿ ಕುಡಿಯುತ್ತಿದ್ದ ಹಾಗೆ ಡಾ. ಚೆಂಗಪ್ಪರಿಗೊಂದು ಐಡಿಯಾ ಹೊಳೆಯಿತು. ತಾಲೂಕು ಪಂಚಾಯತ್ ಅಧ್ಯಕ್ಷರಾದ ಮಾದಪ್ಪನನ್ನು ಕಂಡರೆ ಹೇಗೆ?

ಸಾರ್ಕುಡೇಲ್, ಡಾ. ಚೆಂಗಪ್ಪನವರೊಂದಿಗೆ ತಾಲೂಕು ಪಂಚಾಯತ್ ಅಧ್ಯಕ್ಷರ ಮನೆ ಕಡೆಗೆ ನಡೆದರು. ಮಾದಪ್ಪನವರಿಗೆ ಚೆಂಗಪ್ಪರ ಸಾಕಷ್ಟು ಪರಿಚಯ ಇದೆ. ಇಬ್ಬರೂ ಜಾತಿ ಬಾಂಧವರು. ಒಟ್ಟಿಗೆ ಅನೇಕ ಬಾರಿ ಉಂಡವರು, ಕುಡಿದವರು. ಡಾ. ಚೆಂಗಪ್ಪನವರನ್ನು ನೋಡಿದವರೇ ಹೊರಗೆ ಹೋಗಲು ಕಾರು ಹತ್ತುತ್ತಿದ್ದ ಮಾದಪ್ಪನವರು, ''ಏನು ಡಾಕ್ಟ್ರೇ ಬಹಳ ದಿನಗಳ ಮೇಲೆ ಬಂದ್ರಿ? ಏನಾಗಬೇಕಿತ್ತು ಹೇಳಿ?'' ಎಂದು ಕಾರಿನಿಂದ ಇಳಿದು ಮನೆಯೊಳಗೆ ಆಹ್ವಾನಿಸಿದರು.

ಡಾ. ಚೆಂಗಪ್ಪರು, ಡಾ. ಸಾರ್ಕುಡೇಲ್ ಅವರು ಇದಿರಿಸುತ್ತಿರುವ ಸಮಸ್ಯೆಯನ್ನೆಲ್ಲ ಹೇಳಿ, ''ಇವರ ಸಿನ್ನಿಯಾರಿಟಿಯೇ ಇವರಿಗೆ ಈಗ ಕುತ್ತಾಗಿದೆ ಸರ್. ನೀವೊಬ್ಬರು ಮಾತ್ರ ಇವರನ್ನು ಪಾರು ಮಾಡಲು ಶಕ್ತ ಅಂತ ಬಂದಿದ್ದೇವೆ'' ಎಂದರು.

ಮಾದಪ್ಪ, 'ಹೌದಾ?' ಎಂದು ಎಲ್ಲಾ ಕೇಳಿಸಿಕೊಂಡು, ಸ್ವಲ್ಪ ಅಸಮಾಧಾನದಿಂದ ನೋಡಿ, ''ಡಾಕ್ಟ್ರೇ, ನಿಮ್ಮಂತಹ ಹಳ್ಳಿಯಲ್ಲಿ ಸರ್ವೀಸ್ ಮಾಡುವ ಡಾಕ್ಟ್ರುಗಳೆಲ್ಲ ಈ ಸಿನ್ಸಿಯಾರಿಟಿ, ಹ್ಯೂಮೇನಿಟಿ ಅಂತ ಇಂಥ ಕೇಸುಗಳಲ್ಲಿ ಮೂಗು ತೂರಿಸಬಾರದು. ಶಾಂತಪ್ಪ ನನ್ನ ಹಳೇ ಸ್ನೇಹಿತರು. ನಮ್ಮದೇ ಪಕ್ಷದವರು. ಅವರು ಎರಡು ಸಲ ಪಂಚಾಯತ್ ಅಧ್ಯಕ್ಷರಾಗಿದ್ದವರು. ಸುರೇಶನಂಥ ಮಗ ಅವರಿಗೆ ಹುಟ್ಟಬಾರದಿತ್ತು ನಿಜ. ಹುಟ್ಟಿದ್ದಾನೆ. ಹುಟ್ಟಿದ ಮೇಲೆ ಬೇಡ ಅನ್ನೋಕಾಗುತ್ತದೆಯೇ? ಅಲ್ರೀ ನೀವು ಆ ಹುಡುಗಿಗೆ ಏನಾದರೂ ಚಿಕಿತ್ಸೆ ನೀಡಿ ಮನೆಗೆ ಕಳುಹಿಸೋದು ಬಿಟ್ಟು, ದುಡ್ಡು ಬೇರೆ ಕೊಟ್ಟು ಈ ಆಸ್ಪತ್ರೆಗೆ ಕಳುಹಿಸಿದ್ದು ಎಷ್ಟು ಸರಿ? ತಮಾಷೆ ಗೊತ್ತೆ? ಅತ್ಯಾಚಾರ ಆಗಿದೆ ಅಂತ

ಸರ್ಟಿಫಿಕೇಟ್ ಕೊಟ್ಟ ಆ ಡಾಕ್ಟ್ರೇ, ಈಗ, ಆಗಿಲ್ಲ ಅಂತ ಕೋರ್ಟಿನಲ್ಲಿ ಹೇಳಲಿಕ್ಕೆ ಒಪ್ಪಿದ್ದಾರಂತೆ. ಮತ್ತಲ್ಲಿ ಉಳಿಯಿತು ಹೇಳಿ ನಿಮ್ಮ ಪ್ರಿನ್ಸಿಪಲ್?...''

ಡಾ. ಚೆಂಗಪ್ಪ ಮಾದಪ್ಪನ ಇನ್ನೊಂದು ಮುಖ ನೋಡಿ ದಿಗ್ಭ್ರಾಂತರಾದವರಂತೆ, 'ಸರಿ ಸರ್' ಎಂದು ಮೇಲೆದ್ದರು. ಸಾರ್ಕುಡೇಲ್ ಅವರಿಗೆ, ''ನೀವು ಸದ್ಯ ಮೆಡಿಕಲ್ ಲೀವ್‌ನಲ್ಲಿ ಊರಿಗೆ ಹೊರಟುಹೋಗಿ. ಆಮೇಲೆ ಯಾರನ್ನಾದರೂ ಮಂತ್ರಿಗಳನ್ನು ಹಿಡಿದು ವರ್ಗ ಮಾಡಿಸೋಣ. ಧರ್ನಪ್ಪ ಹೆಚ್ಚೆಂದರೆ ಹದಿನೈದು ದಿನವೋ, ಒಂದು ತಿಂಗಳೋ ಸೀತಾಪುರದಲ್ಲಿ ಇದ್ದಾನು. ಆಮೇಲೆ ಇಲ್ಲೇ ಇರ್ಲಿಕ್ಕ ಅವನಿಗೆ ಏನು ಹುಚ್ಚೋ?'' ಎಂದು ಸಮಾಧಾನಗೊಳಿಸಿದರು.

ಡಾ. ಸಾರ್ಕುಡೇಲ್ ನಿರಾಶರಾಗಿ ಸೀತಾಪುರಕ್ಕೇ ಮರಳಿದರು.

4

ಧರ್ನಪ್ಪ ಊರಿಗೆ ಬಂದು ನಾಲ್ಕು ದಿನ ಆಗಿದೆ. ಶಾಂತಪ್ಪನೇ ಅವನನ್ನು ಕರೆಸಿದ್ದಾನೆ ಎಂಬ ಗುಸುಗುಸು ಪ್ರತಿ ಮನೆಯಲ್ಲೂ ಇದೆ. ''ಸುರೇಶ ನಿರಪರಾಧಿ. ಕೇಸು ಬಿಟ್ಟು ಹೋಗ್ತದೆ. ವೃಥಾ ಅವನ ಮೇಲೆ ನಡೆದ ಪಿತೂರಿ ಇದು!'' ಎಂಬುದನ್ನೇ ಸತ್ಯ ಮಾಡಲು, ಶಾಂತಪ್ಪನ ಪರಿವಾರದವರು, ಹೋಟೆಲ್, ಅಂಗಡಿ, ದೇವಸ್ಥಾನದ ಅಂಗಣ, ಶರಾಬು ಅಂಗಡಿ ಮೊದಲಾದ ಕಡೆಗಳಲ್ಲಿ ಗುತ್ತಿಗೆ ಪಡಕೊಂಡವರ ಹಾಗೆ ಕಾರ್ಯೋನ್ಮುಖರಾಗಿದ್ದಾರೆ.

ಧರ್ನಪ್ಪ ಗಂಭೀರವಾಗಿ ದಿನಕ್ಕೆ ಎರಡು ಬಾರಿ ಶಾಂತಪ್ಪನ ಮನೆಯಿಂದ ಸೀತಾಪುರದ ರಥಬೀದಿಗೆ ಬರುತ್ತಾನೆ. 'ದುರ್ಗಾಭವನ'ದಲ್ಲೂ ಟೀ ಕುಡಿಯುತ್ತಾನೆ, ಮಾಸ್ಟ್ರ ಅಂಗಡಿಯಿಂದ ಸಿಗರೇಟು, ಸಾಬೂನು ಅದು ಇದು ಕೊಂಡುಕೊಳ್ಳುತ್ತಾನೆ. ಎಸ್‌ಟಿಡಿ ಬೂತಿನಿಂದ ಕನಿಷ್ಠ ನಾಲ್ಕಾರು ಕಡೆಗಾದರೂ ಮಾತನಾಡುತ್ತಾನೆ. ಆದರೆ ಯಾರಲ್ಲೂ ಹೆಚ್ಚು ಮಾತಿಲ್ಲ. ನಮಸ್ಕರಿಸಿದವರಿಗೆ ನಮಸ್ಕಾರ. ನಮಸ್ಕರಿಸದವರನ್ನು ನೋಡಿದರೂ ನೋಡದವನ ಹಾಗೆ ಹೋಗುತ್ತಾನೆ.

ಧರ್ನಪ್ಪನ ಯೋಚನೆ ಏನು, ಯೋಜನೆ ಯಾವುದು, ಎಂದು ಇಡೀ ಸೀತಾಪುರಕ್ಕೇ ಕುತೂಹಲ. ಅವನೊಬ್ಬ ಬೆದರುಗೊಂಬೆ, ಈಗ ಅವನಿಂದ ಏನೂ ಆಗುವುದಿಲ್ಲ ಎನ್ನುವ ಮಂದಿ ಇದ್ದರೆ, ಆತ ಹೆಚ್ಚೆಂದರೆ ಡಾಕ್ಟ್ರ ಕಪಾಲಕ್ಕೆಬಾರಿಸಿ ಹೋಗಬಹುದು ಅಷ್ಟೇ ಎನ್ನುವವರೂ ಇದ್ದಾರೆ. ಮುಂಬಯಿಯಲ್ಲಿ ಹತ್ತು ಮಂದಿಯನ್ನು ಕೊಂದಿದ್ದಾನಂತೆ, ಹನ್ನೊಂದನೆಯವನಾಗಿ ಪಾಪ ಡಾಕ್ಟ್ರನ್ನು ಬಲಿ ತೆಗೆದುಕೊಳ್ಳಬಹುದು ಎಂದು ಲೆಕ್ಕಹಾಕಿ, ತಮ್ಮ ಮನೆಗೇ ಧರ್ನಪ್ಪ ಎಲ್ಲಿ ನುಗ್ಗುತ್ತಾನೋ ಎಂಬ ಹಾಗೆ ಭಯಪಟ್ಟವರೂ ಸೀತಾಪುರದಲ್ಲಿ ಇದ್ದಾರೆ.

ಡಾ. ಸಾರ್ಕುಡೇಲ್ ನಿರಾಳವಾಗಿ ಆಸ್ಪತ್ರೆಯಿಂದ ಕ್ವಾರ್ಟರ್ಸ್‌ಗೆ, ಕ್ವಾರ್ಟರ್ಸ್‌ನಿಂದ ಆಸ್ಪತ್ರೆಗೆ ಹೋಗುವುದು ಬಿಟ್ಟರೆ, ತಪ್ಪಿಯೂ ರಥಬೀದಿಯಲ್ಲಿ ಕಾಣಿಸಿಕೊಳ್ಳುವುದಿಲ್ಲ. ಅವರ ಯೋಚನೆ ಏನು, ಹೇಗೆ, ಯಾಕೆ, ನಿರ್ಲಿಪ್ತರ ಹಾಗೆ ಇದ್ದಾರೆ ಎನ್ನುವುದು ಅವರ ಅಭಿಮಾನಿಗಳಿಗೆಲ್ಲ ಚೋದ್ಯ. ರಂಗಪ್ಪಯ್ಯ ಮಾಸ್ಟ್ರು, ಈ ನಾಲ್ಕು ದಿನಗಳಲ್ಲಿ ಎರಡು ಸಲ ಆಸ್ಪತ್ರೆ ಮೆಟ್ಟಲು ಹತ್ತಿದ್ದಾರೆ. ಏನು ಮಾತನಾಡಬೇಕೆಂದು ತಿಳಿಯದೆ ಆಸ್ಪತ್ರೆಯ ವರಾಂಡದಲ್ಲಿ ನಿಂತು ಡಾಕ್ಟ್ರನ್ನು ಕಾಣದೆ ಮರಳಿದ್ದಾರೆ. ಪಿರೇರ, ಕೃಷ್ಣಯ್ಯ ಇಬ್ಬರೂ ಡಾ. ಸಾರ್ಕುಡೇಲ್ ಅವರ ಕ್ವಾರ್ಟರ್ಸ್‌ಗೆ ಹೋಗಿ, ಅದು ಇದು ಮಾತನಾಡಿಸಿ ಬಂದಿದ್ದಾರೆ.

ಡಾ. ಸಾರ್ಕುಡೇಲ್ ನಿರ್ಲಿಪ್ತರ ಹಾಗೆ ಇರುವುದು, ಊರು ಬಿಡದೇ ಇರುವುದು- ಧರ್ನಪ್ಪನಿಗೂ ಸವಾಲಾಗಿದೆ ಎಂಬ ಸುದ್ದಿ ಇಲ್ಲಿ

ಹಬ್ಬಿದೆ. ಡಾಕ್ಟರಲ್ಲಿ ಪಿಸ್ತೂಲ್ ಇರಬಹುದು, ಆತ್ಮ ರಕ್ಷಣೆಗೆ ಅವರು ಗುಂಡು ಹೊಡೆಯಬಹುದು ಎಂದೂ ಒಂದು ಮಾತು ಬಂದದ್ದಿದೆ. ಅವರ ಸಂಬಂಧಿಗಳು ಸರಕಾರದ ಉನ್ನತ ಹುದ್ದೆಯಲ್ಲಿದ್ದಾರೆಂದೂ, ಆ ಧೈರ್ಯದಿಂದಲೇ ಅವರು ನಿರ್ಲಿಪ್ತರಾಗಿರುವುದೆಂದೂ ತಾಲೂಕು ಕೇಂದ್ರದಿಂದ ಬಂದವರೊಬ್ಬರು ಹೇಳಿದರೆಂದು ರಂಗಪ್ಪಯ್ಯ ಮಾಸ್ಟ್ರು ಕೃಷ್ಣಯ್ಯನಿಗೆ ಹೇಳಿದ್ದು-ಅದು ಗಾಳಿವಾರ್ತೆಯಾಗಿ ಈಗ ಹಬ್ಬುತ್ತಿದೆ.

ಸುಂದರಿ, ಈ ನಾಲ್ಕೂ ದಿನಗಳಲ್ಲಿ, ಬೀಡಿ ಕಟ್ಟದೆ, ಸೀತಾಪುರದ ರಥಬೀದಿಯಲ್ಲಿ ಏನಿಲ್ಲವೆಂದರೂ ನಾಲ್ಕಾರು ಬಾರಿ ಮೇಲೆ ಕೆಳಗೆ ಹೋಗಿದ್ದಾಳೆ. ಯಾಕೆ ಎಂದು ಯಾರೂ ಪ್ರಶ್ನಿಸಲಿಲ್ಲ. ಅವಳೂ ಯಾರಿಗೂ ಏನೂ ಹೇಳಲಿಲ್ಲ.

ಆ ದಿನ ಸಂಜೆ ಸುಮಾರು ನಾಲ್ಕು ಗಂಟೆಯ ಸಮಯ. ಧರ್ಣಪ್ಪ, ರಂಗಪ್ಪಯ್ಯ ಮಾಸ್ಟ್ರ ಅಂಗಡಿಗೆ ಬಂದು, ಎರಡು ಪ್ಯಾಕೇಟ್ ಸಿಗರೇಟು ಕೊಂಡು, ಒಂದನ್ನು ಹೊತ್ತಿಸಿ, ಯಾರಲ್ಲೂ ಮಾತನಾಡದೆ ದೇವಸ್ಥಾನಕ್ಕೆ ಮುಖ ಮಾಡಿ ನಿಂತು ಆಸ್ವಾದಿಸಿದ. ಆಮೇಲೆ ಇನ್ನೊಂದನ್ನು ಹೊತ್ತಿಸಿದ. ಮೂರನೇಯದಕ್ಕೆ ಬೆಂಕಿ ಹಚ್ಚಿದ ಮೇಲೆ, ತಲೆತಗ್ಗಿಸಿ, ನಿಧಾನವಾಗಿ ಆಸ್ಪತ್ರೆಯ ಕಡೆ ಹೆಜ್ಜೆ ಹಾಕಿದ. ಮಾಸ್ಟ್ರು ಅವನ ಚಲನವಲನಗಳನ್ನು ಮೌನವಾಗಿ ಗಮನಿಸುತ್ತಿದ್ದರು. ಧರ್ಣಪ್ಪ ಆಸ್ಪತ್ರೆ ಕಡೆಗೆ ಮುಖ ಹಾಕಿದ ತತ್‌ಕ್ಷಣ, ಚಂಗನೆ



ಅಂಗಡಿಯಿಂದ ಜಿಗಿದು, ಪಕ್ಕದ 'ದುರ್ಗಾ ಭವನ' ಹೋಟೆಲಿಗೆ ನುಗ್ಗಿ, ''ಕೃಷ್ಣಯ್ಯನೋರೆ, ಧರ್ಮಪ್ಪ ಆಸ್ಪತ್ರೆಗೆ ಹೋದ'' ಎಂದರು ನಡುಗುವ ಸ್ವರದಲ್ಲಿ.

ಕೃಷ್ಣಯ್ಯನವರು, ''ಹೌದಾ?'' ಎಂದು ಗಲ್ಲೆಯಿಂದ ಎದ್ದು, ಇಡೀ ಲೋಕವನ್ನೇ ಮರೆತ ಹಾಗೆ ಹೋಟೆಲನ್ನು ಮರೆತು, ರಥಬೀದಿಗೆ ಇಳಿದರು. ಅವರ ಜೊತೆ ಹೋಟೆಲಿನಲ್ಲಿದ್ದ ಗಿರಾಕಿಗಳೂ ಅವಸರ ಅವಸರವಾಗಿ ಕಾಫಿ, ಟೀ ಹೀರಿ ಹಿಂಬಾಲಿಸಿದರು. ಕೃಷ್ಣಯ್ಯ, ರಂಗಪ್ಪಯ್ಯ ಮಾಸ್ಟ್ರು ಈ ಇಬ್ಬರ ಜೊತೆ ಮೆರವಣಿಗೆಯ ಹಾಗೆ ಹೊರಟ ಜನರನ್ನು ನೋಡಿ, ರಥಬೀದಿಯ ಎರಡೂ ಬದಿಯ ಅಂಗಡಿಗಳಲ್ಲಿದ್ದ ಜನ ಕುತೂಹಲದಿಂದ ರಸ್ತೆಗೆ ಧಾವಿಸಿದರು. ಹೀಗೆ ಕ್ಷಣಾರ್ಧದಲ್ಲಿ, ಒಂದು ಐವತ್ತು-ಅರುವತ್ತು ಜನರು, ಆತಂಕದಿಂದ, ಕುತೂಹಲದಿಂದ ಆಸ್ಪತ್ರೆ ಕಡೆ ಧಾವಿಸತೊಡಗಿದರು.

ಜನರ ಗುಂಪು ತನ್ನನ್ನು ದೂರದಿಂದ ಹಿಂಬಾಲಿಸುವುದನ್ನು ನೋಡಿ ಧರ್ಮಪ್ಪ ಉತ್ಸಾಹಗೊಂಡ. ಆಸ್ಪತ್ರೆಯ ಗೇಟಿನ ಹೊರಗೆ ನಿಂತು, ಸಿಗರೇಟು ಸುಟ್ಟು, ಹೊಗೆ ಬಿಟ್ಟು, ಕ್ಯಾಕರಿಸಿ ಉಗಿದು, ಹತ್ತಿರ ಹತ್ತಿರವಾಗುತ್ತಿರುವ ಜನರು ಇನ್ನೂ ಹತ್ತಿರವಾಗಲಿ ಎಂದು ಕಾದು, ಅವರು ಬಂದ ಮೇಲೆ ಅವರನ್ನೆಲ್ಲ ಧಿಕ್ಕರಿಸಿ ನೋಡಿ, ಆಸ್ಪತ್ರೆಯ ವರಾಂಡಕ್ಕೆ ಕಾಲಿರಿಸಿದ. ಲಿಂಗಪ್ಪ, ಸಿಸ್ಟರ್ ಲೀಲಾಬಾಯಿ, ಸೀನಿಯರ್ ಇನ್ಸ್‌ಪೆಕ್ಟರ್ ಸುಂದರ್, ಹೊರಗೆ ಏನೋ ಆಗುತ್ತಿದೆ ಎಂದು ಎದ್ದುಬಂದರೆ, ಧರ್ಮಪ್ಪ, ದೈತ್ಯಾಕಾರನಾಗಿ ವರಾಂಡದಲ್ಲಿ ನಿಂತಿದ್ದಾನೆ. ಜನ ಆಸ್ಪತ್ರೆಯ ಕಂಪೌಂಡಿನಾಚೆ ಒಳನುಗ್ಗಲು ಕಾಯುತ್ತಿದ್ದಾರೆ. ಧರ್ಮಪ್ಪ ಆಸ್ಪತ್ರೆಯ ಬಾಗಿಲಲ್ಲಿದ್ದ ಮೂವರನ್ನು ಉದ್ದೇಶಿಸಿ ಹೇಳುವ ಹಾಗೆ ಕೇಳಿದ, ''ಡಾಕ್ಟ್ರು ಇದ್ದಾನೇನೋ ಒಳಗೆ?''

ಯಾರೂ ತುಟಿಪಿಟ್ಟೆನ್ನಲಿಲ್ಲ. ಅಷ್ಟರಲ್ಲಿ ''ದಾರಿ ಬಿಡಿ, ದಾರಿ ಬಿಡಿ'' ಎಂದು ಜನಜಂಗುಳಿಯನ್ನು ಸೀಳಿ ಬಂದ ಸುಂದರಿ, ನೇರವಾಗಿ ಆಸ್ಪತ್ರೆಯ ವರಾಂಡಕ್ಕೆ ಬಂದು, ಆಸ್ಪತ್ರೆಯ ಬಾಗಿಲಲ್ಲಿ ಅಡ್ಡ ನಿಂತು, ''ಡಾಕ್ಟ್ರನ್ನು ಕೇಳಲಿಕ್ಕೆ ನೀನ್ಯಾರೋ?'' ಎಂದಳು ಕೆರಳಿ.

''ಥೂ, ಸೂಳೆ, ಎರಡು ಕಾಸಿಗೆ ಸೆರಗು ಹಾಸುವ ನೀನು, ಈಗ ನನ್ನನ್ನು ಕೇಳಲಿಕ್ಕೆ ಬರ್ತೀಯೇನೇ? ದಾರಿ ಬಿಡು, ಇಲ್ಲವಾದರೆ ಕೊಂದು ಬಿಡ್ತೇನೆ'' ಎಂದು ಘರ್ಜಿಸಿದ ಧರ್ಮಪ್ಪ.

ಸುಂದರಿಯೂ ಬಿಡಲಿಲ್ಲ. ''ನೀನೇನು ಮಾಡ್ತೀಯೋ ಮೂರ್ಖ. ಇದು ಮುಂಬಯಿ ಅಲ್ಲ. ಸೀತಾಪುರ' ಎಂದು, ತನ್ನ ಹಿಂದೆ ನಿಂತಿದ್ದ ಲೀಲಾಬಾಯಿ, ಸುಂದರ್ ಮತ್ತು ಲಿಂಗಪ್ಪರನ್ನು 'ಹಿಂದೆ ಹೋಗಿ' ಎಂದು, ''ನೀನು ಏನು ಮಾಡ್ಬೇಕೂಂತ ಬಂದಿದ್ದೀಯೋ ಅದನ್ನೆಲ್ಲ ಮಾಡು'' ಎಂದಳು ಹೆದರದೆ.

ಧರ್ಮಪ್ಪನಿಗೆ ನಾಚಿಕೆಯಾಯಿತು. ಯಃಕಶ್ಚಿತ್ ಹೆಂಗಸೊಬ್ಬಳು ಬಂದು ತನ್ನನ್ನು ಅವಮಾನಿಸುತ್ತಿದ್ದಾಳೆ. ಮುಂಬಯಿಯಲ್ಲೂ ಈ ಅನುಭವ ಆಗಿಲ್ಲ ಎಂದು ಸಿಟ್ಟುಗೊಂಡು, ''ಯಾವತ್ತಿನಿಂದ ಈ ಡಾಕ್ಟ್ರು ನಿನ್ನ ಮಿಂಡ ಬೊಗಳೇ?!'' ಎಂದು ಒಂದು ಹಜ್ಜೆ ಮುಂದಿಟ್ಟ.

ಸುಂದರಿ ಬಿಡಲಿಲ್ಲ, 'ಡಾಕ್ಟ್ರ ಯೋಗ್ಯತೆ ನಿನಗೇನು ಗೊತ್ತೋ ಮೂರ್ಖ, ಹೆಣ್ಣಿನ ಶೀಲದ ಬೆಲೆ ಅವರಿಗೆ ಗೊತ್ತಿದ್ದುದರಿಂದಲೇ ಅವರೀಗ ನಿನ್ನ ಕೋಪಕ್ಕೆ ತುತ್ತಾಗಿರೋದು. ನಿನ್ನಂತವರಿಗೆ ಹೆಣ್ಣು ಅಂದರೆ ಬರೇ ಒಂದು ಸಾಮಾನು ಅಷ್ಟೆ. ಹದಿನಾರಕ್ಕೆ ಕಾಮತರ ತೋಟದಲ್ಲಿ ನಾನು ಹುಲ್ಲು ಕೆತ್ತುವಾಗ ಬಂದು, 'ದಮ್ಮಯ್ಯ ಸುಂದರಿ, ಒಮ್ಮೆ ಬಿಡು!' ಎಂದು ನೀನು ಬೇಡಲಿಲ್ಲ ವೇನೋ! ನಾನಾಗ ಹಾಳಾಗಬೇಡ ಎಂದು ಬೈದು ಕಳುಹಿಸಿದ್ದು ಮರೆತುಹೋಯಿತೋ? ನಾನು ಸೂಳೆ ಅಲ್ಲ, ಸಿಕ್ಕಿದವರಿಗೆಲ್ಲ ನಾನು ಯಾವತ್ತೂ ಸೆರಗು ಹಾಸಲಿಲ್ಲ, ನಿನ್ನ ಶೀಲಕ್ಕಿಂತ ನನ್ನ ಶೀಲ ದೊಡ್ಡದು!'' ಎಂದಳು ರೌದ್ರಾವೇಶದಲ್ಲಿ.

ಧರ್ನಪ್ಪ ಸ್ತಿಮಿತ ಕಳಕೊಂಡ. ಬಾಗಿಲಿಗೆ ಅಡ್ಡವಾಗಿ ನಿಂತ ಸುಂದರಿಯನ್ನು ಎಡಕಾಲಿನಿಂದ ಒದ್ದ. ಆತನ ಬಲ ಕಾಲಿನ ಎರಡನೇ ಒದೆತಕ್ಕೆ ಆಯತಪ್ಪಿ ಬಿದ್ದ ಸುಂದರಿ, ತತ್‌ಕ್ಷಣ ಎದ್ದು ನಿಂತು, ''ಬೇವರ್ಸಿ ಸೂಳೆ ಮಗನೇ, ನಿನಗೆ ಮಾನ ಇದ್ದರೆ ಈ ಊರಲ್ಲಿ ನೀನು ನಿಲ್ಲಬಾರದು!'' ಎಂದು, ಎರಡೂ ಕೈಗಳಲ್ಲಿ ತಾನು ಉಟ್ಟಿದ್ದ ಸೀರೆಯನ್ನು ಎತ್ತಿ, ಒಳ ಲಂಗೋಟಿಯನ್ನು ಬಲದ ಕೈಯಿಂದ ಬಿಚ್ಚಿ ಎಳೆದು, ಅದನ್ನು ಮುದ್ದೆ ಮಾಡಿ, ಧರ್ನಪ್ಪ ಕಣ್ಣು ಬಾಯಿ ಬಿಡುವಷ್ಟರೊಳಗೆ ಅವನ ಮುಖಕ್ಕೆ ಚಾಬೂಕಿನಂತೆ ರಪರಪನೆ ಬಾರಿಸತೊಡಗಿದಳು.

ಸೇರಿದ್ದ ಜನ, ಈ ಅಪರೂಪದ 'ಮರ್ಯಾದೆ'ಯನ್ನು ನೋಡಿ 'ಹೋ' ಎಂದು ಆಘಾತದಿಂದ, ವಿಚಿತ್ರ ಮುಕ್ತಿಯಿಂದ ಕೂಗಿತು.

ಕೋಪ, ಧೈರ್ಯ ಎಲ್ಲ ಇಳಿದುಹೋದ ಧರ್ನಪ್ಪ ''ದಾರಿ ಬಿಡಿರೋ'' ಎಂದು ಅಸ್ವಸ್ತ್ರ ಯಿಂದ ದಡಬಡನೆ ಕೆಳಗಿಳಿದು, ಮೌನವಾಗಿ ಹೊರಟು ಹೋದ.


ರಾತ್ರಿ ಸುಂದರಿಯ ಮನೆಯ ಬಾಗಿಲು ತಟ್ಟಿದ ರಂಗಪ್ಪಯ್ಯ ಮಾಸ್ಟ್ರು ಆಕೆಗೆ ಹೇಳಿದರು, ''ಧರ್ನಪ್ಪ ನಾಳೆ ಬೆಳಗ್ಗಿನ ಬಸ್ಸಿಗೆ ಮುಂಬಯಿಗೆ ಹೋಗುವ ಟಿಕೇಟು ಮಾಡಿಸಿದ್ದಾನೆ. ಏನೋ ದೇವರ ದಯೆ, ನಿನ್ನನ್ನು ಆತ ಕೊಲ್ಲಲಿಲ್ಲ!''

ಸುಂದರಿ ನಿರ್ಲಿಪ್ತಳಾಗಿ, ''ನಾನು ಯಾವತ್ತೋ ಸತ್ತಿದ್ದೆ. ಈವತ್ತು ಜೀವ ಬಂತು ಅಷ್ಟೆ!'' ಎಂದಳು.



[illegible]





ಎಲ್ಬರ್ತ್ ಮೊರಾವಿಯಾ

ವಸ್ತುಗಳು

ಕನ್ನಡಕ್ಕೆ: ಆರ್.ವಿ. ಕಟ್ಟೀಮನಿ ತಡಕಲ್

ಆ ಓಣಿ ಅಷ್ಟು ಗಲೀಜಾಗಿರಲಿಲ್ಲ. ಹಾಗೆಂದು ಅಷ್ಟು ಸುಂದರವಾಗಿಯೂ ಇರಲಿಲ್ಲ. ಇಕ್ಕೆಲಗಳಲ್ಲಿ ಮಾಸಲು ಕಂದು ಬಣ್ಣದ ಮನೆಗಳಿದ್ದವು.

ಲಿವಿಯೋ ಮತ್ತು ಕೀರೋ ಆ ಓಣಿಯಲ್ಲಿ ಬಾಡಿಗೆಮನೆಯನ್ನು ಹುಡುಕ ತೊಡಗಿದ್ದರು. ಸದ್ಯದಲ್ಲೇ ಅವರಿಬ್ಬರೂ ಮದುವೆಯಾಗಲಿದ್ದುದರಿಂದ, ಜನಸಂದಣಿ ತುಸು ಕಮ್ಮಿ ಇರುವ ಬೀದಿಯಲ್ಲಿನ ಮನೆಗೋಸ್ಕರ ಹುಡುಕುತ್ತಿದ್ದರು.

ಆ ಬೀದಿ ಅವರ ನಿರೀಕ್ಷೆಗೆ ತಕ್ಕಂತೆ ಸಾಕಷ್ಟು ನಿರ್ಜನವಾಗಿತ್ತು. ಲಿವಿಯೋ ತುಂಬ ಉತ್ಸಾಹ, ಕುತೂಹಲಗಳಿಂದ ಭವನವೊಂದರ ಮುಂದೆ ನಿಂತುಬಿಟ್ಟಳು. ಅವಳು ಅನಗತ್ಯ ಕುತೂಹಲ ತೋರಿಸುತ್ತಿದ್ದಾಳೇನೋ ಎನ್ನುವ ಭಾವನೆಯಿಂದಾಗಿ,

''ಈ ಬೀದಿಯಲ್ಲಿ ಮನೆ ಬಾಡಿಗೆಗಿದೆ ಎನ್ನುವ ವಿಷಯ ನಿನಗೆ ಹೇಗೆ ಗೊತ್ತಾಯ್ತು?'' ಎಂದು ಪ್ರಶ್ನಿಸಿದ ಕೀರೋ.

''ನಾನು ಬೆಳಿಗ್ಗೆಯಿಂದ ಮಾಡಿದ ಕೆಲಸ ಇನ್ನೇನು ಮತ್ತೆ? ಬೀದಿ ಬೀದಿ ಅಲೆಯೋದೆ. ಈ ಬೀದಿ ನನಗೆ ತುಂಬ ಹಿಡಿಸಿದೆ. ಈ ಮನೆಯ ಮುಂದೆಯೇ 'ಮನೆ ಬಾಡಿಗೆಗಿದೆ' ಎನ್ನುವ ಬೋರ್ಡಿದೆ'', ಎಂದಳವಳು.

''ಮತ್ತೆ ಒಳಗಡೆ ಹೋಗಿ ಮನೆ ಹೇಗಿದೆ ಅಂತ ನೋಡಿದ್ಯೇನು?''

''ಊಹೂಂ, ಗೇಟು ಕಾಯುವವನನ್ನು ಕೇಳಿದೆ. ಎರಡರಿಂದ ನಾಲ್ಕು ಗಂಟೆಯೊಳಗೆ ಬಂದರೆ ಮನೆ ನೋಡಬಹುದು ಅಂತ ಹೇಳಿದ್ದ.''


ಆ ಮನೆಯ ಮುಂದೆ ನೇತುಹಾಕಿದ್ದ ನಾಮಫಲಕ ನೋಡಿದ ಕೀರೋ. ಅದರ ಮೇಲೆ 'ಇಪ್ಪೋಲಿಟೋ' ಎನ್ನುವ ಹೆಸರಿತ್ತು.

''ಇದೆಂಥ ಹೆಸರಪ್ಪಾ!'', ತನಗೆ ತಾನೇ ಹೇಳಿಕೊಳ್ಳುವವನಂತೆ ಉದ್ಗರಿಸಿದ ಕೀರೋ.

''ಎಂಥ ಹೆಸರಾದ್ರೆ ನಿನಗೇನಂತೆ? ಹೆಸರನ್ನು ಕಟ್ಟಿಕೊಂಡು ನಮಗಾಗಬೇಕಾದದ್ದೇನು?'' ಎಂದುಬಿಟ್ಟಳು ಲಿವಿಯೋ.

''ಈ ಮನೆಮಾಲೀಕ ಯಾರು? ಏನು ಮಾಡುತ್ತಾನೆ? ಡಾಕ್ಟರ, ವಕೀಲನೆ, ವ್ಯಾಪಾರಿಯೆ ಎನ್ನುವ ಬಗ್ಗೆ ಸ್ವಲ್ಪ ಕೂಡ ಸೂಚನೆ ಇಲ್ಲವಲ್ಲ'' ಎಂದು ತನ್ನ ಮನಸ್ಸಿನಲ್ಲಿನ ಸಂದೇಹವನ್ನು ವ್ಯಕ್ತಪಡಿಸಿದ ಕೀರೋ.

ಲಿವಿಯೋ ಅವನ ಮಾತುಗಳನ್ನು ಕಿವಿಗೆ ಹಾಕಿಕೊಂಡಂತೆ ತೋರಲಿಲ್ಲ. ನಿರ್ಲಕ್ಷ್ಯದಿಂದ ಆ ಹೆಸರನ್ನು, ಗಡಿಯಾರವನ್ನು ನೋಡುತ್ತಿದ್ದ



ಅವಳತ್ತ ತುಸು ಅಸೂಯೆಯಿಂದ ನೋಡಿದ ಕೀರೋ. ಅವಳ ತುಂಬು ಮುಖ,ದೊಡ್ಡ ದೊಡ್ಡ ಕಣ್ಣುಗಳು, ಕೆಂಪು ತುಟಿಗಳು ಅವನನ್ನು ವಿವಶ ಗೊಳಿಸುತ್ತಿದ್ದವು. ಅಷ್ಟು ಸುಂದರ ಮುಖದ ಒಡತಿಯಾಗಿರುವ ಅವಳನ್ನು ಎಲ್ಲಿಯಾದರೂ ಗುಟ್ಟಾಗಿ ಮುಚ್ಚಿಡಬೇಕೆನ್ನುವ ಹಂಬಲ ಅವನಲ್ಲಿ ಮೂಡಿತು.

''ಒಮ್ಮೆ ನಿನ್ನ ತುಟಿಗಳನ್ನು ತಾಕಲೆ?'' ಎಂದು ಕೇಳಿದ ಕೀರೋ.

''ಛೀ... ಈಗ ಬೇಡ.''

''ಪ್ಲೀಜ್... ಒಂದೇ ಒಂದ್ಸಲ...'' ಎನ್ನುತ್ತ ಅವಳನ್ನು ಬಳಿಗೆಳೆದುಕೊಂಡು ಅವಳ ತುಟಿಗಳಿಗೆ ತನ್ನ ತುಟಿಗಳನ್ನೊತ್ತಿದ.

ಅದೇ ಸಮಯದಲ್ಲಿ ಯುವಕನೊಬ್ಬ ಬಾಗಿಲು ತೆರೆದುಕೊಂಡು ಹೊರಬಂದ. ಗುಂಗುರು ಕೂದಲು, ಪುಟ್ಟ ಮೂಗು, ಅಮಲೇರಿದಂತಿಪ್ಪ

ಕಣ್ಣುಗಳು, ಒರಟು ತುಟಿಗಳ ಆ ಯುವಕನನ್ನು ನೋಡಿ ಲಿವಿಯೋಳ ಮುಖದಲ್ಲಿ ಗಾಬರಿ ಮೂಡಿದ್ದನ್ನು ಗಮನಿಸಿದ ಕೀರೋ.

ಹೊರಬಂದ ಆ ಯುವಕ ಹೊರಗೆ ನಿಂತಿದ್ದ ಅವರನ್ನುದ್ದೇಶಿಸಿ, "ಒಳಗೆ ಬನ್ನಿ" ಎಂದ.

ಅದೇಕೋ ಏನೋ, ಕೀರೋನ ಮನಸ್ಸಿನಲ್ಲಿ, ಇದ್ದಕ್ಕಿದ್ದಂತೆ, ಆ ಮನೆ ಅಪಾಯಕಾರಿ ಎನ್ನುವ ಅನಿಸಿಕೆ ಮೂಡಿತು. ಆದರೆ ಅದನ್ನು ಬಾಯಿಬಿಟ್ಟು ಹೇಳದೆ, "ನಾವಿಬ್ಬರೂ ಬೇಗದಲ್ಲೇ ಮದುವೆಯಾಗಲಿದ್ದೇವೆ. ಅದಕ್ಕೇ ಮನೆ ಹುಡುಕ್ತಿದೀವಿ" ಎಂದ.

ಆ ಯುವಕ ಸುಮ್ಮನೆ ತಲೆಯಾಡಿಸಿ, ಮತ್ತೊಮ್ಮೆ ಒಳಗೆ ಬರುವಂತೆ ಆಹ್ವಾನಿಸಿ, ತನ್ನೊಂದಿಗೆ ಅವರನ್ನೂ ಒಳಗೆ ಕರೆದುಕೊಂಡು ಹೋದ. ಕೋಣೆಯೊಳಗೆ ಪ್ರವೇಶಿಸುತ್ತ, ಲಿವಿಯಾಳ ಕಡೆಗೊಮ್ಮೆ ನೋಡಿದ ಕೀರೋ, ಅವಳ ಮೇಲೆ ತನಗೊಬ್ಬನಿಗೇ ಹಕ್ಕಿರುವುದು ಎನ್ನುವುದನ್ನು ತಿಳಿಯಪಡಿಸಲೆನ್ನುವಂತೆ, "ನನ್ನ ತುಟಿಗಳಿಗೆ ನಿನ್ನ ಲಿಪ್‌ಸ್ಟಿಕ್ ಏನಾದ್ರೂ ಅಂಟಿಕೊಂಡಿದ್ಯಾ?" ಎಂದು ನಿರ್ಲಜ್ಜನಂತೆ-ತಮ್ಮೊಂದಿಗೆ ಹೊಸಬನೊಬ್ಬನಿರುವನೆಂಬುದನ್ನೂ ಗಮನಿಸದವನಂತೆ-ಕೇಳಿದ.

ನಾಚಿಕೆಯಿಂದ ಕುಗ್ಗಿ ಹಿಡಿಯಷ್ಟಾದ ಲಿವಿಯೋ, "ಊಹೂಂ" ಎಂದು ಕ್ಷೀಣ ಧ್ವನಿಯಲ್ಲುಸುರಿದಳು.

"ಆದರೆ ನನಗೆ ಆ ರೀತಿ ಅನ್ನಿಸ್ತಿದೆಯಲ್ಲ!" ಎಂದ ಕೀರೋ, ಆ ಪ್ರಸ್ತಾಪವನ್ನು ಬಿಡಲಿಚ್ಛಿಸದವನಂತೆ.

"ನಾನಿವತ್ತು ಲಿಪ್‌ಸ್ಟಿಕ್ ಹಚ್ಚಿಕೊಂಡಿಲ್ಲ", ಲಿವಿಯೋ ಆ ಕೋಣೆಯ ತಾರಸಿಯನ್ನು ನೋಡುತ್ತ ಹೇಳಿದಳು.

ಕೀರೋ ಆ ಕೋಣೆಯಲ್ಲೆಲ್ಲ ಕಣ್ಣಾಡಿಸಿದ. ಆ ಕೋಣೆಯ ಗೋಡೆಗಳು ಶುಭ್ರವಾಗಿದ್ದವು. ಅಲ್ಲಿ ಒಂದೆಡೆ ಕುರ್ಚಿಗಳನ್ನು ಹಾಕಲಾಗಿತ್ತು. "ನೀವೇನು ಮಾಡ್ತೀರಿ?", ಕೀರೋ ಆ ಯುವಕನನ್ನುದ್ದೇಶಿಸಿ ಕೇಳಿದ.

"ನಾನು ಸಿನಿಮಾಗಳಿಗೆ ಕಥೆ ಬರೆಯೋ ಕೆಲಸ ಮಾಡ್ತಿದೀನಿ" ಎಂದನಾತ.

"ನೀವು ನಿರ್ದೇಶಕರೆ?", ಲಿವಿಯೋ ಕುತೂಹಲದಿಂದ ಕೇಳಿದಳು.

"ನಾನೇ ಸ್ವತಃ ಸಿನಿಮಾ ನಿರ್ಮಿಸಿದರೆ, ನಿರ್ದೇಶಕ ಕೂಡ ಆಗ್ತಿನಿ", ಆ ಯುವಕ ನಗುತ್ತ ನುಡಿದು, ಅವರಿಗೆ ಕೋಣೆಗಳನ್ನು ತೋರಿಸುತ್ತ, "ಬೆಡ್ ರೂಮು ಸಣ್ಣದು. ಆದರೆ ಡ್ರಾಯಿಂಗ್ ರೂಮು ದೊಡ್ಡದಿದೆ" ಎಂದ.

1907ರಲ್ಲಿ ರೋಮ್‌ನಲ್ಲಿ ಜನಿಸಿದ ಎಲ್‌ವರ್ತ್ ಮೊರಾವಿಯಾ ಮೂಲತಃ ಕಾದಂಬರಿಕಾರ. ಮನುಷ್ಯ ಸ್ವಭಾವದ ಚಿತ್ರಣಕ್ಕೆ ಅತಿ ಹೆಚ್ಚು ಒತ್ತು ನೀಡುವ ಭರದಲ್ಲಿ ಲೈಂಗಿಕತೆಯನ್ನೂ ಧಾರಾಳವಾಗಿ ತುಂಬುವ 'ರಿಯಲಿಸ್ಟ್'. ಅದು ಆತನ 'ದೌರ್ಬಲ್ಯ'ವೆಂಬುದು ವಿಮರ್ಶಕರ ಅಭಿಪ್ರಾಯ.

1929ರಲ್ಲಿ ಪ್ರಕಟವಾದ 'Gli indefferenti' ಮೊರಾವಿಯಾನ ಪ್ರಥಮ ಕಾದಂಬರಿ. ಮೊದಲ ಕಾದಂಬರಿಯೇ ಯುರೋಪಿನಾದ್ಯಂತ ಆತನಿಗೆ ಮನ್ನಣೆ ತಂದುಕೊಟ್ಟಿತು. ಮೊರಾವಿಯಾನ ಕೆಲವು ಪ್ರಮುಖ ಕೃತಿಗಳು: ಅಗಸ್ಟಿನೋ (1944), ಲಾ ರೊಮಾನಾ (1947); ಲ್ ಅಮೋರ್ ಕಾಂಜಿಯುಗಲ್ (1949), II ಕನ್‌ಫರ್ಮಿಸ್ಟಾ (1951). 1960ರ ದಶಕದಲ್ಲಿ ತಯಾರಾದ "Two women" ಸಿನಿಮಾ ಈತನ ಕಥೆಯನ್ನಾಧರಿಸಿದ್ದು. ಸೋಫಿಯಾ ಲಾರೆನ್ ನಾಯಕಿ.

ಈ ಕತೆಯನ್ನು ಕನ್ನಡಕ್ಕೆ ತಂದಿರುವ ಆರ್.ವಿ. ಕಟ್ಟೀಮನಿ, ಕನ್ನಡ ನಿಯತಕಾಲಿಕಗಳಲ್ಲಿ ವಿಸ್ತೃತ, ಉಪಯುಕ್ತ ವಿಷಯಗಳ ಬಗ್ಗೆ ನಿಯಮಿತವಾಗಿ ಬರೆಯುತ್ತಿರುವ ಬಹುಶ್ರುತ ಪತ್ರಕರ್ತರಾಗಿದ್ದಾರೆ.

ಕಿಟಕಿಯೊಳಗಿಂದ ಇಪೋಲಿಟೋನ ಕೋಣೆ ಕೂಡ ಸ್ಪಷ್ಟವಾಗಿ ಕಂಡುಬರುತ್ತಿತ್ತು. ಅಲ್ಲೊಂದು ದೊಡ್ಡ ಮಂಚವಿತ್ತು.

''ನಿಮ್ಮ ಹೆಂಡತಿಯೂ ಇದ್ದಾರೇನು?'', ಕೀರೋ ಕೇಳಿದ.

''ಇಲ್ಲಿಲ್ಲ. ನಾನು ಒಬ್ಬಂಟಿ. ದೊಡ್ಡ ಮಂಚದ ಮೇಲೆ ಮಲಗುವುದೆಂದರೆ ನನಗೆ ತುಂಬ ಇಷ್ಟ. ಆದರೆ ಆ ಬೆಡ್‌ರೂಂ ಅಷ್ಟು ದೊಡ್ಡದಲ್ಲ...''

ಲಿವಿಯೋ ತಟಕ್ಕನೆ ನಡುವೆ ಬಾಯಿ ಹಾಕಿ, ''ಪರವಾಗಿಲ್ಲ ನಮಗದು ಸಾಕು'' ಎಂದಳು.

ಆ ಮನೆಯ ಬಗ್ಗೆ ಲಿವಿಯೋ ಯಾಕಷ್ಟು ಹಾತೊರೆಯುತ್ತಿದ್ದಾಳೆ; ಇಪೋಲಿಟೋನ ಬಗ್ಗೆ ತನಗ್ಯಾಕೆ ಒಳ್ಳೆಯ ಅಭಿಪ್ರಾಯ ಉಂಟಾಗುತ್ತಿಲ್ಲ -ಈ ಎರಡು ವಿಷಯಗಳ ಬಗ್ಗೆ ಬಲು ಗಂಭೀರವಾಗಿ ಯೋಚಿಸುತ್ತಿದ್ದ ಕೀರೋ. ತನಗೂ ಲಿವಿಯೋಳಿಗೂ ನಡುವೆ ಇರುವ ಗಾಢ ಸಂಬಂಧವನ್ನು, ಇನ್ನೊಮ್ಮೆ ಬಹಿರಂಗವಾಗಿ ತಿಳಿಯಪಡಿಸಬೇಕೆನ್ನುವ ಬಯಕೆಯಿಂದ, ಅವಳನ್ನು ಇನ್ನಷ್ಟು ಹತ್ತಿರಕ್ಕೆಳೆದುಕೊಂಡು, ಅವಳ ಭುಜಕ್ಕೆ ತನ್ನ ಮುಖ ಆನಿಸಿ, ''ನಿನಗೆ ಈ ಮನೆ ಹಿಡಿಸ್ತಾ?'' ಎಂದು ಕೇಳಿದ.

''ಓ... ತುಂಬ ಹಿಡಿಸಿದೆ.''

ಅವಳ ಕತ್ತಿಗೆ ಮುತ್ತಿಟ್ಟ ಕೀರೋ. ಟೆಲಿಫೋನ್ ಮೊಳಗಿದ ಸದ್ದು ಕೇಳಿದ್ದರಿಂದ, ಅದನ್ನು ರಿಸೀವ್ ಮಾಡಲೆಂದು ಇಪೋಲಿಟೋ ಆ ಕಡೆ ಹೋದೊಡನೆಯೇ, ತುಸು ಮುನಿಸಿನಿಂದ, ''ಏನಿದು, ಅಪರಿಚಿತರ ಮುಂದೆಲ್ಲ ನಿನ್ನ ಶೃಂಗಾರ ಚೇಷ್ಟೆ ಯಾಕೆ?'' ಎಂದಳು ಲಿವಿಯೋ.

ಕೀರೋ ತುಟಿಪಿಟಕ್ಕೆನ್ನಲಿಲ್ಲ.

ಆ ಡ್ರಾಯಿಂಗ್‌ರೂಮಿನಲ್ಲಿ ದೊಡ್ಡ ದೊಡ್ಡ ಕಿಟಕಿಗಳಿದ್ದವು. ಗಚ್ಚಿನ ನೆಲ ಬೆಳ್ಳಗೆ ಹೊಳೆಯುತ್ತಿತ್ತು. ಕುರ್ಚಿಗಳ ಮೇಲೆ ಕಪ್ಪು-ಬಿಳುಪು ಪಟ್ಟೆಗಳ ಹೊದಿಕೆಗಳಿದ್ದವು. ಆ ಕೋಣೆಯ ಮೂಲೆಯೊಂದರಲ್ಲಿದ್ದ ಮೇಜಿನ ಮೇಲೆ ಟೈಪ್‌ರೈಟರ್ ಇತ್ತು.

''ಈ ಕೋಣೆ ತುಂಬ ಚೆನ್ನಾಗಿದೆ ಅಲ್ವಾ'' ಎಂದು ಕೀರೋ ಕೇಳಿದ್ದಕ್ಕೆ,

''ಹಾದು, ಬಹಳ ಸೊಗಸಾಗಿದೆ'' ಎಂದು ಉತ್ಸಾಹದಿಂದ ನುಡಿದಳು ಲಿವಿಯೋ.

ಅಷ್ಟರಲ್ಲಿ ಇಪೋಲಿಟೋ ಬಂದ. ತಾವು ಆ ಮನೆಯನ್ನು ಬಾಡಿಗೆಗೆ ಪಡೆಯುವುದಾಗಿ ಅವನಿಗೆ ಹೇಳಿದ ಕೀರೋ, ''ನಾನು ಮಧ್ಯಾಹ್ನದ ಊಟಕ್ಕೆ ಬರುವುದಿಲ್ಲವೆಂದು ಬೋರ್ಡಿಂಗ್ ಹೌಸಿಗೆ ಹೇಳಬೇಕು'' ಎಂದ.

''ಸರಿ, ಹಾಗೇ ಮಾಡಿ. ಹೊರಗೆ ವರಾಂಡದಲ್ಲಿ ಫೋನಿದೆ'' ಎಂದ ಇಪೋಲಿಟೋ.

ಫೋನ್ ಮಾಡಬೇಕಾದರೆ, ತಾನು ಲಿವಿಯೋ, ಇಪೋಲಿಟೋರನ್ನು ಆ ಕೋಣೆಯಲ್ಲಿ ಏಕಾಂತದಲ್ಲಿ ಬಿಟ್ಟುಹೋಗಬೇಕಾಗುತ್ತದಲ್ಲ ಎನ್ನುವ ಯೋಚನೆ ಕೀರೋನ ಮನಸ್ಸಿನಲ್ಲಿ ತುಸು ಗಾಬರಿಯನ್ನುಂಟುಮಾಡಿತು. ಆದರೆ ಫೋನಿನ ಬಳಿ ದೊಡ್ಡದೊಂದು ಕನ್ನಡಿಯಿತ್ತು. ಅದರೊಳಗೆ ಆ ಕೋಣೆ ಪ್ರತಿಬಿಂಬಿಸುತ್ತಿತ್ತು. ಅದರಲ್ಲಿಂದ ಲಿವಿಯೋಳ ಮೇಲೆ ಕಣ್ಣಿಡಬಹುದು ಎನ್ನುವ ಭಾವನೆ ಮೂಡಿ, ಫೋನಿನ ಬಳಿ ಹೋದ. ನಂಬರ್ ತಿರುಗಿಸುತ್ತ, ಆ ಕನ್ನಡಿಯತ್ತಲೇ ದೃಷ್ಟಿ ನೆಟ್ಟ.

ಲಿವಿಯೋ ತಾನು ನಿಂತಿದ್ದ ಜಾಗದಿಂದ ಕದಲಿ, ಇಪೋಲಿಟೋನನ್ನು ಸಮೀಪಿಸಿ, ಅವನ ಭುಜದ ಮೇಲೆ ಕೈ ಹಾಕಿ, ಕಣ್ಣಲ್ಲಿ ಕಣ್ಣಿಟ್ಟು ನೋಡತೊಡಗಿದಳು. ತಟಕ್ಕನೆ ಅವನ ತುಟಿಗಳಿಗೊಮ್ಮೆ ಮುತ್ತಿಟ್ಟವಳೇ, ಅಲ್ಲಿಂದ ದೂರ ಸರಿದಳು.

ಕನ್ನಡಿಯಲ್ಲಿ ಅದೆಲ್ಲವನ್ನೂ ಗಮನಿಸುತ್ತಿದ್ದ ಕೀರೋನಿಗೆ ಮನಸ್ಸು ಕಲಮಲವಾಯಿತು. ರಿಸೀವರನ್ನು ಕುಕ್ಕಿ, ಆ ಕೋಣೆಗೆ ಬಂದು,

''ಅಂ... ನನಗೊಂದಿಷ್ಟು ತುರ್ತು ಕೆಲಸ ಇದೆ, ಈಗ ಹೋಗಲೇಬೇಕು, ಈ ಮನೆ ಬಗ್ಗೆ

ಈಗ್ಲೇ ಏನೂ ಹೇಳೋಕ್ಕಾಗಲ್ಲ'' ಎನ್ನುತ್ತ ಲಿವಿಯೋಳನ್ನೆಳೆದುಕೊಂಡು, ಆ ಮನೆಯಿಂದ ಹೊರಬಿದ್ದ.

ತುಸು ದೂರ ಹೋದನಂತರ ಕಾರು ನಿಲ್ಲಿಸಿ, ಸಿಟ್ಟಿನಿಂದ ಕೇಳಿದ, ''ಏನು, ನನಗೆ ಮೋಸ ಮಾಡ್ತಿದೀಯೇನು? ಈ ದಗಲ್ಬಾಜಿತನ ಯಾವಾಗಿಂದ ಶುರು ಮಾಡ್ದೆ?''

''ನಾನು ನಿನಗೆ ಮೋಸ ಮಾಡ್ತಿದೀನಾ?''

''ಅಲ್ದೆ ಮತ್ತಿನ್ನೇನು? ನಿನ್ನ ಪ್ರಿಯತಮ, ಅದೇ ಆ ಇಪೋಲಿಟೋ, ಅವನ ಬಳಿ ಇರಬೇಕು ಅಂತಂದ್ಕೊಂಡಿದೀಯಲ್ವೆ? ಹಾಗಿದ್ಮೇಲೆ ನನ್ನೊಜತೆ ಪ್ರೀತಿಯ ನಾಟಕ ಯಾಕೆ?''

''ಯಾಕೆ ಹಾಗೆಲ್ಲ ಹುಚ್ಚುಚ್ಚಾಗಿ ಮಾತಾಡ್ತಿದೀಯ?'' ಲಿವಿಯೋಳ ಧ್ವನಿಯಲ್ಲಿ ಗಾಬರಿ ಇಣುಕಿತು.

''ಓಹೋ... ನೀನು ಅವನನ್ನ ತಬ್ಬಿ ಮುದ್ದಾಡಿದ್ದನ್ನು ನಾನು ನೋಡಿಲ್ಲ ಅಂತಂದ್ಕೊಂಡಿದೀಯಾ?'', ಕೀರೋ ವ್ಯಂಗ್ಯವಾಗಿ ಕೇಳಿದ.

''ಯಾರು, ಆ ಇಪೋಲಿಟೋನನ್ನಾ?''

''ಯಾಕೆ, ಅವನ ಪೂರ್ತಿ ಹೆಸರು ಹೇಳೋಕೇನು?''

''ಅವನ ಪೂರ್ತಿ ಹೆಸರೇನು ಅಂತ ನಂಗೇನು ಗೊತ್ತು?''

''ಅವನು ನನ್ನ ಪ್ರಿಯತಮ ಅಲ್ಲ.''

ಇಬ್ಬರೂ ಆ ರೀತಿ ವಾದ ಮಾಡುತ್ತ, ಮಾಡುತ್ತ ತಟಕ್ಕನೆ ಮಾತು ನಿಲ್ಲಿಸಿಬಿಟ್ಟರು. ಇದ್ದಕ್ಕಿದ್ದಂತೆ ಅಲ್ಲಿ ಭಯಂಕರ ನಿಶ್ಶಬ್ದ ಕವಿಯಿತು. ತುಸು ಹೊತ್ತಿನ ನಂತರ, ತನ್ನನ್ನು ತಾನು ಸಂಭಾಳಿಸಿಕೊಳ್ಳುತ್ತ ಅಂದಳು ಲಿವಿಯೋ,

''ನಾನು ಆ ಇಪೋಲಿಟೋನನ್ನು ಇವತ್ತೇ ಮೊದಲು ನೋಡಿದ್ದು. ಅವನು ಬಾಗಿಲು ತೆಗೆಯುವ ಸಮಯಕ್ಕೆ ಸರಿಯಾಗಿ, ನೀನು ನನ್ನ ತುಟಿಗಳಿಗೆ ಮುತ್ತಿಡುತ್ತಿದ್ದೆ. ಅದು ಅವನ ಕಣ್ಣಿಗೆ ಬಿತ್ತು. ಬಹುಶಃ ನನ್ನನ್ನ ವೇಶ್ಯೆ ಅಂತ ಅಂದ್ಕೊಂಡನೋ ಏನೋ, ನಾವು ಆ ಕೋಣೆಯೊಳಗೆ ಕಾಲಿಡುತ್ತಿದ್ದಂತೆಯೇ, ನಿನ್ನ ಕಣ್ಣಿಗೆ ಬೀಳದಂತೆ ನನ್ನ ಕೈಗೆ ಜಿಗುಟಿ, ಮೆಲ್ಲಗೆ ಅದುಮಿದ. ನಾನು ಆ ವಿಷಯ ನಿನಗೆ ಹೇಳಬೇಕೆಂದುಕೊಂಡೆ. ಆದರೆ ನೀನು ಪುನಃ ಅವನೆದುರಿಗೆ ನನಗೆ ಮುತ್ತಿಟ್ಟೆ. ನನಗೆ ಮೈಯೆಲ್ಲ ಉರಿದಂತಾಯ್ತು. ಅದಕ್ಕೆ, ನೀನು ಫೋನ್ ಮಾಡಲು ಹೋದಾಗ ನಾನು...''

ನಡುವೆ ಬಾಯಿ ಹಾಕಿದ ಕೀರೋ, ''ನೀನು ನನಗೆ ಅರ್ಥವೇ ಆಗುತ್ತಿಲ್ಲ ಲಿವಿಯೋ...''

''ಅದೆಲ್ಲ ಏನಿಲ್ಲ. ನೀನೇ ನನ್ನನ್ನ ತುಂಬ ಅವಮಾನ ಮಾಡ್ದೆ. ನೀನು ನನ್ನನ್ನು ಒಂದು ಪ್ರಾಣರಹಿತ ವಸ್ತು, ಒಂದು ಸಾಮಾನು ಎನ್ನುವಂತೆ ನಡೆಸಿಕೊಂಡೆ. ಆ ಸಮಯದಲ್ಲಿ ಇಪೋಲಿಟೋನ ಸ್ಥಾನದಲ್ಲಿ ಒಬ್ಬ ಅಂಗವಿಕಲ, ವೃದ್ಧ, ರಾಕ್ಷಸ... ಯಾರೇ ಇದ್ರೂ, ನಾನು ಅವನಿಗೆ ಅದೇ ರೀತಿ ಮುತ್ತಿಡುತ್ತಿದ್ದೆ ಗೊತ್ತಾ! ನಾನು ಆ ರೀತಿ ಮಾಡಿದ್ದು ನನಗೋಸ್ಕರ. ನಾನೊಂದು ಸಾಮಾನಲ್ಲ, ಪ್ರಾಣರಹಿತ ವಸ್ತುವಲ್ಲ ಅನ್ನೋದನ್ನ ನಿನಗೆ ತೋರಿಸಿ ಕೊಡಬೇಕು ಅಂತ್ಲೇ ಆ ರೀತಿ ಮಾಡ್ದೆ...''

ಕಾರು ಸ್ಟಾರ್ಟ್ ಮಾಡಿ, ಮೆಲ್ಲಗೆ ಮುಂದೋಡಿಸುತ್ತ, ಕ್ಷೀಣ ಧ್ವನಿಯಲ್ಲಿ ಕೇಳಿದ ಕೀರೋ,

''ಪುನಃ ನೀನ್ಯಾವತ್ತೂ ಆ ಇಪೋಲಿಟೋನನ್ನು ಭೇಟಿಯಾಗೋದಿಲ್ಲ ತಾನೆ?''

''ಊಹೂಂ.... ಅವನ್ಜೊತೆ ನಂಗೇನು ಕೆಲಸ? ನೀನು ನನ್ನನ್ನು ಒಂದು ವಸ್ತುವೆಂದು ಭಾವಿಸಿ ವರ್ತಿಸಿದಂತೆಯೇ, ನಾನೂ ಅವನನ್ನು ಒಂದು ವಸ್ತುವೆನ್ನುವಂತೆಯೇ ನಡೆಸಿಕೊಂಡೆ. ಅವನನ್ನು ಮತ್ತೆಂದೂ ಭೇಟಿಯಾಗೋದಿಲ್ಲ....'' ಲಿವಿಯೋ ಸ್ಥಿರಸ್ವರದಲ್ಲಿ ಒತ್ತಿ ನುಡಿದಳು.



ಸೂ. ರಮಾಕಾಂತ


ಅಧೀನ

''ತನಗೆ ನಿಜವಾಗಿ ಅನ್ನಿಸುವುದು ಏನು, ಯಾವ ಬಗ್ಗೆ ಹೇಗೆ ಬರೆದಲ್ಲಿ ತನ್ನ ಕೃತಿ ಸತ್ವವನ್ನು ಪಡೆದೀತು ಎಂಬ ಕಲೆಯ ಹುಡುಕಾಟ ರಮಾಕಾಂತರ ಕಥೆಗಳಲ್ಲಿ ತೋರುತ್ತದೆ''

- ಯು. ಆರ್. ಅನಂತಮೂರ್ತಿ ('ಅಸಹಜ' ಮುನ್ನುಡಿ)

''ನನಗೆ ಸಮಾಜವಾದಿ ಆಂದೋಲನದ ದೀಕ್ಷೆ ನೀಡಿದ ಗುರು - ಸೂ. ರಮಾಕಾಂತ.''

- ದೇವನೂರ ಮಹಾದೇವ ('ಅಭಿನವ' ಸಂಪಾದಕರು)



ತಮ್ಮ ಏಕಮೇವ ಕಥಾ ಸಂಗ್ರಹ 'ಅಸಹಜ' (1970; ಅಕ್ಷರ ಪ್ರಕಾಶನ, ಹೆಗ್ಗೋಡು) ದ ಮೂಲಕ ಕನ್ನಡದ ಉತ್ಕೃಷ್ಟ ಕತೆಗಾರರಲ್ಲೊಬ್ಬರೆಂದು ಹೆಸರಾದವರು, ಸೂ. ರಮಾಕಾಂತ. ಅಧ್ಯಾಪಕರಾಗಿ ತಮ್ಮ ವೃತ್ತಿಜೀವನ ಆರಂಭಿಸಿ, ನಂತರ ಪತ್ರಿಕೋದ್ಯಮಕ್ಕೆ ಹೊರಳಿದ್ದ ಅವರು, ಕಳೆದೆರಡು ದಶಕಗಳಿಂದ 'ಸಂಯುಕ್ತ ಕರ್ನಾಟಕ', 'ಕನ್ನಡಪ್ರಭ'ಗಳಲ್ಲಿ ಉಪಸಂಪಾದಕರಾಗಿದ್ದುಕೊಂಡು, ಕಳೆದೊಂದು ವರುಷದಿಂದ 'ವಿಜಯ ಕರ್ನಾಟಕ' ದೈನಿಕದ ಮುಖ್ಯ ಉಪಸಂಪಾದಕರಾಗಿದ್ದರು.

ಅರುವತ್ತು-ಎಪ್ಪತ್ತರ ದಶಕದ ಕನ್ನಡದ ಎಲ್ಲ ಸಾಹಿತ್ಯಿಕ, ರಾಜಕೀಯ, ಚಿಂತನ-ಚಳವಳಿಗಳ ಸುಪ್ತ ನಾಡಿಯಂತಿದ್ದ ರಮಾಕಾಂತ, ಎಷ್ಟೆಲ್ಲಾ ವಿದ್ಯಾರ್ಥಿಗಳಿಗೆ ಸ್ಫೂರ್ತಿಯಾಗಿದ್ದರು. ಪತ್ರಿಕೋದ್ಯಮದ ಅಕ್ಷರಗಳ ಟಂಕಸಾಲೆಯ ಸದ್ದಿಗೋ, ಮತ್ಯಾವ ಹೇಳಲಾಗದ ಕಾರಣಕ್ಕೋ ತಮ್ಮ ಒಂದೇ ಕಥಾ ಸಂಕಲನದ ನಂತರ ಅವರು ಮತ್ತೆ ಕತೆಗಳನ್ನು ಬರೆಯಲೇ ಇಲ್ಲ. ಕೇವಲ ಕೆಲವೇ ಖಾಸಗಿ ಗೆಳೆಯರನ್ನು ಹೊಂದಿದ್ದು, ಸದ್ದುಗದ್ದಲಗಳಿಂದ ದೂರವೇ ಇರುತ್ತಿದ್ದ ರಮಾಕಾಂತ, ''ಮುವತ್ತು ವರುಷಗಳ ನಂತರ... ವಿಶಿಷ್ಟವಾದ ಕತೆಯೊಂದನ್ನು ಮನಸ್ಸಿನಲ್ಲೇ ಬರೆಯುತ್ತಿದ್ದೇನೆ-'ಭಾವನಾ'ಕ್ಕಾಗಿ. ಅದು ಎಲ್ಲಾ ರೀತಿಯಲ್ಲೂ ವಿಭಿನ್ನವಾಗಿರುತ್ತೆ, ಅದನ್ನು ನಾನು ನಿನಗೆ dictate ಮಾಡ್ತೇನೆ. ನೀನೇ ಬರಕೋಬೇಕು'' -ಎಂದು ಮಗಳಿಗೆ ಹೇಳಿದ್ದ ಕೆಲವೇ ದಿನಗಳಲ್ಲಿ, ಯಾವ ಮುನ್ಸೂಚನೆ ಇಲ್ಲದೆ ಹಠಾತ್ತಾಗಿ ತೀರಿಕೊಂಡರು.

ಸೂ. ರಮಾಕಾಂತ, ಬರೆಯದೇ ಹೋದ ಆ ಕಥೆ, ಅವರ ವ್ಯಕ್ತಿತ್ವದಂತೆ, ಒಂದು ಶಕ್ತಿಯಾಗಿ, ಅವರ ಕುಟುಂಬವನ್ನು ಸಲಹಲಿ ಎಂದು ಹಾರೈಸುತ್ತ, ಸಾಂತ್ವನ ಕೋರುತ್ತೇವೆ. ಅವರ 'ಅಸಹಜ' ಸಂಕಲನದಿಂದ ಆಯ್ದು, ಪ್ರಕ್ಷುಬ್ಧ ಮನಸ್ಸೊಂದನ್ನು ಎದುರಿಟ್ಟುಕೊಂಡ 'ಅಧೀನ' ಕಥೆಯನ್ನು ಕೊಡುತ್ತಿದ್ದೇವೆ.

ಡಿಸೆಂಬರ್ ತಿಂಗಳಿನ ಕೊನೆಯ ದಿನಗಳು. ಕತ್ತಲಯಾದೊಡನೆ ಆಕಾಶದಲ್ಲಿ ಲಕ್ಷ ಲಕ್ಷ ತಾರೆಗಳು ಮಿನುಗುಡುತ್ತವೆ. ವಾಸು ತಾರೆಗಳನ್ನು ಗುರುತಿಸುವುದರಲ್ಲಿ ನುರಿತವನು. ವಾರದ ಹಿಂದೆ, ಹೆಂಡತಿ ಜಾನಕಿಗೆ, ಎಷ್ಟೋ ತಾರೆಗಳನ್ನು ಗುರುತಿಸುವುದನ್ನು ತಿಳಿಸಿಕೊಟ್ಟಿದ್ದ. ಜಾನಕಿ ಆಶ್ಚರ್ಯ, ಕುತೂಹಲಗಳಿಂದ ತಿಳಿದುಕೊಂಡಿದ್ದಳು.

ಈಗ ಬೆಳಗು, ತಾರೆಗಳು ಕಾಣಿಸುವುದಿಲ್ಲ. ಆಗಲೆ ಹಿಮ ಬೀಳತೊಡಗಿದ್ದು, ಇನ್ನೂ ಆರದೆ, ಚಳಿ ತಣ್ಣಗೆ ಮೈ ಕೊರೆಯುತ್ತಿದೆ. ವಾಸು ಕುರ್ಚಿಯಲ್ಲಿ ಕುಳಿತು, ಇತ್ತೀಚೆಗೆ ಕೆಲ ದಿನಗಳಿಂದ ಆಕಾಶದಲ್ಲಿ ಕಾಣಿಸಿಕೊಂಡ ಧೂಮಕೇತುವಿನ ಕುರಿತು ಯೋಚನೆ ಮಾಡುತ್ತಿದ್ದಾನೆ. ಧೂಮಕೇತುಗಳು ಹೇಗೆ ವಿಶ್ವಾಕಾಶದಲ್ಲಿ ಸುತ್ತುತ್ತಿರುತ್ತವೆ? ಯಾವ ಪ್ರಭಾವಕ್ಕೆ ಸಿಲುಕಿ ಹೀಗೆ ಅಲೆಯುತ್ತವೆ? ಒಂದು ಪಥ ಹುಡುಕಿಕೊಳ್ಳುವವರಗೆ ಇದು ಅಲೆಮಾರಿಯಾಗೇ ಬದುಕಬೇಕಲ್ಲ! ಎಂದೆಲ್ಲ ಚಿಂತನೆ ನಡೆಸಿದ್ದ.

ಅಲ್ಲಿಂದ ಮನಸ್ಸಿನೆಡೆಗೆ ಯೋಚನೆ ಜಿಗಿಯಿತು. ಮನಸ್ಸಿಗೊಂದು ಪಥವಿದೆಯೆ? ಅದೂ ಪ್ರಭಾವಕ್ಕೆ ಸಿಲುಕಿಬಿಡುತ್ತದೆಯೆ?

ಕೆಳಗೆ, ಕಾವಲಿಯ ಮೇಲೆ ದೋಸೆಹಿಟ್ಟು ಬಿಟ್ಟ ಸದ್ದಾಗುತ್ತಿದೆ. ವಾಸು ಸಿಗರೇಟು ಬಿಸಾಡಿ ನಿಂತುಕೊಂಡ. ಕೊಂಚ ವಿಸ್ಮಯವೂ ಆಯಿತು. ಜಾನಕಿ, ಬೆಳಗಾಗ ಎದ್ದು ಒಲೆಯ ಮುಂದಕ್ಕೆ ಹೋದಳೇ? ರಾತ್ರಿಯೆಲ್ಲ ಮೂಲೆಯಲ್ಲಿ ಸತ್ತಂತೆ ಬಿದ್ದಿದ್ದಳಲ್ಲ! ನಿನ್ನಿನದೇ ಸಂಗತಿಯ ನೆನಪು.

ಜಾನಕಿ ಹೆದರಿಕೆಯಿಂದ ವಾಸುವನ್ನ ನೋಡುತ್ತಿದ್ದಳು. ಹೆದರಿಕೆ, ಮುಗ್ಧತೆ ಅವಳ ಸಹಜ ಗುಣ. ಹೊಡೆಯಲು ಬಂದವರಿಗೆ ಬೆನ್ನು,



ಹಿಡಿಯಲು ಬಂದವರಿಗೆ ತಲೆಯೊಡ್ಡುವ ಸ್ವಭಾವ. ಅವಳ ನೀಳವಾದ ಕೂದಲುಗಳನ್ನ ಹಿಡಿಯಾಗಿ ಎಳೆದು, ವಾಸು ಬೆನ್ನಿಗೆ ಸಿಕ್ಕಾಬಟ್ಟೆ ಗುದ್ದಿದ್ದ. ಹೊಟ್ಟೆಗೆ ಜಾಡಿಸಿ ಒದ್ದುಬಿಟ್ಟಿದ್ದ. ಎಷ್ಟೋ ಹೊತ್ತು ಮೌನವಾಗಿ ಅಳುತ್ತಿದ್ದಳು.

ವಾಸುವಿಗೆ ಬೇಜಾರಾಯಿತು. ಚಳಿ ತುಂಬ ಆಗುತ್ತಿದೆಯೆನಿಸಿ ಕೈಗಳನ್ನ ಗಸಗಸ ತಿಕ್ಕಿಕೊಂಡ. ಆಗಲೆ ಹೊತ್ತೇರಿತ್ತು. ರಸ್ತೆಯಲ್ಲಿ ಹೋಗುವವರು, ಬರುವವರು, ಸೈಕಲ್ಲು, ಟಾಂಗ, ಕಾರು, ಲಾರಿ, ಶಬ್ದ ಎಲ್ಲ... ಮನೆ ಬದಲಾಯಿಸಬೇಕು ಎಂದುಕೊಂಡ. ಮನೆ ನೋಡಯ್ಯ ಒಂದು ಅಂತ ಸಾಬಿಗೆ ಹೇಳಿದ್ದ. ಸಾಬಿ ಭಾನುವಾರ ಬೆಳಗ್ಗೆ ಬರುತ್ತೇನೆಂದಿದ್ದ. ಬರುತ್ತಿದ್ದರೆ, ಕಾಣಬಹುದಲ್ಲ ಎಂದು ರಸ್ತೆಯ ಒಂದು ಕೊನೆಯಿಂದ ಮತ್ತೊಂದು ಕೊನೆಯ ಪೂರ ಕಣ್ಣು ಓಡಿಸಿದ. ಸಾಬಿ ಪತ್ತೆಯಾಗಲಿಲ್ಲ. ಎದುರುಗಡೆ ಫುಟ್‌ಪಾತಿನಲ್ಲಿ ಕುಳಿತು ಕಡಲೆಕಾಯಿ ಮಾರುವ ಮನುಷ್ಯ ಕಾಣಿಸಿದ. ಅವನಿಗೆ ಪೊದೆಪೊದೆಯಾಗಿ ಬೆಳೆದಿರುವ ಗಡ್ಡ.

ವಾಸುವಿಗೆ ಒಂದಿಷ್ಟೂ ಉತ್ಸಾಹ ಬರಲಿಲ್ಲ. ಸಾಬಿಯನ್ನು ಬಯ್ದುಕೊಳ್ಳುತ್ತಾ, ತಿರುಗಿ ಕುರ್ಚಿಯಲ್ಲಿ ಕುಳಿತು ಆಕಾಶ ನೋಡಿದ. ನೀಲಾಕಾಶದಲ್ಲಿ ಎರಡು ತುಂಡು ಬಿಳಿಯ ಮೋಡಗಳು. ರಸ್ತೆಗಿಂತ ವಾಸಿ ಎಂದುಕೊಂಡ. ಜಾನಕಿಗೂ ಮಾಲತಿಗೂ ವ್ಯತ್ಯಾಸವಿದೆಯೆಂದುಕೊಂಡ.

ಗಂಟೆ ಬಾರಿಸಿದ ಮೇಲೆ, ಮಾಲತಿ ಅವಸರವಸರವಾಗಿ ಬಂದು immiscible liquids ಅಂದರೆ ಏನು ಅಂತ ಕೇಳಿದಳು, ಶಂಕರ ಹೊರಟುಬಿಟ್ಟಿದ್ದ. ಚುಟುಕಾಗಿ, ಒಂದಕ್ಕೊಂದು ಹೊಂದಿಕೊಳ್ಳದೇ ಇರುವುದು ಎಂದು ಹೇಳಿ ಶಂಕರನನ್ನು ವಾಸು ಸೇರಿಕೊಂಡ. ಇಬ್ಬರೂ ನಡೆಯತೊಡಗಿದರು.

ಸ್ವಲ್ಪ ಸಮಯ ಕಳೆಯಿತು. ದ್ವೇಷವನ್ನು ಜಾನಕಿಯ ಮೇಲೆ ತರುತ್ತಾಳೋ, ಇಲ್ಲವೇ ತಾನೇ ಕಳಕ್ಕಳಿದು ಹೋಗಬೇಕೋ ವಾಸುವಿಗೆ ಹೊಳೆಯಲಿಲ್ಲ.

ಶಂಕರ ಮಾತಾಡದೇ ನಡೆಯುತ್ತಿದ್ದಾಗ ವಾಸುವಿಗೆ ಥಕ್ಕನೆ ಹೊಳೆಯಿತು, ''ಒಂದು ಐಡಿಯಾ'' ಅಂದ.

''ಒಂದು ಮನೆ ಬರೆಯೋದು... ಒಂದು ಗೇಟು ಬರೆದು, 'ನಾಯಿಗಳಿವೆ ಎಚ್ಚರಿಕೆ' ಅಂತ ಒಂದು ಬೋರ್ಡು... ಮನೆಯೊಳಗಡೆ ಯಜಮಾನನ್ನ ಬರೆಯೋದು... ಹೇಗಿರುತ್ತೆ?''

ಶಂಕರ ಸ್ವಲ್ಪವೂ ಉತ್ಸಾಹಿತನಾಗದೆ, ''ಬಹಳ ಚಿಲ್ರೆ ಕಾರ್ಟೂನ್ ಕಣಯ್ಯ, ನಿನ್ನಂಥವರು ಬರೆಯಬೇಕಾಗಿಲ್ಲ ಅದನ್ನ'' ಎಂದ. ಅಲ್ಲಿಗೇ ಸುಮ್ಮನಾಗದೇ, All about a dogನ ವಿಷಯ ತೆಗೆದ. ವಾಸುವಿಗೆ ಸಿಟ್ಟು, ಬೇಜಾರು.

ಶಂಕರನಿಗೆ ನನ್ನ ಬಗ್ಗೆ ಗೌರವವಿಲ್ಲ. ಸೈನ್ಸ್ ಲೆಕ್ಚರರ್ ಆದ ನಾನು ಹಾಡಿದ್ದನ್ನೇ ಹಾಡುವ ಕಿಸುಬಾಯಿದಾಸ. ತಾನು, ಪ್ರತಿವರ್ಷ ಹೊಸ ಹೊಸ ಪಾಠ ಹೇಳುವ ಇಂಗ್ಲಿಷ್ ಲೆಕ್ಚರರ್. ನಾನು ಓದಿದೀನಯ್ಯಾ ನೀನು ಪಾಠ ಹೇಳುವ ಟೆಕ್ಸ್ಟ್‌ಗಳನ್ನು ಎಂದರೆ, ನೀನು ಓದ್ದೀಯಾ ಸರಿ, ಆದರೆ ನನ್ನ ಹಾಗೆ ಕ್ರಿಟಿಕಲ್ ವ್ಯೂನಿಂದ ಓದುಕ್ಕೆ ನಿನ್ನ ಹಣೇಲೆ ಬರೆದಿಲ್ಲ ಅನ್ನುತ್ತಾನೆ. ಆ ದಿನ ಫ್ಯೂಸ್ ಹೋಗಿ ಲೈಟು ಆರಿದ್ದಕ್ಕೆ ಕಕ್ಕಾಬಿಕ್ಕಿಯಾಗಿಬಿಟ್ಟ. ಫ್ಯೂಸ್ ವೈರ್ ಹಾಕಿ ಜೀವ ಬರಿಸಬೇಕಾಯಿತು. ಜಂಬ ಮಾತ್ರ ಬೇಕಾದಷ್ಟಿದೆ.

''ಏನಯ್ಯಾ ಅಷ್ಟೊಂದು ಯೋಚನೆ? ಮಾತಾಡೋದೇ ಇಲ್ಲ.''

''ಏನಿಲ್ಲಪ್ಪ... ಸ್ವಲ್ಪ ಬೇಗ ಹೋಗಬೇಕು. ಈ ಷಾರ್ಟ್‌ಕಟ್ ಹಿಡೀತೀನಿ.''

ಶಂಕರನಿಗೆ ಗುಟ್ಟು ಗೊತ್ತು. ''ನನಗೆ ಗೊತ್ತಯ್ಯಾ. ನಿನಗೆ ಸಿಟ್ಟಾದಾಗ ಷಾರ್ಟ್‌ಕಟ್ ಹಿಡಿತೀಯಾ ಅಂತ'' ಎಂದ. ಷಾರ್ಟ್‌ಕಟ್ ದಾರಿಯಲ್ಲಿ ಹೋಗುವಾಗ, ಬ್ಲಡ್‌ಹೌಂಡ್, ಡಿಂಗೊ, ಲೈಕಾ ನಾಯಿಗಳೆಲ್ಲ ನೆನಪಾದುವು.

ಹೆಡ್ ಆಫ್ ದಿ ಡಿಪಾರ್ಟಮೆಂಟ್ ರಂಗಸ್ವಾಮಿಯವರು, 'ಪರ್‍ವಾಗಿಲ್ಲಯ್ಯ ನೀನು, ಕಾರ್ಟೂನು ಚೆನ್ನಾಗಿ ಬರಿತೀಯೆ' ಅಂದದ್ದು ನೆನಪಾಗಿ ವಾಸು ಗೆಲುವಾದ. ನಾಯಿಯ ಕಾರ್ಟೂನ್ ಪ್ರಯತ್ನಿಸಬೇಕು ಎಂದುಕೊಂಡು ಮನೆ ತಲುಪಿದರೆ, ನಗುಮೊಗದ ಜಾನಕಿ; ಏನನ್ನೋ ತಿಳಿಸಬೇಕೆಂದಿರುವ ಅವಳ ಹೊಳೆಯುವ ಕಣ್ಣುಗಳು.

ಯಾಕೋ ಈ ಭಾನುವಾರ ವಾತಾವರಣ ಸರಿಯಿಲ್ಲ ಎನಿಸಿತು ವಾಸುವಿಗೆ. ಜಾನಕಿ ಒಂದಾದ ಮೇಲೊಂದು ದೋಸೆ ಎರೆಯುತ್ತಿದ್ದಾಳೆ ವಿನಾ, ಮಹಡಿ ಹತ್ತಿ ಬರಲೇ ಇಲ್ಲ. ಖಚಿತವಾಗಿ ಬಂದೇ ಬರುತ್ತಾನೆಂದು ನಿರೀಕ್ಷಿಸಿದ ಸಾಬಿಯೂ ಬಂದಿಲ್ಲ. ಎದ್ದು ಕಿಟಕಿಯ ಬಳಿ ಹೋದ. ಸಾಬಿಯ ಸುಳಿವೇ ಇಲ್ಲ. ಕಡಲೆಕಾಯಿ ಮಾರುವವ ಕುಳಿತೇ ಇದ್ದ. ನಿನ್ನೆ ಇವನ ಮನೆಯಲ್ಲಿ ಏನೋ ಗಲಾಟೆಯಾದಂತ್ತಿತ್ತಲ್ಲ ಎಂದುಕೊಂಡ. ಸಾಬಿಗೆ ಮೂವರು ಹೆಂಡಿರು. ಹೇಗೆ ನಿಭಾಯಿಸುತ್ತಾನೋ ದೇವರೇ ಬಲ್ಲ. ಮದುವೆಯಾಗಿ ವರ್ಷ ಕೂಡ ಇಲ್ಲ, ರಾತ್ರಿ ಜಾನಕಿಯನ್ನ ಚೆನ್ನಾಗಿ ಹೊಡೆದಿಟ್ಟೆ. ಈ ದೃಷ್ಟಿಯಲ್ಲಿ ಸಾಬಿ ಹೀರೋ. ನಿಜವಾಗಿ ಹೇಗೆ ಮೂರು ಹೆಂಗಸರನ್ನ ತಡೆಯುತ್ತಾನೆ ಈ ಸಾಬಿ!

ತುಂಬ ಸೆಕೆಯಾಗುತ್ತಿತ್ತು, ಬೊಗಸೆ ಬೊಗಸೆಯಾಗಿ ತಣ್ಣೀರೆರಚಿ ಮುಖ ತೊಳೆದುಕೊಂಡರೆ ಹಿತ, ಆಮೇಲೆ ಕಾರ್ಟೂನಿನ ಬಗೆಗೆ ನೋಡುವ ಎಂದು ಬಚ್ಚಲಮನೆಗೆ ನುಗ್ಗಿದ. ಜಾನಕಿ ಹಿಂದೆಯೆ ಬಂದಳು. ಏನೋ ಹೇಳುತ್ತಾಳೆಂದು ಅನಿಸಿತು.

''ಇವತ್ತು ಕಾಗದ ಬಂದಿತ್ತು'' ಅಂದಳು.

''ಎಲ್ಲಿಂದ?''

''ಮಾವನಿಂದ. ಈ ದಿನ ಬರುತ್ತೇವಂತ ಬರೆದಿದ್ದಾರೆ.''

''ಓ!''

ಟವಲ್ಲು ಕೊಟ್ಟಳು, ಕಾಫಿ ಕೊಟ್ಟಳು, ಕುಡಿಯುತ್ತಿರುವಾಗ,

''ಬಂದಿದಾರೋ ಇಲ್ಲವೋ ತಿಳಿದು ಬರ್‍ತೀರಾ?'' ಎಂದಳು.

ವಾಸುವಿಗೆ ತುಂಬ ನಿರಾಶೆಯಾಯಿತು. ಹೆಂಡತಿಯ ಸೋದರಮಾವ ಬಂದಿದಾರೋ ಇಲ್ಲವೋ ತಿಳಿಯಬೇಕಾದರೆ, ಒಂಟಿಕೊಪ್ಪಲಿಗೆ ಕತ್ತೆಯಂತೆ ಸೈಕಲ್ಲು ತುಳಿಯಬೇಕು. ಹಾಗೂ ಪ್ರಯತ್ನ ನಡೆಸಿ, ''ಬಂದಿದ್ದರೆ ಹೇಗೂ ನಾಳೆ ಭಾನುವಾರ, ಬಂದೇಬರುತ್ತಾರೆ... ಅಲ್ಲವಾ?'' ಎಂದು ನಕ್ಕ, ಪೆಚ್ಚಾದ, ''ಆಗ್ಲಿ ಮಹರಾಯ್ತಿ ಹೋಗಿಬರುತ್ತೇನೆ. ನೀ ಮಾತ್ರ ಸುಮ್ನಿರು'' ಎಂದ. ಎಂಥವಳಪ್ಪ ಈ ಜಾನಕಿ ಎನಿಸಿತು.

''ಆ ನಾಯಿಮುಖದವಳು ಬಂದಿರುತ್ತಾಳೆಂದು ಕಾಣುತ್ತೆ?''

''ಸಾಕು ಸುಮ್ನಿರಿ, ನೀವು ಮಹಾ ಚಿತ್ರಗಾರರು ಅಂತ ಜಂಬದ ಮಾತಾಡಬೇಡಿ.''

''ನಿನ್ನ ಮಾವನ ಮಗಳನ್ನ ನೋಡಿದಾಗ ನನಗೆ ಅನಿಸಿದ್ದೇ ಹಾಗೆ ಕಣೆ, ನಾನು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ''.... ಜಾನಕಿ ಸುಮ್ಮನಿದ್ದಳು, ಕಣ್ಣುಗಳಲ್ಲಿ ನೀರಾಡುತ್ತಿರುವಂತೆ ತೋರಿತು.

''ಕಾರ್ಟೂನಿಸ್ಟ್ ವ್ಯೂ ಕಣೆ ಇದೂ... ಎಂಥೆಂಥ ವಿಚಿತ್ರವಾಗಿರುತ್ತೆ ಗೊತ್ತಾ? ಒಬ್ಬಳು ಗುಂಡುಗುಂಡಗೆ ಇದ್ದಳಂತೆ... ಆರ್.ಕೆ. ಲಕ್ಷ್ಮಣ್‌ಗೆ ತಾಜ್‌ಮಹಲಿನಂತೆ ಕಾಣಿಸಿದಳಂತೆ... ಇನ್ನೊಬ್ಬ... ಕೆದರಿದ, ಬಿಳಿಗೂದಲಿನ ತಲೆಯ ಸಣಕಲಿ... ಆರು ತಿಂಗಳು ಉಪಯೋಗಿಸಿದ ಬ್ರಷ್ಷಿನಂತೆ ಕಾಣಿಸಿದನಂತೆ.''

ಜಾನಕಿ ಅಳಹತ್ತಿದಳು.

ವಾಸು ತೀರ ನಿರಾಶನಾಗಿಬಿಟ್ಟ. ಛೆ... ಎಂಥ ಹೆಂಡತಿ ಇವಳು. ನನ್ನ ಅಭಿಪ್ರಾಯಗಳನ್ನೇ ತಿಳಿದುಕೊಳ್ಳಲಾರದಷ್ಟು ಪೆಚ್ಚು ಹುಡುಗಿ. ಇವಳನ್ನ ಮೆಚ್ಚಿ ಮದುವೆಯಾಗಿ ನಾನು ತಪ್ಪು ಮಾಡಿದೆನೆ?

ಜಾನಕಿ ಯಾರೂ ಮೆಚ್ಚಿಕೊಳ್ಳುವಂಥ ರೂಪವತಿ.

''ನಾನು ಒಂಟಿಕೊಪ್ಪಲಿಗೆ ಹೋಗಿ

ಬರುತ್ತೇನೆ... ಆಯಿತಲ್ಲ? ಇನ್ನು ಸುಮ್ಮನಿರು.''

ಹೊರಟ. ಅಲ್ಲಿ ಇಲ್ಲಿ ಸುತ್ತಿ, ಕಾಫಿ ಹೌಸಿಗೆ ಹೋದ. ಫಿಜಿಕ್ಸ್ ಲೆಕ್ಚರರ್ ಕಾಫಿ ಕುಡಿಯುತ್ತ ಕುಳಿತಿದ್ದವರು, ಇವನನ್ನು ನೋಡಿ ಕೈಬೀಸಿ ಕರೆದರು. ಹರಟೆಯ ನಡುವೆ ಶಂಕರನ ಮಾತು ಬಂತು.

''ಆ ಹಲ್ಕಾ ನಮ್ಮನ್ನೆಲ್ಲ ಹೀನಾಮಾನವಾಗಿ ಕಾಣ್ತಾನೆ ಕಣ್ರಿ... ನಾವೆಲ್ಲ ಹಾಡಿದ್ದೆ ಹಾಡುವ ಕಿಸುಬಾಯಿದಾಸರು ಅಂತಾನೆ!''

ಆತ ಗಾಬರಿಯಾದ. ಸ್ವಲ್ಪ ಹೊತ್ತಿನ ಮೇಲೆ, ''ಏನು, ಮೈಗೆ ಸರಿಯಿಲ್ಲವೆ?'' ಎಂದು ಕೇಳಿದ. ವಾಸುವಿಗೆ ಅಲ್ಲೂ ಸರಿ ಹೋಗಲಿಲ್ಲ.

ಹೊತ್ತೇನೋ ಕಳೆಯಿತು. ಒಂದು ಸುಳ್ಳು ಹೇಳಿಬಿಡುವುದೆಂದು ಮನೆಗೆ ಬಂದ. ಬಾಗಿಲು ಕುಟ್ಟಿದಾಗ ಜಾನಕಿಯೇ ತೆರೆದಳು.

''ಅವರು ಬಂದೇ ಇಲ್ಲ ಕಣೆ'' ಎಂದು ಇವನನ್ನುತ್ತಿರುವಾಗಲೇ, ''ಆಹಾ ಎಂಥ ಸುಳ್ಳು ಹೇಳುತ್ತೀರಿ'' ಎನ್ನುತ್ತಾ ನಾಯಿಮುಖದವಳು ಅಡುಗೆ ಮನೆಯಿಂದ ಕಾಣಿಸಿಕೊಂಡಳು.

ಓ ಇವಳು ಬಂದಿದ್ದಾಳೆ!

ನಾಯಿಮುಖದವಳು, ''ಬಸ್ಸು ಎಷ್ಟು ಹೊತ್ತಿಗಿದೆ ಒಂಟಿಕೊಪ್ಪಲಿಗೆ'' ಎಂದು ಕೇಳಿದಳು.

''ಎಂಟು ಐವತ್ತಕ್ಕೆ.''

''ನಾನು ಹೊರಡುತ್ತೇನೆ ಜಾನಕಿ... ಹೊತ್ತಾಗಿದೆ.''

ಆಕೆ ಹೋದ ಮೇಲೆ ರಂಪ ನಡೆಯಿತು. ಊಟದ ಮಧ್ಯೆ ಗೊಣಗೊಣ. ತೌರಿನವರನ್ನ ಕಂಡರೆ ತಾತ್ಸಾರ ಎಂಬ ದೂರು. ಊಟವೇ ರುಚಿಸಲಿಲ್ಲ. ಹಾಸಿಗೆಯ ಮೇಲುರುಳುವಾಗ, ಈ ಪೆದ್ದಿಯನ್ನು ಕಟ್ಟಿಕೊಂಡು ನನ್ನ ಬಾಳು ವ್ಯರ್ಥ ಎನಿಸಿತು ವಾಸುವಿಗೆ.

''ನಾನು, ನೀನು ಇಮ್ಮಿಸಿಬಲ್ ಲಿಕ್ವಿಡ್ಸ್ ಇದ್ದ ಹಾಗೆ ಕಣೆ'' ಎಂದ.

''ಇಂಗ್ಲಿಷಿನಲ್ಲಿ ಬಯ್ಯಬೇಡಿ'' ಅಂದಳು.

ಅಡುಗೆ ಮನೆಯಲ್ಲಿ ದೋಸೆಗೆ ತಿರುವುತ್ತಿದ್ದರೆ, ಒರಳು ಕಲ್ಲಿಗೆ ತನ್ನ ತಲೆ ಸಿಕ್ಕಿಬಿಟ್ಟಂತೆ ಅನುಭವ ವಾಸುವಿಗೆ. ಸಾಕಪ್ಪ ಸಾಕು ಎನಿಸಿತು.


ನಿಜವಾಗಿ ಸಾಕಾಗಿರಲಿಲ್ಲ.

ಎಂಥಾ ಸೆಖೆಯಪ್ಪ ಎಂದುಕೊಂಡು ರಗ್ಗನ್ನು ಕಿತ್ತೆಸೆದ. ಒರಳು ಕಲ್ಲು ತಿರುಗುವ ಸದ್ದನ್ನು ಕಿವಿಗೊಟ್ಟು ಕೇಳಿದ. ದಿಕ್ಕಾಪಾಲು ಯೋಚನೆಗಳು.

ರೇಗುತ್ತ ಹೆಂಡತಿ ಬಡಿಸಿದರೂ, ರುಚಿಸದಿದ್ದರೂ ಊಟ ಹೆಚ್ಚಾಯಿತೆಂದುಕೊಂಡ. ಹಿತವಾಗುತ್ತೆಂದು ಹೊಟ್ಟೆಯ ಮೇಲೆ ಕೈಯಾಡಿಸಿದ.



ಪತ್ನಿ ತುಳಸಿ, ಮಕ್ಕಳು ಅನು, ಆಶಾರೊಂದಿಗೆ, ರಮಾಕಾಂತ



ಈ ಸೆಖೆಯಲ್ಲಿ ಪಂಚೆ ತುಂಬ ತಾಪತ್ರಯ ಕೊಡುತ್ತಿದೆಯೆನಿಸಿ ಬಿಚ್ಚಿ ದೂರ ಬಿಸಾಡಿದ. ಕಾಲುಗಳನ್ನ ಅಗಲಿಸಿ, ಎಷ್ಟೋ ಪರವಾಗಿಲ್ಲ ಎಂದುಕೊಂಡ. ಎಷ್ಟು ಹೊತ್ತು ಹೀಗೆ ತಿರುವು ತ್ತಿರುತ್ತಾಳೆಂದು ಯೋಚಿಸಿದ. ಚಡ್ಡಿಯೊಳಕ್ಕೆ ಕೈ ಹಾಕಬಾರದು. ಆದರೆ ಸೆಖೆಯಾಗುತ್ತಿದೆಯಲ್ಲ ಏನು ಮಾಡುವುದು? ಇವಳು ಪಕ್ಕದಲ್ಲಿರದಿದ್ದರೆ ಎಂಥ ವಿಚಿತ್ರ ಅನುಭವವಾಗುತ್ತಿದೆ! ನಾಳೆ ಎಂಥ ಚಟ್ನಿ ಮಾಡುತ್ತಾಳೋ? ವಾಸುವಿಗೆ ದಿಗ್ಭ್ರಮೆ ಯಾದಂತಾಯಿತು. ಥೂ ಥೂ... ಕೈ ಹೊರಟೇ ಹೋಗಿದೆ. ಇದೇನು ಒರಳಿನ ಶಬ್ದ ನಿಂತಂತಿದೆ. ಬರುತ್ತಾಳೊ? ಬಚ್ಚಲು ಮನೆಗೆ ಹೋದಳು.

ಜಾನಕಿ ಬಚ್ಚಲು ಮನೆಯಲ್ಲಿ ವಾಂತಿ ಮಾಡುತ್ತಿದ್ದಳು.

ಬರುತ್ತಿದ್ದಾಳೆ. ಮಗ್ಗುಲಾಗಿ ಮಲಗಿಬಿಡಬೇಕು.

ಜಾನಕಿ ಬಂದು ಮಲಗಿದಳು. ವಾಸುವನ್ನ ಮಾತಾಡಿಸಲಿಲ್ಲ.

ಮಾತಾಡಿಸದಿದ್ದರೆ ಅಷ್ಟೇ ಹೋಯಿತು. ಕಾರ್ಟೂನ್ ವಿಚಾರವಾಗಿ ಯೋಚಿಸಬಹುದು. ರವಿವರ್ಮನನ್ನ ಯೋಚಿಸಬಹುದು. ಅವನು ಬರೆದ ವ್ಯಕ್ತಿಗಳಲ್ಲಿ ಬರೇ ಫ್ಲೆಷ್ ಅಂಡ್ ಬ್ಲಡ್. ಮಾಂಸ ತುಂಬಿ ತುಂಬಿ ಇಟ್ಟುಬಿಟ್ಟಿದ್ದಾನೆ. ಇತ್ತೀಚೆಗೆ ಜಾರ್ಜ್ ಕೇತನ ಫಿಗರಿನ್‌ಗಳು ವಿಚಿತ್ರವಾಗಿವೆ. ಹೆಂಗಸರಂತೂ ಸಿಕ್ಕಾಬಟ್ಟೆ ವಲಪ್ಚಸ್ ಆಗಿರ್ತಾರೆ. ರಾಮ ರಾಮಾ... ದಿಕ್ಕಾಪಾಲು (ಕರ್ವ್ಸ್). ಮೈಕೆಲ್ ಏಂಜಲೋವಿನ ಚಿತ್ರಗಳಲ್ಲಿ, ಶಿಲ್ಪದಲ್ಲಿ ವ್ಯಕ್ತಿಗಳಿಗೆ ವಂಡರ್‌ಫುಲ್ ಬಾಡಿ ಇರುತ್ತೆ.

ಜಾನಕಿ ಯಾಕೆ ಇಷ್ಟೊಂದು ಹೊರಳಾಡು ತ್ತಿದ್ದಾಳೆ.

ಮಗ್ಗುಲು ಬದಲಿಸಿ ಕಣ್ಣುಬಿಟ್ಟರೆ, ಜಾನಕಿಯ ಅರೆತೆರೆದ ಎದೆ, ಬಿಳಿಯ ನುಣುಪಾದ ಹೊಟ್ಟೆ, ತೊಡೆ ಕಾಣುವವರೆಗೂ ಸೀರೆ ಬಂದುಬಿಟ್ಟಿದೆ. ವಾಸು ಅವಳನ್ನ ಅಲುಗಿಸಿದ. ಕಣ್ಣುಬಿಟ್ಟು, ಕ್ಷುದ್ರ ಜಂತುವನ್ನು ನೋಡುವಂತೆ ವಾಸುವನ್ನು ನೋಡಿ, ಇವನಿಂದ ದೂರ ಸರಿದು, ಮಂಡಿ ಮಡಿಚಿ, ಮಗ್ಗುಲಾಗಿ ಮಲಗಿಬಿಟ್ಟಳು.

ವಾಸುವಿಗೆ ಜುದಾಸನ ಚಿತ್ರದ ನೆನಪು. ಗರಿಬಾಲ್ಡಿಯ ನೆನಪು. ಅವನ ವಿಕಾರವಾದ ಮುಖ... ಮೈಕೆಲ್ ಏಂಜಲೋನನ್ನು ಕತ್ತು ಹಿಚುಕಿ ಕೊಂದುಬಿಡಬೇಕೆಂಬ ಕ್ರೌರ್ಯ ಅವನ ಮುಖದಲ್ಲಿ...

ವಾಸು ದಿಗ್ಗನೆ ಎದ್ದು ಜಾನಕಿಯನ್ನು ಹಿಡಿದುಕೊಂಡ. ಜಾನಕಿ ಕಣ್ಣುಬಿಟ್ಟು ಭೀತಿಯಿಂದ ನಡುಗಿಹೋದಳು. ವಾಸುವನ್ನು ತಡೆಯುವವರು ಯಾರು! ದಭದಭ ಬೆನ್ನಿಗೆ ಗುದ್ದುಗಳು. ಬಿಳಿಯ ನುಣುಪಾದ ಹೊಟ್ಟೆಗೆ ಒದ್ದಾಗ ಜಾನಕಿ ಮೂಲೆಗೆ ಉರುಳಿಬಿದ್ದಳು. ಗುಕ್ ಎಂದು ಸದ್ದು.

ಜೋರಾಗಿ ಕಾರು ಬ್ರೇಕು ಹಾಕಿದಂತೆ ಸದ್ದು. ವಾಸು ಒಂದೇ ನೆಗೆತಕ್ಕೆ ಹಾರಿ ಕಿಟಕಿಯ ಬಳಿ ಬಂದು ನಿಂತ. ಸೈಕಲ್ಲಿನವನೊ ಕಾರಿನವನೊ ಯಾರೋ ಬೈಯ್ದರು, ಕಾರು ಹೋಯಿತು, ಸೈಕಲ್ಲು ಹೋಯಿತು, ಗುಂಪುಗೂಡಿದ್ದ ಜನರು ಚೆದರಿಹೋದರು, ಹಾಳು ಸಾಬಿಯ ಮುಖವೇ ಪತ್ತೆ ಇಲ್ಲ. ಕಡಲೆಕಾಯಿ ಮಾರುವವ ಅಲ್ಲೇ ಕುಳಿತಿದ್ದ, ಅವನ ಪೊದೆಪೊದೆಯಾದ ಗಡ್ಡ, ಕೆಳಗಡೆ ದೋಸೆಹಿಟ್ಟನ್ನು ಕಾವಲಿಗೆ ಬಿಟ್ಟ ಸದ್ದು. ನಿಧಾನವಾಗಿ ಒಂದೊಂದೆ ಮೆಟ್ಟಲುಗಳನ್ನಿಳಿದು, ರಸ್ತೆ ದಾಟಿ ಕಡಲೆಕಾಯಿ ಮಾರುವವನನ್ನ ಸಮೀಪಿಸಿದ.

''ಹೇಗಯ್ಯ ಪಾವು?''

''ಇಪ್ಪತ್ತು ಪೈಸಾ ಬುದ್ಧಿ.''

ಕಡಲೆಕಾಯಿ ಮಾರುವವನಿಗೆ ಆಶ್ಚರ್ಯ, ಮುಂದೆ ಮಾತಾಡಲು ವಾಸು ಸ್ವಲ್ಪ ಅಧೈರ್ಯಪಟ್ಟ.

''ನಿನ್ನೆ ನಿನ್ನ ಮನೇಲಿ ಏನೋ ಗಲಾಟೆ ಆಯ್ತಂತೆ?''

''ಹೌದು ಬುದ್ಧಿ.''

''ಏನೋ?''

''ಬಚ್ಚಲಲ್ಲಿ ಕಾಲ್ಜಾರಿ ನಮ್ಮನೆ ಹೆಂಗ್ಸು ಬಿದ್ದುಬಿಟ್ಲು ಬುದ್ಧಿ.''

ವಾಸುವಿಗೆ ಸಂದೇಹ,

''ಅಷ್ಟೇನೇನಯ್ಯಾ?''

''ಹ್ದೂ ಸಾಮಿ,''

''ಹೊಡ್ದುಗಿಡ್ದು ಮಾಡ್ದೇನಯ್ಯಾ?''

''ಅಯ್ಯ್, ಎಲ್ಲಾರು ಉಂಟಾ ಬುದ್ಧಿ.''

''ಅರ್ಧ ಪಾವು ಕೊಡು.''

ಪಾಪ್ಪ ಮಹಡಿಗೆ ಬಂದು, ಕಡಲೆಕಾಯಿಯನ್ನು ಚೆಲ್ಲಿದ. ಕಿಟಕಿಯಿಂದ ನೋಡಿದರೆ, ಪೊದೆಪೊದೆಯಾಗಿ ಗಡ್ಡ ಬೆಳೆಸಿಕೊಂಡ ಕಡಲೆಕಾಯಿ ಮಾರುವವನು ಕಿಟಕಿಯತ್ತಲೇ ನೋಡುತ್ತಿರುವುದು ಕಾಣಿಸಿತು, ಕಿಟಕಿಯ ಬಾಗಿಲುಗಳನ್ನು ಮುಚ್ಚಿ ಕುರ್ಚಿಯಲ್ಲಿ ಕುಕ್ಕರಿಸಿದ.

ನಿನ್ನೆಯಿಂದ ನಡೆದಿರುವುದನ್ನ ನೋಡಿದರೆ ಅಸಹಜತೆ ಎದ್ದು ಕಾಣುತ್ತದೆ, ನಾನೋ ಜಾನಕಿಯೋ ತಪ್ಪಿದ್ದೇವೆ. ಜಾನಕಿಗೆ ಓದು-ಬರಹ ಬಂದಿದ್ದು, ವಿಚಾರ ಮಾಡುವಷ್ಟು ವಿದ್ಯಾವತಿಯಾಗಿದ್ದರೆ ಅತ್ತು ರಗಳೆ ಮಾಡುತ್ತಿರಲಿಲ್ಲ, ನಾನು



ಕೈ ಎತ್ತುವುದಕ್ಕೂ ಆಗುತ್ತಿರಲಿಲ್ಲ. ಕಡಲೆಕಾಯಿ ಮಾರುವವ ಅನಾಗರಿಕನಂತೆ ಗಡ್ಡ ಬೆಳೆಸಿಕೊಂಡು, ಕೊಳಕು ಬಟ್ಟೆಗಳನ್ನು ಹಾಕಿದ್ದಾನೆ. ಅಂತಹವನೆ ಹೆಂಡತಿಯನ್ನು ಹೊಡೆದಿಲ್ಲ. ಎಷ್ಟೇ ಮುಂದುವರಿದರೂ ಜಾನಕಿಗೆ ಡೈವೋರ್ಸ್ ಮಾಡುವ ವಿಚಾರ ತಲೆಗೆ ಬರಲಿಕ್ಕಿಲ್ಲ. ಹಳ್ಳಿಯ ಹುಡುಗಿ ಎಂಬ ಭಾವನೆಯಿಂದ ಪ್ರಚೋದಿತನಾದನೆ? ಶಂಕರ, ಬ್ರೂಟ್ ಎಂದು ಜೋರಾಗಿ ಅವನ ಹೆಂಡತಿಯನ್ನ ಬೈದದ್ದಕ್ಕೆ ಭಾರಿ ಜಗಳವಾಗಿ, ನಾನು ಮಧ್ಯಸ್ಥಿಕೆ ವಹಿಸಬೇಕಾಯಿತು. ಈಗ ಎಷ್ಟೋ ಹುಷಾರಾಗಿರುತ್ತಾನೆ. ಬದಲಿಗೆ, ನಾನು ಜಾನಕಿಯನ್ನ ಹಿಡಿದು, ಹೊಡೆದು, ಒದ್ದು ಬಿಸಾಡಿದ್ದೇನೆ, ಜಗಳವಿಲ್ಲ ಕದನವಿಲ್ಲ. ಬೆಳಗಾಗ ಅಷ್ಟು ಹೊತ್ತಿಗೇ ನನಗೆ ತಿಂಡಿ ತಯಾರಿಸಲು ಹೊರಟದ್ದಾಳೆ.

ವಾಸುವಿಗೆ ತಾನು ಕುರ್ಚಿಯಲ್ಲಿ ಸಣ್ಣಗಾಗುತ್ತಿರುವಂತೆ ತೋರಿತು, ಮುಖವನ್ನ ಬಲವಾಗಿ ಉಜ್ಜಿಕೊಂಡ. ನಿನ್ನೆ ರಾತ್ರಿಯ ವಾಸು ಯಾರು? ಯಾರಿಂದ ಏತರಿಂದ ಪ್ರಭಾವಿತನಾದವನು? ನನ್ನ ಯಾವ ಭಾಗ ಈ ವಾಸು? ಈ ವಾಸುವನ್ನ ನೋಡಿದಮೇಲೆ ಜಾನಕಿಗೆ ನನ್ನ ಮೇಲೆ ಪ್ರೀತ್ಯಾದರಗಳು ಉಳಿದಿರಲೂ ಸಾಧ್ಯವೆ? ಏನು ಕಾರಣ ಈ ವಾಸು ಪ್ರಕಟಗೊಂಡ?

ವಾಸು ಎದ್ದು ಓಡಾಡತೊಡಗಿದ.

ಯಾವುದೋ, ಎಂಥವೋ, ನಾವೆಂದೆಂದೂ ನಮ್ಮ ಜೀವನದಲ್ಲಿ ಗುರುತಿಸಲು ಸಾಧ್ಯವಾಗದೆ ಹೋಗುವಷ್ಟು ಸೂಕ್ಷ್ಮ ಸೂಕ್ಷ್ಮ ಭಾವನೆಗಳು ನಮ್ಮ ಕ್ರಿಯೆಗಳನ್ನು ನಿರ್ದೇಶಿಸುತ್ತವೆಂದು ಕಾಣುತ್ತದೆ. ಹೆಂಡತಿಗೆ ಬೈಯಲು ಹೆದರುವ ಶಂಕರ, ನನ್ನನ್ನು ಹಾಡುವ ಕಿಸುಬಾಯಿದಾಸ ಎನ್ನಬೇಕಾದರೆ, ನಾನು, ಮಧ್ಯರಾತ್ರಿಯಲ್ಲಿ ನಿದ್ದೆ ಮಾಡುತ್ತಿದ್ದ ಜಾನಕಿಯನ್ನು ದನ ಬಡಿದಂತೆ ಹೊಡೆಯಬೇಕಾದರೆ, ಹೀಗಿದ್ದೂ ಜಾನಕಿ ನನ್ನ ರಾಕ್ಷಸೀ ಕೃತ್ಯಗಳನ್ನೆಲ್ಲ ಅಪರಾಧಿಯಂತೆ ಸಹಿಸಿಕೊಂಡು, ನನ್ನ ಕಷ್ಟ ಸುಖದಲ್ಲಿ ಭಾಗಿಯಾಗಬೇಕಾದರೆ - ಈ

ಎಲ್ಲದರ ಹಿಂದೆ ಏನೇನೋ, ಎಂಥೆಂಥದೋ ಅಡಗಿದೆ. ಅವು ನಮ್ಮನ್ನಾಳುತ್ತವೆ.

ಮುಖ ಉರಿಯತೊಡಗಿ ಉಜ್ಜುವುದನ್ನು ನಿಲ್ಲಿಸಿದ. ಕೆಳಗೆ ಜಾನಕಿ ಬಚ್ಚಲಲ್ಲಿ ವಾಂತಿ ಮಾಡಿಕೊಳ್ಳುತ್ತಿರುವ ಶಬ್ದ ಕೇಳಿದರೂ, ಗಾಬರಿಯಾಗಿ ಏಳಬೇಕೆನಿಸಿದರೂ, ಕುರ್ಚಿಗೆ ಅಂಟಿ ಹೋಗಿರುವವನಂತೆ ವಾಸು ಕುಳಿತೇ ಇದ್ದ.

ಸ್ವಲ್ಪ ಸಮಯ ಕಳೆದ ಮೇಲೆ ಮಹಡಿ ಹತ್ತಿಬರುವ ಶಬ್ದ ಕೇಳಿಸಿತು.

ವಾಸುವಿಗೆ ಜಾನಕಿಯ ಮುಖ ನೋಡಲು ಹೆದರಿಕೆಯಾಗುತ್ತಿದೆ. ಜಾನಕಿಯ ಕೈಯಲ್ಲಿ ದೋಸೆಗಳಿದ್ದ ತಟ್ಟೆಯಿತ್ತು. ಮೇಜಿನ ಮೇಲಿಟ್ಟು ಮಾತನಾಡದೇ ನಿಂತುಕೊಂಡಳು. ವಾಸು ಎದ್ದು ಹತ್ತಿರಹೋದ. ಮೆಲ್ಲಗೆ ಜಾನಕಿಯ ತಲೆ-ಬೆನ್ನುಗಳನ್ನು ಸವರಿದ. ಗಲ್ಲ ಹಿಡಿದೆತ್ತಿದ. ಜಾನಕಿ ಅಳುತ್ತಿದ್ದಳು. ''ಅಳಬೇಡ'' ಎಂದ. ಅವನೆದೆಯಲ್ಲಿ ಮುಖಮುಚ್ಚಿ ದೊಡ್ಡದಾಗಿ ಬಿಕ್ಕುತ್ತ ಬಿಕ್ಕುತ್ತ ಅತ್ತಳು. ಹಾಗೇ ಕುಸಿದು ಕಾಲಡಿಗೆ ಬಿದ್ದುಬಿಟ್ಟಳು. ಬೆನ್ನಿನ ಮೇಲೆಲ್ಲ ನಿನ್ನೆ ಹೊಡೆದು ಬಡಿದುದರ ಗುರುತುಗಳು.

ವಾಸು ತುಂಬ ಗಾಬರಿಯಾಗಿದ್ದ.

ಹಾಸಿಗೆಯ ಮೇಲೆ ಮಲಗಿದ್ದ ಜಾನಕಿ ಮೆಲ್ಲಗೆ ಕಣ್ಣು ತೆರೆದಳು.

''ಒಲೆಯ ಮುಂದೆ ತುಂಬ ಹೊತ್ತು ಕುಳಿತು ಮಹಡಿ ಹತ್ತಿದ್ದಕ್ಕೆ ಅಂತ ಕಾಣುತ್ತೆ, ತಲೆ ತಿರುಗಿದಂತಾಯಿತು'' ಎಂದಳು.

ವಾಸು ಪೆಚ್ಚಾಗಿ, ''ಆಯಾಸ ಮಾಡ್ಕೋಬೇಡ, ರೆಸ್ಟ್ ತಗೊ ಕೊಂಚ'' ಅಂದ.

ವಾಸು ಸೋಲತೊಡಗಿದ.

''ಹೊಟ್ಟೆಯ ಯಾವ ಜಾಗಕ್ಕೆ ಏಟು ಬಿದ್ದದ್ದು... ತುಂಬ ನೋವಾಯಿತಾ?''

''ಹ್ಞೂ'' ಎಂದು ಬಿಳಿಯ ಹೊಟ್ಟೆಯನ್ನು ತೋರಿಸಿದಳು. ಎಡಗಡೆ ಕೆಂಪಗೆ ಗುರುತು ಇನ್ನೂ ಇತ್ತು. ವಾಸು ಅದನ್ನ ನೋಡಿ ಪೆಚ್ಚು ಮೋರೆ ಮಾಡಿಕೊಂಡ. ಜಾನಕಿ ಅಳುತ್ತ,

''ನೋಡಿ, ನಾಲ್ಕೈದು ದಿನಗಳಿಂದ ವಾಂತಿಯಾಗ್ತಿದೆ... ನಾನು ಬಸುರಿ ಅಂತ ಪಕ್ಕದ ಮನೆ ಅಜ್ಜಿ ಹೇಳಿದೆ'' ಅಂದಳು. ''ಓ'' ಎಂದ ವಾಸು ತಾನೆಣಿಸಿದಷ್ಟು ಆಶ್ಚರ್ಯ, ಕುತೂಹಲ, ಸಂತೋಷಗಳು ವ್ಯಕ್ತವಾಗಲಿಲ್ಲವಲ್ಲ ಎಂದು ಆಶ್ಚರ್ಯಪಟ್ಟ.

''ಇನ್ನು ಹೊಟ್ಟೆಗೆ ಒದೆಯಬೇಡಿ'' ಎಂದು ಅಳು ಜೋರುಮಾಡಿದಳು. ವಾಸು ಕೆಟ್ಟೆ ಎಂದುಕೊಂಡ. ಮಾತಾಡದೇ ಅವಳ ಕೈಯನ್ನು ತನ್ನೆರಡು ಕೈಗಳಲ್ಲಿಟ್ಟುಕೊಂಡು ಎಷ್ಟೋ ಹೊತ್ತು ಕುಳಿತಿದ್ದ.


''ನಾನು ಕೆಟ್ಟವನಲ್ಲ, ರಾಕ್ಷಸನಲ್ಲ'' ಎಂದ. ಜಾನಕಿ ನಂಬಿದಂತೆ ತೋರಲಿಲ್ಲ.

''ನಾನು ಕೋಪಿಷ್ಠನಲ್ಲ'' ಎಂದ. ಜಾನಕಿ ಮಾತೇ ಆಡಲಿಲ್ಲ.

ತುಂಬ ಹೊತ್ತು ಆಕಾಶ ನೋಡುತ್ತಿದ್ದು ''ಮನಸ್ಸೆಂದರೆ ಎಂದೆಂದೂ ಪಥ ಸಿಕ್ಕದೆ, ಗೊತ್ತುಗುರಿಯಿಲ್ಲದೇ ಅಲೆಯುವ ಧೂಮಕೇತು'' ಎಂದಾಗ ಜಾನಕಿ ಬೆರಗುಗಣ್ಣು ಮಾಡಿದಳು. ''ಅಲ್ಲವಾ?'' ಎಂದ. ಜಾನಕಿ ಸುಮ್ಮನಿದ್ದಳು. ನಿಮಿಷ ನಿಮಿಷಕ್ಕೂ ಪರಿಸ್ಥಿತಿ ಅಸಹ್ಯವಾಗುವಂತೆ ತೋರಿತು.

''ಸಾಮಿ'' ಎಂದು ಕೆಳಗಡೆ ಸಾಬಿಯ ದನಿಯಾಯಿತು.

ವಾಸು ಬದುಕಿದೆ ಎಂದು ಎದ್ದ. ''ಮನೆ ಸುದ್ದಿ ತಂದಿದ್ದಾನೆ ಸಾಬಿ. ವಿಚಾರಿಸಿ ಬರುತ್ತೇನೆ... ನೀನು ಮಲಗಿರು'' ಅಂತ ಜಾರಿಕೊಂಡು ಹೊರಟ. ನಿಧಾನವಾಗಿ ಮೆಟ್ಟಲಿಳಿಯುತ್ತಿರುವಾಗ, ವಾಸುವಿಗೆ ಹರ್ಷತುಂಬಿಕೊಳ್ಳುತ್ತ, ತುಂಬ ಹಗುರಾಗುತ್ತಿದ್ದೇನೆಂದು ಅನಿಸಿತು. ಹೇಗೆ ನಿಭಾಯಿಸುತ್ತೀಯಯ್ಯಾ ಮೂವರು ಹೆಂಡಿರನ್ನ ಎಂದು ಸಾಬಿಯನ್ನ ಕೇಳುವ ನೈಜ್ಯಾನುಸಂಧಾನಕ್ಕಿಳಿಯಬಾರದೆಂದು ಗಟ್ಟಿ ಮಾಡಿಕೊಂಡು ಸಾಬಿಯನ್ನು ಎದುರಿಸಿದ.




ದೇವರ ತಳ ಸಡಲಿದಾಗ...

ಭೂಲಕೀ ವಿಚಿತ್ರಂ

ಸುಮಾರು ಮೂರು ದಶಕಗಳ ಹಿಂದಿನ ಮಾತು. ಆಗ ನಮ್ಮೋಣಿ ಎಂಬುದು ಹೆಂಗಿತ್ತಪ್ಪಾ ಅಂದರೆ ಹಂಗಿತ್ತು. ಯಮನ ಎದೆಯಲ್ಲಿ ನಡುಕ ಹುಟ್ಟಿಸುವಂಥ ಮುದುಕರೇ ಇಡೀ ಓಣಿಯನ್ನು ಸರ್ವಾಧಿಕಾರಿಗಳಂತೆ ಆಳುತ್ತಿದ್ದರು. ''ಯ್ಯೋನ್ರಲೋ ನಿಂಬಾಯಾಗ ನನ....'' ಎಂದವರು ಘರ್ಜಿಸಿದೊಡನೆ, ಎಂಥೆಂಥ ಹೇಮಾಹೇಮಿ ಕುಡುಕರೂ ಹಡಲ್ಲಾಗಿಬಿಡುತ್ತಿದ್ದರು. ಮುದುಕರ ಪರ್ಯಾಯ ಸರಕಾರವಿದ್ದ ನಮ್ಮ ಓಣಿಯೆಂದರೆ ದೆವ್ವಗಳಿಗೂ, ದೇವರುಗಳಿಗೂ ಅಚ್ಚುಮೆಚ್ಚು. ಬೇರೆ ಓಣಿ, ಕೇರಿಗಳಿಂದ, ಅಷ್ಟೆ ಏಕೆ, ಅಕ್ಕಪಕ್ಕದ ಕೂಗಳತೆಯ ಊರುಗಳಿಂದಲೂ, ದೆವ್ವಗಳು, ಅಮವಾಸೆಗೊಮ್ಮೆ, ಹುಣ್ಣಿಮಿಗೊಮ್ಮೆ ನಮ್ಮ ಕೇರಿ ಪ್ರವೇಶಿಸಿ, ಹಲವರಿಗೆ ಹಲೋ ಹಲೋ ಎನ್ನುತ್ತಿದ್ದವು. ಶಾರದವ್ವ, ಶಾಂತವ್ವರಂಥ ತರುಣಿಯರ ಮೈಯೊಳಗೆ ತೂರಿ, ನಾನಾ ನಮೂನೆ ಆಟಗಳನ್ನು ಪ್ರದರ್ಶಿಸುತ್ತಿದ್ದವು. ಶಾರದವ್ವನ ಮೈಯೊಳಗೆ ಬೇಸಾಯ ಮಾಡಲು ಪ್ರತಿ ಹುಣ್ಣಿಮಿಗೊಮ್ಮೆ ಬರುತ್ತಿದ್ದ ಕಾಂಪೌಂಡರು ರಾಮಣ್ಣ ಎಂಬ ದೆವ್ವಕ್ಕೂ, ನಮ್ಮ ನಿಂಗಮ್ಮಜ್ಜಿ ಎಂಬ ಕಿಂಗ್‌ಕಾಂಗ್ ಮುದುಕಿಗೂ ನಡುವೆ ವಾಗ್ಯುದ್ಧ, ಮಲ್ಲಯುದ್ಧಗಳು ನಡೆಯುತ್ತಿದ್ದುದುಂಟು. ಕಾಂಪವುಂಡರು ರಾಮಣ್ಣ ದೆವ್ವವು, ಕೊನೆಗೆ ಸೋತು ಸುಣ್ಣವಾಗಿ, ''ಬೇ ನಿಂಗೆವ್ವೋಽಽ.... ಮುಂದೊಂದಿನ, ನಿನ್ ಮಯ್ಯಾಗೂ ಹೊಕ್ಕೊಂಡು ಕಾಟ ಕೊಡ್ಲಿಲ್ಲ ನಾನ್ ರಾಮಣ್ಣನೇ ಅಲ್ಲ'' ಎಂದು ಶಪಥ ಮಾಡಿ ಓಡಿಹೋಗುತ್ತಿತ್ತು. ಇಂಥ ಎಷ್ಟೋ ದೆವ್ವಗಳಿಗೆ ಕುಟೀರ ಪ್ರಾಯಗಳಾಗಿದ್ದ ನಿಂಗಮ್ಮಜ್ಜಿ, ಇಡೀ ನಮ್ಮೋಣಿಗೆ 'ಎಸ್‌ಪಿ' ಆಗಿದ್ದಳು.

ಯಮನೂರು ಹೊನ್ನೂರು ಸ್ವಾಮಿ, ಉರುಕುಂದೆಪ್ಪ, ಭರುಮಪ್ಪರಂಥ ಪುರುಷವಾಚಕ ದೇವರುಗಳಿಗೂ, ಮಾರೆಮ್ಮ, ದ್ಯಾಮವ್ವ, ದುರುಗವ್ವ, ಪೋಲೇರದವ್ವರೇ ಮೊದಲಾದ ಸ್ತ್ರೀವಾಚಕದ ದೇವರುಗಳಿಗೂ ನಮ್ಮೋಣಿ ಹನಿಮೂನ್ ಸ್ಪಾಟಾಗಿತ್ತು ಎಂದರೆ ಹುಬ್ಬೇರಿಸಬೇಡಿ. ದೆವ್ವಗಳಂತೆ ಇವೂನು ಆಗೊಮ್ಮೆ ಅವರ ಮೈಯೊಳಗೆ, ಈಗೊಮ್ಮೆ ಇವರ ಮೈಯೊಳಗೆ ಕಾಣಿಸಿಕೊಂಡು, ಶ್ರಮಜೀವಿಗಳ ಕ್ಷೇಮ ಸಮಾಚಾರ ವಿಚಾರಿಸಿಕೊಂಡು ಹೋಗುತ್ತಿದ್ದವು. ಇವು

ನೆಲದಲ್ಲಿ ಬೇರುಬಿಟ್ಟುಕೊಂಡೇ ಅಂತರಿಕ್ಷದಲ್ಲಿ ಚಲಿಸುವ ವಿಶಿಷ್ಟ ಚಹರೆಗಳ ಅಧ್ಭುತ ರಮ್ಯಲೋಕವನ್ನು ತಮ್ಮ ಕಥೆ, ಕಾದಂಬರಿಗಳ ಮೂಲಕ ಕಟ್ಟುತ್ತಿರುವ ವಿಶಿಷ್ಟ ಬರಹಗಾರ, ಸ್ನೇಹಮಯಿ ಮಾಸ್ತರ, ಕೊಟ್ಟೂರಿನ ಕುಂ. ವೀರಭದ್ರಪ್ಪ ನಮಗಾಗಿ ಈ ಅಂಕಣವನ್ನು ಬರೆಯುತ್ತಿದ್ದಾರೆ. ನಿತ್ಯ ದುರಂತದ ಅಗ್ನಿದಿವ್ಯಗಳನ್ನು ದಾಟಲೆಂದೇ ಕೀಟಲೆಯಲ್ಲಿ ಕೇಕೆ ಹಾಕಿ ನಗುವ ಶೈಲಿಯಲ್ಲಿ ಮೂಡಿಬರುವ ಕುಂವೀ ಜಗತ್ತಿನ ಚಿತ್ರ ವಿಚಿತ್ರಗಳಿಗೆ ಸ್ವಾಗತಂ!



ಕುಂ. ವೀರಭದ್ರಪ್ಪ

ಯಾವ ಪೋಲೀಸಾಫೀಸರಗೂ, ದುಪ್ಪೀಕಮೀಟನರಿಗೂ, ಮುನುಸೋಬರಿಗೂ ಕಡಿಮೆ ಇರುತ್ತಿರಲಿಲ್ಲ. ಇವುಗಳ ಪ್ರಭಾವದಿಂದಾಗಿ ಕೆಲವು ಕಡ್ಡಿ ಪೈಲ್ವಾನರು ದೊಡ್ಡ ದೊಡ್ಡ ಜಮೀನ್ದಾರರನ್ನು ಗಡ ಗಡ ನಡುಗಿಸುತ್ತಿದ್ದರು. ಮಾಂಕಾಳಿ, ಮಾರೆವ್ವರಂಥ ದೇವತೆಗಳು ಒಡಮೂಡಿದ ಮರದ ಪೊಟರೆಗಳಂತೂ ಯಾವುದೇ ವಿಧಾನಸೌಧ, ಪಾರಲಿಮೆಂಟು, ಸುಪರೀಮು ಕೋರುಟುಗಳಿಗಿಂತ ಕಡಿಮೆ ಇರುತ್ತಿರಲಿಲ್ಲ. ಒಮ್ಮೊಮ್ಮೆ ಮಲ್ಲಾಪ್ರಮಾರೆಮ್ಮನಂಥ ದೇವರಿಗೂ, ಪಕ್ಕೀರಜ್ಜನಂಥ ದೆವ್ವಕ್ಕೂ ನಡುವೆ, ಟಗ್ ಆಫ್ ವಾರ್ ನಡೆಯುತ್ತಿದ್ದುದುಂಟು. ಕೆಲವು ದೆವ್ವಗಳಂತೂ ದೇವರುಗಳನ್ನೇ ಓವರ್‌ಟೇಕು ಮಾಡಿ ಮೀಸೆ ತಿರುವುತ್ತಿದ್ದುದುಂಟು. ಈ ಕಾರಣಗಳಿಂದಾಗಿ ಸೂರ್ಯಾಸ್ತವಾದೊಡನೆ ನಮ್ಮೋಣಿಯಲ್ಲಿ ಹತ್ತಾರು ವಿಶ್ವವಿದ್ಯಾಲಯಗಳು ಓಪನ್ನಾಗಿಬಿಡುತ್ತಿದ್ದವು. ಮುಖ್ಯ, ಭಾಷೆಗೆ ಸಂಬಂಧಿಸಿದಂತೆ ಹೇಳುವುದಾದರೆ, ಉಪ್ಪಾರ ಹುಲಿಗೆವ್ವ, ಭವಾನಿ ಗಂಗವ್ವ, ಸಿದ್ದವ್ವರಂಥವರು ಅಂತರಾಷ್ಟ್ರೀಯ ಮಟ್ಟದ ಭಾಷಾತಜ್ಞೆಯರಾಗಿಬಿಡುತ್ತಿದ್ದರು. ಕಾವ್ಯದ ವಿವಿಧ ಪ್ರಾಕಾರಗಳು ತುಂಗೆ, ಗಂಗೆ, ಯಮುನೆಯರಂತೆ ಬಾಯಿಯಿಂದ ಬಾಯಿಗೆ, ಕಿವಿಯಿಂದ ಕಿವಿಗೆ ಪ್ರವಹಿಸುತ್ತಿದ್ದುದುಂಟು.

ಟೆನ್ತನ್ನು ಥರುಡು ಕಿಲಾಸಿನಲ್ಲಿ ಪಾಸಾಗಿದ್ದ ನನ್ನಂಥವರಿಗಂತೂ, ನಮ್ಮೋಣಿ ಆಕ್ಸ್‌ಫರ್ಡ್ ಯುನಿವರ್ಸಿಟಿಗಿಂತ ಮಿಗಿಲಾಗಿತ್ತು. ಪ್ರತಿಯೋರ್ವ 'ಓಲ್ಡ್ ಈಜ್ ಗೋಲ್ಡ್'ಗಳು ಯಾವುದೇ ಪ್ರೊಫೆಸರುಗಳಿಗಿಂತ ಒಂದು ಮಣ ಮಿಗಿಲಾಗಿದ್ದರು. ಆದ್ದರಿಂದ, ತಾಪತ್ರಯ ಕಾರಣಗಳಿಂದ ನನ್ನನ್ನು ಕಾಲೇಜು ಶಿಕ್ಷಣದಿಂದ ದೂರವಿರಿಸಿದ ಹಾಲಪ್ಪನಂಥ ತಂದೆಗೆ, ಸದಾ ಕೃತಜ್ಞನಾಗಿರುವುದು ಈ ಕಾರಣಕ್ಕಾಗಿಯೇ. ಪರಿಣತರ ಉಪನ್ಯಾಸಗಳಿಂದ ಕಲಿಯಲಾಗದ ಎಷ್ಟೋ ವಿಷಯಗಳನ್ನು ನಾನು ಕಲಿತಿರುವುದು, ನಮ್ಮೋಣಿಯಲ್ಲಿ ನಡೆಯುತ್ತಿದ್ದ ಇತಿಹಾಸ ಪ್ರಸಿದ್ಧ ಜಗಳಗಳಿಂದ. ಜಗಳದ ವಿಷಯದಲ್ಲಂತೂ ಉಪ್ಪಾರ ಹುಲಿಗೆವ್ವ ಅದ್ವಿತೀಯ ಕಲಾರತ್ನವೆಂದೇ ಹೇಳಬಹುದು. ಇರಲಿ, ಈ ಕುರಿತು ರಿಣಾನುಬಂಧವಿದ್ದಲ್ಲಿ ಮುಂದೆ ವಿಶದವಾಗಿ ಬರಧರಾಯಿತು.

ಈಗ ಈ ಅಂಕಣದ ರೋಮಾಂಚಕಾರಿಯೂ, ಕುತೂಹಲಕಾರಿಯೂ ಆದ ತಲೆಬರಹಕ್ಕೆ ಬರೋಣ ಕಷ್ಟ, ಕಾರ್ಪಣ್ಯದಿಂದಾಗಿ ಹದಿಹರೆಯದಲ್ಲೇ ದೇವರ ಬಗ್ಗೆ ನಂಬಿಕೆ ಕಳೆದುಕೊಂಡಿದ್ದ ನನಗೆ, ನಮ್ಮೋಣಿಯ ದೆವ್ವಗಳು, ದೇವರುಗಳು ಚರಾಸ್ತಿಯೂ ಸ್ಥಿರಾಸ್ತಿಯೂ ಆಗಿದ್ದವು ಎಂಬ ಕುರಿತು ಒತ್ತಿ ಹೇಳಬೇಕಿಲ್ಲ. ದೇವರು ಒತ್ತಟ್ಟಿಗಿರಲಿ, ಯಾವುದಾದರೊಂದು ಚಿಲ್ಲರೆ ದೆವ್ವವಾದರೂ ನನ್ನ ಬಡಕಲು ದೇಹ ತೂರಿ, ಹೊಸ ಅನುಭವ ನೀಡಬಾರದೆ ಎಂದು ನಾನು ಹಪಹಪಿಸುತ್ತಿದ್ದುದುಂಟು. ನನ್ನ ಕರುಮಕ್ಕೆ ಯಾವ ದೆವ್ವವೂ ನನ್ನ ಕಡೆ ಕಿರುನಗೆ ಸಹ ಬೀರುತ್ತಿರಲಿಲ್ಲ. ಒಟ್ಟಿನಲ್ಲಿ ನನಗೂ ದೆವ್ವಗಳಿಗೂ ರಿಣಾನುಬಂಧವಿರಲಿಲ್ಲ. ಅಷ್ಟೆ.

ನಾನೂ ಹೆಚ್ಚು-ಕಡಿಮೆ ಈ ಬಾದರಾಯಣ ಕಾಲದ ಫೈಲನ್ನು ಹೆಚ್ಚು ಕಡಿಮೆ ಕ್ಲೋಸ್ ಮಾಡಿ, ರೆಕಾರ್ಡ್‌ರೂಮಿಗೆ ಸೇರಿಸಿಬಿಟ್ಟಿದ್ದೆ. ಹೋದವರ್ಷ ಬಸ್‌ನಿಲ್ದಾಣದಲ್ಲಿ ದುತ್ತನೆ ಎದುರಾಗಿ, ನಾನು ನೀಡಿದ ಭಿಕ್ಷೆಯನ್ನು ನಿರಾಕರಿಸಿ, ಒಂದು ಕ್ಷಣ ನನ್ನನ್ನು ದೃಷ್ಟಿಯಿಂದ ಸುಡಲೆತ್ನಿಸಿ, ಲಟ್ಟಿಗೆ ಮುರಿದು ಸಾಪಳಿಸಿ ಆತ ಮಾಯವಾಗದಿದ್ದಲ್ಲಿ, ನಾನು ಈ ಕೇಸನ್ನು ಪುನಃ ಕೈಗೆ ಎತ್ತಿಕೊಳ್ಳುತ್ತಿರಲಿಲ್ಲವೇನೋ! ಎಲ್ಲ ಬಡವರಂತೆ, ನೊಂದವರಂತೆ ಆತನೂ ಸುದೀರ್ಘವಾಗಿ ಬದುಕಿರುವುದು ಕಂಡು ಸಮಾಧಾನಪಟ್ಟೆ. ತನ್ನ ಮನದ ಸುಣ್ಣದ ಬಟ್ಟಿಯೊಳಗೆ ನನ್ನನ್ನು ಕೂಡಿಹಾಕಿ ಮೂರು ದಶಕಗಳ ಕಾಲ ಆತ ಬೇಯಿಸುತ್ತಿರುವುದನ್ನು ನೆನಪಿಸಿಕೊಂಡರೆ, ನನ್ನ ಬಗ್ಗೆ ನನಗೆ ತಿರಸ್ಕಾರ ಹುಟ್ಟುತ್ತದೆ. ಯಾವ ಯಾವ ವಯಸ್ಸಿನಲ್ಲಿ ಏನೇನು ನಡೆಯಬೇಕೋ ಅದು ನಡೆಯುತ್ತದೆ ಎಂದು ಅವಧೂತನಂತೆ ಸಂತೈಸಿಕೊಳ್ಳುವೆ.

ಸುಮಾರು ಮುವ್ವತ್ತು ವರ್ಷಗಳೆಂದರೆ ಸಾಮಾನ್ಯ ಅವಧಿಯಲ್ಲ. ಈಗಿನಷ್ಟು ನಮ್ಮ ಪಂಚೇಂದ್ರಿಯಗಳು ಆಗ ಭ್ರಷ್ಟಗೊಂಡಿರಲಿಲ್ಲ. ಭಾಷೆ ಮತ್ತು ದೃಶ್ಯ ನಮ್ಮ ವ್ಯಕ್ತಿತ್ವವನ್ನು ರೂಪಿಸುತ್ತಿದ್ದವು. ಕತ್ತೆ ಯಾವ ಪ್ರಕಾರವಾಗಿ ಎಲ್ಲಾ ಭಾಷೆಗಳ (ಇಂಗ್ಲಿಷ್ ವೃತ್ತ ಪತ್ರಿಕೆಯೂ ಸೇರಿದಂತೆ) ವೃತ್ತ ಪತ್ರಿಕೆಗಳನ್ನು ತಿನ್ನುವುದೋ, ಹಾಗೆಯೇ, ನಾವು ಯಾವುದೇ ಘಟನೆಯನ್ನು ತ್ಯಾಜ್ಯವೆಂದು ಭಾವಿಸುತ್ತಿರಲಿಲ್ಲ. ನಮ್ಮ ಓಣಿಯಲ್ಲಿ ಲ್ಯಾಟಿನ್ ಅಮೇರಿಕನ್, ಆಫ್ರಿಕನ್ ಮೊದಲಾದ ಹಿಂದುಳಿದ ರಾಷ್ಟ್ರಗಳನ್ನು ಗುರುತಿಸುತ್ತಿದ್ದೆವು. ಪ್ರತಿಯೋರ್ವರು, ಅಷ್ಟೇ ಏಕೆ, ಬೆಕ್ಕು, ಇಲಿ, ನಾಯಿ ಮೊದಲಾದ ಪ್ರಾಣಿಗಳು ನಮಗೆ ಬಹುಮುಖ್ಯವಾಗಿ ಕಾಣಿಸುತ್ತಿದ್ದವು. ಆದ್ದರಿಂದ ಮಂಡಾಳಭಟ್ಟಿಯ ವನ್ನೂರ ಆಗ ನಮಗೆ ಕಿರ್ಕ್‌ಡಗ್ಲಾಸ್‌ಗಿಂತ ಮಿಗಿಲಾಗಿ ಕಂಡ. ಕಾರಣ ಉತ್ತರ ಕರ್ನಾಟಕದ ನರಗುಂದ ಪ್ರಾಂತದ ಯಮನೂರಿನ ಹೊನ್ನೂರಸ್ವಾಮಿ ಎಂಬ ದೇವರು ಇದ್ದಕ್ಕಿದ್ದಂತೆ ಬಂದು ಆತನ ಮೈಯೊಳಗೆ ಟೆಂಟ್ ಹಾಕಿತ್ತು. ಪ್ರತಿ ಗುರುವಾರ ಕೆಳಗೇರಿಗೆ ಜನವೋ ಜನ, ಅಕ್ಕಪಕ್ಕದ ಊರುಗಳಿಂದಲೂ ಸಹ.

ಕೆಳಗೇರಿ ಅಂದರೆ ಆಗ ನಮಗೆ ನ್ಯೂಯಾರ್ಕ್ ಇದ್ದಂತೆ. ಮನೆಯ ದಿಗ್ಬಂಧನ ಭೇದಿಸಿಕೊಂಡು ಎರಡು ಮೂರು ಫರ್ಲಾಂಗ್ ದೂರ ಕಾಲ್ನಡಿಗೆಯಿಂದ ಪಯಣಿಸುವುದು ಕಷ್ಟಸಾಧ್ಯ ಸಂಗತಿಯಾಗಿತ್ತು. ಚರ್ಮದ ತಿಂಡಿಯ ಇಲಾಜಿಗಾಗಿ ಯಮನೂರು ಸ್ವಾಮಿಗೆ ನಡೆದುಕೊಳ್ಳುತ್ತಿದ್ದ ಸಿದ್ದಮ್ಮಜ್ಜಿಯ ಮನವಿ ಮೇರೆಗೆ, ಆತ ನಮ್ಮ ಮನೆಗೆ ಆಗಮಿಸಿದಾಗ ರೆಡ್‌ಕಾರ್ಪೆಟ್ ಸ್ವಾಗತ ದೊರಕಿತು. ಕರಿಯ ಕಂಬಳಿ ಗದ್ದುಗೆ ಮೇಲೆ ಆತ ವಿರಾಜಮಾನವಾಗಿ, ಪಡೆಯುವುದನ್ನು ಪಡೆದು, ಎಲ್ಲರಿಗೂ (ನಮ್ಮ ತಂದೆ ಏನಃ) ಆಶೀರ್ವಾದ ಮಾಡಿದ.


ಮೊನ್ನೆ ಮೊನ್ನೆವರೆಗೆ ಒಂದು ಹಿಡಿ ಕೂಳಿಗೂ ಪರದಾಡುತ್ತಿದ್ದ, ಮತ್ತು ಬಹಳಷ್ಟು ಮಕ್ಕಳೊಂದಿಗನಾಗಿದ್ದ ವನ್ನೂರ, ಹೊನ್ನೂರಸ್ವಾಮಿಯಾಗಿ ಪರಿವರ್ತನೆಗೊಂಡಿದ್ದು ನನಗೆ ಅಚ್ಚರಿಯ ಸಂಗತಿಯಾಗಿತ್ತು. ಮನೆಯ ಮೇರ್ಗಲ್ (ಮೇರೆಕಲ್ಲು), ಕಾರ್ಗಿಲ್ (ಕರಕಲ್ಲು) ದಾಟಿ ಕೆಳಗೇರಿ ಪ್ರವೇಶಿಸಿ, ಆ ದೇವಮಾನವನನ್ನು ಕುತೂಹಲದಿಂದ ಗಮನಿಸಲಾರಂಭಿಸಿದೆ. ಆಗ ನನ್ನೊಳಗೆ ಹೆಡೆಯಾಡುತ್ತಿದ್ದುದು ಹೊಟ್ಟೆಕಿಚ್ಚೋ, ಹುಡುಗಾಟವೋ ತಿಳಿಯದು. ಅಂತೂ, ಆತನೊಳಗಿನ ದೇವರನ್ನು ಅಗ್ನಿಪರೀಕ್ಷೆಗೆ ಒಡ್ಡಲು ನಿರ್ಧರಿಸಿದೆ. ಈರಣ್ಣ ಎಂಬ ಗೆಳೆಯನೊಂದಿಗೆ ಸಂಚು ರೂಪಿಸಿದೆ. ಗುರುವಾರ ದಿನ, ಒಂದು ಬಾಳೆಹಣ್ಣಿನೊಳಗೆ, ಗುಟ್ಟಾಗಿ ಎರಡು-ಮೂರು ಬೇದಿ ಮಾತ್ರೆಗಳನ್ನು ಅಡಗಿಸಿಟ್ಟೆ. ಸಂಜೆಯಾದೊಡನೆ ನಾವಿಬ್ಬರು ಹೋಗಿ, ದೇವರ ಕಟ್ಟೆಯ ಮುಂದುಗಡೆ ಮಹಾಮಳ್ಳಿಗರಂತೆ ಕೂತುಕೊಂಡೆವು.

ಅಂದು ಎಂದಿಗಿಂತ ಹೆಚ್ಚು ಭಕ್ತಾದಿಗಳು ಆಗಮಿಸಿ ನೆರೆದಿದ್ದರು. ವನ್ನೂರಸ್ವಾಮಿ ವೇದಿಕೆ ಏರಿ ಹ್ಹಾ....ಹ್ಹೂ..... ಎಂದು ಚಿತ್ರ ವಿಚಿತ್ರವಾಗಿ ವರ್ತಿಸತೊಡಗಿತು. ಸ್ವಲ್ಪ ಹೊತ್ತಿನವರೆಗೆ ಭಕ್ತಾದಿಗಳ ದುಃಖದುಮ್ಮಾನ ಆಲಿಸಿ, ಅವೈಜ್ಞಾನಿಕ ಪರಿಹಾರ ಸೂಚಿಸತೊಡಗಿತು. ಆಗ ನಾನು ಮೆಲ್ಲಗೆ ಎದ್ದು, ದೇವರತ್ತ ನ್ಯೂಕ್ಲಿಯರ್ ಬಾಂಬ್ ರೀತಿಯಲ್ಲಿದ್ದ ಬಾಳೆಹಣ್ಣು ಚಾಚಿ, ಸ್ವೀಕರಿಸುವಂತೆ ಪರಿಪರಿಯಾಗಿ ಬೇಡಿಕೊಂಡೆ. ಮೊದಮೊದಲು ನಿರಾಕರಿಸಿದ ದೇವರು, ಭಕ್ತಾದಿಗಳ ಸಲಹೆ ಮೇರೆಗೆ, ನನ್ನ ಕೈಯಿಂದ ಬಾಳೆಹಣ್ಣು ಕಿತ್ತುಕೊಂಡು, ಚಿಂಪಾಂಜಿ ಥರ ಗಬಗಬ ತಿಂದುಬಿಟ್ಟಿತು, ಸಿಪ್ಪೆ ಸಹಿತ.

ಐದು-ಹತ್ತು ನಿಮಿಷ ಕಳೆಯುವಷ್ಟರಲ್ಲಿ ಅದರ ಮುಖ ಚಹರೆ ಬದಲಾಯಿತು. ನನ್ನತ್ತ ದುರುಗುಟ್ಟಲು, ನಾನು ಒಂದೆರಡು ಮಾರು ಹಿಂದೆ ಸರಿದೆ. ಇದ್ದಕ್ಕಿದ್ದಂತೆ ಅದು ಕಟ್ಟೆಯಿಂದ ಕೆಳಗೆ ಕುಪ್ಪಳಿಸಿತು. ಒಂದು ಕೈಲಿ ತಳ ಹಿಡಿದುಕೊಂಡು, ''ನಾವೀಗ ಅರ್ಜೆಂಟ್ ಹೋಗ್ತಿದ್ದೀವಿ... ಯಾರೂ ನಮ್ಮನ್ನು ಹಿಂಬಾಲಿಸಬಾರದು'' ಎಂದು ಅಪ್ಪಣೆ ಕೊಡಿಸಿತು. ಅದು ಇನ್ನೇನು ಓಟಕಿತ್ತಬೇಕೆನ್ನುವಷ್ಟರಲ್ಲಿ ಭಕ್ತಾದಿಗಳು ಅದಕ್ಕೆ ಅಡ್ಡ ನಿಂತು, ''ಅದೆಂಗ ಹೋಗ್ತಿ... ನಮ್ಮಿಂದಾಗಿರೋ ಅಪಚಾರ ಏನು!....'' ಎಂದು ಸಮಜಾಯಿಷಿ ಕೇಳಿದರು. ಓಹ್ ಎಂದುದ್ಗರಿಸಿದ ದೇವರು, ಅವರೆಲ್ಲರಿಂದ ಕೊಸರಿ, ಶಿರಿಬಿ ಕಡೆಯ ನಿರ್ಜನ ರಸ್ತೆಯಲ್ಲಿ ಓಡಲಾರಂಭಿಸಿತು. ಬರಬೇಡಿ ಎಂದು ಅದು, ನೀನೆಲ್ಲಿ ಹೋಗ್ತಿಯೋ ನಾವೂ ಅಲ್ಲಿಗೇ ಬರ್ತೀವಿ ಎಂದು ಬೆಂಬತ್ತಿರುವ ಜನ.


ಇನ್ನೇನು ಜನರು ಹಿಡಿದೇಬಿಟ್ಟರು ಎನ್ನುವಷ್ಟರಲ್ಲಿ, ದೇವರು ಮುಂಗಾಣದೆ, ಪಕ್ಕದಲ್ಲಿದ್ದ ಬಾವಿಗೆ ಜಿಗಿದು, ತಳಸಡಲಿ, ಸುದೀರ್ಘವಾದ ಶೌಚ ಮಾಡಿಕೊಂಡಿತು. ಈಜುಬಾರದ ಅದನ್ನು ಭಕ್ತಾದಿಗಳು ರಕ್ಷಿಸಿ, ದಡ ಸೇರಿಸಿ ಬದುಕಿಸಿದರು. ಹೊನ್ನೂರಸ್ವಾಮಿ ವ್ಯವಕಲನಗೊಂಡು ಉಳಿದ ವನ್ನೂರ ಎಲ್ಲೂ ಸಲ್ಲದ ವ್ಯಕ್ತಿಯಾಗಿ ಉಳಿದು ಹೋದ. ■





ಜಿತು ನಿಡ್ಲೆ

ಸುಳಿ





ಸೃಜನ್

ಕೆಂಪು ನೀರು ಸುತ್ತಿ ಸುತ್ತಿ, ಬುಳಕ್ಕನೆ ಒಳಸೇರಿಕೊಳ್ಳುತ್ತಿತ್ತು. ಆಟಿ ಮಳೆಯ ಆರ್ಭಟಕ್ಕೆ, ತೊಟಿಲ ಸುಳಿಯ ಬಾಗಿಲಲ್ಲಿ ಯಾರೂ ಕುಳಿತುಕೊಳ್ಳುವ ಧೈರ್ಯ ಮಾಡುವುದಿಲ್ಲ, ಕೆಳಬೈಲಿನ ಚನಿಯನ ಹೊರತಾಗಿ. ಅವನಿಗೆ, ಪ್ರಾಯದ ಎಪ್ಪತ್ತರ ಮನೆಯಲ್ಲಿದ್ದರೂ, ನೀರೆಂದರೆ ಜೀವ. ಅದರಲ್ಲೂ ತೊಟಿಲ ಸುಳಿಯೆಂದರೆ ಅದೆಂಥದೋ ಒಂದು ಬಿಡಲಾಗದ ನಂಟು. ಅದರ ಸಂದು ಸಂದೂ ಅವನಿಗೆ ಗೊತ್ತಿದೆ. ಇವತ್ತೂ ಹಾಗೆ, ಚನಿಯ, ಸುಳಿಯ ಬಾಗಿಲಲ್ಲಿ ಕೂತು, ನೀರು ಸುತ್ತುವುದನ್ನು ನೋಡುತ್ತಾ ಮೈಮರೆತಿದ್ದ. ಸುಳಿಯ ನಡುವಿನಲ್ಲೆಲ್ಲೋ, ಗಾಳ ಅನಾಥವಾಗಿ ನೀರೊಳಗೆ ಹೊಯ್ದಾಡುತ್ತಿತ್ತು. ಚನಿಯನ ಮನಸ್ಸಿನೊಳಗೂ ಸುಳಿಯಲ್ಲಿ ನೀರು ಸುತ್ತುವ ಹಾಗೆ ನೆನಪುಗಳು ಸುಳಿಸುಳಿಯಾಗಿ ಎದ್ದು, ಮತ್ತಲ್ಲೇ ಮರೆಯಾಗಿ ಬಿಡುತ್ತಿದ್ದವು. ಹಾವಸೆ ಹಿಡಿದು ಕಪ್ಪಗಾದ ಹಾಸುಬಂಡೆಗಳು, ಕರಿಯ ಆನೆಯ ಹಾಗೆ, ನದಿಯ ಎರಡೂ ಕಡೆಗೆ ಮೈಮರೆತು ಮಲಗಿದ್ದವು. ನಡುವೆ, ತೊಟ್ಟಿಲಲ್ಲಿ ಕೆಂಪು ವಸ್ತ್ರ ಹಾಕಿದ ಹಾಗೆ, ನದಿ ಅಲುಗಾಡದೆ

ಹರಿಯುತ್ತಿತ್ತು. ನದಿಯ ಪ್ರವಾಹದ ಜೊತೆಗೆ ಕೊಚ್ಚಿಕೊಂಡು ಬಂದ ಕಸ ಕಜಂಪೆಗಳು, ಮುದ್ದೆಯಾಗಿ, ಸುಳಿಯ ಗರ್ಭದೊಳಗೆ ಸೇರಿಕೊಂಡು, ದೂರದಲ್ಲೆಲ್ಲೋ ಎದ್ದು, ಮತ್ತೆಲ್ಲೋ ಸಾಗಿ ಹೋಗುತ್ತಿದ್ದವು. ಇಷ್ಟು ದೊಡ್ಡ ಸುಳಿ, ಇಲ್ಲಿ ಅಕ್ಕ ಪಕ್ಕದಲ್ಲೆಲ್ಲೂ ಇರುವುದು ಚನಿಯನಿಗೆ ಗೊತ್ತಿಲ್ಲ.

ಯಾಕೋ ಮತ್ತೆ ಆ ದಿನಗಳ ನೆನಪು. ಅವನು ಎಲ್ಲವನ್ನು ಮರೆಯಬೇಕೆಂದು, ಹರಿದ ಗೊರಬು ತಲೆಗೇರಿಸಿ, ಕೈಯಲ್ಲಿ ಎರೆಹುಳ, ಹಂಡೆಗಾಳ ಹಿಡಿದು, ಯಾವ ಮುಲಾಜೂ ಇಲ್ಲದೆ ಮಳೆಯ ನೀರನ್ನು ಸೀದಾ ಒಳಗೆ ಬಿಡುತ್ತಿದ್ದ ಮುಳಿಹುಲ್ಲಿನ ಮಾಡಿನ 'ಪಟ್ಟ'ದಿಂದ ಹೊರಬಿದ್ದವನು, ತೊಟಿಲ ಸುಳಿಯ ಬಾಗಿಲಿನ ಬಂಡೆಯ ಮೇಲೆ ಪ್ರತಿಷ್ಠಾಪಿತನಾಗಿದ್ದ. ದೊಡ್ಡ ಧಣಿಗಳ ಗಂಭೀರ ಮುಖ, ಸಣ್ಣಧಣಿ, ಅವರ ಹೆಂಡತಿ, ಮಗಳು, ತನ್ನ ಮಗ, ಇವರೆಲ್ಲರಿಂದ ದೂರವಾಗಿ, ಸುತ್ತುವ ನೀರಿನ ಜೊತೆ ಎಲ್ಲ ನೆನಪುಗಳನ್ನು ಮರೆತುಬಿಡಬೇಕೆನ್ನಿಸಿ ಅಲ್ಲಿಗೆ ಬಂದಿದ್ದ. ಕುಲ್ಕುಂದದಾಚೆಯ ನಾಕೂರು ಸುಳಿ ನೆನಪಾದಾಗ, ಅಯಾಚಿತವಾಗಿ ಸಣ್ಣ ಧಣಿಗಳ ಹೆಂಡತಿಯ ಮುಖ ತೇಲಿಬಂತು. ನಾಕೂರು ಕಯ ಅವನು ನೋಡಿದ ದೊಡ್ಡ ಸುಳಿ. ಧಣಿಗಳ ಮನೆಯ ದೊಡ್ಡ ಕಬೆಲ್ತಿ ದನ ಕರು ಹಾಕಿದಾಗ, ಬೆಳ್ತಿಗೆ ಅಕ್ಕಿ, ಹಾಲು, ಹರಿಕೆ ಒಪ್ಪಿಸಲು ಚನಿಯ ಹೋಗಿ ಬಂದಿದ್ದ. ಅಲ್ಲಿಗೆ ಹರಿಕೆ ಹೇಳಿದರೆ, ಸಣ್ಣಧಣಿಗಳ ಹೆಂಡತಿಯೂ ಹೆರಬಹುದೇನೋ ಅಂತ ಆಗ ಅವನಿಗನ್ನಿಸಿತ್ತು. ಬಾಳೆಲೆಯ ತುದಿಯಲ್ಲಿ ಬೆಳ್ತಿಗೆ ಅಕ್ಕಿ, ಹಾಲು, ತೆಂಗಿನಕಾಯಿಕಡಿ ಇಟ್ಟು, ಅದರಲ್ಲಿ ನೆನೆ ಹೊತ್ತಿಸಿಟ್ಟು, ನೀರಲ್ಲಿ ಬಿಡುತ್ತಿದ್ದ ಹಾಗೇ, ತೇಲುತ್ತಾ ಹೋಗಿ, ಸುಳಿಯ ನಡುವಲ್ಲಿ ಒಮ್ಮೆಲೇ ಒಳಸೇರಿಕೊಂಡಿತ್ತು. ಎಲ್ಲವೂ ನಿನ್ನೆ ಮೊನ್ನೆ ನಡೆದ ಹಾಗಿದೆ. ಈ ತೊಟಿಲ ಸುಳಿಯಲ್ಲೂ, ಏನಿಟ್ಟರೂ ಸುಳಿ ಒಳಕ್ಕೆಳೆದುಕೊಳ್ಳಬಹುದು, ಅಂತ ಅವನಿಗೆ ಆವತ್ತಿನಿಂದಲೂ ಅನ್ನಿಸುತ್ತಿತ್ತು. ಆ ಸುಳಿಯ ಆಳ ನೋಡಿದವರೇ ಇಲ್ಲವಂತೆ. ಮಡೆಂಜಿ, ಪೆರುವೋಲು, ಕರಿಮೀನು, ಸೀಕೊರ್ಟೆ ಹೀಗೆ ಎಲ್ಲ ಜಾತಿಯ ಮೀನುಗಳೂ ರಾಶಿ ರಾಶಿ ಅದರೊಳಗಡೆ ಇದ. ಬೇಸಿಗೆಯಲ್ಲಿ 'ಕಡು' ಹಾಕಿದಾಗಲೋ, ಸುಳಿಯ ಅಂಚಿನಲ್ಲಿ ತೋಟೆ ಹಾಕಿದಾಗಲೋ ಒಂದಷ್ಟು ಮೀನುಗಳ ಮುಖ ಕಂಡದ್ದು ಬಿಟ್ಟರೆ, ಮತ್ತೆ ಮಳೆಗಾಲದಲ್ಲಿ ಗಾಳ ಹಾಕಿದಾಗ ಮಾತ್ರ ಅವನು ಮೀನುಗಳನ್ನು ಕಂಡದ್ದು. 'ಜಾರ್ದೆ' ತಿಂಗಳ ಗಾಳಿ ಬೀಸುವಾಗ, ಸುಳಿಯಲ್ಲಿ ಮೀನುಗಳು ಹಾರುವುದನ್ನು ನೋಡುತ್ತಾ, ಅದೆಷ್ಟೋ ಹೊತ್ತು ಅಲ್ಲೇ ಕುಳಿತುಬಿಡುತ್ತಿದ್ದುದೂ ಉಂಟು. ಆ ನದಿಯ ಎಲ್ಲ ಗುಂಡಿಗಳ ಆಳ ನೋಡಿದ್ದರೂ, ಯಾಕೋ, ಕಪ್ಪಗೆ ಕತ್ತಲು ತುಂಬಿಕೊಂಡ ತೊಟಿಲ ಸುಳಿಯ ಆಳ ನೋಡುವ ಧೈರ್ಯ ಚನಿಯನಿಗೆ ಒಮ್ಮೆಯೂ ಬಂದಿಲ್ಲ. ಹಿಂದೆ ಕಾಸರಗೋಡಿನ ಕಡೆಯಿಂದ ಬಂದ ಪುತ್ತು ಬ್ಯಾರಿ ತುಂಬಾ ಆಳದವರೆಗೆ ಹೋಗಿದ್ದನಂತೆ. ಅವನು ಮುಳುಗುವುದರಲ್ಲಿ ಮಹಾಗಟ್ಟಿಗನಂತೆ. ತೋಟೆ ಹಾಕಿ ಮೀನು ತೆಗೆಯಲು ಹಾರಿದವ, ಆಳ ಆಳಕ್ಕೆ ಹೋದಾಗ ಅಲ್ಲಿ ಅವನಿಗೆ ದೇವಸ್ಥಾನದ 'ಮುಗುಳಿ' ಕಂಡಿತ್ತಂತೆ. ಆದರೆ ಅದನ್ನು ಮೇಲೆ ಬಂದು ಹೇಳುವ ಮೊದಲೇ ಅವನು ಸತ್ತು ಹೋದನಂತೆ, ಅಂತ ಚನಿಯನ ಅಪ್ಪ ಕುರುಂಬಿಲ ಆಗಾಗ ಹೇಳುತ್ತಿದ್ದ. ಗಾಳ ಕೆಳಗೆಲ್ಲೋ ಸಿಕ್ಕಿಕೊಂಡು, ಎಷ್ಟು ಎಳೆದರೂ ಬಾರದಿದ್ದರೆ, ಚನಿಯನೂ, ಅದು ದೇವಸ್ಥಾನದ ಮುಗುಳಿಯಲ್ಲಿ ಸಿಕ್ಕಿಕೊಂಡಿರಬಹುದೆಂದು ಎಳೆಯದೆ ಹಾಗೆ ಬಿಟ್ಟುಬಿಡುತ್ತಿದ್ದ. ಅಮವಾಸ್ಯೆ, ಸಂಕ್ರಾಂತಿಗಳಲ್ಲಿ, ಈಗಲೂ ಯಾರೂ ಅಲ್ಲಿಗೆ ಒಬ್ಬಂಟಿಯಾಗಿ ಹೋಗುವುದಿಲ್ಲ. ಸುಳಿಯಲ್ಲಿರುವ 'ನಿಗಾರ್'ಗಳು ನೀರಿಗಿಳಿದವರನ್ನು ಒಳಗೆ ಎಳೆದುಕೊಳ್ಳುತ್ತವೆ. ಆ ನಿಗಾರ್‌ಗಳು ಹೇಗಿರುತ್ತವೆ ಅಂತ ಯಾರೂ ನೋಡಿದವರಿಲ್ಲ. ಆದರೆ ಒಳಕ್ಕೆ

ಎಳೆದುಕೊಂಡು, ರಕ್ತ ಹೀರಿ ಬಿಟ್ಟುಬಿಡುತ್ತವೆ, ಅಂತ ಜನ ಹೇಳುವುದನ್ನು ಚನಿಯ ಕೇಳದವನ ನೇನೂ ಅಲ್ಲ. ಅದನ್ನು ಅವನೇ, ಎಷ್ಟೋ ಜನರಿಗೆ ಹೇಳಿದ್ದಾನೆ.

ಚನಿಯನಿಗೆ ಆ ನಿಗಾರ್‌ಗಳಾದರೂ ತನ್ನನ್ನು ಈಗ ಒಳಕ್ಕೆ ಎಳೆದುಕೊಳ್ಳಬಾರದೇ ಅನ್ನಿಸುತ್ತದೆ. ನೀರೊಳಗೆ ಬಿಟ್ಟ ಗಾಳ ಮಿಸುಕಾಡುತ್ತಲೇ ಇಲ್ಲ. ಕೆಂಪುನೀರಿನಲ್ಲಿ ತೆಂಗಿನಕಾಯಿ ಕೊಚ್ಚಿಕೊಂಡು ಬರುವುದು ಕಂಡರೂ, ಅದನ್ನು ಹಿಡಿಯುವ ಮನಸ್ಸಿಲ್ಲ. ಹಿಂದೆಲ್ಲ ಆಗಿದ್ದರೆ, ಆಟಿ ತಿಂಗಳಲ್ಲಿ, ನೂರು-ನೂರೈವತ್ತು ತೆಂಗಿನಕಾಯಿಯಾದರೂ ನದಿಯಲ್ಲಿ ಹಿಡಿಯುತ್ತಿದ್ದ. ಈಗ ಚನಿಯನಿಗೆ ಯಾವುದೂ ಬೇಡ ಅನ್ನಿಸುತ್ತಿದೆ. ಅವನಿಗೆ ನಿಂತಲ್ಲಿ ನಿಲ್ಲಲಾಗುತ್ತಿಲ್ಲ. ಯಾರಲ್ಲೂ ಹೇಳಿ ಕೊಳ್ಳಲಾರ. ಗಡಂಗಿನ ಕಡೆ ಹೋಗ ಬೇಕೆನ್ನಿಸಿದರೂ, ಅಲ್ಲಿ ಯಾರಾದರೂ ಆ ಬಗ್ಗೆ ಪ್ರಶ್ನಿಸಿದರೆ ಎಂಬ ಭಯ ಅವನನ್ನು ಇನ್ನಿಲ್ಲದಂತೆ ಕಾಡುತ್ತದೆ. ಅವನಿಗೆ, ತನ್ನನ್ನು ಮರೆಯುವುದಕ್ಕೆ ಇರುವ ದಾರಿಯೆಂದರೆ, ಸೀತುವಿನ ಕಳ್ಳಭಟ್ಟಿಯ ಸರಾಯಿ ಅಥವಾ 'ಮಾವೂರಿ' ಊದುತ್ತಾ ಕೂತುಬಿಡುವುದು, ಇಲ್ಲದಿದ್ದರೆ ಗಾಳ ಹಾಕುತ್ತಾ, ಸುಳಿಯ ಬಾಗಿಲಿನ ಪಾದೆಯ ಮೇಲೆ ಕುಳಿತು, ಕಯದಲ್ಲಿ ನೀರು ಸುತ್ತುವುದನ್ನು ನೋಡುವುದು. ಬೆಳೆದು ನಿಂತ ಮಗನಿಗೆ ಬೇಡ ಅಂತ ಹೇಳುವುದಾದರೂ ಹೇಗೆ?... ಅವನಲ್ಲಿ ಸಮಸ್ಯೆ ಭೂತಾಕಾರವಾಗಿ ಬೆಳೆಯುತ್ತಿತ್ತು. ಯಾಕೋ ಮಾವೂರಿಯನ್ನು ಕೈಗೆತ್ತಿಕೊಳ್ಳಲು ಮನಸ್ಸಾಗ ಲಿಲ್ಲ. ಕಳೆದ ವರ್ಷ, ಕಾಡುಬದನೆಯ ಚಿಪ್ಪಿಗೆ ಓಟೆ ಸಿಕ್ಕಿಸಿ ಮಾಡಿದ ಮಾವೂರಿ, ಯಾಕೋ ಸರಿಯಾಗಿ ಸ್ವರ ಕೊಡುತ್ತಿಲ್ಲ. ಅವನಿಗೆ ಉಳಿದಿದ್ದ ದಾರಿಯೆಂದರೆ, ಸುಳಿಯ ಬಾಗಿಲಿನ ಪಾದೆಯ ಮೇಲೆ ಕೂತು ಗಾಳ ಹಾಕುವುದು ಮಾತ್ರ.

ಮೊನ್ನೆಯಿಂದ ಒಂದು ರೀತಿಯ ಚಡ ಪಡಿಕೆ. ಎದೆಯೊಳಗೆ ಏನೋ ಹರಿದಂಥ ನೋವು, ಭಯ, ದ್ವಂದ್ವ, ಹೇಳಲಾಗದ ಭಾವನೆ ಗಳು. ಎಲ್ಲಾದರೂ ಯಾರೂ ಕಾಣಲಾರದ ಊರಿಗೆ ಹೋಗಿಬಿಡಬೇಕು ಅನ್ನಿಸುತ್ತಿತ್ತು. ಆವತ್ತು, ಹೆಂಡತಿ ಕಟದು ಸತ್ತಾಗ ಕೂಡಾ ಈ ರೀತಿಯಾಗಿರಲಿಲ್ಲ. ಅವಳ ಸಾವು, ದ್ವೇಷದ ಕಿಡಿಯೆಬ್ಬಿಸಿದ್ದರೂ, ಕತ್ತಲ ರಾತ್ರಿಯಲ್ಲಿ, ಎದೆಯ ಮೇಲೆ ಮುಡಿಯಕ್ಕಿ ಇಟ್ಟ ಹಾಗೆ ನೋವು ಕೊಟ್ಟಿದ್ದರೂ, ಈ ರೀತಿಯ ಭಾವನೆಗಳಲ್ಲ ಅವು. ಅಂದು ದರ್ಪ, ಅಧಿಕಾರದೆದುರು ಅಸಹಾಯಕ ನಾಗಿದ್ದ ಚನಿಯ, ಇಂದು ತನ್ನೊಳಗಿನ ಸತ್ಯ ಗಳೆದುರು ದುರ್ಬಲನಾಗಿಬಿಟ್ಟಿದ್ದ. ಅಂದು ಎಲ್ಲವನ್ನು ಒಪ್ಪಿ ಕೊಂಡಷ್ಟು ಸುಲಭವಾಗಿ ಇವತ್ತು ಒಪ್ಪಿಕೊಳ್ಳಲಾಗುತ್ತಿಲ್ಲ.


ಸುಳಿಯಲ್ಲಿ ಪೆರುವೊಲು ಮೀನೊಂದು, ನೀರ ಮೇಲೆ ಬಂದು, ನೀರು ಹಾರಿಸಿ, ಮತ್ತೆ ಒಳಸೇರಿಕೊಂಡಿತು. ಕಟದು ಇದ್ದಾಗಲೂ ಕೆಲವೊಮ್ಮೆ ಹೀಗೆ, ದಿನಗಟ್ಟಲೆ ಸುಳಿಯ ಬಾಗಿಲಲ್ಲಿ ಕುಳಿತುಬಿಡುತ್ತಿದ್ದ. ಕಟದುವಿನ ನೆನಪು ಈಗಲೂ ಅವನ ಮೈ ಬೆಚ್ಚಗಾಗಿಸುತ್ತದೆ. ಅಂಥ ಹೆಣ್ಣು ಸಿಗಲಿಕ್ಕಿಲ್ಲ ಅಂದುಕೊಳ್ಳುತ್ತಾನೆ. ಅವನ ದವಡೆಯ ನರಗಳು ಬಿಗಿದುಕೊಳ್ಳುತ್ತವೆ. ಕಟದು ವನ್ನು 'ಉಳ್ಳೆಲೋ' ಮಾಡಿಕೊಂಡದ್ದೂ ಒಂದು ವಿಚಿತ್ರ ಸಂದರ್ಭದಲ್ಲಿ. ಅವಳ ಅಮ್ಮನ ಮನೆ ಬಂಗಾಡಿಯಾಚೆ. ಅವಳಪ್ಪ ಬಂಗಾಡಿಯ ಪಟೇಲರ ಮನೆಯ ಮೂಲದ ಒಕ್ಕಲು. ಚನಿಯ, ಘಟ್ಟಕ್ಕೆ ಕಾಫಿ ತೋಟದ ಕೆಲಸಕ್ಕೆ ಹೊರಟವ, ಉಜಿರೆಯ ಸೇಂದಿ ಅಂಗಡಿಯಲ್ಲಿ ಹುಳಿ ಹೆಂಡ ಕುಡಿದು, ದಾಸಪ್ಪರ ಅಂಗಡಿ ಯೆದುರು, ಮಾವಿನ ಮರದ ನೆರಳಲ್ಲಿ ಹಾಯಾಗಿ ಮಲಗಿದ್ದ. ಅಲ್ಲೇ ಹತ್ತಿರದಲ್ಲಿ, ಗಾಡಿ ನಿಲ್ಲಿಸಿ, ಎತ್ತುಗಳಿಗೆ ಬೈಹುಲ್ಲು, ನೀರು ಹಾಕುತ್ತಿದ್ದ ಪಟೇಲರ ಆಳು ಚಂರ್ಬನಿಗೆ, ಅದು ಹೇಗೋ ಚನಿಯನ ಪರಿಚಯವಾಯಿತು. ಗಡಂಗಿನಲ್ಲಿ ಒಂದು ಕುಪ್ಪಿ ಸೇಂದಿ ತೆಗೆಸಿಕೊಟ್ಟ ಚನಿಯ,

ಅವನಿಗೆ ಮತ್ತೂ ಹತ್ತಿರವಾದ. 'ಘಟ್ಟದಲ್ಲಿ ದೊಡ್ಡ ಜ್ವರ ಸುರುವಾಗಿದೆಯಂತೆ, ಯಾಕೆ ಅಲ್ಲೆಲ್ಲಾ ಹೋಗಿ ಸಾಯುತ್ತಿ. ಬೇಕಾದರೆ ಧಣಿಗಳಲ್ಲಿ ನಾನು ಹೇಳುತ್ತೇನೆ. ಬರುವುದಾದರೆ ಬಾ' ಅಂತ ಚಂರ್ಬ ಕರೆದಿದ್ದ. ಚನಿಯ ಆಗ ಯೌವನ ಉಕ್ಕುವ ಕಟ್ಟುಮಸ್ತಾದ ಆಳು. ಚಂರ್ಬ ಆಗಲೇ ಬೇರೊಂದು ಲೆಕ್ಕಾಚಾರ ಹಾಕಿದ್ದ. ಪಟೇಲರು ದಾಸಪ್ಪರ ಅಂಗಡಿಯಲ್ಲಿ ಲೆಕ್ಕ ಚುಕ್ತ ಮಾಡಿ ಬಂದು, ಗಾಡಿಯ ಮೂಕಿಯ ಮೇಲೆ ಕೂತು ಎಲೆ ಅಡಿಕೆ ಹಾಕಿಕೊಳ್ಳುತ್ತಿದ್ದಾಗ ಚಂರ್ಬ, ಚನಿಯನ ವಿಷಯ ಪ್ರಸ್ತಾಪಿಸಿದ್ದ. ಚಂರ್ಬನಿಗೆ ಈಗೀಗ ಗಾಡಿಯ ಮೂಕಿ ಎತ್ತಿದರೆ ಬೆನ್ನುನೋವು ಸುರುವಾಗುತ್ತಿತ್ತು. ಪಟೇಲರಿಗೆ ಗಾಡಿಯ ಹಿಂದೆ ಬರುವುದಕ್ಕೆ ಒಬ್ಬ ಗಟ್ಟಿ ಆಳು ಬೇಕಿತ್ತು. ಹಾಗೆ ಚನಿಯ ಬಂಗಾಡಿಗೆ ಬಂದದ್ದು.

ಎಲ್ಲವೂ ಚಂರ್ಬನ ಲೆಕ್ಕಾಚಾರದಂತೆ ನಡೆದು, ಅವನ ಮಗಳು ಕಟದುವಿನ ಉಳ್ಳೆಲೋ ಚನಿಯನೊಟ್ಟಿಗೆ ಗಡದ್ದಿನಲ್ಲೇ ಆಗಿತ್ತು. ಮೂಲದ 'ದಿಕ್ಕಲ್' (ಹುಡುಗಿ) ಅಂತ ಪಟೇಲರೂ ಕೈಬಿಚ್ಚಿ ಖರ್ಚು ಮಾಡಿದ್ದರು. ಅದಕ್ಕಿಂತಲೂ, ಬೇರೆ ಕಡೆ ಮದುವೆ ಆಗಿ ಹೋದರೆ, ಒಂದು ಆಳು ತಪ್ಪಿಹೋಗುತ್ತದಲ್ಲಾ ಎನ್ನುವ ಲೆಕ್ಕಾಚಾರ ಅವರದ್ದು. ಈಗ, ಒಂದು ಆಳು ಹೆಚ್ಚುತ್ತದೆ ಎನ್ನುವ ಖುಷಿಯಲ್ಲಿ, ಕೇಳಿದ್ದೆಲ್ಲಾ ಕೊಟ್ಟಿದ್ದರು. ಮದುಮಗನಾದರೂ, ಚನಿಯ ದುಡಿ ಹಿಡಿದು ಕುಣಿದಿದ್ದ. ತನ್ನವರು ಅಂತ ಯಾರೂ ಇಲ್ಲದಿದ್ದ ಚನಿಯನಿಗೆ, ಚಂರ್ಬ ಮತ್ತವನ ನೆಂಟರೇ ಎಲ್ಲವೂ ಆದರು. ಆದರೆ ಪಟೇಲರ ಜೊತೆಗೆ ಚನಿಯನಿಗೆ ಯಾಕೋ ಕೂಡಿ ಬರಲಿಲ್ಲ. ಚಂರ್ಬನ ಹಾಗೆ ಹೇಳಿದ್ದಕ್ಕೆಲ್ಲ ಹೂಂಗುಟ್ಟ ಸುಮ್ಮನಿರುವ ಅಸಾಮಿಯೂ ಅಲ್ಲ. ಒಂದೆರಡು ವರ್ಷದಲ್ಲಿ ಚನಿಯ ಅಲ್ಲಿಂದ ಗಾಡಿಕಟ್ಟಿದ್ದ. ಹಾಗೆ ಬಂದವನು ಈ ಊರಿಗೆ ಬಂದು ನೆಲೆ ನಿಂತದ್ದು.

ಘಟ್ಟಕ್ಕೆ ಅಂತ ಬಟ್ಟೆಯ ಗಂಟಿನೊಂದಿಗೆ ಹೊರಟಿದ್ದ ಗಂಡ ಹೆಂಡತಿಯನ್ನು ಶಂಕರಯ್ಯ ಕರಕೊಂಡು ಬಂದದ್ದು. ಸರಿಯಾಗಿ ಗೊತ್ತಿಲ್ಲದ, ಜ್ವರದ ಊರಿನಲ್ಲಿ, ಶೇರೆಗಾರರ ದರ್ಬಾರಿನಡಿಯಲ್ಲಿ ಬದುಕುವುದಕ್ಕಿಂತ, ಸಂಬಳ ಕಡಿಮೆಯಾದರೂ ಊರೇ ಒಳ್ಳೆಯದು ಅಂತ ಆಗ ಅನ್ನಿಸಿತ್ತು. ಗುರಿಯಿಲ್ಲದೆ ಹೊರಟವರಿಗೆ ಯಾವ ಊರಾದರೇನು? ಮರುಮಾತನಾಡದೆ ಹೊರಟಿದ್ದ. ಇಬ್ಬರೂ ಗಾಡಿಯ ಚೌಕ ಹಿಡಿದು, ಕತ್ತಲು ಮಗುಚಿಕೊಳ್ಳುವ ಹೊತ್ತಿಗೆ ಈ ಊರಿಗೆ ತಲುಪಿದ್ದರು.

ಶಂಕರಯ್ಯನ ತೋಟದಲ್ಲಿ ಬೆಳಗ್ಗಿನಿಂದ ರಾತ್ರಿಯವರೆಗೆ ದುಡಿದು ಸುಸ್ತಾಗಿ, ಸಂಜೆ ಸೀತುವಿನಲ್ಲಿ ಕಂಟ್ರಿಯೋ ಅಥವಾ ಸೇಸು ಪೂಜಾರಿಯ ಮನೆಯಲ್ಲಿ ಹುಳಿ ಹೆಂಡವೋ ಕುಡಿದು, ತೋಟದ ಮೂಲೆಯ ಪಂಪುಶೆಡ್ಡಿನ ಪಕ್ಕದ ಗುಡಿಸಲಿನಲ್ಲಿ ಮೈಮರೆತು ಮಲಗುತ್ತಿದ್ದ. ಕಟದು ಎಬ್ಬಿಸಿ, ಬಡಿಸಿದರೆ ಉಣ್ಣುತ್ತಿದ್ದ, ಇಲ್ಲದಿದ್ದರೆ ಇಲ್ಲ. ಕೆಲಸಕ್ಕೆ ಹೋಗದ ದಿನ, ತೋಟದ ಸುಳಿಯಲ್ಲಿ ಇಡೀ ದಿನ ಕೂತಿರುತ್ತಿದ್ದ. ಯಾಕೋ ಕಟದುವನ್ನು ನೆನೆದಾಗ




ಕಣ್ಣಂಚಿನಲ್ಲಿ ನೀರಾಡುತ್ತದೆ. ಸಿಟ್ಟು ಉಕ್ಕೇರುತ್ತದೆ. ಅವನ ಜೋತುಬಿದ್ದ ಸ್ನಾಯುಗಳು ಬಿಗಿದುಕೊಳ್ಳುತ್ತವೆ. ಯಾರನ್ನು ನಂಬುವುದು ಅಂತ ಅವನಿಗೆ ಅರ್ಥವಾಗುವುದಿಲ್ಲ. ತಾನು ನಂಬಿದ ಮಂತ್ರದ ಗುಳಿಗ ಅಸಹಾಯಕನಾಗಿ ಕಾಣುತ್ತಾನೆ. ಊರಿನ ದೈವ ಲೆಕ್ಕೆಸಿರಿ, ಯಾವತ್ತೂ ಉಳ್ಳವರ ಪರ ಎನ್ನುವುದನ್ನು ಅವನು ಗೊತ್ತಿದ್ದೂ ನಂಬಲಾರದವ. ದ್ವೇಷದ ಕಿಡಿ, ಇನ್ನೂ ತಂಪಾಗಿಯೇ ಇಲ್ಲವೇನೋ ಎನ್ನುವ ಹಾಗೆ, ಒಳಗೊಳಗೇ ಭುಗಿಲೇಳುತ್ತದೆ. ಮಗ ಈಗ ಮಾಡುತ್ತಿರುವುದರಿಂದಲಾದರೂ ಅವನಿಗೆ ಸಮಾಧಾನವಾಗಬಹುದಿತ್ತು. ಆದರೆ ಅದೂ ಅವನಿಗೆ ಸಾಧ್ಯವಾಗುವುದಿಲ್ಲ.

ಆ ದಿನಗಳು ಮತ್ತೆ ನೆನಪಾಗುತ್ತವೆ. ತನ್ನ ಬಿಸಿರಕ್ತ ಉಕ್ಕೇರುತ್ತಿದ್ದ ದಿನಗಳು. ಕಟದುವನ್ನು ಮದುವೆಯಾಗಿ ಇನ್ನೂ ಒಂದು ವರ್ಷವೂ ಆಗಿಲ್ಲ. ಈ ಊರಿಗೆ ಬಂದು ನಾಲ್ಕೈದು ತಿಂಗಳು ಕಳೆದಿರಬಹುದು. ಜಾರ್ದೆ ತಿಂಗಳ ಚುಮುಚುಮು ಕೊರೆಯುವ ಚಳಿ. ಉಬ್ಬಸ ಬಂದವರಂತೆ ಸುಂಯ್‌ಗುಡುವ ತೆಂಕಣದ ಗಾಳಿ. ಊರಲ್ಲಿ ಸರಾಯಿ ವಿರುದ್ಧದ ಗಂಟಿ ಜೋರಾಗಿತ್ತು. ಈಚಲು ಮರಗಳನ್ನು ಕಡಿದು ಹಾಕುವುದು, ಸರಾಯಿ ಅಂಗಡಿಗಳನ್ನು ಸುಡುವುದು ಮುಂತಾದುವು ನಡೆದಿತ್ತು. ತಂಪಾಗಿದ್ದ ಊರಿನಲ್ಲಿ ಬೆಂಕಿ ಬಿದ್ದಿತ್ತು. ಶಂಕರಯ್ಯ, ತಾನು ಶ್ಯಾನುಭೋಗನಾದುದರಿಂದ ಅದರಲ್ಲೆಲ್ಲಾ ಭಾಗವಹಿಸುವಂತಿಲ್ಲವೆಂದು ಜಾರಿಕೊಂಡರು. ಚನಿಯನಿಗಂತೂ ಅದು ಯಾವುದೂ ಖುಷಿ ಕೊಡುವ ವಿಷಯವಾಗಿರಲಿಲ್ಲ. ಅವನ ದಿನಚರಿಯಲ್ಲಿ ಯಾವ ಬದಲಾವಣೆಗಳೂ ಆಗಲಿಲ್ಲ. ಕಾಸರಗೋಡಿನ ಕಡೆಯಿಂದ ಬಂದಿದ್ದ, ಒರಟು ಅಂಗಿ, ಧೋತರ ಉಟ್ಟಿದ್ದ, ಬಿಳಿ ಟೊಪ್ಪಿ ಹಾಕಿದ ಯುವಕನೋರ್ವ ಎಲ್ಲರನ್ನೂ ಕರೆತಂದು ಗಲಾಟೆ ಮಾಡಿಸುತ್ತಿದ್ದ. ಏನೇನೋ ಬರಹಗಳನ್ನು ಹಂಚುತ್ತಿದ್ದ. ಅದು ಯಾವುದೂ ಚನಿಯನಿಗೆ ಅರ್ಥವಾಗುತ್ತಿರಲಿಲ್ಲ. ಎಲ್ಲರ ಹಾಗೆ ಆ ಯುವಕನಿಗೂ ಶಂಕರಯ್ಯನ ಮನೆಯಲ್ಲೇ ಊಟ ಆಗಿತ್ತು.

ಮರುದಿನ, ಕುದುರೆಯ ಮೇಲೆ, ಪಾಂಡುರೋಗ ಬಂದ ರೀತಿಯಲ್ಲಿದ್ದ ಬಿಳಿಚರ್ಮದವನೊಬ್ಬ ನದಿಯಾಚೆ ದಡದಲ್ಲಿ ಬಂದು ನಿಂತಿದ್ದ. ಶಂಕರಯ್ಯ, ಅವನು ಬಂದದ್ದು ತಿಳಿದ ಕೂಡಲೇ, ನದಿಯವರೆಗೆ ಹೋಗಿ ಕರಕೊಂಡು ಬಂದಿದ್ದರು. ಚನಿಯನೇ ಶೀನಪ್ಪಗೌಡರ ಮನೆಗೆ ಹೋಗಿ, ಕೋಳಿ ಪದಾರ್ಥ ಮಾಡಿ ತರಲು ಹೇಳಿದ್ದ, ಶಂಕರಯ್ಯನವರ ಪರವಾಗಿ. ಶಂಕರಯ್ಯನವರ ಜಗಲಿಯಲ್ಲೇ ಊಟಕ್ಕೆ ವ್ಯವಸ್ಥೆ ಮಾಡಿಸಿದ್ದರು. ಅವನ ಪೇಟ, ಜರಿಜರಿ ಅಂಗಿ, ಮಿನುಗುವ ಸೊಂಟದ ಬೆಲ್ಟು, ಸೀಮೆ ಬದನೆಯ ಹಾಗೆ ಕಾಣುವ ಅವನ ಚಲ್ಲಣ, ಎಲ್ಲವನ್ನೂ ಚನಿಯ ಬಿಡುಗಣ್ಣಿನಿಂದ ನೋಡುತ್ತಾ ನಿಂತುಬಿಟ್ಟಿದ್ದ.


ಪ್ರವಾಹದಲ್ಲಿ ದೊಡ್ಡ ಮರವೊಂದು ಕೊಚ್ಚಿಕೊಂಡು ಬಂದು, ಸುಳಿಯ ಬಾಗಿಲಲ್ಲಿ ನಿಂತು, ಜುಳುಜುಳು ಶಬ್ದ ಮಾಡಲಾರಂಭಿಸಿದಾಗ ಅವನಿಗೆ ಎಚ್ಚರವಾಯಿತು. ಕುಳಿತಲ್ಲಿಂದಲೇ ಮೆಲ್ಲ ಕಾಲು ಜಾರಿಸಿ, ಮರದ ಕೊರಡಿಗೆ ಒದ್ದ. ಪ್ರವಾಹದ ಸೆಳೆತಕ್ಕೆ ಸಿಕ್ಕಿದ ಮರದ ಕಾಂಡ, ತಿರುಗುತ್ತಾ, ಗೊತ್ತೇ ಆಗದಂತೆ ಕಯದೊಳಗೆ ಮುಳುಗಿ ಮಾಯವಾಗಿತ್ತು. ಮತ್ತೆಲ್ಲೋ ದೂರದಲ್ಲಿ ಎದ್ದು, ನೀರಿನಲ್ಲಿ ಮುಳುಗುತ್ತಾ ಏಳುತ್ತಾ ಮುಂದೆ ಸಾಗುವುದು ಚನಿಯನಿಗೆ ಕೂತಲ್ಲಿಂದಲೇ ಕಾಣುತ್ತಿತ್ತು. ಚನಿಯನ ಮನಸ್ಸಿನಲ್ಲೇಕೋ ಆ ನೆನಪುಗಳು ಒಂದರ ಹಿಂದೆ ಒಂದು ಮೆರವಣಿಗೆ ಹೊರಟಿದ್ದವು.

ಮಗನ ನಿರ್ಧಾರ ತಪ್ಪು ಅಂತ ಹೇಳಬೇಕೆನಿಸಿದ್ದು ಯಾಕೆ ಅಂತ ಅವನಿಗೆ ಅರ್ಥವಾಗುವುದಿಲ್ಲ. ಅರ್ಥವಾದರೂ ಯಾಕೆನ್ನುವುದನ್ನು ಹೇಳಲಾರ. ಆ ಬಿಳಿ ತೊಗಲಿನ ಪರಂಗಿಯವನ



ಕುದುರೆ, ಟಪಟಪ ಸದ್ದು ಮಾಡುತ್ತಾ ಬಂದ ಹಾಗೆ, ಕುದುರೆಯ ಲಾಳ ಹಾಕಿದ ಕಾಲುಗಳು ತನ್ನೆದೆಯ ಮೇಲೆ ಊರಿಟ್ಟ ಹಾಗೆ, ಅಲ್ಲಿಂದ ಕೆಂಪುರಕ್ತ ಛಿಲ್ಲೆಂದು ಹಾರಿದ ಹಾಗೆ, ಯಾಕೋ ಅವನೆದೆಯ ಒಳಗೆ ನೋವು ಮೂಕವಾಗಿ ಚೀರುತ್ತದೆ; ತನ್ನೊಂದಿಗೆ, ಕೇವಲ ತನ್ನನ್ನು ನಂಬಿ ಬಂದ ಕಟದು, ಇದೇ ಕಯದಲ್ಲಿ ಹೆಣವಾಗಿ ಬಾತುಕೊಂಡು ತೇಲಿಬಂದದ್ದು, ಜನರೆಲ್ಲ 'ಅವಳನ್ನು ನಿಗಾರ್ ಎಳೆದದ್ದು' ಅಂತ ಮಾತಾಡಿಕೊಂಡದ್ದು. ಆದರೆ ಅದರ ಹಿಂದಿನ ಸತ್ಯ ತನಗೆ ತಿಳಿದದ್ದು! ಹೌದು, ಅಡಿಕೆ ಕೊಯ್ಯುತ್ತಿದ್ದ ಅವನು ಆಕಾಶದೆತ್ತರ ಅಡಿಕೆ ಮರದ ಮೇಲಿಂದ 'ಮಣೆಬಳ್ಳಿ'ಯ ಮೇಲೆ ಕೂತು, ತನ್ನ ಕಣ್ಣಾರೆ ಕಂಡ ಸತ್ಯವದು. ಅವನ ರಕ್ತ ಈ ಮೈ ನಡುಗುವ ಪ್ರಾಯದಲ್ಲೂ ಕುದಿಯುತ್ತಿದೆ. ಅಡಿಕೆ ಮರದ ಮೇಲಿನಿಂದ ಧಣಿಗಳ ಮನೆಯ ಅಂಗಳ ಸ್ಪಷ್ಟವಾಗಿ ಕಾಣುತ್ತಿತ್ತು. ಮಧ್ಯಾಹ್ನದವರೆಗೆ ಕಟದು ಅಡಿಕೆ ಹೆಕ್ಕಲು ಬಂದಿದ್ದಳು. ಮಧ್ಯಾಹ್ನ ನಂತರ ದನಗಳಿಗೆ ಹುಲ್ಲೂ ಇಲ್ಲ ಅಂತ, ತೆಂಗಿನ ಹಾಡಿಗೆ ಹುಲ್ಲು ಹೆರೆಯುವುದಕ್ಕೆಂದು ಧಣಿಗಳೇ ಕಳುಹಿಸಿದ್ದು. ಈಗ ಮತ್ತೆ ಮನೆಯ ಅಂಗಳದಲ್ಲಿ ಅವಳು ಕಾಣಿಸಿಕೊಂಡಾಗ ಚನಿಯನಿಗೆ ಆಶ್ಚರ್ಯವಾಯಿತು. ಬೇರೇನಾದರೂ ಕೆಲಸ ವಿರಬಹುದೆಂದು, ಅಡಿಕೆ ಗೊನೆಗೆ ಕೊಕ್ಕೆ ಸಿಕ್ಕಿಸಿ ಎಳೆಯುವುದರಲ್ಲಿ ಮಗ್ನನಾದ. ಅರೆ, ಅವಳ್ಯಾಕೆ ಉಯ್ಯಾಲೆ ಕೊಟ್ಟಿಗೆಗೆ ಹೋಗುತ್ತಿದ್ದಾಳೆ. ಅವರಿಗೆ ಅಲ್ಲಿ ಪ್ರವೇಶವಿಲ್ಲ. ಅಲ್ಲದೆ, ಅಲ್ಲಿ, ಬಿಳಿ ತೊಗಲಿನ ಪರಂಗಿ ಬಿದ್ದುಕೊಂಡಿದ್ದಾನೆ, ಅಂದು ಕೊಂಡ. ಅವನಿನ್ನೂ ಮರದಿಂದ ಇಳಿದಿಲ್ಲ, "ನನ್ನನ್ನಿಲ್ಲಿ ಕೊಲ್ಲುತ್ತಾರೆ, ಯಾರಾದ್ರೂ ಬನ್ನಿ" ಅಂತ ಹೆಣ್ಣೊಂದು ಕೂಗಿದ ಹಾಗೆ ಕೇಳಿಸಿತು. ಅದು ತನ್ನ ಭ್ರಮೆಯಿರಬಹುದು ಅಂದುಕೊಂಡ. ನದಿಯಲ್ಲಿ ನೀರಿಳಿಯುವ ಶಬ್ದಕ್ಕೆ ಆ ರೀತಿ ಕೇಳಿಸಿರಬಹುದು ಅನ್ನಿಸಿ, ಅಡಿಕೆ ಮರದಿಂದ ಇಳಿದು, ಮಣೆಬಳ್ಳಿ ಬಿಚ್ಚಿ ಇನ್ನೊಂದು ಮರಕ್ಕೆ ಹತ್ತಲಾರಂಭಿಸಿದ. ಹತ್ತಿ, ಗೊನೆಗೆ ಕೊಕ್ಕೆ ಸಿಕ್ಕಿಸುವ ಮೊದಲು ಅವನ ದೃಷ್ಟಿ ಅಯಾಚಿತವಾಗಿ ಧಣಿಗಳ ಮನೆಯ ಅಂಗಳಕ್ಕೆ ಹೋಯಿತು. ಅವನ ಎದೆ ನಡುಗಿತು. ಹೌದು ಅದು ಕಟದು. ಉಯ್ಯಾಲೆ ಕೊಟ್ಟಿಗೆಯಿಂದ ವಾಲಾಡುತ್ತಾ ಬರುತ್ತಿದ್ದಾಳೆ. ದೇಹದ ಮೇಲೆ ಕೇವಲ ಲಂಗ,

ರವಕೆ ಮಾತ್ರ ಇದೆ. ಕೂದಲು ಕೆದರಿದೆ. ಚನಿಯನೆದೆ ಜುಂ ಎಂದಿತು. ಒಂದೇ ಗುತ್ತಿನಲ್ಲಿ ಕಂಗಿನ ಮೇಲಿಂದ ಜಾರಿದ. ತೋಟದ ಬೇಲಿಯನ್ನು ಬಳಸಿಕೊಂಡು ಮನೆಗೆ ಬರಬೇಕಾದರೆ ಕಾಲು ಗಂಟೆಯಾದರೂ ಬೇಕು. ಮರು ಯೋಚನೆ ಮಾಡದೆ ಓಡುತ್ತಲೇ ಮನೆಗೆ ಬಂದರೆ ಏನೂ ಇಲ್ಲ. ಶಂಕರಯ್ಯ ಏನೂ ತಿಳಿಯದವರಂತೆ, ''ಏನು ಕೊಕ್ಕೆ ಮುರಿಯಿತಾ?'' ಅಂದರು. ''ಇಲ್ಲ ಸ್ವಲ್ಪ ನೀರು ಬೇಕು, 'ಸಂಕಟ ಮರ್ಕ' ಆಗುತ್ತಿದೆ'' ಅಂದ. ಇಲ್ಲೇನು ನಡೆಯಿತು ಅಂತ ಕೇಳಬೇಕೆಂದರೆ ನಾಲಗೆ ಹೊರಳಲಿಲ್ಲ. ಪಟ್ಟಕ್ಕೆ ಓಡಿದ. ಅಲ್ಲಿ ಕಟದುವಿನ ಸುಳಿವಿಲ್ಲ. ಅವತ್ತು ಸಂಜೆ ಕಟದುವಿನ ಹೆಣ ತೊಟಲ ಕಯದಲ್ಲಿ ತೇಲುತ್ತಿತ್ತು. ನಿಗಾರ್ ಎಳೆದದ್ದು ಅಂತ ಶಂಕರಯ್ಯನಾದಿಯಾಗಿ ಎಲ್ಲರೂ ಮಾತಾಡಿಕೊಂಡರು. ಅಲ್ಲೇ ಗುಡ್ಡದಲ್ಲಿ ಹೊಂಡ ತೋಡಿ, ಮಣ್ಣು ತುಂಬಿಸಿಯೂ ಆಯಿತು. ಚನಿಯನ ಎದೆಯೊಳಗೆ ಉರಿಯುವ ಬೆಂಕಿಗೆ ಎಣೆಯಿರಲಿಲ್ಲ. ಅಟ್ಟದ ಅಡಿಯಲ್ಲಿ ಸಿಕ್ಕಿಸಿದ್ದ ಬಾಚಕತ್ತಿ ತೆಗೆದವನೇ, 'ಒಚ್ಚೆ' ಮರದಲ್ಲಿ ಬಿಳಿಕಲ್ಲು ಪುಡಿ ಹಾಕಿ ನುಣ್ಣಗೆ ತಿಕ್ಕಿದ. ತಿಕ್ಕಿ ತಿಕ್ಕಿ, ಕೋಳಿ ಅಂಕದಲ್ಲಿ ಕೋಳಿಯ ಕಾಲಿಗೆ ಕಟ್ಟುವ ಬಾಳಿನ ಹಾಗೆ ಬಾಚಕತ್ತಿಯ ಬಾಯಿ ಹೊಳೆಯುತ್ತಿತ್ತು. ಕತ್ತಿಯನ್ನು ಸೊಂಟದೊಳಗೆ ಸಿಕ್ಕಿಸಿದವನೇ ಪಟ್ಟದಿಂದ ಹೊರನಡೆದ. ನಿನ್ನೆಯಿಂದ ಕುಡಿದ ಅಮಲು ಇನ್ನೂ ಇಳಿದಿರಲಿಲ್ಲ. ಸಂಜೆಯ ಸೂರ್ಯ, ಮೋಂತಿಮಾರ ಗುಡ್ಡದಾಚೆ ರಕ್ತಕಾರಿ ಸಾಯುತ್ತಿದ್ದ. ಬಿಳಿಮುಂಡಾಸಿನ ಪರಂಗಿಯವ ಕುದುರೆಯೇರಿ ಸವಾರಿ ಹೊರಟಿದ್ದ. ಚನಿಯನ ಕಣ್ಣುಗಳಲ್ಲಿ ಕೆಂಡ ಹಾರುತ್ತಿತ್ತು. ಕಾಂತರ ಚಡಾವಿನಲ್ಲಿ ಕುದುರೆ ಬರುತ್ತಿದ್ದ ಹಾಗೆ, ಒಮ್ಮೆಲೆ ಹಾರಿದ ಚನಿಯ, ಕುದುರೆಯ ಕಾಲು ಕಡಿದಿದ್ದ. ಮರುಕ್ಷಣ, ಕುದುರೆ ಮುಗ್ಗರಿಸಿ, ಪರಂಗಿಯವ ನೆಲದ ಮೇಲಿದ್ದ. ಅವನು ಏಳುವುದಕ್ಕೆ ಮೊದಲು ಚನಿಯನ ಕತ್ತಿ ಅವನ ಕತ್ತನ್ನು ಸವರಿಯಾಗಿತ್ತು. ಸಿಟ್ಟು ಇಳಿಯುವವರೆಗೆ ಅವನ ಕತ್ತಿ ಪರಂಗಿಯವನ ಮೈ ಮೇಲೆಲ್ಲಾ ಹರಿದಾಡಿತು. ರಕ್ತ, ಗಾಡಿ ಹೋಗುವ ಮಣ್ಣಿನ ರಸ್ತೆಯನ್ನು ತೋಯಿಸಿ ಹರಿಯುತ್ತಿತ್ತು. ಚನಿಯ ಏನೋ ಸಮಾಧಾನವಾದವನ ಹಾಗೆ ತಿರುಗಿ ನಡೆದಿದ್ದ, ನೇರ ತೊಟಲ ಸುಳಿಗೆ. ಪರಂಗಿಯವನನ್ನು ಕೊಚ್ಚಿ ಕೊಚ್ಚಿ ಕೊಂದ ಸುದ್ದಿ, ಊರಲ್ಲಿ ಸಿಡಿಲಿನಂತೆ ಬಂದೆರಗಿತು. ಊರವರು ಗಡಗಡ ನಡುಗಿದರು. ಮಂಗಳೂರಿನಿಂದ ದಂಡು ಬಂತು. ಸಿಕ್ಕ ಸಿಕ್ಕವರನ್ನೆಲ್ಲಾ ಹಿಡಿದು, ಬಡಿದು, ಹಣ್ಣುಗಾಯಿ ನೀರುಗಾಯಿ ಮಾಡಿದ್ದೂ ಆಯಿತು.



ಚಳವಳಿಗಾರರೇ ಈ ಕೆಲಸ ಮಾಡಿದ್ದೆಂದು, ಕಾಸರಗೋಡಿನಾಚೆಯಿಂದ ಬಂದ ಯುವಕನನ್ನು ಹಿಡಿದುಕೊಂಡು ಹೋದರು. ಯಾರೋ, ನಾಲ್ಕು ಪೆಟ್ಟು ಬಿದ್ದಾಗ, ಚನಿಯ ಕೊಂದದ್ದೆಂದು ಬಾಯಿಬಿಟ್ಟರು. ಚನಿಯನನ್ನು ಹಿಡಿದು ರಾಟೆಗೆ ಹಾಕಿದರು. ಮೈ ಪುಡಿಯಾದರೂ ಚನಿಯ

ಬಾಯಿಬಿಡಲಿಲ್ಲ. ಕೊನೆಗೆ ಅವನ ಶಿಶ್ನದೊಳಕ್ಕೆ ಡಬ್ಬಳ ಹಾಕಿದರೂ ಜಗ್ಗಲಿಲ್ಲ. ರಾಟೆಯ ಮೇಲೆ ಹೋಗುವಾಗೊಮ್ಮೆ, 'ಹೇಳುತ್ತೇನೆ, ಬಿಡಿ' ಅನ್ನುತ್ತಿದ್ದ. ಕೆಳಗೆ ಬಂದಕೂಡಲೇ ನನಗೆ ಗೊತ್ತಿಲ್ಲ ಅಂದುಬಿಡುತ್ತಿದ್ದ. ನರಕ ಎನ್ನುವುದು ಇದ್ದರೆ ಇದೇ ಇರಬೇಕು ಅನ್ನಿಸಿತ್ತವನಿಗೆ. ಶಂಕರಯ್ಯ ನನ್ನೂ ಅದೇ ರೀತಿ ಕೊಚ್ಚಿಕೊಲ್ಲಬೇಕೆಂದು ಅನ್ನಿಸಿತ್ತು, ಆದರೆ ಯಾಕೋ ಅವನ ಮನಸ್ಸು ಕೇಳಲಿಲ್ಲ.

ಹತ್ತಾರು ಬಾರಿ ಕೋರ್ಟಿಗೆ ಅಲೆದನಂತರ ಕೇಸು ಬಿದ್ದುಹೋಯಿತು. ಪರಂಗಿಯವರನ್ನು ಕೊಂದ ಕೇಸು ಹಾಗೆಲ್ಲಾ ಬಿಟ್ಟು ಹೋಗುವಂಥದ್ದಲ್ಲ ಅಂದರು ಶಂಕರಯ್ಯ. ಕಾಸರಗೋಡಿನಾಚೆಯಿಂದ ಬಂದ ಯುವಕನನ್ನು ಗಲ್ಲಿಗೆ ಕೊಟ್ಟದ್ದು ಊರಿನಲ್ಲಿ ಸುದ್ದಿಯಾಗಲೇ ಇಲ್ಲ.

ಆನಂತರ ಚನಿಯ ಮಂಕಾಗಿ ಬಿಟ್ಟ. ಕೆಲಸಕ್ಕೆ ಬಂದರೆ ಬಂದ, ಇಲ್ಲದಿದ್ದರೆ ಇಲ್ಲ. ಸುಳಿಯ ಬಾಗಿಲಲ್ಲಿ ಗಾಳ ಹಾಕುತ್ತಾ ಕೂತುಬಿಡುತ್ತಿದ್ದ. ಶಂಕರಯ್ಯ ಎಷ್ಟು ಒತ್ತಾಯಿಸಿದರೂ ಮರುಮದುವೆಯಾಗಲಿಲ್ಲ. ಕೊನೆಗೆ, ಹದಿನೈದು ವರ್ಷದ ನಂತರ, ಶಂಕರಯ್ಯನ ಮನೆಯಲ್ಲೇ ಕೆಲಸ ಮಾಡುತ್ತಿದ್ದ, ಆಗಲೇ ಮೊದಲ ಗಂಡನನ್ನು ಬಿಟ್ಟಿದ್ದ ಚೋಮುವನ್ನು ಕೂಡಿಕೆ ಮಾಡಿಕೊಂಡಿದ್ದ. ಅವಳು ಒಂದೇ ವರ್ಷದಲ್ಲಿ ಮಗನೊಬ್ಬನನ್ನು ಕೈಯಲ್ಲಿಟ್ಟು ಕಣ್ಮುಚ್ಚಿದಳು.

ಈಗ, ಕಟದುವನ್ನು ಕೊಂದವರ ಮೇಲೆ ತಾನು ನಿಜವಾಗಿಯೂ ಸೇಡು ತೀರಿಸಿಕೊಂಡಿದ್ದೇನೆ ಅನ್ನಿಸುತ್ತಿದೆ. ಬಿಳಿಮುಸುಡಿನ ಪರಂಗಿಯವನನ್ನು ಕೊಚ್ಚಿ ಕೊಚ್ಚಿ ಕೊಂದಿದ್ದರೂ ಅವನ ದ್ವೇಷ ತಣಿದಿರಲಿಲ್ಲ. ಶಂಕರಯ್ಯನನ್ನು ಕೊಲ್ಲುವುದರಲ್ಲಿ ಅರ್ಥವಿಲ್ಲ ಅನ್ನಿಸಿತ್ತವನಿಗೆ. ಅವರ ಮನಸ್ಸಿಗೆ ನೋವಾಗಬೇಕು, ಅಂಥ ಕೆಲಸ ಮಾಡಬೇಕು ಅಂದುಕೊಳ್ಳುತ್ತಿದ್ದ. ಕಟದುವಿನ ನೆನಪು ಬಿಡದೆ ಕಾಡುತ್ತಿತ್ತು. ಶಂಕರಯ್ಯನ ಹೆಂಡತಿ ಸತ್ತು ಸ್ವರ್ಗ ಸೇರಿಯಾಗಿತ್ತು. ಉಳಿದದ್ದು ಮಹಾಪಿಸುಂಟ ಶಂಕರಯ್ಯನ ಮಗನ ಹೆಂಡತಿ. ತನ್ನ ಹೆಂಡತಿಯನ್ನು ಕೊಂದದ್ದಕ್ಕೆ, ಅವರ ಸೊಸೆಯೂ ಅದೇ ರೀತಿ ಸಾಯಬೇಕು ಅಂತ ಯಾವ ಕ್ಷಣದಲ್ಲೋ ಅನ್ನಿಸಿತ್ತು. ಯಾಕೋ ಧೈರ್ಯವಾಗಲಿಲ್ಲ. ಒಳಗೆ ಅದುಮಿಟ್ಟ ಬೆಂಕಿ ಹೊಗೆಯಾಡುತ್ತಲೇ ಇತ್ತು. ಒಂದು ದಿನ, ಕಟ್ಟದ ನೀರಿನಲ್ಲಿ ಒಬ್ಬಳೇ ನಿಂತು ಬಟ್ಟೆ ಒಗೆಯುತ್ತಿದ್ದ ಧಣಿಗಳ ಸೊಸೆ ಕಂಡಳು. ಅವನಲ್ಲಿ ದೈತ್ಯಶಕ್ತಿ ಸೇರಿಕೊಂಡಿತ್ತು. ಹಿಂದಿನಿಂದ ಬಂದವನು, ಕಿರುಚದಂತೆ ಬಾಯಿಗೆ ಕೈ ಅಡ್ಡ ಹಿಡಿದು, ಎತ್ತಿ ಸೋಗೆ ರಾಶಿಯ ಹಿಂದೆ ಕೊಂಡೊಯ್ದು. ದಷ್ಟಪುಷ್ಟ ಚನಿಯನ ಹಿಡಿತದಿಂದ ತಪ್ಪಿಸಿಕೊಳ್ಳಬೇಕೆಂದು ಆಕೆ ಯೋಚಿಸುವ ಮೊದಲೇ ಅದು ನಡೆದುಹೋಗಿತ್ತು. ಅದಕ್ಕಿಂತಲೂ ಹೆಚ್ಚಾಗಿ, ಆಕೆ ಪ್ರತಿಭಟಿಸಲೇ ಇಲ್ಲ. ಚನಿಯನಿಗೆ ನಿರಾಶೆಯಾಯಿತು.

ಹೆಣ್ಣಿನ ಸಂಗದಿಂದ ದೂರವಿದ್ದ ಅವನಿಗೆ ಅದು ಮತ್ತೆ ನಿತ್ಯದ ಕ್ರಿಯೆಯಾಯಿತು. ಮಕ್ಕಳಾಗದಿದ್ದ ಶಂಕರಯ್ಯನ ಸೊಸೆಗೆ ನೀರು ನಿಂತಿತು. ಚನಿಯ ಏನೋ ಸಾಧಿಸಿದ ಹೆಮ್ಮೆಯಲ್ಲಿ ಗೆಲುವಾದ.



ಚನಿಯ ಎಲ್ಲವನ್ನೂ ಮರೆತವನಂತೆ ಇದ್ದ. ಊರಿನಲ್ಲಿ ಮೊನ್ನೆಯಿಂದ ನಡೆದ ಗೌಜು ಗದ್ದಲ, ಭಾಷಣಗಳು, ಸಭೆಗಳು. ಮೊನ್ನೆ ಸಭೆಗೆ ಚನಿಯನ ಮಗನೂ ಬಂದಿದ್ದ. ಪಟ್ಟ, ಬಿಟ್ಟರೆ ತೋಟಿಲ ಸುಳಿ, ಅವೆರಡು ಬಿಟ್ಟರೆ ಬೇರೆಲ್ಲೂ ಹೋಗದೇ ಇದ್ದ ಚನಿಯ, ಮಗ ಬರುತ್ತಾನೆ ಅಂತ ಸಭೆಗೆ ಹೋಗಿದ್ದ. ಶಂಕರಯ್ಯ ಈಗ ಎಂ.ಎಲ್.ಎ. ಆಗಿದ್ದಾರೆ. ಮಗ ತಾಸೀಲ್ದಾರ್ ಆದ ಮೇಲೆ ಇದೇ ಸುರು ಊರಿಗೆ ಬರುತ್ತಿರುವುದು. ಶಂಕರಯ್ಯನವರಿಗೆ ಸನ್ಮಾನ ಸಮಾರಂಭ ಅಂತ, ಚನಿಯನಿಗೆ ಅಲ್ಲಿ ಹೋದ


ಮೇಲೆಯೇ ಗೊತ್ತಾದದ್ದು. ಮಗ ಶಂಕರಯ್ಯನನ್ನು ಹೊಗಳುತ್ತಿದ್ದ. ಅವರು ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದವರೆಂದೂ, ಪರಂಗಿಯವನನ್ನು ಕೊಲ್ಲಿಸಿ ಊರವರನ್ನು ರಕ್ಷಿಸಿದವರು ಎಂದೆಲ್ಲ ಹೇಳಿದ. ಯಾಕೋ ಚನಿಯನಿಗೆ ಪಕ್ಕೆಯಲ್ಲಿ ತಿವಿದಂತಾಯಿತು. ''ಗೌರ್ಮೆಂಟಿನಿಂದ ಹಣ ಬರುತ್ತದೆ, ನೀನೂ ಅರ್ಜಿ ಹಾಕಬಹುದು, ಸೊಸಂತ್ರ ಹೋರಾಟಗಾರ ಅಂತ'' ಅಂದೊಮ್ಮೆ ಹೇಳಿದ್ದು ಅವನಿಗೆ ನೆನಪಾಯಿತು. ಸಭೆಯಲ್ಲಿ ತನ್ನ ಮಗನೇ ಅವರನ್ನು ಹೊಗಳುವಾಗಲೂ ನಿಜವಾಗಿ ನಡೆದದ್ದೇನೆಂದು ಹೇಳಬೇಕೆಂದು ಅವನಿಗನ್ನಿಸಲಿಲ್ಲ.


ಆದರೆ, ಆವತ್ತು ಸಂಜೆ ಮಗ ಬಂದು ಹೇಳಿದ ವಿಷಯ, ಅವನ ಹೊಟ್ಟೆಯೊಳಗೆ ಬಾಚಕತ್ತಿಯಿಂದ ತಿವಿದ ಹಾಗಾಗಿತ್ತು. 'ತಾನು ಧಣಿಗಳ ಕೊನೆಯ ಮೊಮ್ಮಗಳನ್ನು ಮದುವೆಯಾಗುತ್ತಿದ್ದೇನೆ. ನಮ್ಮ ಜಾತಿ ಸಂಘದವರೆಲ್ಲಾ ಬರುತ್ತಾರೆ. ನೀನೂ ಬಾ' ಅಂದಿದ್ದ. ಅವನೆದುರು ಸತ್ಯವೊಂದು ಬಾಯಿತೆರೆದು ನಿಂತಿತ್ತು. ಹೇಳಲಾರ ಹೇಳದೇ ಇರಲಾರ. ತನ್ನ ಮಗ ಇಷ್ಟೆಲ್ಲಾ ಆಗುವುದಕ್ಕೆ ಶಂಕರಯ್ಯನೇ ಕಾರಣ ಎನ್ನುವುದನ್ನು ಚನಿಯ ಬಲವಾಗಿ ನಂಬಿದ್ದಾನೆ. ಅವು ಯಾವುದೂ ಅವನನ್ನು ಕಾಡುತ್ತಿಲ್ಲ. ಆದರೆ ತನ್ನ ಮಗ ಮದುವೆಯಾಗುತ್ತಿರುವುದು ತನ್ನ ಮಗಳನ್ನೇ ಎನ್ನುವ ಸತ್ಯ ಧುತ್ತನೇ ಎದುರುನಿಂತಿದೆ. ಸುಳಿಯಲ್ಲಿ ಮೀನುಗಳು ಹಾರುತ್ತಿವೆ. ಅವನಿಗೆ ಕಟದು ನೆನಪಾಗುತ್ತಾಳೆ. ತೊಟಿಲ ಸುಳಿಯಲ್ಲಿ ನೀರು ಮೌನವಾಗಿ ಸುತ್ತುತ್ತಲೇ ಇದೆ. ಚನಿಯ ಅದನ್ನೇ ನೋಡುತ್ತಾ ಮೈ ಮರೆತಿದ್ದಾನೆ.



ಗಾಳ ಅನಾಥವಾಗಿ ನೀರೊಳಗೆ ಹೊಯ್ದಾಡುತ್ತಿತ್ತು. ಚನಿಯನ ಮನಸ್ಸಿನೊಳಗೂ ಕಯದಲ್ಲಿ ನೀರು ಸುತ್ತುವ ಹಾಗೆ ನೆನಪುಗಳು ಸುಳಿಸುಳಿಯಾಗಿ ಎದ್ದು, ಮತ್ತೆಲ್ಲೋ ಮರೆಯಾಗಿ ಬಿಡುತ್ತಿದ್ದವು.

ಜಿತು ನಿಡ್ಲೆ






ಮಾಯಾದರ್ಪಣ್

ಆ ಸುಂದರ ಯುವತಿಯ ಹೆಸರು ತರನ್. ಆ ಕುಟುಂಬದಲ್ಲಿ ಶಾಪಗ್ರಸ್ತ ದೇವತೆಯಂತೆ ಬದುಕುತ್ತಿದ್ದಾಳೆ. ತರನ್‌ಳ ತಂದೆ, ಹಿಂದೆ, ಅಂದರೆ ಇಂಡಿಯಾ ಸಂಸ್ಥಾನ ಅಸ್ತಿತ್ವದಲ್ಲಿದ್ದಾಗ ದಿವಾನನಾಗಿದ್ದ. ಜೀವನದಲ್ಲಿ ಸಾಕಷ್ಟು ಕಷ್ಟಕೋಟಲೆಗಳನ್ನು ಅನುಭವಿಸಿ, ಹೋರಾಡಿ, ತನ್ನ ಸ್ವಂತ ಪ್ರತಿಭೆಯಿಂದಲೇ ಮೇಲೆ ಬಂದವನು. ಈಗ ವಯಸ್ಸಾಗಿದೆ. ಹೆಂಡತಿ ತೀರಿಕೊಂಡಿದ್ದಾಳೆ. ಆತನ ಜೊತೆಗಿರುವವಳು, ಗಂಡನನ್ನು ಕಳೆದುಕೊಂಡ ಸಹೋದರಿ ಹಾಗೂ ಮನೆಕೆಲಸ ಮಾಡಿಕೊಡುತ್ತಿದ್ದ ಹುಡುಗ ಶಂಭು.

ಕಾಲ ಬದಲಾಗುತ್ತದೆ. ಹಳೆಯದನ್ನು ಹೊಸ ಬದುಕು ಆವರಿಸುತ್ತಿದೆ. ರೈಲು ರಸ್ತೆ ಮನೆಯ ಪಕ್ಕದಲ್ಲಿ ನಿರ್ಮಾಣವಾಗಿದೆ. ಚಿಕ್ಕಪಟ್ಟಣವೂ ತಲೆಯೆತ್ತಿದೆ. ಆದರೆ ನವೆಯುತ್ತಿರುವ ತರನ್‌ಳ ಬದುಕಲ್ಲಿ ಮಾತ್ರ ಕಿಂಚಿತ್ ಬದಲಾವಣೆ ಇಲ್ಲ.

ಮದುವೆ ವಯಸ್ಸಿಗೆ ಬಂದ ಆಕೆಗೆ ವರ ಹುಡುಕಲು ತಂದೆ ವಿಫಲನಾಗುತ್ತಿದ್ದಾನೆ. ಮನೆತನ, ಗೌರವ, ಪ್ರತಿಷ್ಠೆಯ ಸುಳಿಯೊಳಗೆ ಸಿಲುಕಿಕೊಂಡ ಆತ, ಊರಿಗೆ ಹೊಸತಾಗಿ ಬಂದ ಯುವಕ ಇಂಜಿನಿಯರ್ ಒಬ್ಬನನ್ನು ಮಗಳಿಗೆ ತಕ್ಕ ವರನೆಂದು ಎಣಿಸಿದರೂ, ಆ ಕುರಿತು ಮುಂದುವರಿಯಲಾಗುವುದಿಲ್ಲ. ಈ ಜಂಜಾಟದಲ್ಲಿ, ಇತ್ತ ತನ್ನ ಅಸ್ತಿತ್ವವನ್ನು ಸ್ಥಾಪಿಸಲು ಸಹಾಯ ಮಾಡುವ ಯಾವುದೇ ಸಾಮಾಜಿಕ ಸ್ಥಾನಮಾನ ಇಲ್ಲದೆ, ಅತ್ತ ಮನದ ಬಯಕೆಗಳನ್ನು ಪೂರೈಸುವ ವೈವಾಹಿಕ ಜೀವನವೂ ಇಲ್ಲದೆ ತರನ್ ತೊಳಲಾಡುತ್ತಾಳೆ. ಅಸ್ಸಾಮ್‌ನಲ್ಲಿರುವ ತನ್ನ ಸಹೋದರನ ಬಳಿ ಹೋಗಬೇಕೆಂದು ನಿರ್ಧಾರ ಮಾಡುತ್ತಾಳೆ. ಅದೂ ಸಾಧ್ಯವಾಗುವುದಿಲ್ಲ. ತರುಣ ಇಂಜಿನಿಯರ್ ಜೊತೆ ಸಂಬಂಧ ಕಲ್ಪಿಸಿಕೊಳ್ಳುವ ತರನ್‌ಳ ಬದುಕು ಹೀಗೇ ಇಬ್ಬಂದಿತನದಲ್ಲಿ ಸಾಗುತ್ತದೆ.



'ಆಧುನಿಕ' ಎಂದು ನಾವು ಹೇಳಿಕೊಳ್ಳುವ ಸಾಮಾಜಿಕ ವ್ಯವಸ್ಥೆಯಲ್ಲಿಯೂ, ಯಾರಿಗಾಗಿಯೋ ತಮ್ಮ ನೋವನ್ನು ನುಂಗಿ ಬದುಕುವ ಹೆಣ್ಣುಮಕ್ಕಳ ಸ್ಥಿತಿ ತರನ್ ರೂಪದಲ್ಲಿ ಸಾಕಾರ. ಅದು ಉಂಟುಮಾಡುವ ಸೂಕ್ಷ್ಮ ತಲ್ಲಣ, ಸಾವಿರಾರು ಅವಿವಾಹಿತ ತರುಣಿಯರನ್ನು ತಲುಪುವಂಥದ್ದು.

□ ಜ್ಯೋತಿ ಐರ್ವತ್ತೂರು

ಬೆಂಗಳೂರು


(ಶ್ರೇಷ್ಠ ಚಿತ್ರನಿರ್ದೇಶಕ ಕುಮಾರ್‌ಶಹಾನಿ ಅವರ ಸಿನಿಮಾ ಕತೆ.)

ಫಾದರ್ ಸೆರ್ಗಿಯಸ್



ಆತನ ಮೊದಲ ಹೆಸರು ಸ್ತೆಪಾನ್‌ಕಸಾತ್ಸ್ಕಿ. ಚಕ್ರವರ್ತಿಯ ಕಮಾಂಡರ್ ಆಗಿದ್ದು, ಮುಂದೆ 'ಅಡ್ಜುಟೆಂಟ್' ಆಗುವವನಿದ್ದ. ಬಲು ಜಾಣ. ಅದಕ್ಕೆ ತಕ್ಕಂತೆ ಮಹತ್ವಾಕಾಂಕ್ಷಿಯಾದ ಈತ ಒಬ್ಬ ಶ್ರೀಮಂತ ಯುವತಿಯಲ್ಲಿ ಅನುರಕ್ತನಾಗಿದ್ದ. ಅವನ ಪ್ರೀತಿ ಉತ್ಕಟವಾಗಿತ್ತು, ಅವಳೊಂದಿಗೆ ಮದುವೆಯ ಪ್ರಸ್ತಾಪ ಮಾಡಿಕೊಂಡಿದ್ದ, ಒಪ್ಪಿಗೆಯೂ ದೊರಕಿತ್ತು. ಆದರೆ ಅವಳು ಈ ಹಿಂದೆ, ಬೇರೊಬ್ಬ ಅಂದರೆ ಕಸಾತ್ಸ್ಕಿಯ ಆಶ್ರಯದಾತನಾದ ಚಕ್ರವರ್ತಿಯ ಪ್ರೇಯಸಿಯಾಗಿದ್ದು, ಮೈ, ಮನ ಒಪ್ಪಿಸಿದ ವಿಷಯ ತಿಳಿದು, ಆವರೆಗಿನ ಆಶಾಗೋಪುರ ಕುಸಿದು, ಜೀವನದಿಂದಲೇ ಬೇಸತ್ತು, ಅವಳಿಂದಲ್ಲದೆ ಸೈನ್ಯದಿಂದಲೇ ದೂರವಾಗಿ, ತನ್ನ ತಂಗಿಯಾದ ವರ್ವರಾಳ ಹೆಸರಿಗೆ ಆಸ್ತಿಯನ್ನು ಬರೆಯಿಸಿ ಚರ್ಚನ್ನು ಸೇರಿಕೊಂಡ.

ಇನ್ನೂ ಯುವಕನಾದ ಈತ ಸುಂದರನಾಗಿದ್ದ. ಯಾರನ್ನೂ ಮೋಡಿ ಮಾಡುವಂತಿದ್ದ. ತಾನು ಯಾರಲ್ಲಿ ಪ್ರೀತಿಯನ್ನು ಹಂಚಿಕೊಂಡಿದ್ದನೋ, ಆ ಮೇರಿಯಿಂದ ಉಂಟಾದ ನಿರಾಸೆ, ಕಸಾತ್ಸ್ಕಿಯನ್ನು ಮೊನೇಸ್ಟರಿ ಸೇರುವಂತೆ ಮಾಡಿತು. ತಾನು ಇತರರಿಗಿಂತ ಮೇಲೆ ಎಂಬ ಭಾವ ಆತನನ್ನು ಆವರಿಸಿತು. ಚರ್ಚಿನ ಪರಿಸರಕ್ಕೆ ಹೊಂದಿಕೊಂಡು, ಮಿತಾಹಾರಿ, ಮಿತಭಾಷಿಯಾಗಿ, ಫಾದರ್ ಆಗುವುದರತ್ತ ಹೆಜ್ಜೆಯಿರಿಸಿದ. ಅಲ್ಲಿನ ಜೀವನದ ಪದ್ಧತಿ, ದೀರ್ಘವಾದ ಚರ್ಚಿನ ಸೇವೆಗಳು, ಯಾವಾಗಲೂ ನೆರೆದಿರುವ ಜನಜಂಗುಳಿ ಇವುಗಳಿಂದ ಮನಸ್ಸು ವಿಧೇಯತೆ ಕಲಿಯಿತು. 'ಪ್ರತಿನಿತ್ಯ ಹಲವು ಬಾರಿ ಅದೇ ಪ್ರಾರ್ಥನೆಯನ್ನು ಏಕೆ ಕೇಳಬೇಕೆಂದು ನನಗೆ ಗೊತ್ತಿಲ್ಲ, ಆದರೆ ಅದು ಅವಶ್ಯಕವೆಂದು ಮಾತ್ರ ನನಗೆ ಗೊತ್ತು. ಅದು ಅವಶ್ಯಕ ಎಂದು ಗೊತ್ತು ಮಾಡಿಕೊಂಡಾಗ ನಾವು ಅದರಲ್ಲಿ ಸಂತೋಷವನ್ನು ಕಾಣುತ್ತೇವೆ'. ಇದು ಆತನ ನಿತ್ಯದ ಕಾಯಕವಾಗಿ ಮನ ಪ್ರಫುಲ್ಲವಾಯಿತು. ತನ್ನ ಹಲವು ತಪ್ಪುಗಳನ್ನು ತಿದ್ದಿಕೊಳ್ಳಲು, ಅಹಂಕಾರ ದಮನ ಮಾಡಲು, ಭೋಗದ ಕಾಮ, ಲೋಭವನ್ನು ಗೆಲ್ಲಲು ಪ್ರಯತ್ನಿಸಿದ. ಇಲ್ಲಿ ಏಳು ವರ್ಷ ಕಳೆದು, ಸೆರ್ಗಿಯಸ್ ಎಂಬ ಹೆಸರನ್ನ ಪಡೆದುಕೊಂಡ. ಈ ನಡುವೆ ಈತನ ಏಳಿಗೆಯನ್ನ ಕಂಡು ಚರ್ಚು ಹೆಮ್ಮೆಪಟ್ಟು, ಅವನನ್ನು ರಾಜಧಾನಿ ಸಮೀಪದ ಮೊನೇಸ್ಟರಿಯೊಂದಕ್ಕೆ ಫಾದರ್‌ನನ್ನಾಗಿಸಿತು. ಇಲ್ಲಿಗೆ ಬಂದಾಗ ಸೆರ್ಗಿಯಸ್ ವಿಚಿತ್ರವಾದ ಕಾಮ ವಿಕಾರಕ್ಕೆ ಒಳಗಾದ. ಆತನನ್ನು ಅದು ಕಿತ್ತು ತಿನ್ನಲಾರಂಭಿಸಿತು. ಚರ್ಚಿಗೆ ಬರುವ ಹೆಂಗಸರು ಈತನನ್ನು ಕುರಿತೇ ಮಾತನಾಡಲಾರಂಭಿಸಿದರು. ಇದು ಆತನಿಗೆ ಕಿರಿಕಿರಿಯುಂಟು ಮಾಡಿತು. ತೀವ್ರವಾದ ಧ್ಯಾನ, ಪ್ರಾರ್ಥನೆಯಲ್ಲಿ ತೊಡಗಿದ,




ಸುಪೀರಿಯರ್‌ನ ವಿರುದ್ಧ ವಾದಿಸಲಾರಂಭಿಸಿದ. ಹೀಗಿರುತ್ತಲೇ ಇಲ್ಲಿಗೆ ಬಂದು ಆರು ವರ್ಷ ಕಳೆದಿತ್ತು. ಒಬ್ಬ ಶ್ರೀಮಂತ ಹೆಂಗಸು ಸೆರ್ಗಿಯಸನನ್ನ ಮೆಚ್ಚಿಸಿ, ಸುಖ ಪಡೆಯಲು ಬಯಸಿ, ಪಣತೊಟ್ಟು, ಮೊನೇಸ್ಟರಿಗೆ ಬಂದಳು. ನಡುರಾತ್ರಿಯ ಚಳಿ, ಹದವಾದ ಮಳೆಯ ರಾತ್ರಿ ಆತನಿರುವ ಗುಹೆಯೆಡೆಗೆ ಬಂದವಳು, ಒಳಗೆ ಬರಲು ಅಪ್ಪಣೆ ಬೇಡಿ, ಒಳ ಬಂದಳು. ಅವಳ ಮನೋಇಚ್ಛೆಯಂತೆ ಆತನನ್ನ ರಮಿಸಲಾರಂಭಿಸಿದಳು. ಆದರೆ ಸೆರ್ಗಿಯಸ್ ಪ್ರಾರ್ಥನೆಗೆ ತೊಡಗಿದ. ತನ್ನಲ್ಲಿ ಉಂಟಾದ ಭಾವನೆಗಳಿಗೆ ಕಡಿವಾಣ ಹಾಕಲು, ಅವಳ ಕಾಮೋಉತ್ತೇಜನವನ್ನ ದಮನಗೊಳಿಸಲು ಸೆರ್ಗಿಯಸ್ ತನ್ನ ಬೆರಳನ್ನೆ ಕತ್ತರಿಸಿಕೊಂಡು ಆ ಪ್ರಸಂಗಕ್ಕೆ ತೆರೆ ಎಳೆದ. ಅವಳು ಸೋತು ಹೊರನಡೆದಳು. ಆದರೆ ಗುಪ್ತಗಾಮಿನಿಯಾದ ಕಾಮ ಸೆರ್ಗಿಯಸನನ್ನು ಕಾಡುತ್ತಲೇ ಇತ್ತು. ಈ ಮಧ್ಯೆ ಒಂದು ದಿನ, ಹದಿನಾಲ್ಕು ವರ್ಷದ ಹುಡುಗನ ರೋಗ ವಾಸಿಮಾಡಿದ. ಈ ವಿಷಯ ಎಲ್ಲಾ ಕಡೆ ಹರಡಿ ಆ ಊರಿನ ಜನರೆಲ್ಲ ಆತನಲ್ಲಿ ತಮ್ಮ ಕಷ್ಟ ಪರಿಹರಿಸಿಕೊಳ್ಳಲು ಬರುವಂತೆ ಮಾಡಿತು. ಆ ಊರಿನ ಪ್ರಸಿದ್ಧ ವ್ಯಾಪಾರಿ ತನ್ನ ಮಗಳ ಆರೋಗ್ಯ ಸುಧಾರಣೆಗಾಗಿ ಚರ್ಚಿಗೆ ಬಂದ. ತನ್ನೆಲ್ಲಾ ಪ್ರಾರ್ಥನೆಯನ್ನ ನಿವೇದಿಸಿಕೊಂಡು, ಫಾದರನ ಒಪ್ಪಿಗೆ ಪಡೆದು, ತನ್ನ ಮಗಳನ್ನು ಅವರ ಬಳಿ ಬಿಟ್ಟು ಹೊರನಡೆದ. ಅವಳೋ ವಿಕೃತ ಹುಡುಗಿ. ಆತನನ್ನು ಬಲವಂತದಿಂದ ಒಲ್ಲೈಸಿಕೊಂಡು, ಒಂದು ರಾತ್ರಿ ಕಳೆದು, ಹೊರನಡೆದಿದ್ದಳು. ಸೆರ್ಗಿಯಸ್ ತನ್ನನ್ನು ತಾನು ಹಳಿದುಕೊಂಡು, ತೀವ್ರತರವಾದ ವೇದನೆಗೆ ಪಕ್ಕಾಗಿ, ಅಲ್ಲಿಂದ ಹೊರಟುನಿಂತ. ಆತನ ಹಳೆಯ ಪರಿಚಯದ ಪಾಶೆಂಕಾ ವಿಧವೆಯಾಗಿ, ಅಲ್ಲೆ ಸಂಗೀತ ಕಲಿಸುತ್ತಾ ಕಷ್ಟದ ಜೀವನ ನಡೆಸುತ್ತಿದ್ದಳು. ಅವಳಲ್ಲಿಗೆ ಬಂದು ತನ್ನ ಕಥೆ ಹೇಳಿಕೊಂಡ. ಆಕೆಯ ಕಷ್ಟದ ಜೀವನ, ಆಕೆಯ ಅಳಿಯನ ನರದೌರ್ಬಲ್ಯ ಎಲ್ಲವೂ ಆತನನ್ನು ಅಲ್ಲಿಂದ ಹಿಮ್ಮೆಟ್ಟಿಸಿತು. ಅಲ್ಲಿಂದ ಬಲುದೂರ ನಡೆದ, ಯಾವುದೋ ಊರಿನಲ್ಲಿ ನೆಲಸಿದ. ಅಲ್ಲಿಯ ಜನರೊಡನೆ ಬೆರೆತ. ಬೈಬಲ್ ಕುರಿತು ಜನರಿಗೆ ತಿಳಿಸಿದ. ಆಗ ಓರ್ವ ಫ್ರೆಂಚ್ ಅತಿಥಿ ಕಸಾತ್ಸ್ಕಿಯನ್ನು ಭೇಟಿಯಾದ. ದೇವರು, ನಂಬಿಕೆಗಳ ಕುರಿತು ಚರ್ಚೆ ನಡೆಸಿ, ಈತನೋರ್ವ ಪಾದ್ರಿಯ ಮಗನಿರಬೇಕೆಂದು ತೀರ್ಮಾನಿಸಿ, ಇಪ್ಪತ್ತು ಕೋಪೆಕ್‌ಗಳನ್ನು ಆತನಿಗೆ ನೀಡಿದ. ಸೆರ್ಗಿಯಸ್ ವಿನೀತಭಾವದಿಂದ ಅದನ್ನು ತೆಗೆದುಕೊಂಡು, ಅನಂತರ ಒಬ್ಬ ಕುರುಡ ಭಿಕ್ಷುಕನಿಗೆ ಕೊಟ್ಟುಬಿಟ್ಟ. ಕಸಾತ್ಸ್ಕಿಯಲ್ಲಿ ಸ್ಥಳೀಯ ಪಾಸ್‌ಪೋರ್ಟ್ ಇಲ್ಲದ ಕಾರಣ, ಆತನನ್ನ ಪ್ರಶ್ನಿಸಿ, ಯಾರೋ ಪೋಕರಿ ಇರಬೇಕೆಂದು ಸೈಬೀರಿಯಾಕ್ಕೆ ಗಡೀಪಾರು ಮಾಡಿದರು. ಸೈಬೀರಿಯಾದಲ್ಲಿ ಶ್ರೀಮಂತನೊಬ್ಬನ ಜಮೀನಿನಲ್ಲಿ ಸೇರಿಕೊಂಡು ಅಲ್ಲೇ ಜನರ, ರೋಗಿಗಳ ಶುಶ್ರೂಷೆ ಮಾಡಲಾರಂಭಿಸಿದ.



ಹೊಸನಗರ

□ ಶಿವರಾಮ್ ಕಾರಗಡಿ

(ಟಿ.ಪಿ. ಅಶೋಕ್ ಅನುವಾದಿಸಿರುವ ಲಿಯೋ ಟಾಲ್‌ಸ್ಟಾಯ್ ಬರೆದ 'ಫಾದರ್ ಸೆರ್ಗಿಯಸ್'ನ ಕತೆ)



ಕವಿ ಸಮಯ



ರಾಜು ಹೆಗಡೆ

ರಾಗ

ನೋವು ನಲಿವುಗಳಿಲ್ಲದೆ
ರಾತ್ರಿ ನಿರಾಳವಾಗಿ ಸಾಗುತ್ತಿದೆ
ಹಗಲ ಇಡಿಯಾಗಿ ನುಂಗಿ

ಚುಕ್ಕೆ ಚೆಲ್ಲಾಪಿಲ್ಲಿ
ತಡವಾಗಿ ಬಂದ ಚಂದ್ರ
ಮೃದುವಾದ ಬೆಳಕನ್ನು ಹರಡಿ
ನೆರಳ ನೇವರಿಸುತ್ತಿದ್ದಾನೆ

ಕೋಣೆಯ ಕಿಡಕಿ ಬಾಗಿಲುಗಳಲ್ಲಿ
ಹಣಕಿರುವ ಅಸಂಖ್ಯ ಹುಡುಗಿಯರು
ಫ್ಯಾನಿಗೆ ಹಾರಿಹೋಗಲಾರರು

ತುಸುವೆ ಹಣವಿದೆ ಜೇಬಿನಲ್ಲಿ
ಎಚ್ಚರದಲ್ಲಿ ಹೆಜ್ಜೆ ಇಡು
ಬಸ್ಸಿಗೆ ಕಮ್ಮಿಯಾದರೆ ಮನೆಗೆ
ಹೋಗಲಾಗುವುದಿಲ್ಲ!

ಏನು ಮಾಡಿದರೂ...

ಮುಂಜಾನೆ ಮಿಂದು
ಫ್ರೆಷ್ಷಾಗಿ ಶುಭ್ರ ಕಿರಣವನ್ನು ಹಾರೈಸುತ್ತ
ಹೊರಗಿಣುಕಿದರೆ
ಕಾರು ಮೋಟಾರಿನ ಕೋಲಾಹಲ

ರಾತ್ರಿ ತುಂಬ ಮದ್ಯದ ಮಂಪರು
ನಿದ್ದೆಯ ಗದ್ದಲದಲ್ಲಿ
ಸುಂದರ ಕನಸೊಂದು ಅರಳಿದ್ದು
ಏನು ಮಾಡಿದರೂ ನೆನಪಾಗುತ್ತಿಲ್ಲ.





ನಮ್ಮೂರಿಗೆ ಹೋಗಲು

ನಮ್ಮೂರಿಗೆ ಹೋಗಲು
ದೋಣಿ ದಾಟಬೇಕು
ತಣ್ಣಗೆ ನೇವರಿಸುವ ಶರಾವತಿ
ಗಾಳಿಯಲಿ ಮಿಂದು ಆಚೆ
ಹೋದರೆ
ಸಪೂರ ದಾರಿಯಲಿ ಕಬ್ಬಿನ ಎಲೆ
ಮೈ ಕೊರೆಯುತ್ತಾ ಉತ್ತಗದ್ದೆ
ಹಾಯಬೇಕು. ಎದುರು ದೀವರ
ಕೇರಿಯ ತೆಂಗುಬಾಳೆಯೊಳಗೆ
ಜೀರ್ಣವಾಗುತ್ತಿರುವ ಪಂಡಿತರ
ದೇವಾಲಯ.

ನಮ್ಮೂರಿನಲ್ಲಿ ಯಾವುದೆ
ಐತಿಹಾಸಿಕ ಸ್ಮಾರಕವಿಲ್ಲ
ಸ್ವಾತಂತ್ರ್ಯಕ್ಕಾಗಿ ಯಾರೂ ಇಲ್ಲಿ ಹೋರಾಡಿಲ್ಲ.
ರಾಷ್ಟ್ರ ನಾಯಕರು ಇಲ್ಲಿಯ
ಮಣ್ಣಿನ ಮಕ್ಕಳಲ್ಲ

ಆದರೆ ಎಲ್ಲ ಬರುತ್ತದೆ ಇಲ್ಲಿ
ದೋಣಿ ದಾಟಿ
ಬೆಟ್ಟಗುಡ್ಡಗಳ ನಡುವೆ ಡೊಂಕುರಸ್ತೆ
ದಣಿವೆಯಿದ್ದರೂ ಕಾಲ ದಾರಿ
ಎಲ್ಲರನ್ನೂ ಮನೆಗೆ ಮುಟ್ಟಿಸುತ್ತದೆ.

ಡಿಪೋ ಬಯಲು

ಆಗ
ಎಲ್ಲಿಂದಲೊ ಲಾರಿ
ನಾಟಾ ತುಂಬಿಕೊಂಡು ನಮ್ಮೂರ
ಹಾಡಿಶಾಲೆಯ ಹಿಂದಿನ ರಸ್ತೆಯಲಿ
ತಲೆನೆಗೆದರೆ ಮಳೆಗಾಲ ಮುಗಿದ ಹಾಗೆ


ಅಲ್ಲಿಂದ ತುಸು ಮರೆಯಾಗಿ
ಹಾವಿನಂತ ಕೆಂಪು ರಸ್ತೆಯ ಒದ್ದೆ ಮಣ್ಣಿನಲಿ
ಟಯರಿನ ಅಚ್ಚು ರೋಮಾಂಚನ!


ಒಮ್ಮೊಮ್ಮೆ ಶಾಲೆಬಿಟ್ಟು ಬರುವಾಗ
ಒಕ್ಕಲು ದೇವಪ್ಪನ ಮಗ ಹಮಾಲಿ
ಗಣಪತಿ ಕಣ್ಣಲ್ಲಿ ನಮ್ಮ ಪ್ರತಿಬಿಂಬ
ಖಾಲಿ ಲಾರಿಯ ಹಿಂದೆ ಧೂಳು

ಹಗಲು ರಾತ್ರಿ ಡಿಪೊ ಬಯಲಲ್ಲಿ
ನಾಟಾ ಮಗಚುವ ಸದ್ದು.
ಬಂದುಹೋಗುವ ಲಾರಿ.
ಶರಾವತಿಯ ಮೇಲೆ ತೇಲುವ ತೆಪ್ಪ
ಪೈ ಅಂಗಡಿ ಅವಲಕ್ಕಿ ಕರೆ ಪರಿಮಳ ದಿನವಿಡಿ

ಈಗ
ಡಿಪೋ ಬಯಲು ಇದೆಲ್ಲ ಇಲ್ಲಿ ನಡೆದಿಲ್ಲ ಎಂಬಂತೆ
ತೆಪ್ಪಗಿದೆ. ಗೂಟಕ್ಕೆ ಕಟ್ಟಿದ ಕೌಸುಂಬಿಯ ದನ
ಉರೂಟಾಗಿ ಮೇಯುತ್ತದೆ
ಕಾಡೆಲ್ಲ ಕುರುಚಲಾಗಿ ನಮ್ಮೂರು
ಡಿಪೋ ಇಲ್ಲದ ಬಯಲಾಗಿದೆ.

ರಾಜು ಹೆಗಡೆ







ಕೃಷ್ಣಮೂರ್ತಿ ಬಿಳಿಗೆ

ದಿಕ್ಕೆಂಬುದಿಲ್ಲ

ಹಾವಿಗೇನು ಗೊತ್ತು ರೂಪ
ಹಾದಿಗೇನು ಗೊತ್ತು ದಾರಿ


ಮರಕ್ಕೇನು
ಸಸಿ ಇದ್ದರೆ ಬುಡದ ಅಡಿ

ಸತ್ತುಬಿಡು
ಸತ್ತು ಹುಟ್ಟಿಬಿಡು, ಹುಲ್ಲಾಗು
ಸ್ಫೋಟಿಸು ಬೀಜವಾಗು

ಮಣ್ಣ ಒಳಗಿನ ಮೌನಕ್ಕೆ
ಹಾತೊರೆಯಲಿ ಬಿಡು
ಮನದೊಳಗಿನ ಧ್ಯಾನಕ್ಕೆ
ಹವಣಿಸಲಿ ಬಿಡು

ಗಾಳಿ ಬೀಸುವ ದಿಕ್ಕು
ಬದಲಾಗಬಹುದು
ಗಾಳಿ ಬದಲಾಗುವುದಿಲ್ಲ
ದಿಕ್ಕೆಂಬುದಿಲ್ಲ.

ನಿಂತಲ್ಲೆ ನಿಂತುಬಿಡು
ಭೂಮಿ ಆಕಾಶ ಪಾತಾಳಗಳ ಹಿಡಿದು



ಜೇಡ

ಕೊನೆಯಿಲ್ಲ ಮೊದಲಿಲ್ಲ
ಜೇಡ ಹೆಣೆಯುತ್ತಿದೆ
ಬಲೆ
ನಿರಾಳ

ಮೌನಕ್ಕೆ ಶರಣಾಗಿ
ಶಬ್ದಕ್ಕೆ ಕಿವುಡಾಗಿ

ಜೇಡನ ಗೆಲ್ಲಬಯಸಿದವರು
ಹೊಸರಕ್ತ ನೆಕ್ಕಿದರು
ಪ್ರಾಣಗಳ ಕೂಡಿಟ್ಟು ಕೂಡತೊಡಗಿದರು
ಹಣ್ಣಂತೆ ಹೆಣ್ಣುಗಳ ಹೋಳುಮಾಡಿದರು
ಜೀವಕ್ಕೆ ಜೀವ ಸೇರಿಸಲು ಅಂಟುಹುಡುಕಿದ
ಯಯಾತಿ ಅವತಾರಕ್ಕೆ ಹಾತೊರೆದರು

ಜೇಡನ ಸಾಕಬಯಸಿದವರು
ಅಮೃತವಿಟ್ಟು ಕಾಯತೊಡಗಿದರು
ಚಿನ್ನದ ಸರಪಳಿಯಿಡಿದು ಕಲ್ಲಾದರು
ರೇಷಿಮೆಯ ಪೂರೈಸಿ
ಗೂಡಲ್ಲಿ ಕೂಡಬಯಸಿದರು

ಜೇಡನ ಕೊಲ್ಲಬಯಸಿದವರು
ಕೋಲಿನಿಂದ ತಿವಿದರು
ಪೊರಕೆಯಿಂದ ಬಾರಿಸಿದರು
ಕೋವಿಯಿಂದ ಉಡಾಯಿಸಿದರು
ಬಾಂಬಿನಿಂದ ಸ್ಫೋಟಿಸಿದರು

ಜೇಡ ಇತ್ತೆ
ಜೇಡ ಬಿತ್ತೆ.



ಮರಹಕ್ಕಿ ನಾನು

ಮರ ಮತ್ತು ಹಕ್ಕಿಗೆ
ಕಾಲವೆಂಬುದು ಹಿಕ್ಕೆ, ತರಗೆಲೆ
ಹಿಂದುಮುಂದುಗಳಿಲ್ಲದ ಪೆಕರ

ನನಗೆ ಕಾಮನಬಿಲ್ಲು
ಕರಿಯ ನೆರಳು ಭತ್ತದ ಕೊರಳು
ಬುದ್ಧನ ಕುಡಿ ಹಿಟ್ಲರನ ಕೋರೆಹಲ್ಲು

ಮರ ಮತ್ತು ಹಕ್ಕಿಗೆ
ಕಾಲವೆಂಬುದು ನೇರ
ಬಯಲೋ ಬಯಲು

ಕಾಲವೆಂಬುದು ನನಗೆ
ಗಾಂಧೀಜಿಯ ಪುತ್ರ
ಐನ್‌ಸ್ಟೀನನ ಅಪ್ಪ ಈದಿ ಅಮೀನನ ತೊತ್ತು

ಮರ ಮತ್ತು ಹಕ್ಕಿಗೆ
ಕಾಲವೆಂಬುದು ಬೀಜ
ಹೂವು ಕಾಯಿ ಹಣ್ಣು ಮತ್ತೆ ಬೀಜ

ನನಗೋ ಕಾಲವೆಂಬುದು ನಿಂತ ನೋವು
ನಿಲ್ಲದ ಯುದ್ಧ, ಹಣ್ಣಾಗದ ಕಾಯಿ
ಸದಾ ಕೊರಳಲ್ಲಿ ಮಿಂಚುವ ಸಾವಪದಕ

ಮರ ಮತ್ತು ಹಕ್ಕಿಗೆ
ಕಾಲ ಸುಳ್ಳಲ್ಲ ನಿಜವಲ್ಲ
ಕುರುಡ ಎಲ್ಲೂ ಇಲ್ಲದ ಒಳ್ಳೆಯವ
ಮುಖವಿಲ್ಲದ ಸುಂದರ

ನನಗೀತ ತಲೆತಗ್ಗಿಸಿ ನಡೆವ ಕುರಿ
ಕ್ರೂರಿ, ಊರಿಲ್ಲದವ
ಊರು ಹುಡುಕದವ

ಮರಕ್ಕೆ ಬೇರು
ಹಕ್ಕಿಗೆ ಗುಟುಕು
ನನಗೆ ಸಾವ ಜೀವ


ಮರವೆ ಮರವ ಸೀಳಿ


ಮರದೊಳಗೆ ಮರ ಹುಟ್ಟಿ
ಆ ಮರವೆ
ಮರವ ಸೀಳಿ ಕೊಲ್ಲುತ್ತಿರುವಾಗ

ಎಲ್ಲರೂ ಏರಿ
ಆಕಾಶಕ್ಕೆ ಕವಲೊಡೆದು,
ಇಳಿದು ಪಾತಾಳಕ್ಕೆ
ಜಲವ ಕುಡಿಕುಡಿದು ಚಾಚುತ್ತಿರುವಾಗ

ನೀನು
ನಿನ್ನೊಳಗೆ
ಇಳಿದು
ನೂಲುತ್ತಿದ್ದೀಯ

ಬೆಳಕು ಬಣ್ಣಗಳ ಕಳಕೊಂಡು
ಚಿಟ್ಟೆಯಾಗುವ ಬದಲು
ಸುಟ್ಟುಹೋದೀಯ





ನಾ. ಡಿಸೋಜ

ಮನ್ನಣೆ

ತಾನು ಇನ್ನು ಮೂರು ನಾಲ್ಕು ತಿಂಗಳಲ್ಲಿ ಸಾಯಲಿದ್ದೇನೆ ಎಂಬುದು ಮುಂಚಿತವಾಗಿಯೇ ಕಾವೇರಜ್ಜಿಗೆ ತಿಳಿದಿತ್ತೇನೋ ಅನ್ನುವ ಹಾಗೆ ಅವಳ ಗುಣ ಸ್ವಭಾವದಲ್ಲಿ ತಟ್ಟನೆ ಬದಲಾವಣೆಗಳು ಆದವು. ಆವರೆಗೆ ಕೇರಿಯ ಎಲ್ಲರೊಡನೆ ಕಾಲು ಕೆದರಿ ಜಗಳವಾಡುತ್ತ, ಅವರಿವರನ್ನು ವಿನಾಕಾರಣ ಹಳಿಯುತ್ತ, ಟೀಕಿಸುತ್ತ, ಮನೆಬಾಗಿಲಿಗೆ ಹೂವು, ತರಕಾರಿ, ಬಾಳೆಹಣ್ಣು, ಕಡ್ಲೆಪುರಿ ಮಾರಲು ಬಂದವರನ್ನು ರೇಗಿಸುತ್ತ, ರಸ್ತೆಯ ಮೇಲೆ ಕ್ರಿಕೆಟ್ ಆಡುವ ಹುಡುಗರನ್ನು ಕೆಣಕುತ್ತ, ಮೊಣಕಾಲು ಕಾಣುವ ಹಾಗೆ ಮಿನಿ ಧರಿಸಿ ಹೊರಟ ಕೇರಿಯ ಕುವರಿಯರನ್ನು ಹಂಗಿಸುತ್ತ, ಎಲ್ಲರ ಕೋಪಕ್ಕೆ, ಅಸಮಾಧಾನಕ್ಕೆ ಕಾರಣಳಾಗಿದ್ದ ಕಾವೇರಜ್ಜಿ ಬದಲಾಗಿಬಿಟ್ಟಳು. ಅವಳ ಮಾತಿನ ಧಾಟಿ ಬೇರೆಯಾಯಿತು. ಬಳಸುವ ಶಬ್ದಗಳಿಗೆ ಮೆರುಗು ಬಂದಿತು. ಮುಖದ ಮೇಲೆ ಏನೋ ಪ್ರಸನ್ನತೆ ಮೂಡಿತು. ಸೊಸೆಯ ಮುಖ ಕಂಡರೆ ಬೆಕ್ಕಿನಂತೆ ರೋಮಗಳನ್ನು ನಿಗುರಿಸಿಕೊಳ್ಳುತ್ತಿದ್ದಾಕೆ,

''ಅಮ್ಮಾ...ಸುಲೂ...'' ಎಂದು ಸೊಸೆಯನ್ನು ಕರೆಯತೊಡಗಿದಳು.

ಮಗ ಎಂದರೆ ಬೇರೆಡೆಗೆ ಮುಖ ಹೊರಳಿಸುತ್ತಿದ್ದವಳು,

''ಸದೂ...'' ಎಂದು ಇಂಪಾಗಿ ಮಗನನ್ನು ಕರೆಯತೊಡಗಿದಳು.

ಅವಳ ಸ್ವಭಾವದಲ್ಲಿ ಪರಿವರ್ತನೆ ಆದ ಹಾಗೆಯೇ ಉಡುವ ಉಡುಪಿನಲ್ಲಿಯೂ ವ್ಯತ್ಯಾಸ ಕಂಡುಬಂದಿತು.

ಏನೋ ಒಂದು ಹಳೆಯ ಸೀರೆ ಸು
ಕೊಂಡು, ಕೂದಲು ಕೆದರಿಕೊಂಡು, ನಿದ್ದೆಗ
ನಲ್ಲಿಯೇ ರಸ್ತೆಗೆ ಬಂದವಳಂತೆ, ಬೆಳ
ಹರಿಯುವ ಮೊದಲೇ, ಬೆಂದ ಮನೆ, ಬೇಯ
ಮನೆ ಎಂದು ತಿರುಗುತ್ತಿದ್ದಾಕೆ ಈಗ ಲಕ್ಷಣವಾ
ಸೀರೆಯುಟ್ಟು, ಕೂದಲು ಬಾಚಿಕೊಂಡು
ರೂಪಕ್ಕೆಂಬಂತೆ ಅಲ್ಲಿ ಇಲ್ಲಿ ಕಾಣಸಿಕೊ
ಲಾರಂಭಿಸಿದಳು.


''ಏನು ಕಾವೇರಜ್ಜಿ ಕಾಣಸೋದೇ ಇ
ಎಂದು ದಿನಸಿ ಅಂಗಡಿಯವ, ಸೌದೆ ಡಿಪ
ದವ, ನಂದಿನಿ ಹಾಲಿನ ಅಂಗಡಿಯ
ಕೇಳಿಯೇ ಕೇಳಿದರು.

ಒಟ್ಟಿನಲ್ಲಿ ಹೇಳಬೇಕೆಂದರೆ ಇಂದಿ
ನಗರದ ಮೂರನೇ ಕ್ರಾಸಿನ ಈ ರಸ್ತೆ
ಹಿಂದಿನ ರೂಪವನ್ನೇ ಕಳೆದುಕೊಂಡುಬಿಟ್ಟಿತು.

''ಏನೇ ಬಾಯಮ್ಮ... ನಿನ್ನೆ ಎರಡು ಮೊ
ಅಂತ ಕೊಟ್ಟೆಯಲ್ಲ ಮಲ್ಲಿಗೇನ... ಅದು ಒಂ
ವರೆ ಮೊಳ ಇತ್ತಲ್ಲ ಯಾಕೆ? ಏನು ಹೂವು ಮ
ಮಹಡಿ ಮನೆ ಕಟ್ಟಿಸಬೇಕು ಅಂತ ಇದೀಯ
ಎಂದು ಹೂವು ಮಾರುವಾಕೆಯ ಹತ್ತಿರ,

''ತಕೋ ಈ ಮೂರು ಬದನೆಕಾಯಿ
ಕೊಳೆತು ಹುಳ ಬಿದ್ದಿದೆ... ನೋಟು ಒಂದು
ಹರಿದಿದ್ರೆ ವಾಪಸ್ ಕೊಡುತೀಯ... ನ
ಬೇರೆ ಬದನೆಕಾಯಿ ಕೊಡು...'' ಎ
ತರಕಾರಿಯವನ ಹತ್ತಿರ,

''ಅಲ್ಲಿ ಅಂಗಡೀಲಿ ಡಜನ್ನಿಗೆ ಹನ್ನೆ
ರೂಪಾಯಿ... ನಿನ್ನ ಹತ್ತಿರ ಯಾಕೆ ಇಪ್ಪತ್ತ
ಮನೆ ಬಾಗಿಲಿಗೆ ತಂದಿರೋದಕ್ಕೆ ಎ



ರೂಪಾಯಿ ಹೆಚ್ಚು ಕೊಡಬೇಕಾ?'' ಎಂದು ಬಾಳೆಹಣ್ಣಿನವನ ಹತ್ತಿರ ಜಗಳ ತೆಗೆಯುತ್ತಿದ್ದಳು ಕಾವೇರಜ್ಜಿ.

''ನಾಳೆಯಿಂದ ಏನಾರ ನೀವು ರಸ್ತೇಲಿ ಕಿರಕೆಟ್ಟು ಆಡಿ ಮನೆ ಕಿಟಕಿ ಗಾಜು ಒಡೆದು ಹಾಕಿದ್ರಿ... ನಿಮ್ಮ ಚೆಂಡು, ದಾಂಡು ಕಸಕೊಂಡು ಒಲೆಗೆ ಹಾಕಬಿಡತೀನಿ...'' ಎಂದು ರಸ್ತೆಯಲ್ಲಿ ಕ್ರಿಕೆಟ್ ಆಡುವ ಹುಡುಗರಿಗೆ ರೇಗಿಸಿ...

''ಏನೇ ಕನಕ... ಈ ತುಂಡು ಲಂಗ ಯಾಕಾರ ಹಾಕ್ಕೋಬೇಕು... ಹಂಗೇ ಹೋಗು ಕಾಲೇಜಿಗೆ... ವ್ಯತ್ಯಾಸ ಏನೂ ಇಲ್ಲವಲ್ಲ...'' ಎಂದು ಕಾಮಾಕ್ಷಿ ಮಗಳಿಗೆ ಟೀಕಿಸಿ, ಕಾವೇರಜ್ಜಿ ಕೇರಿಯಲ್ಲೆಲ್ಲ ಕೆಟ್ಟವಳೆನಿಸಿಕೊಂಡಿದ್ದಳು.

ಮನೆಯಲ್ಲಿ ಸೊಸೆ ಸುಲೋಚನಾಗೆ, ಮಗ ಸದಾನಂದನಿಗೆ ಸಾಕುಸಾಕಾಗಿಹೋಗಿತ್ತು.

''ಅಮ್ಮ, ಸುಮ್ನೆ ಮನೇಲಿ ಇರಬಾರದೆ... ಅವರಿವರ ಸುದ್ದಿ ನಿನಗೆ ಯಾಕೆ?'' ಎಂದು ಇವಳಿಗೆ ಹೇಳಲು ಹೋಗಿ, ಇವಳು ಮತ್ತೂ ದೊಡ್ಡ ಬಾಯಿ ಮಾಡಿ ಸೊಸೆ, ಮಗನ ಬಾಯಿ ಮುಚ್ಚಿಸಿದ್ದಳು.

ಕೇರಿಯವರೆಲ್ಲ ಹೆದರುತ್ತಿದ್ದರು ಈಕೆಗೆ. ಕೇರಿಯವರು ಮಾತ್ರವಲ್ಲ ಮನೆಯವರಿಗೂ ಇವಳು ಸಿಂಹಸ್ವಪ್ನಳೇ ಆಗಿದ್ದಳು. ತನ್ನ ತಾಯಿಯ ಈ ಗುಣದಿಂದಾಗಿ ಸದಾನಂದ ಸದಾ ಕೊರಗುವುದಿತ್ತು. ತಾಯಿ ನಡುಬೀದಿಯಲ್ಲಿ ನಿಂತು ಸಣ್ಣಪುಟ್ಟ ವಿಷಯಗಳಿಗೆಲ್ಲ ಕೂಗಾಡುತ್ತಿದ್ದರೆ, ಆತ ಮನೆಯಲ್ಲಿ ನೆಮ್ಮದಿಯಿಂದ ಇರಲಾರದವನಾಗುತ್ತಿದ್ದ. ರಸ್ತೆಯಲ್ಲಿ ತಲೆ

ಎತ್ತಿಕೊಂಡು ತಿರುಗಲು ಅವನಿಗೆ ನಾಚಿಕೆಯಾಗುತ್ತಿತ್ತು. ಯಾರ ಉಸಾಬರಿಗೂ ಹೋಗದೆ ತನ್ನ ಪಾಡಿಗೆ ತಾನು ಇರುವ ಸದಾನಂದ, ತಾಯಿಯ ಈ ಒಡಕು ಬಾಯಿಯಿಂದಾಗಿ ಎಷ್ಟೋ ಬಾರಿ ತಾಳ್ಮೆ ಕಳೆದುಕೊಳ್ಳುತ್ತಿದ್ದ. ಅವನ ಹೆಂಡತಿ ಸುಲೋಚನ ಸರಿಯೇ ಸರಿ...

''ನಿಮ್ಮ ತಾಯಿ ಸರಿಹೋದರೆ... ಈ ಮನೆಯಲ್ಲ, ಈ ಕೇರಿಯೇ ಸರಿಹೋಗುತ್ತೆ...'' ಎಂದು ಹೇಳುವುದಿತ್ತು.

ತಂದೆ ತೀರಿಹೋಗಿ ಸಂಸಾರದ ಅಷ್ಟೂ ಜವಾಬ್ದಾರಿ ಅವಳ ಮೇಲೆ ಬಿದ್ದ ನಂತರವೇ ತಾಯಿ ಹೀಗೆ ಆಗಿದ್ದು ಸದಾನಂದನಿಗೆ ಗೊತ್ತಿತ್ತು. ನಾಲ್ವರು ಹೆಣ್ಣುಮಕ್ಕಳ ಮದುವೆ ಮಾಡಲು ಅವಳು ತುಂಬಾ ಶ್ರಮಿಸಿದ್ದಳು. ವರದಕ್ಷಿಣೆ, ವರೋಪಚಾರ, ಮದುವೆ ಖರ್ಚು, ಹೆಣ್ಣು ಮಕ್ಕಳಿಗೆ ಬಂಗಾರ ಮಾಡಿಸು ಎಂದು ಹಣ ಸಾಲದೆ ಬಂದಾಗ ಹಲವರಲ್ಲಿ ಸಾಲ ಮಾಡಿ, ಇರುವ ಮನೆ ಮಾರಿ, ಎಲ್ಲವನ್ನೂ ನಿಭಾಯಿಸಿದ್ದಳು. ಐದಾರು ವರ್ಷಗಳ ಅವಳ ಈ ಓಡಾಟ-ತಡಕಾಟಗಳು ಅವಳನ್ನು ಈ ಸ್ಥಿತಿಗೆ ತಂದಿದ್ದವು. ಆಕೆ ಸಿಡುಕಿಯಾಗಿದ್ದಳು. ಜಗಳಗಂಟಿಯಾಗಿದ್ದಳು. ಮಗನ ಮದುವೆಯಾಗಿ ಸೊಸೆ ಮನೆಗೆ ಬಂದ ನಂತರವಂತೂ ಅವಳು ಮತ್ತೂ ವಿಪರೀತಕ್ಕೆ ಹೋದಳು.

ಮಗ ಸದಾನಂದ ಅವಳನ್ನು ಕೂರಿಸಿ ಕೊಂಡು,

''ಅಮ್ಮ... ಈಗ ನಾವು ಸುಖವಾಗಿಯೇ ಇದ್ದೀವಿ. ನಮಗೆ ಎಲ್ಲ ಅನುಕೂಲ ಇದೆ... ನೀನು ಸ್ವಲ್ಪ ಶಾಂತಿ, ನೆಮ್ಮದಿಯಿಂದಿರು... ಜಗಳ ಗಿಗಳ ಮಾಡಬೇಡ... ಅವರವರ ಸುದ್ದಿಗೆ ಹೋಗಬೇಡ...'' ಎಂದು ಹೇಳಿದಾಗ ಕಾವೇರಿ ಮಗನನ್ನೇ ಹುರಿದು ತಿನ್ನುವ ಹಾಗೆ ಉರಿದೆದ್ದಳು.

''ಹೌದೋ... ಹೌದು... ಈಗ ನಾನು ತರಲೆ... ಜಗಳಗಂಟಿ... ನೀವೆಲ್ಲ ಒಂದು ಹಂತಕ್ಕೆ ಬಂದಿರಲ್ಲ... ಇನ್ನು ನಾನು ಯಾಕೆ? ನನ್ನ ಮಾತು ಯಾಕೆ?...'' ಎಂದು ಜೇರೇನೋ ಆಡಲು ಹೋಗಿ ಕದಡದ ಗೂಣಕ್ಕೆ ಬಿದ್ದ ಬೆಂಕಿಯಂತೆ ಅವಳು ಚಟಪಟಸುತ್ತಿದ್ದಳು.

ಹೀಗೆಂದೇ ಸದಾನಂದ ಅವಳಿಗೆ ಏನನ್ನಾದರೂ ಹೇಳಬೇಕು ಎಂಬ ಪ್ರಯತ್ನವನ್ನೇ ತ್ಯಜಿಸಿದ. ಅವಳ ಜತೆ ಮಾತು ಕೂಡ ಆಡುತ್ತಿರಲಿಲ್ಲ. ಹೆಂಡತಿಗೂ,

''ಸುಲೋಚನ, ಅಮ್ಮ ಏನೇ ಹೇಳಲಿ ನೀನು ಸುಮ್ಮನಿದ್ದುಬಿಡು... ಮಾತಿಗೆ ಮಾತು ಅಂದರೆ ತಾನೆ ಅವಳು ರೇಗೋದು'' ಎಂದು ಸಮಾಧಾನ ಹೇಳಿದ.

ಬೀದಿಯ ಅಂಗಡಿಗಳವರಿಗೆ, ಹಾಲು, ತರಕಾರಿ ಮಾರುವವರಿಗೆ ಸೂಕ್ಷ್ಮವಾಗಿ,

''ಅಮ್ಮನ ಮಾತಿಗೆ ವಿಪರೀತ ಅರ್ಥ ಕಲ್ಪಿಸಿಕೊಳ್ಳಬೇಡಿ... ಅವಳು ಸ್ವಲ್ಪ ಹಾಗೇನೆ'' ಎಂದು ಕೇಳಿಕೊಂಡ.

ಇಷ್ಟಾದರೂ ಅವಳ ಜಗಳ, ಮಾತು, ಕೊಂಕುನುಡಿ ತಪ್ಪಲಿಲ್ಲ. ಬಯಲಲ್ಲಿ, ಅಲ್ಲಿ ಇಲ್ಲಿ ಬಿದ್ದ ಕಸಕಡ್ಡಿ, ತರಗೆಲೆಗಳನ್ನು ಎತ್ತಿಕೊಂಡು, ಮೈಗೆ ಸುತ್ತಿಕೊಂಡು ಭರೋ ಎಂದು ಬೀಸಿ ಬರುವ ಸುಂಟರ ಗಾಳಿಯ ಹಾಗೆ, ಕಾವೇರಜ್ಜಿ, ಅಲ್ಲಿ ಕೂಗಿ, ಇಲ್ಲಿ ಕಿರಚಾಡಿ, ಮತ್ತೊಂದು ಕಡೆ ಬೊಬ್ಬೆ ಹೊಡೆದು ಕೇರಿಯನ್ನೆಲ್ಲ ಒಂದುಮಾಡಿ ಬಿಡುತ್ತಿದ್ದಳು.

ಏನು ಪವಾಡ ನಡೆಯಿತೋ... ಈ ಒಂಟಿ ಸುಂಟರಗಾಳಿ ಮಂದಮಾರುತವಾಯಿತು. ಹಿತವಾಗಿ ತೇಲಿ ಬರುವ ತಂಗಾಳಿಯಾಯಿತು.

ಕಾವೇರಜ್ಜಿ ತರಕಾರಿಯವನ ಜತೆ, ಹೂವಿನವಳ ಜತೆ, ಹಾಲಿನವನ ಸಂಗಡ ಮೃದುವಾಗಿ ನಗುನಗುತ್ತ ಮಾತನಾಡತೊಡಗಿದಳು. ಕ್ರಿಕೆಟ್ ಆಡುವ ಹುಡುಗರ ಬಳಿ ನಿಂತು,

''ತಮ್ಮಾ, ನೋಡಿಕೊಂಡು ಆಡ್ರೋ...'' ಎಂದಳು.

ಕಾಮಾಕ್ಷಿ ಮಗಳು ಕಾವೇರಿಯನ್ನು ನಿಲ್ಲಿಸಿ ಕೊಂಡು,

''ಏನು ಕನಕ... ಇದು ನಮಗೆ ಹೇಳಿದ್ದಲ್ಲ ಮಗಳೆ... ಹೆಣ್ಣು ಆದಷ್ಟು ಒಪ್ಪ ಓರಣವಾಗಿರ ಬೇಕು...'' ಎಂದಳು.

ಅವಳ ಮಾತಿನಲ್ಲಿಯ ಮೃದುತ್ವ, ಮುಖದ ಮೇಲಿನ ಗಾಂಭೀರ್ಯ, ಉಡುಗೆಯಲ್ಲಿನ ಅಚ್ಚು ಕಟ್ಟುತನ, ಅವಳ ವ್ಯಕ್ತಿತ್ವದಲ್ಲಿ ಕಂಡುಬಂದ ಹೊಸ ತನ ಹಿರಿಮೆ ಎಲ್ಲರ ಬಾಯಿ ಮುಚ್ಚಿಸಿಬಿಟ್ಟಿತು.

ಇಂದಿರಾ ನಗರದ ಮೂರನೇ ಕ್ರಾಸಿನ ಜನ ಕಾವೇರಜ್ಜಿಯ ಬಗ್ಗೆ ಒಳ್ಳೆಯ ಅಭಿಪ್ರಾಯ ತಾಳುತ್ತಿದ್ದಾರೆ ಅನ್ನುವಾಗ, ಈ ಹಿಂದೆ ಅವಳ ಬಗ್ಗೆ ಇದ್ದ ಕಲ್ಪನೆ ಬದಲಾಗಿ ಅವಳ ಬೇರೊಂದು ಚಿತ್ರ, ಜನರ ಮನಸ್ಸಿನಲ್ಲಿ ನಿಧಾನವಾಗಿ ಮೂಡುತ್ತಿದೆ ಅನ್ನುವಾಗ, ಮಗ ಸದಾನಂದ, ಸೊಸೆ ಸುಲೋಚನ ಈ ಪರಿವರ್ತನೆ ಹೇಗಾಯಿತು ಎಂದು ವಿಚಾರ ಮಾಡುತ್ತಿರುವಾಗ ಒಂದು ಸಂಜೆ ಕಾವೇರಜ್ಜಿ ''ಸದೂ...'' ಎಂದು ಮಗನನ್ನು ಕೂಗಿ ಕರೆದಳು.

ಮಗ ಬಳಿಗೆ ಬರುತ್ತಿರಲು,

''ಏನೋ ಆಯಾಸ ಕಣೋ...'' ಎಂದು ಮಗನ ಕೈ ಹಿಡಿದುಕೊಂಡಳು. ಸದಾನಂದ ಅವಳನ್ನು ಮಂಚದ ಬಳಿಗೆ ಕರೆದೊಯ್ದು ಮಲಗಿಸಿದಾಗ ಕಾವೇರಜ್ಜಿ ''ಹುಡುಗರು ಎಲ್ಲಿ?'' ಎಂದು ಮೊಮ್ಮಕ್ಕಳನ್ನು ಜ್ಞಾಪಿಸಿಕೊಂಡಳು.

ಸುಲೋಚನ ಏನೋ ಅನುಮಾನ, ಗಾಬರಿಯಿಂದ

''ಅತ್ತೇ... ಅತ್ತೇ... ಏನಾಗುತ್ತೆ?''

ಅನ್ನುವಾಗ ಕಾವೇರಜ್ಜಿ ಸೊಸೆಯ ಕೆನ್ನೆ ಸವರಿ, ಮಗನ ಮುಖ ನೋಡಿ ಹಾಗೆಯೇ ಹಿಂದಕ್ಕೆ ಒರಗಿದಳು.

ಕೇರಿಗೆ ಕೇರಿಯೇ ಸದಾನಂದನ ಮನೆಗೆ ಧಾವಿಸಿ ಬಂದಿತು.

''ಕಾವೇರಜ್ಜಿಗೆ ಸಾವು ಹತ್ತಿರ ಬಂದಿರೋದು ಗೊತ್ತಿತ್ತು... ಅದಕ್ಕೇ ಅವಳು ಕೊನೆಗಾಲದಲ್ಲಿ ಒಳ್ಳೆಯವಳಾದಳು'' ಎಂದು ಹಲವರು ಮಾತನಾಡಿಕೊಂಡರು.

''ಹೌದು ಅಲ್ವ? ಈಗೀಗ ಅವಳು ಜಗಳ ಆಡುತ್ತಿರಲಿಲ್ಲ. ಯಾರನ್ನೂ ಬೈತಿರಲಿಲ್ಲ, ಎಲ್ಲರ ಹತ್ತಿರಾನು ಚೆನ್ನಾಗಿ ಮಾತನಾಡೋಳು. ಮಗ ಸೊಸೇನ ಪ್ರೀತಿಯಿಂದ ಕಾಣೋಳು...'' ಎಂದು ಜನ ಅಭಿಪ್ರಾಯಪಟ್ಟರು.

''ಮೊದಲಿಂದಾನು ಅಜ್ಜಿ ಹೀಗೇ ಇದ್ದಿದ್ರೆ ಚೆನ್ನಾಗಿರುತ್ತಿತ್ತು...'' ಎಂದೂ ಕೆಲವರು ದನಿಗೂಡಿಸಿದರು.

''ಕೆಲವು ಸಾರಿ ಸಾವು ಜನರನ್ನ ಹೇಗೆ ಹಣ್ಣು ಹಣ್ಣು ಮಾಡುತ್ತೆ...'' ಎಂದು ಮತ್ತೆ ಯಾರೋ ಕಾವೇರಜ್ಜಿ ಒಳ್ಳೆಯವಳಾಗಿ ಪರಿವರ್ತಿತಳಾದ ಬಗ್ಗೆ ತೀರ್ಪು ನೀಡಿದರು.

ಬಹಳ ವರ್ಷಗಳಿಂದ ಕೆಟ್ಟವಳು, ಮಾತುಗಾತಿ, ಜಗಳಗಂಟಿ ಎಂಬೆಲ್ಲ ಬಿರುದುಗಳಿಗೆ ಪಾತ್ರಳಾಗಿದ್ದ ಕಾವೇರಜ್ಜಿ ಸಾಯುವಾಗ ಈ ಎಲ್ಲ ಬಿರುದುಗಳಿಂದ ಮುಕ್ತಳಾಗಿಬಿಟ್ಟಳು.

ಮಗ ಸದಾನಂದ ತಾಯಿಯ ಅಂತ್ಯ ಸಂಸ್ಕಾರವನ್ನು ಚೆನ್ನಾಗಿಯೇ ಮಾಡಿದ. ತಾಯಿಯನ್ನು ಮಣ್ಣುಮಾಡಿ ಬಂದ ಆತ, ಮನೆಯಲ್ಲಿ ಉರಿಯುತ್ತಿರುವ ದೀಪದ ಬಳಿ ಅವಳ ಪಟ ಏರಿಸಿ, ಅದಕ್ಕೆ ಹೂವಿನಹಾರ ಹಾಕಿ ಕೈ ಮುಗಿದ.

ತಟ್ಟನೆ ಅವನಿಗೆ ಆ ಭಾವಚಿತ್ರಕ್ಕೆ ಸಂಬಂಧಪಟ್ಟಂತೆ ನಡೆದೊಂದು ಘಟನೆ ನೆನಪಿಗೆ ಬಂದಿತು. ಈ ನೆನಪಿನ ಹಿಂದೆಯೇ ತನ್ನ ತಾಯಿಯಲ್ಲಾದ ಮಹತ್ವದ ಬದಲಾವಣೆಯ ಕಾರಣವೂ ಹೊಳೆದು ಆತ ವಿಸ್ಮಿತನಾದ. ಈ ವಿಸ್ಮಯವನ್ನು ಎದೆಯಲ್ಲಿ ತುಂಬಿಕೊಂಡೇ ಅಮ್ಮನ ಭಾವಚಿತ್ರವನ್ನು ದಿಟ್ಟಿಸಿದ.

ಸಾಕಷ್ಟು ಉದ್ದ, ಅಗಲವಾಗಿದ್ದ ವರ್ಣ ರಂಜಿತ ಭಾವಚಿತ್ರ ಅದಾಗಿತ್ತು. ಎರಡು ಬೆರಳಿನಷ್ಟು ಅಗಲದ ಬಂಗಾರದ ಚೌಕಟ್ಟನ್ನು ಅದಕ್ಕೆ ಹಾಕಲಾಗಿತ್ತು. ಆ ಚಿತ್ರದಲ್ಲಿ ಕಾವೇರಜ್ಜಿ ರೇಶಿಮೆ ಸೀರೆಯೊಂದನ್ನು ಉಟ್ಟು, ಅವಳಿಗೆ ಅಪರೂಪವೆನ್ನುವಂತಹಾ ಭಂಗಿಯಲ್ಲಿ, ತುಂಬಾ ಗಂಭೀರಳಾಗಿ ಕಾಣುತ್ತಿದ್ದಳು.

ಆ ಭಾವಚಿತ್ರವನ್ನು ಸದಾನಂದ ತಾಯಿಯ ಮೇಲಿನ ಮಮತೆಗೆ ಒಳಗಾಗಿಯೇನೂ ಮಾಡಿಸಿರಲಿಲ್ಲ. ಆ ಭಾವಚಿತ್ರದಿಂದಾಗಿ ಅವನಿಗೆ ಒಂದೇ ಒಂದು ಪೈಸೆಯೂ ಖರ್ಚಾಗಿರಲಿಲ್ಲ. ಅನಿರೀಕ್ಷಿತವಾಗಿ, ಅಚ್ಚರಿಯುಂಟುಮಾಡುವ ರೀತಿಯಲ್ಲಿ ಆ ಭಾವಚಿತ್ರ ಅವನಿಗೆ ಲಭ್ಯವಾಗಿತ್ತು.

ನಾಲ್ಕು ತಿಂಗಳ ಹಿಂದೆ ತನ್ನ ಕಛೇರಿಯಲ್ಲಿ ಕುಳಿತಾಗ ಅವನನ್ನು ಹುಡುಕಿಕೊಂಡು ಬಂದ ರುದ್ರಯ್ಯ, ''ನಿಮ್ಮ ತಾಯೀ ಫೋಟೋ ತುಂಬಾ ಚೆನ್ನಾಗಿ ಬಂದಿದೆ...'' ಎಂದ.

''ಮುಖದ ಮೇಲಿನ ಆ ಪ್ರಸನ್ನತೆಯಂತೂ ಮತ್ತೆ ಮತ್ತೆ ನೋಡುವ ಹಾಗೆ ಮಾಡುತ್ತೆ...'' ಎಂಬ ಮಾತನ್ನು ಬೇರೆ ಸೇರಿಸಿದ.

''ಯಾರ ಫೋಟೋ ನೀವು ಹೇಳೋದು?''

''ನಿಮ್ಮ ತಾಯೀದು?''

''ಎಲ್ಲಿ ನೋಡಿದ್ರಿ?''

'ಬಿಂಬ' ಸ್ಟುಡಿಯೋದಲ್ಲಿ ದೊಡ್ಡದಾಗಿ ಮಾಡಿ ಫ್ರೇಮ್ ಹಾಕಿ ಇಟ್ಟಿದಾರೆ... ನಿನ್ನೆ ಹೋದವ ನೋಡಿ ಬಂದೆ...''

''ನಮ್ಮ ತಾಯೀದು ಅಲ್ಲ ಬಿಡಿ... ಯಾರ ಫೋಟೋ ನೋಡಿದ್ರೋ ನೀವು...'' ಎಂದ ಈತ. ಏಕೆಂದರೆ ತಾನು ತನ್ನ ತಾಯಿಯ ಫೋಟೋವನ್ನು ತೆಗಿಸಿರಲಿಲ್ಲ. ಅದನ್ನು ದೊಡ್ಡದನ್ನಾಗಿ ಮಾಡಲು 'ಬಿಂಬ' ಸ್ಟುಡಿಯೋದವನಿಗೆ ಹೇಳಿರಲಿಲ್ಲ... ಯಾರದ್ದೋ ಚಿತ್ರ ನೋಡಿ ರುದ್ರಯ್ಯ ಹೀಗೆ ಹೇಳುತ್ತಿರಬೇಕು ಅಂದುಕೊಂಡ ಸದಾನಂದ.



''ಏನ್ ಸಾರ್... ನನಗೆ ನಿಮ್ಮ ತಾಯಿ ಗೊತ್ತಿಲ್ವೆ? ಅವರು ಸೌದೆ ಡೀಪೋನಲ್ಲಿ ಜಗ ಆಡೋದನ್ನ ನಾನೆಷ್ಟು ಸಾರಿ ನೋಡಿಲ್ಲ'' ಎಂ ರುದ್ರಯ್ಯ, ಕಾವೇರಮ್ಮ ತನಗೆ ತುಂಬಾ ಚೆನ್ನಾ ಗೊತ್ತು ಎಂಬುದನ್ನು ಖಚಿತಪಡಿಸುತ್ತ.

ಅವನು ಅಷ್ಟು ಹೇಳಿದ ಮೇಲೆ ಮ ಮಾತೇಕೆ ಎಂದು ಸದಾನಂದ ಸುಮ್ಮನಾದ.

''ಇರಲಿ ಬಿಡಿ... ನಾನು ಹೋಗಿ ನೋಡ ತೀನಿ'' ಎಂದ.

ಸದಾನಂದ ಸ್ಟುಡಿಯೋಗೆ ಹೋಗಲಿಲ್ಲ. ಈ ವಿಷಯವನ್ನು ಆತ ಮರೆತೂಬಿಟ್ಟ. ಆದರೆ ಮಾರನೇ ದಿನ ನಂದಿನಿ ಹಾಲಿನ ಡಿಪೋ ಮ್ಯಾನೇಜರ್ ರಂಗಣ್ಣ, ''ಸದಾನದ... ಕಾವೇರಜ್ಜಿ ಫೋಟೋ ತುಂಬಾ ಚೆನ್ನಾಗಿ ಬಂದಿದೆ... ಆ ಫೋಟೋ ನೋಡಿದ್ರೆ, ಕಾವೇರಜ್ಜ ಬಗ್ಗೆ ಎಂತಹಾ ಅಭಿಪ್ರಾಯ ಬರುತ್ತೆ ಅಂತೀರಾ...'' ಎಂದೇನೋ ಹೇಳತೊಡಗಿದಾಗ ಸದಾನಂದ ಅವನನ್ನು ತಡೆದು, ''ಅಲ್ಲ, ಯಾರ ಫೋಟೋ... ಏನು ಕತೆ?'' ಎಂದು ಕೊಂಚ ತಾಳ್ಮೆ ಕಳೆದುಕೊಂಡ.

''ಫೋಟೋ ಕಾವೇರಜ್ಜೀದೆ. ಅದೇ ಕೆಂಪು ಸೀರೆ, ಹಸಿರು ಬಾರ್ಡರ್ರು... ಗುಂಗುರು ಕೂದಲು... ನಿಮಗೆ ಗೊತ್ತಿಲ್ವೆ ಆತ ಫೋಟೋನ ಎನ್‌ಲಾರ್ಜ್ ಮಾಡಿ ಇಟ್ಟಿದ್ದಾನೆಯೆ?'' ಎಂದ ರಂಗಣ್ಣ.

ಈ ಪ್ರಕರಣ ಮುಗಿಯಿತು ಅನ್ನುವಾಗ ಮೂರನೆಯವರು ಯಾರೋ ಈ ವಿಷಯ ಪ್ರಸ್ತಾಪಿಸಿದರು. ಕೊನೆಗೆ ಮೇಡಂ ನಿರ್ಮಲಮ್ಮ, ಬ್ಯೂಟಿಪಾರ್ಲರ್ ಪಂಕಜಮ್ಮ ಇನ್ನೂ ಹಲವರು ಸದಾನಂದನನ್ನು ನಿಲ್ಲಿಸಿಕೊಂಡು ಈ ಫೋಟೋ ಬಗ್ಗೆ ಪ್ರಸ್ತಾಪಿಸಿದರು. ಹಾಗೆಯೇ ಹೆಂಡತಿ ಸುಲೋಚನಾಳ ಕಿವಿಗೂ ಈ ವಿಷಯ ಬಿದ್ದಿತು.



ಇದೇನು ಕತೆ ಎಂದು ಸದಾನಂದ 'ಬಿಂಬ' ಸ್ಟುಡಿಯೋದ ಮೆಟ್ಟಿಲು ಹತ್ತಿದ.

ನಿಜವಾಗಿಯೂ ಸದಾನಂದನಿಗೆ, ತನ್ನ ತಾಯಿಯ ಫೋಟೋ ತೆಗೆಸಿ, ಅದನ್ನು ಎನ್‌ಲಾರ್ಜ್ ಮಾಡಿಸಿ ಮನೆಯಲ್ಲಿ ತೂಗು ಹಾಕುವ ವಿಚಾರವಿರಲಿಲ್ಲ. ತಂದೆ ಸತ್ತನಂತರ ತಮ್ಮನ್ನೆಲ್ಲ ಸಾಕಲು, ಓದಿಸಲು ಅವಳು ಪರದಾಡಿದ್ದು ನಿಜ. ಆದರೆ ಇತ್ತೀಚಿನ ಕೆಲ ವರ್ಷಗಳಿಂದ ಅವಳು ತನ್ನ ಮನಸ್ಸಿಗೆ ತುಂಬಾ ನೋವನ್ನು ಉಂಟುಮಾಡಿದ್ದಳು ಎಂಬುದೂ ನಿಜವೆ. ಯಾರು ಯಾರೋ ನಿಮ್ಮ ತಾಯಿ ಹಾಗೆ ಹೇಳಿದರು, ಹೀಗೆ ಹೇಳಿದರು ಎಂದು ಹೇಳಿಕೊಂಡು ಮನೆ ಬಾಗಿಲಿಗೆ ಜಗಳಕ್ಕೆ ಬರುವಲ್ಲಿಗೂ ಅವಳು ತಲೆನೋವಾಗಿ ಪರಿವರ್ತನೆ ಹೊಂದಿದ್ದಳು. ತನಗೂ ಅವಳಿಗೂ ಜಗಳವಾಗಿ ಮಾತು ನಿಂತುಹೋಗಿತ್ತು. ಸುಲೋಚನಾಗೂ ಅವಳನ್ನು ಕಂಡರೆ ಆಗುತ್ತಿರಲಿಲ್ಲ, ತಮ್ಮ ಮಕ್ಕಳಿಗೂ ಅಜ್ಜಿಯ ಮೇಲೆ ಬೇಸರ ಬಂದಿತ್ತು. ಈ ಹಿಂದೆ ಅವಳ ಮೇಲೆ ಏನು ಗೌರವ, ಅಭಿಮಾನ ಸದಾನಂದ ಬೆಳೆಸಿಕೊಂಡು ಬಂದಿದ್ದ, ಅದೆಲ್ಲ ಕ್ರಮೇಣ ಮಾಯವಾಗಿ, ಅವಳೆಂದರೆ ಬೇಸರ ಬರುವಂತಹಾ ಪರಿಸ್ಥಿತಿ ಉದ್ಭವವಾಗಿತ್ತು. ಅಂದ ಮೇಲ ಅವಳ ಭಾವಚಿತ್ರಕ್ಕೆ ಸದಾನಂದ ಏಕೆ ಆಸಕ್ತವಹಿಸುತ್ತಾನೆ?

ಸದಾನಂದ ಮೆಟ್ಟಿಲು ಹತ್ತಿ ಸ್ಟುಡಿಯೋದಲ್ಲಿ ಕಾಲಿಡುವಾಗ, ಮುಂದೆ ಗೋಡೆಯ ಮೇಲೆ ಕಾವೇರಜ್ಜ ನಗುತ್ತ ನಿಂತಿದ್ದಳು. ದೊಡ್ಡ ಪ್ರಮಾಣದ ಚಿತ್ರ. ಸುಂದರವಾದ ಕಟ್ಟು, ಕಾವೇರಜ್ಜ ಜೀವಂತವಾಗಿ ಮುಂದೆ ನಿಂತಂತೆ ಚಿತ್ರದಲ್ಲಿ ಕಾಣುತ್ತಿದ್ದಳು.

ರುದ್ರಯ್ಯನಿಂದ ಪಂಕಜಮ್ಮನವರವರಗೆ ಎಲ್ಲರೂ ಹೇಳಿದ ಮಾತು ನಿಜವಾಗಿತ್ತು. ತಾನೇ ಅವರೆಲ್ಲರೆದುರು ಸುಳ್ಳುಗಾರನಾಗಿದ್ದೆ. ಛೆ! ಎಂದು ಪೇಚಾಡಿಕೊಂಡ ಸದಾನಂದ.

ಆದರೆ ಈ ಚಿತ್ರ ಮಾಡಿಸಿದವರು ಯಾರು? ಸ್ಟುಡಿಯೋದವರಿಗೆ ಅಮ್ಮನ ಚಿತ್ರ ಸಿಕ್ಕಿತು ಹೇಗೆ?

ಈತ ಡಾರ್ಕ್‌ರೂಮಿನ ಬಾಗಿಲು ಬಡಿದು, 'ಬಿಂಬ'ದ ಮಾಲಿಕ ಹೊರಬರುವತನಕ ಕಾದು ಕುಳಿತ. ಸ್ಟುಡಿಯೋ ಮಾಲಿಕ ಮಲಕಯ್ಯ, ''ಸಾರ್ ಒಂದು ತಪ್ಪಾಗಿಬಿಡ್ತು...'' ಎಂದು ಕೈ ಕೈ ಹೊಸಕಿಕೊಂಡ.

ಈಗ ಆರು ತಿಂಗಳ ಹಿಂದೆ ಊರಿನಲ್ಲಿ ಒಂದು ಮದುವೆ ನಡೆದಿತ್ತು. ಕಾವೇರಿಯ ಬಾಲ್ಯ ಗೆಳತಿ ಗಂಗಮ್ಮನ ಮೊಮ್ಮಗನ ಮದುವೆ. ಗಂಗಮ್ಮ ಮನೆಗೆ ಬಂದು ಕಾವೇರಜ್ಜಿಯನ್ನು ತಾನೇ ಮದುವೆಗೆ ಕರೆದೊಯ್ದಳು. ಕಾವೇರಜ್ಜಿ ಯಾವುದೋ ಸೀರೆ ಉಟ್ಟು ಹೊರಟಾಗ, ''ಏನೇ, ಬೇರೆ ಸೀರೆ ಇಲ್ಲವೇನೆ ನಿನಗೆ?'' ಎಂದು ಹೇಳಿ, ಟ್ರಂಕಿನಿಂದ ಒಳ್ಳೆಯ ಸೀರೆ ತೆಗೆದು ಕಾವೇರಜ್ಜಿಗೆ ಉಡಿಸಿ, ತಾನೇ ಅವಳ ತಲೆಗೂದಲು ಸರಿಪಡಿಸಿ ತನ್ನ ಜತೆ ಕರೆದೊಯ್ದಿದ್ದಳು. ಮದುವೆ ಮನೆಯಲ್ಲಿ ಇಬ್ಬರೂ ಗೆಳತಿಯರು ಒಟ್ಟಿಗೇ ಮಾತನಾಡುತ್ತ ಸಂಭ್ರಮದಿಂದ ತಿರುಗಾಡಿದರು. ಅಲ್ಲಿಯೇ ಫೋಟೋ ತೆಗೆಯುತ್ತಿದ್ದ ಹುಡುಗನನ್ನು ಕರೆದು ಗಂಗಮ್ಮ, ''ನೋಡು... ಮರಿ ನಮ್ಮಿಬ್ರ ಫೋಟೋ ತೆಗಿ, ಚೆನ್ನಾಗಿ ಬರಬೇಕು, ನಾವಿಬ್ರೂ ಫ್ರೆಂಡ್ಸು...'' ಎಂದಳು.

ಆ ಹುಡುಗ, ಈ ಇಬ್ಬರೂ ಮುದಿ ಗೆಳತಿಯರನ್ನು ಒಟ್ಟಿಗೇನೆ ನಿಲ್ಲಿಸಿ, ಆಸಕ್ತಿಯಿಂದ ಫೋಟೋ ಕೂಡ ತೆಗೆದ. ಕಾವೇರಜ್ಜಿ ಮದುವೆ ಮುಗಿಸಿಕೊಂಡು ಮನೆಗೂ ಬಂದಳು.

ಈ ಮದುವೆಯಾದ ಎಂಟು ದಿನಗಳಲ್ಲಿ ಹುಡುಗನ ಅಜ್ಜಿ ಗಂಗಮ್ಮ ತೀರಿಕೊಂಡಳು. ನಾಲ್ಕು ದಿನಗಳ ನಂತರ ಈ ವಿಷಯ ತಿಳಿದು ಬಂದು ಕಾವೇರಜ್ಜಿ ತುಂಬಾ ವ್ಯಥೆಪಟ್ಟಳು. ಗಂಗಮ್ಮನ ಮಗ, ಕಾವೇರಜ್ಜಿ-ಗಂಗಮ್ಮ ಇದ್ದ ಫೋಟೋ ತೆಗೆದುಕೊಂಡು 'ಬಿಂಬ' ಸ್ಟುಡಿಯೋಗೆ ಹೋದವ, 'ನಮ್ಮ ತಾಯಿ ಫೋಟೋ... ದೊಡ್ಡ ಸೈಜಿಗೆ ಮಾಡಿಕೊಡಿ...'' ಎಂದ.

'ಬಿಂಬ'ದ ಮಲಕಯ್ಯ, ''ಆಯಿತು ಸಾರ್'' ಎಂದು ತಲೆದೂಗಿದ.

ಆದರೆ ಆತ ಕೈತಪ್ಪಿನಿಂದ ಗಂಗಮ್ಮ... ಫೋಟೋ ಎನ್‌ಲಾರ್ಜ್ ಮಾಡುವುದ... ಬದಲು ಕಾವೇರಜ್ಜಿಯ ಫೋಟೋ ಮಾಡಿದ. ... ಹುಡುಗ ತಾಯಿಯ ಚಿತ್ರ ಕೊಂಡೊಯ್ಯಲು ಬಂದವ-

''ನಾನು ಹೇಳಿದ್ದೊಂದು... ನೀವ... ಮಾಡಿದ್ದೊಂದು, ಇದು ನನಗೆ ಬೇಡ...'' ಎಂ... ಮೇಲೆ ಮಲಕಯ್ಯ, ಗಂಗಮ್ಮನ ಫೋಟೊ... ಮಾಡಿಕೊಟ್ಟ. ಚೆನ್ನಾಗಿಯೇ ಬಂದಿ... ಕಾವೇರಜ್ಜಿಯ ಫೋಟೋವನ್ನು ಆತ ಗೋಡೆಯ ಮೇಲೆ ಏರಿಸಿದ.

''ಹೀಗೊಂದು ತಪ್ಪಾಗಿಬಿಡ್ತು ಸಾರ್... ಎಂದು ಆತ ನಡೆದುದನ್ನು ವಿವರಿಸಿದ.

''ಒಳ್ಳೇ ಪ್ರಿಂಟು ಸಾರ್... ಚೆನ್ನಾಗಿ ಫ್ರೇಮ್ ಹಾಕಿಸಿದ್ದೀವಿ... ನನಗೆ ಇನ್ನೂರು ರೂಪಾಯಿ ಬಿದ್ದಿದೆ... ಬೇಕು ಅಂದ್ರೆ ತೊಕೊಂಡ ಹೋಗಿ...'' ಎಂದು ಬೇರೆ ಆತ ಹೇಳಿದ, ' ಫೋಟೋದಲ್ಲಿ ಇರುವಾಕೆ ಸದಾನಂದನ ತಾಯಿ ಎಂಬುದನ್ನು ತಿಳಿದು.

''ನೋಡೋಣ'' ಎಂಬ ಮಾತನ್ನು ಹೇ... ಬಂದರೂ, ಮತ್ತೆ ಸ್ಟುಡಿಯೋ ಕಡೆ ಅವ... ತಿರುಗಿ ಹೋಗಲಿಲ್ಲ. ಹೀಗೆಂದು ಜನ ಅವನ... ಅವನ ಪಾಡಿಗೆ ಇರಲು ಬಿಡಲಿಲ್ಲ. ಆಗಾ... ಯಾರಾದರೊಬ್ಬರು, ''ಅಲ್ಲ ಸದಾನಂದ... ಅ... 'ಬಿಂಬ'ದಲ್ಲಿರೋ ಫೋಟೋ ನಿಮ್ಮ ತಾಯಿ... ದಲ್ಲವೆ?'' ಎಂದು ಕೇಳುತ್ತಲಿದ್ದರು.

ಸದಾನಂದನಿಗೆ ಇದೊಂದು ಆಗಾ... ಕಾಡುವ ಸಮಸ್ಯೆಯಾಯಿತು.

ಕಾವೇರಜ್ಜಿಯ ಫೋಟೋ ಅಪ್ರತ್ಯಕ್ಷದಲ್ಲಿದ್ದು ಹೀಗೆ ಕಾಡುತ್ತಿರುವಾಗಲೇ, ಅಲ್ಲಿ 'ಬಿಂಬ'ದ ಮಾಲಿಕ ಮಲಕಯ್ಯನನ್ನೂ ಈ ಚಿತ್ರ ಬೇರೊಂದು ರೀತಿಯಲ್ಲಿ ಕಸಿವಿಸಿಗೊಳಿಸಿತು.

''ಓ! ನಮ್ಮ ಕಾವೇರಜ್ಜಿ ಇಲ್ಲಿದ್ದಾಳಲ್ಲ... ಕೇರಿ ತುಂಬ ಇವಳ ಕಾಟ ಮಾರಾಯ... ಈ ಸ್ಟುಡಿಯೋದವರು ಏನೂಂತ ಈ ಜಗಳಗಂಟೀ ಫೋಟೋನ ಇಲ್ಲಿ ತೂಗುಹಾಕಿಕೊಂಡಿದಾರೋ...'' ಎಂದು ಹೊರಗೆ ಬಂದುನಿಂತ ಜನ ಮಾತನಾಡಿಕೊಳ್ಳುವುದನ್ನು ಮಲಕಯ್ಯ ಒಳಗೆ ಫೋಟೋ ಕ್ಲಿಕ್ ಮಾಡುತ್ತ ಕೇಳಿಸಿಕೊಂಡ.

ಬಂದ ಹತ್ತು ಜನರಲ್ಲಿ, ಒಬ್ಬರು-ಇಬ್ಬರು ಈ ಫೋಟೋ ನೋಡಿ ಹೀಗೆ ಮಾತನಾಡುವುದನ್ನು ಕೇಳದಾದ ಮಲಕಯ್ಯ. ಆತ ಮಾಡಿದ ಪ್ರಿಂಟ್ ಚೆನ್ನಾಗಿ ಬಂದಿತ್ತು. ಕಾವೇರಜ್ಜಿ ಚೆನ್ನಾಗಿ ಕಾಣುತ್ತಲೂ ಇದ್ದಳು. ಆದರೆ ತನ್ನಲ್ಲಿಗೆ ಬಂದವರೇ ಏನೋ ಒಂದು ರೀತಿಯಲ್ಲಿ ಮಾತನಾಡಿದಾಗ ಯಾವಾಗಲೂ ಗ್ರಾಹಕರ ಸಂತೋಷವೇ ತನ್ನ ಸಂತೋಷ ಎಂಬ ತತ್ವದಲ್ಲಿ ನಂಬಿಕೆ ಇರಿಸಿಕೊಂಡ ಮಲಕಯ್ಯ ಒಂದು ದಿನ ಆ ಫೋಟೋವನ್ನು ಚೆನ್ನಾಗಿ ಪ್ಯಾಕ್ ಮಾಡಿ ಕೊಂಡು ಸದಾನಂದನನ್ನು ಹುಡುಕಿಕೊಂಡು ಬಂದ.

''ಸಾರ್... ನಿಮ್ಮ ತಾಯೀ ಫೋಟೋ ನಿಮ್ಮ ಮನೇಲಿ ಇರಲಿ... ಇದನ್ನ ನನ್ನ ಗಿಫ್ಟ್ ಅಂತ ತೆಗೆದುಕೊಳ್ಳಿ'' ಎಂದು ಹೇಳಿ ಸದಾನಂದನ ಕೈಗಿತ್ತ.

ಒಲ್ಲದ ಮನಸ್ಸಿನಿಂದಲೇ ಸದಾನಂದ ಕಾಗದದಲ್ಲಿ ಸುತ್ತಿದ ಫೋಟೋ ಹಿಡಿದು ಮನೆಗೆ ಬಂದ.

ಮೂರನೇ ಮಗ ಬಾಗಿಲಲ್ಲಿಯೇ ಸದಾನನ್ನು ತಡೆದು ಕೇಳಿದ, ''ಅಪ್ಪಾಜಿ ಏನದು ಕೈಲಿ?'' ಆತ ಸದಾನಂದನಿಂದ ಆ ಪ್ಯಾಕೆಟ್ ಕಿತ್ತುಕೊಂಡು, ತೆರೆದುನೋಡಿ, ದೊಡ್ಡ ಧ್ವನಿಯಲ್ಲಿ ಸಾರಿದ, ''ಅಜ್ಜೀ ಫೋಟೋ... ಅಜ್ಜೀ ಫೋಟೋ...''


ಕಾವೇರಜ್ಜಿ ಕುತೂಹಲ ತಾಳದೆ ಬಗ್ಗಿ ನೋಡಿದಳು. ಅವಳ ಮುಖ ಕೆಂಪಗಾಯಿತು. ಕಣ್ಣುಗಳು ಮಿಂಚಿದವು. ಸದಾನಂದನ ಮೂರನೇ ಮಗ ಮತ್ತೂ ಒಂದು ಪ್ರಕಟಣೆ ನೀಡಿದ.

''ಅಪ್ಪಾಜೀ ಅಜ್ಜೀ ಫೋಟೋನ ಆ ಬಾಗಿಲ ಮೇಲೆ ಹಾಕಬೇಕು... ಅಲ್ವಾ? ರಂಗಣ್ಣಾರ ಮನೇಲಿ ಹಾಗೇ ಹಾಕಿದಾರೆ... ಶಂಕರಜ್ಜ ಫೋಟೋನ...'' ಸದಾನಂದ ಮಾತನಾಡಲಿಲ್ಲ.

ಅವನ ಉಳಿದ ಮಕ್ಕಳು ಮೂರನೆಯವನು ಹೇಳಿದುದನ್ನು ಕಾರ್ಯರೂಪಕ್ಕೆ ಇಳಿಸಿದರು.

ಈಗ ಎಲ್ಲ ನೆನಪಾಗುತ್ತಿದೆ.

ತನ್ನ ಭಾವಚಿತ್ರ ಮನೆಯ ಪ್ರಧಾನ ಗೋಡೆಯ ಮೇಲೆ, ಮುಖ್ಯದ್ವಾರದ ಚೌಕಟ್ಟನ್ನೇರಿ ಕುಳಿತ ನಂತರ ಕಾವೇರಜ್ಜಿಯಲ್ಲಿ ಒಂದು ಗಾಂಭೀರ್ಯ, ಗತ್ತು ಬರಲಾರಂಭಿಸಿತು. ಕೂಗಾಟ, ಕಿರುಚಾಟ ನಿಲ್ಲಿಸಿದಳು. ಮಾತು ಕಡಿಮೆಯಾಯಿತು. ಮಾತಿಗೊಂದು ಇಂಪು ಬಂದಿತು. ದನಿ ಮೃದುವಾಯಿತು. ಹೇಳುವುದನ್ನು ಮಧುರವಾಗಿ ಹೇಳತೊಡಗಿದಳು.



ತರಕಾರಿ ಮಾರುವಾತ ಬಗ್ಗಿ ನೋಡಿ, ''ಯಾರದ್ದು ಫೋಟೋ... ಕಾವೇರಜ್ಜೀದಾ... ಹೋ ಚೆಂದಾ ಗೈತ್ತೆ... ಪರದಾನ ಮಂತ್ರಿ ಇಂದಿರಮ್ಮನ ಹಾಗೆ...'' ಎಂದ.

ಹೂ ಮಾರುವವಳು,

''ಓ! ಮನೆ ಯಜಮಾನತಿ ಗ್ವಾಡೆ ಮಾಕೆ... ಓ! ಆದಾವ ನೋಡು....'' ಎಂದು ನಕ್ಕಳು.

ಮನೆಗೆ ಬಂದವರು, ಹೊಸ್ತಿಲ ಬಳಿ ನಿಂತವರು, ರಸ್ತೆಯ ಮೇಲೆ ಹೋಗುವವರು...

''ಅರೆರೆರೆ.... ಕಾವೇರಜ್ಜಿ ಅದೃಷ್ಟ ನೋಡು...''

''ಸದಾನಂದಪ್ಪ ಒಳ್ಳೆ ಕೆಲಸ ಮಾಡವ್ನೆ....''

''ಮರ್ಯಾದೆ ಕೊಡಾದು ಅಂದ್ರೆ, ಹೀಂಗೇ ಅಲ್ವಾ'' ಎಂದೆಲ್ಲ ಮಾತನಾಡಿಕೊಂಡು ಹೋದರು.


ಕಾವೇರಜ್ಜಿ ತಿದ್ದಿ ತೀಡಿ ಸೀರೆ ಉಟ್ಟಳು. ತಲೆಗೂದಲು ಬಾಚಿಕೊಂಡಳು. ಮುಖ ತೊಳೆಯದೆ ರಸ್ತೆಗೆ ಬರುವುದನ್ನು ಬಿಟ್ಟಳು.

ತನ್ನ ತಾಯಿಯ ಈ ಫೋಟೋ ಇಲ್ಲಿ ಗೋಡೆ ಏರಿದ್ದೇ ಏರಿದ್ದು, ಅವಳು ನಿಧಾನವಾಗಿ ಬದಲಾದಳು. ಜನ ಗಮನಿಸುವ ಹಾಗೆ, ಅಚ್ಚರಿಪಡುವ ಹಾಗೆ, ಬೈಯುತ್ತಿದ್ದವರು ಬೆರಗಾಗಿ ಬೆರಳು ಕಚ್ಚುವ ಹಾಗೆ ಅಮ್ಮನಲ್ಲಿ ಪರಿವರ್ತನೆಯಾಯಿತು.

ಈ ಫೋಟೋ ಈ ಕೆಲಸವನ್ನ ಮಾಡಿದ್ದಂತೂ ನಿಜ. ಆದರೆ ಪರಿವರ್ತನೆ ಏಕೆ ಆಯಿತು? ಹೇಗೆ ಆಯಿತು? ತನಗೆ ಗೊತ್ತಿಲ್ಲ.

ಈಗ ಅನಿಸುತ್ತಿದೆ. ಅಮ್ಮ ಬದಲಾಗುತ್ತಾಳ ಎಂದಿದ್ದರೆ ಈಗಲ್ಲ, ಏಳೆಂಟು ವರ್ಷಗಳ ಹಿಂದೆಯೇ ಅವಳ ಫೋಟೋ ತೆಗೆ ಎನ್‌ಲಾರ್ಜ್ ಮಾಡಿಸಿ ತಂದು ಮನೆಯ ಗೋಡೆಯ ಮೇಲೆ ತಾನದನ್ನು ಇಡುತ್ತಿದ್ದೆನಲ್ಲ!

ಈಗ ಈ ಯೋಚನೆ ಮಾಡುವುದರಿಂ ಏನು ಉಪಯೋಗ? ಕಾಲ ಉರುಳಿ ಹೋಗಿದೆ ಅಮ್ಮ ಮಣ್ಣನಲ್ಲಿ ಸೇರಿಹೋಗಿದ್ದಾಳೆ. ಪರದಾ ಇಂದಿರಾಗಾಂಧಿಯ ಗತ್ತಿನಲ್ಲಿ ಫೋಟೊ ಮೂಲಕ ಇಡೀ ಮನೆಯನ್ನು ಕಾವೇರ ನೋಡುತ್ತಿದ್ದಾಳೆ. ಸಣ್ಣ ಹಣತೆಯೊಂದು ಬೆಳಕ ಚೆಲ್ಲುತ್ತ ಉರಿಯುತ್ತಿದೆ.



[illegible]

— [illegible]



‘ಶಿಕಾರಿ’ಯ ನಾಗಪ್ಪ

ಯಶವಂತ ಚಿತ್ತಾಲರ ‘ಶಿಕಾರಿ’ ಜೀವನಕ್ಕೆ ಮಾರ್ಗದರ್ಶಿಯಾಗುವ ಸಾರ್ವಕಾಲಿಕ ಹಿತ್ಯಕೃತಿ. ಉತ್ತರ ಕನ್ನಡ ಜಿಲ್ಲೆಯ ಹನೇಹಳ್ಳಿಯಂತಹ ಗ್ರಾಮೀಣ ಪ್ರದೇಶದಲ್ಲಿ ಜನಿಸಿದ ನಾಗಪ್ಪ, ಕಾದಂಬರಿಯ ನಾಯಕ. ಜೀವನದಿಂದ ಏನನ್ನೂ ಬಯಸದ, ಕೇವಲ ಮಹಾತ್ವಾಕಾಂಕ್ಷೆ ಮಾತ್ರಕ್ಕೆ ದುಕದ ಅವನದು ಒಂದು ರೀತಿಯ ಸಂತ ಬದುಕು. ತನ್ನ ನೌಕರಿ, ಲ್ಯಾಬೊರೇಟರಿ ಇವುಗಳನ್ನು ಟ್ಟರೆ, ಅವನು ತನ್ನನ್ನು ತಾನು ಮೈಮರೆತು ತೊಡಗಿಸಿಕೊಳ್ಳುವದು ಸಾಹಿತ್ಯದಲ್ಲಿ. ಪ್ರತಿಷ್ಠಿತ ಹುರಾಷ್ಟ್ರೀಯ ಕಂಪನಿಯೊಂದರಲ್ಲಿ ಆರ್ ಆ್ಯಂಡ್ ಡಿ ಹುದ್ದೆಯಲ್ಲಿರುವ ನಾಗಪ್ಪನಿಗೆ, ಜೀನಾಮೆಯ ಒತ್ತಡ ತರುವ ಜನರ ದೃಷ್ಟಿಯಲ್ಲಿ, ಅವನೊಬ್ಬ ಸೆಂಟಿಮೆಂಟಲ್ ಮನಸ್ಸಿನ ಮುಗ್ಧ. ವನ ಮೌಲ್ಯಾಧಾರಿತ ಬದುಕು ಮತ್ತು ಸಾಹಿತ್ಯ ಕೃತಿಗಳು (ಅವರ ಪ್ರಕಾರ) ವಾಸ್ತವಿಕ ಜೀವನಕ್ಕೆ ನನ್ನೂ ಕೊಡುವದಿಲ್ಲ. ಆದರೆ ನಾಗಪ್ಪನ ದೃಷ್ಟಿಯಲ್ಲಿ ಮೌಲ್ಯಗಳೇ ವಾಸ್ತವವಾದವುಗಳು. ಅವುಗಳ ಲನೆಗಾಗಿಯೇ ತಾನು ಹೋರಾಡುವದು. ಇದು ಅವನಿಗೆ ಒಳ್ಳೆಯದು ಮಾಡುತ್ತಿರುವೆನೆಂಬ ಮ್ಮೆಯನ್ನೇನೂ ಉಂಟುಮಾಡುವದಿಲ್ಲ.

ನಾಗಪ್ಪನಲ್ಲಿ ಮಾನವ ಸಹಜವಾದ ಕ್ರೌರ್ಯ ಜಾಗೃತವಾಗುವದು, ಅವನಿಗೆ ತನ್ನ ಮಾನ ಮತ್ತು ಪ್ರಾಣಗಳ ರಕ್ಷಣೆಯ ತುರ್ತು ಸಂದರ್ಭ ಬಂದಾಗ. ಚತುರಮತಿಗಳಾದ ಬೇಟೆಗಾರರ ಕೈಯಲ್ಲಿ ನಾಗಪ್ಪ ಧೀರನೆ ಶಿರವನ್ನೇನೂ ಒಪ್ಪಿಸುವದಿಲ್ಲ. ತನ್ನಿಂದಾದ ಎಲ್ಲ ಟ್ಟುಗಳನ್ನು ಪ್ರಯೋಗಿಸಿ ಎದುರಿಸುತ್ತಾನೆ.

ಅವನ ಒಳ ಉರಿತಗಳು ಒಮ್ಮೊಮ್ಮೆ ಜ್ವಾಲಾಮುಖಿಯಾಗುವದು ವನ ಬಯ್ಗುಳಗಳಲ್ಲಿ. ಕೋಳಿಗಿರಿಯಣ್ಣನಿಂದ ಕಲಿತ ಬೋಳೀ ಗನೇ, ಸೂಳೇಮಗನೇ ಅವನಿಗೆ ಹೆಚ್ಚು ಪ್ರಿಯವಾದವುಗಳು. ಈ ಯ್ಗುಳುಗಳಿಗೆ ಖಾಸಗಿ ಭಾಷೆಯನ್ನೂ ಆತ ನಿರ್ಮಿಸಿಕೊಂಡಿದ್ದಾನೆ. ದಾಹರಣೆಗೆ, ಒಂದೂ ಮಗನೇ ಅಂದರೆ ಬೋಳೀಮಗನೇ, ರಡೂ ಮಗನೇ ಅಂದರೆ ಸೂಳೇಮಗನೇ ಇತ್ಯಾದಿಯಾಗಿ ಹತ್ತೂ ಗನೇ ತನಕ. ಇವುಗಳಿಗೆ ಅವನು ‘ಸಾಂಖ್ಯದ ಸುಭಾಷಿತಗಳು’ ಂದು ಹೆಸರು ಕೊಟ್ಟಿದ್ದಾನೆ.



ರಾಧಾಕೃಷ್ಣ

ಜಯಶ್ರೀ ದೇಶಪಾಂಡೆ

ಒಗಟಾಗಿ ಹೋದವರು...



ಶ್ರೀಪಾದ

ಸಂಜೆ ಇಷ್ಟು ಬೇಗನೆ ಆಯಿತೆ ಎಂದು ಆಶ್ಚರ್ಯಪಡಿಸುವಂತೆ ಸೂರ್ಯ ಗಡಿಬಿಡಿಯಿಂದ ಬೆಟ್ಟಗಳ ಹಿಂದಡಗಿದ. ಅರುಣರಂಗು, ಕ್ಷಣಕ್ಷಣಕ್ಕೂ ಬಣ್ಣ ಬದಲಿಸಿಕೊಂಡು ಕೇಸರಿಯಿಂದ ಹಳದಿ, ನಸುಹಳದಿಯಿಂದ ಬೂದುಗಪ್ಪಿಗೆ ತಿರುಗಿ, ನೋಡನೋಡುವಷ್ಟರಲ್ಲಿ ಕತ್ತಲಿನ ಕಪ್ಪನ್ನು ಧರಿಸಿಬಿಟ್ಟಿತು.

ನಾನಿದ್ದ ಬಸ್, 'ರೋಯೋ' ಏಕತಾನದ ರಾಗದಲ್ಲಿ ಬೆಟ್ಟವನ್ನೇರಲಾಗದ ಆಯಾಸವನ್ನು ಹೂಂಕರಿಸಿ ಹೊರತಳ್ಳಿ, ಆಮೆಯ ಗತಿಯಲ್ಲಿ ಚಲಿಸಿದಾಗ, 'ರಾತ್ರಿಯಾಗುವ ಮುನ್ನವೇ ತಲುಪಿದ್ದರೆ ಚನ್ನಾಗಿರುತ್ತಿತ್ತು' ಎಂದು ಮನದಲ್ಲಿ ಮೂಡಿದ ಯೋಚನೆಯೊಂದಿಗೆ ಕಿಟಕಿಯ ಗಾಜನ್ನಿಷ್ಟು ಸರಿಸಿ ಇಣುಕಿದರೆ, ಹಿಂದೆ ಸರಿಯುತ್ತಿರುವ ಅಗಾಧ ಕಣಿವೆಯ ಆಳದಲ್ಲೆಲ್ಲೋ ಮಿನುಗಿದ ನಾಲ್ಕೆಂಟು ಕಿರುದೀಪಗಳು ಅಪರಿಚಿತರಂತೆ ಭಾಸವಾದುವು.

''ಏಳು ಗಂಟೆಯ ಒಳಗಾಗಿಯೇ ನೀವು ಕಸಾಲಿ ತಲುಪಬಹುದು ಈಗಲೇ ಹೊರಟುಬಿಡಿ'' ಎಂದು ಖರ್ದಿಪುರ ಗೆಸ್ಟ್‌ಹೌಸಿನ ಮ್ಯಾನೇಜರ್ ನನಗೆ ಹೇಳಿದ್ದ.

ಖರ್ದಿಪುರಕ್ಕೆ ವಿನೋದ್ ಬಂದಿದ್ದ ವಿಷಯವನ್ನು ನಮ್ಮಲ್ಲಿನ ಇನ್ಸ್‌ಪೆಕ್ಟರ್ ರಜಾಕ್ ಸಹ ನನಗೆ ಸೂಚಿಸಿದ್ದರು. ಹಾಗೆಯೇ, ''ಡಿ.ಐ.ಜಿ. ಇನ್ಸ್‌ಪೆಕ್ಷನ್ ಇರೋದರಿಂದ ಇಡೀ ಆಫೀಸು, ಡಿಪಾರ್ಟ್‌ಮೆಂಟು ಯಾರಿಗೂ ತುರಿಸಿಕೊಳ್ಳಲೂ ಪುರುಸೊತ್ತಿಲ್ಲ. ಪ್ಲೀಸ್ ಕೊಂಚ ಸಮಯ ಕೊಡಿ. ನಾನು ಈ ಕೆಲಸವನ್ನು ನಿರ್ಲಕ್ಷಿಸಿಲ್ಲ'' ಎಂದು ಹೇಳಿ ಬೀಳ್ಕೊಟ್ಟಿದ್ದರು. ಅವರವರ ಟೆನ್ಶನ್ ಅವರಿಗೆ, ಹಗಲು-ರಾತ್ರಿ 'ವಿನು... ವಿನು' ಎಂದು ಚಡಪಡಿಸುವ ಅಮ್ಮ, ಅವಳಷ್ಟೇ ಚಿಂತಿತನಾದರೂ ಅನಿವಾರ್ಯವಾಗಿ ಅದನ್ನು ಒಳಗೇ ಅಡಗಿಸಿ, ವಿನೂನ ಶೋಧದ ಎಲ್ಲಾ ಸಾಧ್ಯಾಸಾಧ್ಯತೆಗಳನ್ನೂ ತಾಳೆ ಹಾಕುತ್ತಿರುವ ನಾನು, ಅವಳಿಗೆ ಸಾಂತ್ವನ ನೀಡುವುದನ್ನು ಮುಂದುವರಿಸಿದ್ದೆ.

ಶೃಂಗಾರ ಪ್ರಸಾಧನಗಳ ಬಿಸಿನೆಸ್, ಅಂದರೆ ಕೊಂಡು ವಿಲೇವಾರಿ ಮಾಡುವುದು ಇತ್ಯಾದಿ ಮಾಡುತ್ತೇನೆ ಎಂದು ವಿನು ಹೇಳಿದಾಗ, ಅದನ್ನು ಪ್ರೋತ್ಸಾಹಿಸಿದ್ದಲ್ಲದೆ ಬಂಡವಾಳ ಹಾಕಲು ತಾನೂ ಒಂದಿಷ್ಟು ಹಣ ನೀಡಿದ ಅಮ್ಮ, ಈ ಬಿಸಿನೆಸ್ ಕಾರಣದಿಂದಾಗಿ ವಿನು ಊರೂರು ಸುತ್ತುವಾಗ ''ಎಲ್ಲಿದ್ದಾನೋ? ಹೇಗಿದ್ದಾನೋ?'' ಎಂದು ಒದ್ದಾಡುತ್ತಿದ್ದಳು.

ನಾನು ನಕ್ಕು, ''ಈ ಬಾರಿ ಬಂದಾಗ ಅವನನ್ನು ಕಟ್ಟಿ ಇಲ್ಲಿಯೇ ಕೂರಿಸಿಬಿಡು, ಆಗ ಅವನು ತಿರುಗುತ್ತಾ ಇರುವುದು ನೀನು ವಿನು... ವಿನು ಎಂದು ಚಡಪಡಿಸುವುದು ಯಾವುದೂ ಇರುವುದಿಲ್ಲ...'' ಎಂದು ಛೇಡಿಸುತ್ತಿದ್ದೆ.

ಆದೆಲ್ಲ ಸರಿ, ಆದರೆ ಎಲ್ಲಿದ್ದಾನೆ ವಿನೋದ? ಕಳೆದ ಒಂದು-ಒಂದೂಕಾಲು ತಿಂಗಳಿಂದ ಯಾಕೆ ಫೋನ್ ಸಹ ಮಾಡಿಲ್ಲ ಎಂದು ಚಿಂತೆಯಾಗುವುದು ಸಹಜವೆ. ಹೀಗೆ ಸುತ್ತಾಟದಲ್ಲಿರುವಾಗ ವಾರಕ್ಕೆರಡು ಬಾರಿಯಾದರೂ ಕರೆದು ಮಾತನಾಡುವವನು... "ಚೆನ್ನಾಗಿ ಊಟ ಮಾಡಿದ್ದೇನೆ... ಗಡದ್ದು ನಿದ್ರೆಯನ್ನೂ ಮಾಡುತ್ತೇನೆ ಆಯಿತೆ? ನೀನು ನಿಶ್ಚಿಂತೆಯಾಗಿರು" ಎಂದು ಅಮ್ಮನಿಗೆ ತಮಾಷೆಯಾಗಿ ಹೇಳುವವನು. ಯಾವ ಊರಿನಲ್ಲಿದ್ದಾನೆ ಈಗ?

ಖರ್ದಿಪುರದಲ್ಲಿ ಎರಡು ದಿನ ಉಳಿದುಕೊಂಡು, ವಿನು ತನ್ನ ಕಾರ್ಯಾರ್ಥ ಭೇಟಿ ನೀಡುತ್ತಿದ್ದ ಶಾಪ್‌ಗಳು, ಸ್ಟಾಕಿಸ್ಟರನ್ನೆಲ್ಲ ಭೇಟಿ ಮಾಡಿದೆ.

"ಬಂದಿದ್ದರು. ಒಂದು ವಾರ ಇಲ್ಲಿದ್ದರು ಅನ್ನಿಸುತ್ತೆ, ಮುಂದಿನ ಮೂರು ತಿಂಗಳಿನ ಸ್ಟಾಕ್ ಬುಕ್ ಮಾಡಿಕೊಂಡು ಬೇಗನೆ ಡೆಲಿವರಿ ಮಾಡಿಸ್ತೇನೆ ಎಂದು ಹೇಳಿ ಹೋದರು" ಎಂಬ ಉತ್ತರ ಹೆಚ್ಚಿನವರಿಂದ ಬಂದರೆ 'ಇಲ್ಲವಲ್ಲ' ಎಂದೂ ಒಬ್ಬಿಬ್ಬರು ಹೇಳಿದರು.

ಯಾವ ಕುಗ್ರಾಮದಲ್ಲಿದ್ದರೇನು? ಸೆಲ್ ಫೋನು ಇಟ್ಟುಕೊಂಡವನು ಎರಡು ಮಾತು ನಮ್ಮೊಂದಿಗೆ ಆಡಿಬಿಟ್ಟಿದ್ದರೆ ಹೀಗೆ ಕಸಿವಿಸಿಪಡುವ ಪ್ರಮೇಯವೇ ಇರುತ್ತಿರಲಿಲ್ಲ.

ಕೈಗಡಿಯಾರ ಒಂಭತ್ತು ಗಂಟೆ ತೋರಿಸಿದಾಗ, ಕಸಾಲಿ ಇನ್ನೂ ಯಾವ ದೂರದಲ್ಲಿದೆಯೋ ಅನ್ನಿಸಿತು. ದಾರಿಯಲ್ಲಿ ಬಸ್ ಕೆಟ್ಟು ನಿಲ್ಲದಿದ್ದರೆ ಈಗಾಗಲೇ ತಲುಪಿರಲೂಬಹುದಿತ್ತು. ಹಗಲಾಗಿದ್ದರೆ, ಹಸಿರ ಎಲೆಗಳನ್ನು ಪರಪರ ಬೀಸಿ, ಹೊತ್ತ ಹೂವುಗಳನ್ನುದುರಿಸಿ, ಕೆಳಗೆ ಬಿದ್ದ ಒಣ ಎಲೆಗಳ ಮೇಲೆ ಬಣ್ಣದ ಚುಕ್ಕೆಯಿಟ್ಟು ತೂರುವ ಗಿಡಗಳು, ಅದಾವುದೂ ಬೇಡ ಎನ್ನುವಂತೆ ಕತ್ತಲಿನ ಮೌನವನ್ನು ಹೊದ್ದು ಹಿಂದೆ ಹಿಂದೆ ಓಡಿದುವು.

"ಕಸಾಲಿ... ಸಾರ್...", ನಿವಾ
ನಾನೇ ಸೂಚಿಸಿದಂತೆ ಹೇಳಿ, ನನ್ನನ್ನಿಳಿಸಿ, ಮ
ಬಸ್ಸು ಕೊಂಡೊಯ್ದು. ಕೆಳಗಿಳಿದು, ಅ
ಸಂಪೂರ್ಣ ಅಪರಿಚಿತ ಪ್ರದೇಶದಲ್ಲಿ-ಹುಕ
ಹೆಜ್ಜೆಯಿಡುವಾಗ ಈಗ ಹೋಗುವುದೆ
ಎಂಬ ಯೋಚನೆ ಮುತ್ತಿತು.

ಖರ್ದಿಪುರ ಗೆಸ್ಟ್ ಹೌಸಿನ ಮ್ಯಾನೇ
ಪುರಂದರನೇ, ವಿನೋದ ಕಸಾಲಿಗೆ ಹ
ದ್ದನ್ನು ದೃಢಪಡಿಸಿದ. "ಯಾಕೋ ಬೇಜಾ
ಇದೆ... ಒಂದೆಂಟು ದಿನ ಹಿಲ್‌ಸ್ಟೇಶನ
ವಿಶ್ರಾಂತಿ ತೂಗೋಬೇಕೆನಿಸಿದೆ..." ಎಂ
"ಕಸಾಲಿ ಹತ್ತಿರವೇ ಇದೆ, ಅಲ್ಲಿಗೆ ಹ
ಬಹುದು ಎಂದು ನಾನೇ ಅವರಿಗೆ ಹ
ಸಾರ್" ಎಂದ.

ವಿಶ್ರಾಂತಿಗೆ ಹೋಗಲಿ, ಯಾರು
ಅಂದವರು, ಆದರೆ ಒಂದು ಫೋನು...
ಮೊದಲು, ಇಂದು ಬಂದೀತು, ನಾಳೆ
ಕಾದು, ನಾವೇ ಸಂಪರ್ಕಿಸಿದರೂ
ವಿಲ್ಲದೆ... ಅಮ್ಮನನ್ನು ಹೇಗೆ ಸುಮ್ಮನಿ
ದೆಂದೇ ತಿಳಿಯದಾಗಿತ್ತು. ವಿನು ಹೋಗ
ಹೋಗಬಹುದಿದ್ದ ಜಾಗಗಳನ್ನೆಲ್ಲಾ ಸಂಪ
'ಇಲ್ಲ' ಎಂಬ ಉತ್ತರ ಕಳವಳ ಹೆಚ್ಚಿಸಿ
ಅಮ್ಮನ ಕೋರಿಕೆ ತಳ್ಳಿಹಾಕಲಾಗದೆ, ಇನ್ಸ್
ರಜಾಕ್‌ರನ್ನೂ ಕಂಡು, ಹೇಳಿಬಂದಿದ್ದೆ. "
ಬಿಡಿ, ಎಲ್ಲಿ ಹೋಗ್ತಾರೆ..." ಎಂ
ಲಘುವಾಗಿ ಹೇಳಿ ನಕ್ಕಾಗ, 'ಅವರವರ
ಅವರವರಿಗೆ' ಎಂಬ ಮಾತಿನಂತೆ
ವಿನುವನ್ನು ಹುಡುಕಿಕೊಂಡು ಎದ್ದಿದ್ದೆ...
ಲ್ಯಾಂಪಿನ ದೀಪದ ಬೆಳಕನ್ನು ಚೆ
ಗೂಡಂಗಡಿ ಹತ್ತಿರದಲ್ಲೇ ಕಾಣಿಸಿ, ಅಲ್ಲಿಗೆ ಹ
ಅಲ್ಲಿದ್ದ ಪುಟ್ಟ ರೇಡಿಯೋ ಹಾಡುತ್ತಲಿತ್ತು.

"ಬನ್ನಿ ಸಾರ್... ಏನು ಬೇಕು? ಟೀ,
ಸಿಗರೇಟು?" ಅಂಗಡಿಯವನೇ ನನ್ನನ್ನು
ಮಾತನಾಡಿಸಿದ.

''ಚಾರ್ಮ್ಸ್ ಕೊಡಿ, ಹಾಗೆಯೇ ಕಾಫಿ'' ೆ.

''ಕೊಟ್ಟೆ ಸರ್.... ಏನು? ಬೆಟ್ಟ ಸುತ್ತಲು ಎದ್ದೀರಾ? ಒಬ್ಬರೇ ಬಂದ ಹಾಗಿದೆ...'' ು ನಕ್ಕ ಅಂಗಡಿಯವನು. 'ವಾಚಾಳಿ' ುತು. ಸಾಮಾನ್ಯವಾಗಿ ಗೂಡಂಗಡಿಯವರೇ ೆ. ಅವರ ಬಳಿ ಬರುವವರ ಸುದ್ದಿಗಳನ್ನು, ರಗಳನ್ನು ಸಂಗ್ರಹಿಸುತ್ತಾರೆ. ಊರವರ ಬಳಿ ಟೆ ಕೊಚ್ಚಲು ಅವರಿಗೆ ಸಾಧನವದು.

''ತುಂಬಾ ಚಳಿ ಅಲ್ಲವೇ ಸರ್... ತೊಗೊಳ್ಳಿ ಬಿಸಿ ಕಾಫಿ. ಏಲಕ್ಕೀನೂ ಹಾಕಿದ್ದೀನಿ. ನನ್ನ ವನ ತೋಟದ್ದೇ ಕಾಫಿಪುಡಿ. ಹೇಗಿದೆ ುದು ನೋಡಿ'' ಎಂದವನು ಪ್ಲಾಸ್ಟಿಕ್ ಕಪ್ಪನ್ನು ಕೈಗಿಟ್ಟು, ರೇಡಿಯೋದ ಸಂಗೀತಕ್ಕೆ ತನ್ನ ು ಸೇರಿಸಿ ಲಾಲಾಲಾ... ಎನ್ನತೊಡಗಿದ.

ತಟ್ಟನೆ ನನಗೊಂದು ವಿಷಯ ಗಮನಕ್ಕೆ ತು. ವಿನೋದ ಇಲ್ಲಿದ್ದರೆ, ಸಿಗರೇಟು, ಪತ್ರಿಕೆ ದು ಇಲ್ಲಿಗೆ ಬಂದಿರಲೂಬಹುದು. ಹಾಗಿರು ಗ ಇವನಿಗೆ ವಿಷಯ ತಿಳಿದಿರುವುದು ಸಾಧ್ಯ. ಂಚ ಸಲಿಗೆ ಬೆಳೆಸಿಕೊಂಡರೆ ಎಲ್ಲ ಕೇಳ ಹುದು ಎನಿಸಿ ಮಾತು ಆರಂಭಿಸಿದೆ.

''ತುಂಬಾ ವರ್ಷಗಳಿಂದ ಇಟ್ಟಿದ್ದೀರಾ ಂಗಡಿ?''

''ಹೌದು ಸರ್... ಹತ್ತು ವರ್ಷ ಆಯಿತು. ಹೋ ನಿಮ್ಮಂಥ ಟೂರಿಸ್ಟ್‌ಗಳು ಬರುವುದ ದ ನಮ್ಮ ಜೀವನ ಸಾಗ್ತಾ ಇದೆ. ಫಾರೆನರ್ಸ್ ಂದರಂತೂ ಕೈಬಿಚ್ಚಿ ಕೊಟ್ಟುಬಿಡ್ತಾರೆ... ಗಂತ ನಾನು ಅದೂ ಇದೂ ಏನೂ ಮಾರುವ ಲ್ಲ...'' ನಸನ್ನತ್ತ ಕಣ್ಣು ಮಿಟುಕಿಸಿದವನು, ಅದೆಲ್ಲಾ ನಮ್ಮಂಥವರಿಗೆ ಯಾಕೆ ಬೇಕು ಹೇಳಿ? ಲು, ಟೀ, ಕಾಫಿ ಇದೆಲ್ಲ ನನ್ನ ಹೆಂಡತಿ ೋಡಿಕೋತಾಳೆ. ನಾವಂತೂ ಇಲ್ಲೇ ಹುಟ್ಟಿ ೆದವರು, ಸಹ್ಯಾದ್ರಿ ಗುಡ್ಡವೇ ನಮ್ಮ ಮನೆ. ಡಲು ಮಾಹೀಪಟ್ಟಣಕ್ಕೆ ಸೈಕಲ್‌ನಲ್ಲಿ ಹೋಗಿ, ಹಾಲು ಮಾರಿ ಬರ್ತಾ ಇದ್ದೆ. ಆಮೇಲೆ ಯಾಕೆ ಈ ಸುತ್ತಾಟ ಎನಿಸಿ, ಹೀಗೆ ಅಂಗಡಿ ಹಾಕ್ಕೊಂಡೆ...''

ನಾನು ನಡುವೆಯೆ ಅವನ ಮಾತು ಕತ್ತರಿಸಿ, ''ಅಂದಹಾಗೆ ನಾನು ಇಲ್ಲಿ ಇಳಿದುಕೊಳ್ಳೋಕೆ ಜಾಗ ಇದ್ದರೆ ಹೇಳ್ತೀರಾ... ಹತ್ತಿರ ಇದ್ದರೆ ವಾಸಿ... ಈಗ ರಾತ್ರಿಯೂ ಆಗಿದೆ'' ಎಂದೆ.

''ಓಹೋ... ಎರಡು ಸ್ಟಾರ್ ಗೆಸ್ಟ್ ಹೌಸ್‌ಗಳು ಇವೆ, ಆದರೆ ದೂರ ಸಾರ್... ತುಂಬಾ ನಡೆಯಬೇಕು. ಬೇಡ ಬಿಡಿ. ಇಲ್ಲಿಂದ ಬಲಕ್ಕೆ ತಿರುಗಿ, ಕೊಂಚ ಕೆಳಗಿಳಿದರೆ, ಅಲ್ಲಿ ಎರಡು ಮನೆ ಇವೆ. ಒಂದು ಅಜ್ಜಿಮನೆ-ಶಕುಂತಲ ಅವಳ ಹೆಸರು-ಇನ್ನೊಂದು ಅಬ್ಬೂರಾಯನದು. ಎರಡು ಕಡೆಯೂ ಟೂರಿಸ್ಟ್‌ಗಳಿಗೆ ಕೋಣೆ ಬಾಡಿಗೆ ಕೊಡ್ತಾರೆ. ನಿಮಗೆ ಎಲ್ಲಾದರೂ ಒಂದು ಕಡೆ ಸಿಕ್ಕುತ್ತೆ ಬಿಡಿ, ಯೋಚನೆ ಮಾಡ ಬೇಡಿ...''

ವಾಸದ ಸಮಸ್ಯೆ ಬಗೆಹರಿದಿತ್ತು. ವಿನು ಬಗ್ಗೆ ಈಗಲೇ ವಿಚಾರಿಸಲೋ, ನಾಳೆ ಬರಲೋ ಎಂಬ ಜಿಜ್ಞಾಸೆಯಲ್ಲಿ ಕೈಯೊಳಗಿನ ಸಿಗರೇಟು ಮುಗಿದು, ಬೆರಳಿಗೆ ಬಿಸಿ ತಾಗಿತು.

''ಇನ್ನೊಂದು ಬೇಕೆ ಸರ್? ಅಥವಾ ಇನ್ನೊಂದಿಷ್ಟು ಕಾಫಿ?'' ಅವನು ಮತ್ತೆ ನನ್ನ ಗಮನ ಸೆಳೆದ.

''ಕಾಫಿ ಬೇಡ, ಇದು ಫುಲ್ ಪ್ಯಾಕೆಟ್ ಕೊಟ್ಟುಬಿಡಿ. ಅಂದಹಾಗೆ, ಈಗ ಕೆಲವು ದಿನಗಳಲ್ಲಿ, ಕೊಂಚ ನನ್ನ ಹಾಗೆಯೇ ಇರುವವರೊಬ್ಬರು ಇಲ್ಲಿಗೆ ಬಂದಿದ್ದರೆ? ಅಂದರೆ ಹೀಗೇ ಟೂರಿಸ್ಟ್ ಆಗಿ... ಬೆಟ್ಟ ಸುತ್ತಾಡಲು'', ಅರ್ಧಕ್ಕೇ ನಿಲ್ಲಿಸಿ ಅವನ ಪ್ರತಿಕ್ರಿಯೆ ನಿರೀಕ್ಷಿಸಿದೆ.

''ನಿಮ್ಮ ಹಾಗಿದ್ದವರೆ'', ಅವನು ನೆನಪಿಗೆ ಚಾಲನೆ ಕೊಟ್ಟಂತೆ, ''ಹಾಂ... ಹೌದೌದು ನಿಮ್ಮಂತೇನೆ ಎತ್ತರಕ್ಕೆ ದಪ್ಪಕ್ಕಿದ್ದವರು... ಅವರಿಗೆ ಸಣ್ಣ ಮೀಸೆನೂ ಇತ್ತಲ್ವೆ? ಬಂದಿದ್ರು. ಐದಾರು

ದಿನ ಇದ್ದರು ಅನಿಸುತ್ತೆ... ಸ್ಟಾರ್ ಗೆಸ್ಟ್ ಹೌಸ್‌ನಲ್ಲಿ ಕೋಣೆ ಸಿಗದೆ, ಅಬ್ಬೂರಾಯನ ಮನೆಯಲ್ಲಿದ್ರು ಅಂತ ಗೊತ್ತಾಯ್ತು. ದಿನಾ ನಮ್ಮಲ್ಲಿಗೆ ಬಂದು ಸಿಗರೇಟು-ಪೇಪರ್ ತೊಗೊಳ್ತಾ ಇದ್ದರು... ನಮ್ಮ ಟೀ ಅವರಿಗೆ ತುಂಬಾ ಹಿಡಿಸಿತ್ತು. ಎರಡೆರಡು ಕಪ್ ಕುಡೀತಾ ಇದ್ದರು. ಅಂದಹಾಗೆ ನಿಮಗೇನಾಗಬೇಕು ಅವರು?''

ಉತ್ಸಾಹದ ಸ್ವರದಲ್ಲಿ ಅವನು ನುಡಿದ, ನನ್ನ ಶೋಧಕ್ಕೆ ಮೊದಲ ಕೊಂಡಿ ದೊರೆತಂತಾಯಿತು. ''ಹಾಂ... ಹೌದು ನನ್ನ ತಮ್ಮ ಅವನು... ಅವನನ್ನು ಭೇಟಿಯಾಗಬೇಕಿತ್ತು ಎಂದು ಬಂದೆ... ಇಲ್ಲೇ ಇದ್ದಾನೆಯೆ ಅವನು?'', ನನ್ನ ಮನಸ್ಸಿನೊಳಗಿನ ಚಿಂತೆಯನ್ನು ಈಗಲೇ ಯಾಕೆ ಬಹಿರಂಗಗೊಳಿಸಬೇಕು ಎನಿಸಿದ್ದರಿಂದ ಇಷ್ಟೇ ಹೇಳಿದೆ.

ಅವನು ಇದ್ದಕ್ಕಿದ್ದಂತೆ ಸಪ್ಪಗಾದ. ''ಅಯ್ಯೋ ಇಲ್ಲವಲ್ಲ ಈಗ... ಹೊರಟೋದ್ರು''. ನನ್ನ ಭರವಸೆಯ ದೀಪ ತಟ್ಟನೆ ನಂದಿದಂತಾಯಿತು. ''ಹೋಗಿಬಿಟ್ಟನೆ... ಎಲ್ಲಿಗೆ?'' ನಿರಾಸೆ ನನ್ನ ಸ್ವರದಲ್ಲಿ ಹಣಕಿತ್ತು.

''ಅದು... ಅದೊಂದು ಸ್ವಲ್ಪ ಬೇಜಾರಿನ, ವಿಚಿತ್ರ ಸಂಗತಿ ಸಾರ್... ಅದಕ್ಕೇ ಹೇಗೆ ಹೇಳಬೇಕು ಗೊತ್ತಾಗಲ್ಲ ನೋಡಿ... ಅಗೋ ಅಲ್ಲಿ ಆಲದ ಮರದ ಪಕ್ಕ ಲೈಟ್‌ಕಂಬ ಕಾಣಿಸ್ತಾ ಇದೆಯಲ್ಲವೆ?'' ನಾನು ಹೊರಳಿ ನೋಡಿದೆ. ಕೊಂಚ ಎತ್ತರದಲ್ಲಿದ್ದ ಆ ಜಾಗೆಯಲ್ಲಿ ಇಳಿ ಹೆಂಚಿನದೊಂದು ಮನೆಯೂ ಇತ್ತು.

''ದೀಪ ನೋಡಿದಿರಲ್ಲ, ಅಲ್ಲಿ, ಆ ಮನೆಯಲ್ಲಿ, ಹರಿಣಿ ಅಂತ ಒಬ್ಬಳು ಹುಡುಗಿ ಇದ್ದಳು... ಅವಳೂ ನನ್ನ ಹೆಂಡತಿಯೂ ಒಂದೇ ಊರು, ಇಲ್ಲೇ ಸಾತಪಾಡಿ ಅಂತ ಇದೆ. ಅಲ್ಲಿನವರು... ಎಂಥಾ ಚೆಲುವೆ ಅಂತೀರಿ ಸಾರ್ ಹರಿಣಿ...''

ನನ್ನ ಮನಸ್ಸು ಯಾವುಯಾವುದೋ ದಿಸೆಗಳಲ್ಲಿ ವೇಗವಾಗಿ ಚಲಿಸತೊಡಗಿತು. ವಿನೋದನ

ಸುದ್ದಿ ಕೇಳಿದರೆ ಬೇರೆಯದನ್ನೇ ಹೇಳತೊ
ವನಲ್ಲ ಇವನು?... ಆ ಹುಡುಗಿಯ ಜೊತೆ
ಅಫೇರ್ ಏನಾದರೂ ಬೆಳೆಸಿಕೊಂಡನೋ ಕ
ಅವನದೂ ಚಿಕ್ಕ ವಯಸ್ಸು... ಮ
ಯಾಗಿಲ್ಲ... ಹೀಗೇ ಊರೂರು ತಿರು
ಇರುತ್ತಾನೆ... ಎಲ್ಲೋ ಏನೋ ಸ್ನೇಹ...

ನನ್ನ ಯೋಚನಾ ಧಾಟಿಯನ್ನವನ
ಕತ್ತರಿಸಿತು. ''ಹರಿಣಿಯ ಗಂಡ ಬಾಬು
ಸರ್. ಮದುವೆ ಆಗಿ ಎಂಟು ವರ್ಷ ಕಳೆ
ಮಕ್ಕಳಾಗಿರಲಿಲ್ಲ. ದುಷ್ಟ ಅವನು, ಮಹಾ
ಬೇರೆ. ಆಚೆ ರಾಜಾನಂದರ ಟೀ ಎಸ್ಟೇ
ಸೂಪರ್‌ವೈಜರ್ ಆಗಿದ್ದ. ಸಂಬಳ
ಕುಡಿದೇ ಮುಗಿಸಿ, ಹರಿಣಿಯನ್ನು ಹೊ
ಬಡಿದೂ ಮಾಡ್ತಿದ್ದ...''

ಒಂದಂತೂ ಸ್ಪಷ್ಟವಾಯಿತು. 'ನಾನು ಅ
ದಂತೆ ಇಲ್ಲಿ ಏನೂ ಸಂಭವಿಸಿಲ್ಲ, ಆದರೆ ವಿ

''ಪಾಪದ ಹುಡುಗಿ ಸಾರ್
ರಾಕ್ಷಸನಂಥವನ ಕೈಯಲ್ಲಿ ಸಿಕ್ಕಿಕೊಂಡು ಒ
ಇದ್ದಳು. ಎಷ್ಟೊ ಬಾರಿ ಅವಳು, ಹೀಗೆ ಬೆ
ಮಾಡಿಕೊಂಡುಬಂದು, ಅಲ್ನೋಡಿ,
ಎದುರು ಬದಿಯಲ್ಲಿ ಬಸ್ ನಿಲ್ದಾ
ಇದೆಯಲ್ಲ ಅಲ್ಲಿ, ಕೂತು ಕಣ್ಣೀರು ಹ
ನನ್ನ ಹೆಂಡತಿ ಹೋಗಿ ಅವಳಿಗೆ ಸಮ
ಹೇಳ್ತಾ ಇದ್ದಳು...' ನಾನಿನ್ನು ಇಲ್ಲಿ ಇರಲ್ಲ
ಹಿಂಸೆ ತಡೆಯೋದು ಸಾಧ್ಯವೇ ಇಲ್ಲ'
ಬೇಜಾರುಪಟ್ಟುಕೊಂಡು, ಅಪ್ಪನ
ಹೋಗಿಬಿಡ್ತೀನಿ ಎನ್ನುತ್ತ ಇತ್ತು ಸಾ
ಹುಡುಗಿ...''

ಅವನು ನೊಂದ ಸ್ವರದಲ್ಲಿ ಕಥನವ
ನುಡಿದ. ''ಮುಂದೆ?'' ನಾನು ಕುತೂಹ
ಪ್ರಶ್ನಿಸಿದೆ.

''ಅದೇ... ಆವೊತ್ತು ರಾತ್ರಿ...
ವಾರವೋ... ಎಂಟು ದಿನವೋ ಹಿಂದಿ
ರಾತ್ರಿ ವಿನೋದ್-ನಿಮ್ಮ ತಮ್ಮ ಅ

ಇವರು-ಇಲ್ಲಿ ನಿಂತು, ಸಿಗರೇಟು ಸೇದ್ತಾ ಇದ್ರು... ಆಗ ಹರಿಣ ಮನೆಯಿಂದ ಓಡಿ ಬಂದಳು... ಅಲ್ಲಿ ಕಟ್ಟೆಯ ಮೇಲೆ ಕೂತುಕೊಂಡು ಅಳೋದನ್ನ ನೋಡಿ, ''ಅದೇನು?'' ಎಂದು ಇವರು ನನ್ನನ್ನು ಕೇಳಿದರು. ನಾನವರಿಗೆ ಅವಳ ಸುದ್ದಿ ಹೇಳಿದೆ... ಅಷ್ಟೊತ್ತಿಗೆ ನನ್ನ ಹೆಂಡತಿ ಹೋಗಿ ಹರಿಣಿಯ ಜೊತೆ ಮಾತನಾಡಿದಳು... 'ಈಗಲೇ ಅಪ್ಪನ ಮನೆಗೆ ಹೋಗಿಬಿಡ್ತೀನಿ' ಅಂದಳಂತೆ. ವಿನೋದ್ ರಸ್ತೆ ದಾಟಿ, ಅವಳ ಹತ್ತಿರ ಹೋಗಿ, ನಿಂತು ಏನೋ ಮಾತಾಡ್ತಾ ಇದ್ದರು... ಕೊಂಚ ಹೊತ್ತಿನಲ್ಲಿ ಮಾಹಿಪಟ್ಟಣಕ್ಕೆ ಹೋಗೋ ಬಸ್ ಬಂತು... ನಾನೂ ನನ್ನ ಕೆಲಸದಲ್ಲಿ ಬಿಜಿ ಆದೆ. ಮತ್ತೆ ನೋಡುವಾಗ ಅವರಿಬ್ಬರೂ ಬಸ್ ಏರಿ ಹೊರಟು ಹೋಗಿದ್ದರು. ಅಷ್ಟೆ ಸರ್...''

ನಿರಾಶಾಧಿಕ್ಯ ಮತ್ತೆ ನನ್ನನ್ನು ತುಂಬಿಕೊಂಡಿತು. ಗೂಡಂಗಡಿಯವನು ಹೇಳಿದ ರೀತಿ ಏನೂ ಇಲ್ಲಿಲ್ಲ ಈಗ... ಆದರೆ ಅದು ಹೇಗೆ ಸಾಧ್ಯ? ಯಾರನ್ನು ಕೇಳಿದರೆ ಪೂರ್ಣ ವಿಷಯ ತಿಳಿದೀತು? ಎನಿಸುತ್ತಿದ್ದಂತೆ, ಮೊದಲು ಎಲ್ಲಾದರು ಇಳಿಯಲು ಜಾಗ ದೊರಕಿಸಿಕೊಂಡು, ಬೇರೆ ಯಾರನ್ನಾದರೂ ಹಿಡಿದು ವಿಚಾರಿಸುವುದೇ ಈಗ ಮಾಡಬಹುದಾದದ್ದು ಎಂದು ಖಚಿತವಾಗಿ, ಅಲ್ಲಿಂದ ಹೊರಟೆ....

''ಹುಷಾರಾಗಿ ಹೋಗಿ ಸ್ವಾಮಿ... ಬೆಟ್ಟದ ದಾರಿ ಕತ್ತಲು ಬೇರೆ...'' ಬಹಳ ದೂರವೇನಿರಲಿಲ್ಲ ಅವನು ಹೇಳಿದ ಮನೆಗಳು. ಮೊದಲನೆಯದಕ್ಕೇ ಹೋಗಿ ಬಾಗಿಲು ತಟ್ಟಿದೆ. ಶಕುಂತಲ ಎಂದಲ್ಲವೆ ಅವಳ ಹೆಸರು...

ಬಾಗಿಲು ತೆರೆದವಳು ಐವತ್ತೈದು-ಅರವತ್ತರ ಆಸುಪಾಸಿನವಳು. ಅವಳೇ ಶಕುಂತಲಾ ಎಂದು ನಾನು ಊಹಿಸುವುದರೊಳಗಾಗಿ, ನಾನು ಟೂರಿಸ್ಟ್ ಎಂಬುದನ್ನು ಅವಳು ಕಂಡುಹಿಡಿದಿದ್ದಳು.


''ಎಷ್ಟು ಜನ ಇದ್ದೀರಿ ಸ್ವಾಮಿ? ಕೋಣೆ ಒಂದೇ ಒಂದಿದೆ ಅಷ್ಟೆ...'' ಎಂದಳು.

''ಸಾಕು... ನಾನೊಬ್ಬನೇ ಬಂದಿರುವೆ'' ಎಂದೆ.

''ಶಕುಂತಲಮ್ಮ ಅಂದರೆ...'', ಮಧ್ಯದಲ್ಲಿಯೇ ಮಾತನಾಡಿ, ''ಹೌದು, ನಾನೇ, ಮೂವತ್ತು ವರ್ಷದಿಂದ ಹೀಗೆ ಕೋಣೆ ಬಾಡಿಗೆ ಕೊಡ್ತಾ ಇದ್ದೀನಿ...'' ಎಂದು ತನ್ನ ಬಗ್ಗೆ ಹೇಳಿಕೊಂಡು, ''ಈಗ ಊಟ ಕೊಡೋದು ಸಾಧ್ಯ ಇಲ್ಲ ಸಾರ್... ಒಂದಿಷ್ಟು ಹಾಲು, ಬಾಳೆ ಹಣ್ಣಾದರೆ ವ್ಯವಸ್ಥೆ ಮಾಡ್ತೀನಿ'' ಎಂದಳು. ನನಗೂ ಹಸಿವು ಇಂಗಿಹೋಗಿತ್ತು.

''ಸಾಕುಬಿಡಿ. ಮಲಗಲು ಅನುಕೂಲ ಮಾಡಿದರೆ ಸರಿ'' ಎಂದೆ.

''ಕೋಣೆ ಬಾಡಿಗೆ ನೂರೈವತ್ತು ರೂಪಾಯಿ. ಅರ್ಧ ಮುಂಗಡ ಕೊಡಿ ಸ್ವಾಮಿ...'' ಅವಳ ಮಾತಿಗೆ ನೂರರ ನೋಟನ್ನು ತೆಗೆದುಕೊಟ್ಟೆ.



ನಿದ್ರೆ, ದೂರ ದೂರಕ್ಕೆ ಓಡಿ ನಿಂತು, ಅದರ ಜಾಗವನ್ನು ಆಲೋಚನೆಗಳು ಆಕ್ರಮಿಸಿದುವು. ಗೂಡಂಗಡಿಯವನು ವಾಚಾಳಿ, ಅವನು ಹೇಳಿದ ಸಂಗತಿ ವಿಚಿತ್ರವಾದರೂ, ಈ ಪರಿಸ್ಥಿತಿಯಲ್ಲಿ ಆ ಎಳೆಯನ್ನು ಹಿಡಿದೇ ನಾನು ಮುಂದುವರಿಯುವುದರ ವಿನಾ ಬೇರೆ ಮಾರ್ಗವಿಲ್ಲ...

ಮತ್ತದೇ ಚಿಂತೆ. 'ವಿನು ಎಲ್ಲಿ? ಗೂಡಂಗಡಿಯವನು ತನ್ನ ಕಣ್ಣೆದಿರು ನಡೆದಿದ್ದನ್ನೇ ಹೇಳಿರಬಹುದು. ಸುಳ್ಳೇಕೆ ಹೇಳುತ್ತಾನವನು? ಅದರಿಂದ ಅವನಿಗೇನು ಲಾಭ? ಅವನ ಮಾತಿನಲ್ಲಿರುವುದು ಉತ್ಪ್ರೇಕ್ಷೆಯೆ ಅಥವಾ...' ಯೋಚನೆಗಳು, ಸಾಗಿದ ದಿಕ್ಕಿನಲ್ಲೇ ದಾರಿ ತಪ್ಪಿ, ಅಲ್ಲಲ್ಲೇ ಸುತ್ತಿ ಗೋಜಲಿಸಿ, ಗೂಡೊಂದನ್ನು ಕಟ್ಟಿದುವು.

ಸೂರ್ಯನ ಕೋಲುಗಳು ಮುಖಕ್ಕೆ ಚಿಮ್ಮಿದ ಬಿಸಿಲು ಎಚ್ಚರಿಸಿದಾಗ, ವಿಸ್ಮೃತಿಯ ಕವಚದಿಂದ ಹೊರಬಂದಂತೆ ದಿಗ್ಗನೆದ್ದು ಕೂತೆ. ಶಕುಂತಲಾ ಇಣುಕಿ ನೋಡಿದವಳು,

"ನಾನು ಎರಡು-ಮೂರು ಬಾರಿ ಬಂದು ನೋಡಿದೆ. ನೀವು ಗಾಢ ನಿದ್ರೆ ಹೋಗಿದ್ದಿರಿ... ಟೀ ಕುಡೀತೀರಾ? ತರಲೆ?" ಎಂದಳು. ತಲೆಯಲ್ಲಾಡಿಸಿ ಒಪ್ಪಿಗೆ ಸೂಚಿಸಿ ಮುಖ ತೊಳೆಯಲು ಹೋದೆ. ಏಲಕ್ಕಿಯ ಚಹ ರುಚಿಯಾಗಿತ್ತು, ಇವಳೂ ನೋಡಿರಬಹುದೆ ವಿನೋದನನ್ನು ಎಂದೆಣಿಸಿ, "ಈಗ ಹತ್ತು-ಹನ್ನೆರಡು ದಿನಗಳಲ್ಲಿ ನನ್ನ ಹಾಗೆಯೇ ಇದ್ದವರೊಬ್ಬರು ಇಲ್ಲಿಗೆ ಬಂದದ್ದು ಗೊತ್ತೆ?" ಎಂದೆ.

"ಬಂದಿದ್ದಾರು ಸ್ವಾಮಿ... ಬೇಕಾದಷ್ಟು ಜನ ಬರ್ತಾರೆ. ಯಾರು ಎಂದು ಹೇಗೆ ಹೇಳೋದು? ಆದರೆ ನಮ್ಮಲ್ಲಿ ಅಂಥವರು ಉಳಿದಿರಲಿಲ್ಲ ಬಿಡಿ" ಎಂದಳು.

ಕೊಂಚ ನಿರಾಸೆಯಾಯಿತು, ಇನ್ನುಳಿದಿರುವ ಜಾಗ ಒಂದೇ, ಅಬ್ಬೂರಾಯನ ಗೆಸ್ಟ್‌ಹೌಸ್. ಅವಳನ್ನು ಅದೆಲ್ಲಿದೆ ಎಂದು ವಿಚಾರಿಸಿದೆ.

"ಯಾಕೆ ಸ್ವಾಮಿ? ನಮ್ಮಲ್ಲಿ ನಿಮ ಚೆನ್ನಾಗಿಲ್ಲವೆ? ಏನೇ ಬೇಕಿದ್ದರೂ ಹೇಳಿ, ನಾನೆ ಮಾಡಿಕೊಡ್ತೀನಿ" ಎಂದು ಅವಸರದಿಂ ಹೇಳಿದಳಾಕೆ. ಗಿರಾಕಿಗಳನ್ನು ಬಿಟ್ಟುಕೊಡ ಇರುವ ಕಾಂಪಿಟಿಶನ್ ಇದು ಎಂದರಿವಾಯಿತು.

"ಇಲ್ಲ ಹಾಗಲ್ಲ, ನಿಮ್ಮಲ್ಲಿ ನನಗೇನೂ ತೊಂದರೆಯಿಲ್ಲ. ನಾನು ಕೊಂಚ ಸುತ್ತಾ ಬರುತ್ತೇನೆ" ಎಂದು ಎದ್ದೆ. ಮೊದ ಅಬ್ಬೂರಾಯನನ್ನು ಕಂಡುಹಿಡಿಯಬೇಕಿತ್ತು. ವಿನು ಅವನಲ್ಲಿ ಇಳಿದಿದ್ದರೆ ಖಂಡಿತವಾಗಿಯ ಅವನಿಗೆ ವಿಷಯ ತಿಳಿದಿರುತ್ತದೆ.

ಏರಿಳಿವಿನ ದಾರಿಯಲ್ಲಿ ನಡೆಯುವಾ ಸಹ್ಯಾದ್ರಿ ಘಟ್ಟ ಸುತ್ತಲೂ ಹರಡಿದ್ದ ಪ್ರಕೃತಿ ಚೆಲುವನ್ನು ಆಸ್ವಾದಿಸುವ ಮನಃಸ್ಥಿತಿ ನನ್ನಲ್ಲಿರಲಿ ಹಸಿರು ತುಂಬಿದ್ದ ರಮ್ಯಸೃಷ್ಟಿಯ ಒಡಲ ತುಂಬಿ ಕೂತು, ಕೊರಳೆತ್ತಿ ಕರೆವ ಹಕ್ಕಿ ಇಂಚರದತ್ತ ಮನಸ್ಸು ಓಡಲಿಲ್ಲ. ಬೆ ತಪ್ಪಲಿನಲ್ಲಿ ಗಂಟೆಯ ಶಬ್ದ ಹೊರ ಮೇಯುವ ದನಗಳು, ಚಿಮ್ಮಿ ಚಿಮ್ಮಿ ಓಡ ಬಿಳಿಬಿಳಿ ಆಡಿನ ಮರಿಗಳ ಕುಣಿತ, ಎಲೆ ಧಾರೆಯಾಗಿಳಿದ ಸಲಿಲ ತಾನ ಹೊಮ್ಮ ನೀರಿನ ಒರತೆಯ ಜಲನಾಟ್ಯ... ಯಾವುದ ಚಿತ್ತ ಚಲಿಸಲಿಲ್ಲ. ನಾನಲ್ಲಿ ಇರಲೇ ಇ ಮನಸ್ಸಿಡೀ ವಿನು ತುಂಬಿಹೋಗಿದ್ದ.

ಗೂಡಂಗಡಿಯವನು ಹೇಳಿದ್ದು ನಿಜ ಅಥವಾ ಬೇರೆ ಯಾರನ್ನೋ ವಿನು ಎ ಭಾವಿಸಿದನೋ? ಉತ್ತರ ಸಿಗದೆ ಚಡಪ ವಾಗ 'ಬಸ್ ಏರಿ ಹೋದವನು ಅಲ್ಲದಿರಲಿ, ಬೇರೆ ಯಾರೋ ಆಗಿರಲಿ' ಎ ಮನಸ್ಸು ಹಂಬಲಿಸಿತು.

ಎರಡು ಫರ್ಲಾಂಗ್ ದೂರದ ಆ ಅಬ್ಬೂರಾಯನದೆಂದು ಲೆಕ್ಕ ಹಾಕುತ್ತ ಸ ಮನೆಯ ಹೊರಗೇ, ನೀರಿನ ಪೈಪು ಹಿಡಿದು ಕುಂಡಗಳಿಗೆ ಸುರಿಯುತ್ತಿದ್ದ ಅರವತ್ತರ

ಂಚ ಬಾಗಿದವನೊಬ್ಬ ಕಾಣಸಿ, ಅವನೇ ಬ್ಬೂರಾಯ ಆಗಿರಲಿ ಎಂದುಕೊಳ್ಳುತ್ತ ಸಮೀಪಿಸಿದೆ.

ಇತ್ತ ಹೊರಳಿದ ಅವನು, "ಟೂರಿಸ್ಟೆ?... ಮು ಖಾಲಿ ಇಲ್ಲ ಸರ್... ನಾಳೆಗೆ ಬೇಕಾದರೆ ಡೋಣ" ಎಂದ.

"ಇಲ್ಲ ರೂಮೇನೂ ಬೇಡ..." ನನ್ನ ಮಾತಿಗೆ ವನ ಮುಖ ಒಂದಷ್ಟು ಸಪ್ಪಗಾಯಿತು. ಮೊದಲು ಮಿಲ್ಲ ಎಂದು ಹೇಳಿ, ಹೆಚ್ಚಿನ ಹಣದ ಆಮಿಷ ರಿಸಿದವರಿಗೆ 'ಏನಾದರೂ' ವ್ಯವಸ್ಥೆ ಮಾಡಿ ಡುವ ಇವರ ಟ್ರಿಕ್ ಬಗ್ಗೆ ನನಗೆ ಅರಿವಿತ್ತು.

"ಹಾಗಾದರೆ ನೀವು ಟೂರಿಸ್ಟ್ ಅಲ್ಲ ನು?" ಎಂದ ಸಪ್ಪಗೆ.

ಥಟ್ಟನೆ ನೆನಪಾಯಿತು. ನನ್ನ ಪರ್ಸಿನಲ್ಲಿ ನೋದನ ಭಾವಚಿತ್ರವಿತ್ತು. ಅದನ್ನು ತೆಗೆದು ವನಿಗೆ ತೋರಿಸಿ. "ಇವರು ನಿಮ್ಮಲ್ಲಿ ಇಳಿದು ಂಡಿದ್ದರೆ?" ಎಂದೆ.

ಅವನ ಕಣ್ಣುಗಳು ಅಗಲವಾದುವು. 'ಹಾಂ... ಹಾಂ... ಇದ್ದರು ಸಾರ್, ಇವರು ಮ್ಮಲ್ಲೇ ಇದ್ರು. ದಿನಾ ಅಲ್ಲಿ ಇಲ್ಲಿ ಸುತ್ತೋಕೆ ಹೋಗ್ತಾ ಇದ್ರು... ಆದರೆ ಒಂದು ವಾರ ಯಿತು ನೋಡಿ, ಆಸಾಮಿ ಬಂದೇ ಇಲ್ಲ. ವರ ಲಗ್ಗೇಜೂ ಇಲ್ಲೇ ಕೂತಿದೆ, ಬಾಡಿಗೆ ಡ್ವಾನ್ಸ್ ಮಾಡಿದ್ದರಷ್ಟೆ... ಅವರಿಗಾಗಿ ನಾನು ಯ್ತಾ ಇದ್ದೆ. ನಿಮಗೆ ಗೊತ್ತೇನು ಅವರು?", ವನು ಗಡಿಬಿಡಿಯಿಂದ ಹೇಳಿದ.

ಅಂದರೆ ಏನು ಇಲ್ಲಿಗೆ ಬಂದದ್ದು, ಇದ್ದದ್ದು ರಡೂ ನಿಜವೆ.

"ಅವನ ಅಣ್ಣ ನಾನು, ತುರ್ತಾಗಿ ರ್ಯವಿದ್ದದ್ದರಿಂದ ಹುಡುಕಿಕೊಂಡುಬಂದೆ, ಹೋಗುವ ಮುನ್ನ ನಿಮಗೇನಾದರೂ ತಿಳಿಸಿ ಹೋದನೆ? ಅಂದರೆ ಎಲ್ಲಿ ಹೋಗ್ತೀನಿ ಎಂದು ತಿಳಿಸಿದನೆ..."

"ಇಲ್ಲವಲ್ಲ... ನಮಗ್ಯಾಕೆ ಹೇಳ್ತಾರೆ? ಎಷ್ಟೋ ಟೂರಿಸ್ಟ್‌ಗಳು ಬಂದು, ಎಲ್ಲೆಲ್ಲೋ



ತಿರುಗಾಡ್ತಾರೆ. ಅದೆಲ್ಲ ನಾವು ಗಮನ ಇಟ್ಟು ನೋಡಿಕೊಂಡಿರಲು ಸಾಧ್ಯವಾಗುತ್ತೇನು?"

ಅವನ ಮಾತು ಸತ್ಯಾಂಶಪೂರಿತವಾಗಿತ್ತು. ನಾನವನ ಹತ್ತಿರ ಹೋಗಿ, ಭುಜದ ಮೇಲೆ ಕೈಯಿಟ್ಟು, ಅನುನಯದಿಂದ, "ನೋಡಿ... ನನ್ನ ತಮ್ಮನಿಂದ ಯಾವುದೇ ಸಮಾಚಾರವಿಲ್ಲದೆ ನನ್ನಮ್ಮ ಮತ್ತು ನಾವೆಲ್ಲ ತುಂಬಾ ಕಳವಳಪಡುತ್ತಾ ಇದ್ದೀವಿ. ನಿಮಗೆ ಗೊತ್ತಿರುವ ವಿಷಯವನ್ನು ಹೇಳಿದರೆ ತುಂಬಾ ಉಪಕಾರವಾಗುತ್ತೆ" ಎಂದೆ.

ಅವನು ಪ್ರಶ್ನಾರ್ಥಕ ನೋಟ ಬೀರುತ್ತ ಗೋಣು ಹಾಕಿದ.

"ಈ ಪ್ರದೇಶದಲ್ಲಿ ಹರಿಣಿ ಎಂಬ ಹೆಣ್ಣು ಮಗಳಿದ್ದಳೆ...ತುಂಬಾ ಚೆಲುವಿನ ಹುಡುಗಿ, ಅವಳ ಗಂಡ ಬಾಬು ತುಂಬಾ ಕುಡುಕನಾಗಿದ್ದು ಹಿಂಸೆ ಕೊಡುತ್ತಿದ್ದನಂತೆ, ಅದೆಲ್ಲ ನಿಜವೆ..."

"ಹೌದು", ಅಬ್ಬೂರಾಯ ತಲೆಯಲ್ಲಾಡಿಸಿದ. "ಹರಿಣಿ ತುಂಬಾ ಒಳ್ಳೆಯ ಹುಡುಗಿ, ಅನ್ಯಾಯವಾಗಿ ಹೋಯಿತು... ಆದರೆ ನಿಮಗೆ ಇದು ತಿಳಿದದ್ದು ಹೇಗೆ?"

"ಅಲ್ಲಿ ಬಸ್‌ಸ್ಟಾಪ್ ಬಳಿಯ ಗೂಡಂಗಡಿ ಇದೆಯಲ್ಲ, ಅವನು ಹೇಳಿದ, ಹರಿಣಿಯ ಜೊತೆ ವಿನೋದ್ ಬಸ್ ಏರಿದ್ದನ್ನು..."

ನನ್ನ ಮಾತನ್ನು ಮಧ್ಯಕ್ಕೇ ಕತ್ತರಿಸಿದವನು, "ಯಾವ ಗೂಡಂಗಡಿ ಸರ್? ಬಸ್‌ಸ್ಟಾಪ್ ಹತ್ತಿರ ಯಾವ ಗೂಡಂಗಡಿಯೂ ಇಲ್ಲ."

ಚಕಿತನಾದ ನಾನು, "ಯಾಕಿಲ್ಲ... ನಿನ್ನೆರಾತ್ರಿಯೇ ನಾನಲ್ಲಿಗೆ ಹೋಗಿ, ನಿಂತು, ಅವನೊಂದಿಗೆ ಮಾತನಾಡಿದ್ದೇನೆ. ಇಲ್ಲಿಂದಲೂ ಕಾಣಿಸಬಹುದು ಅದು, ಅಗೋ ನೋಡಿ..."

ಇಬ್ಬರೂ ಹಿಂದೆ ಹೊರಳಿ, ಮೇಲೆ ನೋಡಿದೆವು. ನನ್ನ ಜಂಘಾಬಲ ಕುಸಿದ ಅನುಭವ... ಅಲ್ಲಿ ಎಲ್ಲೂ ಯಾವ ಅಂಗಡಿಯೂ ಇದ್ದ ಕುರುಹಿರಲಿಲ್ಲ!

"ಇದು ಹೇಗೆ... ಸಾಧ್ಯ...? ನಾನು... ನಿನ್ನೆ...", ಅಸ್ಪಷ್ಟವಾಗಿ ಏನೋ ನುಡಿದೆ.

"ಅಲ್ಲೊಂದು ಗೂಡಂಗಡಿ ಇದ್ದದ್ದು ನಿಜ ಸಾರ್..." ಅಬ್ಬೂರಾಯನ ಧ್ವನಿ ಆಳದಿಂದ ಬಂದಂತೆನಿಸಿತು. ಆದರೆ ಈಗ ಏಳು ವರ್ಷಗಳ ಹಿಂದೆ, ಭಯಂಕರ ಮಳೆಯಿಂದಾಗಿ ಗುಡ್ಡದ ಮಣ್ಣು ಜಾರಿ ಕುಸಿದು, ಅವರು... ಅಂಗ ಯಾತ, ಅವನ ಹೆಂಡತಿ... ಮಗು ಮೂ ಜನರೂ ಸಮಾಧಿಯಾಗಿ ಹೋದರು... ಹರಿಣಿ ಅವಳ ಕಥೆಯೂ ತುಂಬಾ ಹಳೆಯದು, ಕ ಹತ್ತು ವರ್ಷಗಳ ಹಿಂದೆ, ಗಂಡನ ಹಿ ತಾಳಲಾರದೆ, ಅಪ್ಪನಲ್ಲಿಗೆ ಹೋಗಲು ಬ ಏರಿದ್ದಳು ಹುಡುಗಿ... ಆ ಬಸ್ಸು ಬ್ರಿ ಮೇಲಿಂದ ನದಿಗುರುಳಿ, ಅಪಘಾತವಾ ಹರಿಣಿ ಸತ್ತುಹೋದಳು."

"ಮತ್ತೆ... ಏನು... ಅವಳ ಜತೆ... ಬಸ್ಸಿ ನಾನು ತೊದಲಿದೆ. ದೇಹವಿಡೀ ಥರ ಕಂಪಿಸತೊಡಗಿತ್ತು.

ಸಹ್ಯಾದ್ರಿಯ ಪರ್ವತಶ್ರೇಣಿ ಗಿಮಿ ಸುತ್ತತೊಡಗಿತು!

ತಟ್ಟನೆ ನನಗೊಂದು ವಿಷಯ ಗಮನಕ್ಕೆ ಬಂತು. ವಿನೋದ ಇಲ್ಲದ್ದರೆ ಸೀಗರೆ ಪತ್ರಿಕೆ ಎಂದು ಇಲ್ಲಿಗೆ ಬಂದಿರಲೂಬಹುದು. ಹಾಗಿರುವಾಗ ಇವನಿಗೆ ವಿಷಯ ತಿಳಿದಿರುವುದು ಸಾಧ್ಯ. ಕೊಂಚ ನಾಳೆ ಬೆಳಗಿನಿಂದರೆ ಎಲ್ಲ ಕೇಳಬಹುದು ಎನಿಸಿ ಮಾತು ಆರಂಭಿಸಿ

ಜಯಶ್ರೀ ದೇಶಪಾಂಡೆ.



ಸೋದರಿಯ ಜೊತೆಗೆ ಲೇಖಕಿ

ಬೆಳ್ಳಕ್ಕಿಗಳು

ರಾಜೀವ ಅಜ್ಜೀಬಳ

ಮಾಯ್ರ್ಾ ಹೆಗಲಿಗೆ ಏಣಿ ಹೊತ್ತು ಮುಂದೆ ಹೊರಟ, ನಾನು, ಶ್ರೀನಿಧಿ ಅವನನ್ನು ಹಿಂಬಾಲಿಸಿದೆವು.

ಗದ್ದೆಗೆ ಇಳಿಯುವ ಅಡಿಕೆ ಮುಂಡಿಯ ಸಂಕವನ್ನು ಎಚ್ಚರಿಕೆಯಿಂದ ದಾಟಿ ಮುಂದೆ ಹೋಗುತ್ತಿದ್ದಂತೇ, ಮ್ಹಾಯ್ರ್ಾನನ್ನು ಕೇಳಿದೆ 'ಏಣಿ ಬೇಕಾಗ್ತದೇನು?', 'ಹೌದ್ರಿ' ಎಂದ.

ಅಂದು ರತ್ನಯ್ಯ ಶೆಟ್ಟರ ಮನೆಯಲ್ಲಿ ಅವರ ಹಿರಿಯರ ದಿನವಾದ್ದರಿಂದ, ಸ್ವತಃ ಅವರಿಗೆ ಬರಲು ಸಾಧ್ಯವಾಗದೇ, ತಮ್ಮ ನಂಬಿಗಸ್ಥ ಆಳಿಗೆ ಎಲ್ಲ ಜವಾಬ್ದಾರಿ ವಹಿಸಿದ್ದರು. 'ಎಲ್ಲಾ ಸರಿಯಾಗಿ ತೋರಿಸ್ಕಂಡ್ ಬಾ' ಎಂದು ತಾಕೀತು ಬೇರೆ ಮಾಡಿದ್ದರು.

ನಾವು ಮ್ಹೂವರಲ್ಲದೇ ಇನ್ನೊಬ್ಬ, ನಮ್ಮ ಕಾಲಿಗೆ ತಡವರಿಸುತ್ತ ಬರ್ತಿದ್ದ. 'ಏನ್ಸೋ ಮರಿ ನಿನ್ನೆಸರು? ಎಂದೆ. 'ಆದಿತ್ಯ' ಎಂದ. ಒಳ್ಳೇ ಚೂಟಿ ಹುಡುಗ. ರತ್ನಯ್ಯ ಶೆಟ್ಟರ ಮಗ. 'ನೀ ಯಾಕೋ ಬರ್ತೀ? ಮನೇಲಿರೋ' ಅಂದ್ರೆ, 'ನಾ ಬರೋವ್ನೇ' ಎಂದು ಹಟಹಿಡಿದ.

ಮುಂದೆ ಗದ್ದೆ ಹಾಳಿ. ಕಡ್ಡಾಯವಾಗಿ 'ಒನ್‌ವೇ'. ಒಂದು ಬದಿಗೆ ಹಳ್ಳ, ಇನ್ನೊಂದು ಬದಿ ಜವಳುಗದ್ದೆ. ಗದ್ದೆಯನ್ನು ಹಸಿರುಹುಲ್ಲು ಆವರಿಸಿದೆ. ಸುಮಾರು ಅರ್ಧ ಎಕರೆಯಷ್ಟಿದ್ದ ಆ



ಹುಲ್ಲಿನ ಗದ್ದೆಯನ್ನು ದಾಟಿದರೆ, ನಾವು ತಲುಪಬೇಕಾದ ಸ್ಥಳ ಸಿಗುತ್ತಿತ್ತು. 'ಗದ್ದೆಯಲ್ಲಿ ಇಳಿ ಹೋಗೋಣ್ವಾ? ಹತ್ತಿರವಾಗುತ್ತೆ' ಎಂದ ಶ್ರೀನಿಧಿ. ಅಷ್ಟರಲ್ಲಿ, 'ಬೇಡಾರೀ, ಅಲ್ಲಿ ಹೋ ಹುಗೀತದ್ರೀ' ಎಂದು ರಾಗ ತೆಗೆದ ಆದಿತ್ಯ.

'ಹೌದ್ರೀ' ಎಂದ ಮಾರ್ಯಾ. 'ಬಹಳ ಹುಗೀತದ್ಯಾ'? ಎಂದು ಬಾಯಿರಿದ ಶಬ್ದ ಹೊರಬೀ ಮೊದಲೇ, ಆದಿತ್ಯ ಟಣ್ಣನೆ ಗದ್ದೆಗೆ ಹಾರಿ, ಮೇಲೆ, ಕೆಳಗೆ ತೂಗಿದ. ಅವನ ಸುತ್ತಮುತ್ತಲಿನ ನಾಲ್ಕಾ ಅಡಿ ಜಾಗವೂ ತೂಗಾಡಿತು. 'ಸಾಕು ಬಾರೋ ಮೇಲೆ' ಎಂದು ಶ್ರೀನಿಧಿ ಅವನತ್ತ ಗದರಿ, ಕೈಚಾಚಿ 'ಭಾರೀ ಮಜ' ಎನ್ನುತ್ತ, ಇನ್ನೊಮ್ಮೆ ತೂಗಾಡಿ ಅವನು ಮೇಲೆ ಬಂದ. 'ದನಕರುಗಳೂ ಮೇಯೋದಕ್ಕೆ ಬರಲ್ಲ, ಒಮ್ಮೆ ಹುಗೀತು ಅಂದ್ರೆ ಎತ್ತೋದು ಕಷ್ಟ, ನೋಡ್ತಾ, ನೋಡ್ತಾನೇ ದನ ಪಡ್ಚ ಆಗ್ತವೆ.' ಎಂದ ಮಾರ್ಯಾ.

'ಇಂತಾ ಜಾಗದಲ್ಲಿ ಇಂಬಳ, ಜಿಗಣೆ, ವಿಷದ ಹಾವುಗಳೆಲ್ಲ ಇರ್ತವೆ ಬುದ್ಧೀ...' ಎಂದು ಸೇರಿಸಿದ. ಶ್ರೀನಿಧಿ ಮತ್ತೆ ಆ ಬಗ್ಗೆ ಮಾತೆತ್ತಲಿಲ್ಲ.

ಸುಮಾರು ಐದು ಎಕರೆ ಜಾಗ ಆವರಿಸಿದ ಒಂದು ಕೆರೆ. ಅದರ ಸುತ್ತ 15-20 ಅಡಿ ಎತ್ತ ಮುಂಡ್ಗೇಗಿಡಗಳ ಸಮೂಹ. ಆ ಗಿಡಗಳ ಅಂಚು, ಹಾಗೂ ಗಿಡದ ಮೈ, ಎರಡೂ ತರೆ ತರೆ. ಅ ಮೈಗೆ ತಾಗಿದ್ರೆ ಗೀರು ಬಿದ್ದು ರಕ್ತ ಒಸರಲು ಪ್ರಾರಂಭವಾಗುತ್ತದೆ. ಇಡೀ ಕೆರೆಯನ್ನೇ ಕೋಟೆ ರ ಆವರಿಸಿದೆ. ಸುತ್ತ ಹಸಿರು ಗುಡ್ಡ. ಒಂದು ಭಾಗದ ಇಳಿಜಾರಿನಲ್ಲಿ ಮೂರ್ನಾಲ್ಕು ಮನೆ. ಅದಕ್ಕೂ ತ ಒಂದು ಪಾರ್ಶ್ವದಲ್ಲಿ ನಾಲ್ಕೈದು ಎಕರೆ ಅಡಿಕೆ ತೋಟ.

ಮುಂಡ್ಗೇಗಿಡಗಳ ಹತ್ತಿರ ಬಂದಂತೇ, ಮಾರ್ಯಾ ಏಣಿ ತಂದದ್ದು ಯಾಕೆಂದು ತಕ್ಷಮ ಹೊಳೆಯಿತು.

ಸ್ವಲ್ಪ ದೂರದಲ್ಲಿ ನಾಲ್ಕಾರು ಬೆಳ್ಳಕ್ಕಿಗಳು ಕಾಣಿಸಿದವು. 'ಇಷ್ಟೇನಾ...?' ಎಂದ ಶ್ರೀನಿಧಿ, ನಿ ಯಿಂದ. 'ಛೇ... ಛೇ... ಇನ್ನೂ ಬಹಳದ್ರೀ...' ಎಂದು ಮಾರ್ಯಾ ಹೇಳಿದಾಗ ನನಗೆ ಸಮಾಧಾನವಾಯಿತ

ನಾವು ಬಂದದ್ದೇ ಬೆಳ್ಳಕ್ಕಿಗಳನ್ನು ನೋಡಿ, ಕೆಮೆರಾದಲ್ಲಿ ಸೆರೆಹಿಡಿಯಲು. ಹತ್ತು ದಿನಗಳ ಹಿ ರತ್ನಯ್ಯ ಶೆಟ್ಟರು ಪೇಟೆಯಲ್ಲಿ ಸಿಕ್ಕಾಗ, ತಮ್ಮ ಮನೆ ಹತ್ತಿರದಲ್ಲಿ ಬೆಳ್ಳಕ್ಕಿ ಜಾತ್ರೇನೇ ಸೇರುತ್ತೆ. ಕ್ಯಾಮೆ ತಗೊಂಡು ಬರ್‍ರಲಾ... ಹೆಚ್ಚು ಅಂದ್ರೆ ತಿಂಗ್ಳು... ಆಮೇಲೆ ಹೋಗ್ಬಿಡ್ತವೆ... ಎಂದಿದ್ರು.

'ಹೌದಾ...? ಹಾಗಿದ್ರೆ ಖಂಡಿತ ಬರ್ತೇನೆ' ಎಂದಿದ್ದೆ. ಹೋಗಬೇಕು ಎಂದು ಹವಣಿಸಿಕೊಳ್ಳು ಕಲಾವಿದ ಶ್ರೀನಿಧಿ ಸಿಕ್ಕ. ಇಂಥಾ ಪ್ರಾಕೃತಿಕ ಚಿತ್ರಗಳನ್ನು ನೋಡ್ದೇ ಬಿಡಬಾರ್ದು ಎಂದವ ತನ್ನೆಲ್ಲಾ ಬಿಟ್ಟು ಬಂದಿದ್ದ.

ಆಗಲೇ ನಾವು ಮನೆಯಿಂದ ಅರ್ಧ ಕಿಲೋಮೀಟರ್ ಬಂದಿದ್ದವು. ಬೆಳ್ಳಕ್ಕಿಗಳ ಧ್ವನಿ ಹತ್ತಿರವ ಇತ್ತು. ಆದರೆ ನಮಗೆ ಕಂಡಿದ್ದು ಮಾತ್ರ ಬೆರಳೆಣಿಕೆಯಷ್ಟು. 'ಕೆರೆಯ ಆಚೆಕಡೆ ಹೋಗ್ಬೇಕು' ಮಾರ್ಯಾ. ಮಾರ್ಯಾ ತೋರಿದ ಸ್ಥಳ ತಲುಪಲು ವಿಶಾಲವಾದ ಕೆರೆಯ ಮುಕ್ಕಾಲು ಸುತ್ತಬೇಕಾಗಿತ್ತು.

ಆಗ ಮಟಮಟ ಮಧ್ಯಾಹ್ನ... ತಲೆ ಚುರುಗುಡ್ತಾ ಇತ್ತು. ಆದರೂ ಬೆಳ್ಳಕ್ಕಿ ಜಾತ್ರೆ ನೋಡುವ ಅದಮ್ಯವಾಗಿತ್ತು.

ನಮ್ಮೊಂದಿಗೆ ಹಾರುತ್ತ, ಜಿಗಿಯುತ್ತ ಬರುತ್ತಿದ್ದ ಆದಿತ್ಯ, ನಮಗಿಂತ ಸ್ವಲ್ಪ ಮುಂದೆ ಹೋದವ, ಇದ್ದಕ್ಕಿದ್ದಂತೆ ಹಿಂದೆ ಓಡಿ ಬಂದ. 'ಅಲ್ಲೊಂದ್ಕಡೇ... ಏನೋ... ಸುಟ್ಟೀದಾರೇ, ರೆಕ್ಕೆಗಳೆಲ್ಲಾ ಸುಟ್ಕಂಡು ಬಿದ್ದಿವೆ' ಎಂದು ಒಂದೇ ಉಸಿರಿನಲ್ಲಿ ಹೇಳಿದ.

ಅದೇನೆಂದು ತಿಳಿಯಲು ನಾವು ಅವನ ಬೆನ್ನಿಗೇ ಹೋಗಿ ನೋಡಿದರೆ, ಒಂದು ದೊಡ್ಡ ಮರದ ಕೆಳಗೆ, ಸುಟ್ಟ ಅವಶೇಷ, ರೆಕ್ಕೆ ಪುಕ್ಕಗಳೆಲ್ಲಾ ಬಿದ್ದಿದ್ದವು. ಕಳೆದ ರಾತ್ರಿ ಈ ಬಾನಗಡೆ ಮಾಡಿರಬೇಕು. ಇನ್ನೂ ಸುಟ್ಟ ಕಮಟು ವಾಸನೆ ಅಲ್ಲಿತ್ತು.

'ಛೇ ಛೇ ಯಾರೋ ಬೆಳ್ಳಕ್ಕಿಗಳನ್ನು ಕೊಂದು, ಸುಟ್ಟು, ತಿಂದುಹಾಕಿದಾರೆ. ಪಾಪಿಷ್ಟರು' ಎಂದ ಶ್ರೀನಿಧಿ ಅಸಹನೆಯಿಂದ.

ಮನಸ್ಸು ಭಾರವಾಯಿತು. 'ಇದು ಯಾರ ಕೆಲಸವೋ ಮಾರ್ಯ್ಯಾ?' ಎಂದು ಕೇಳಬೇಕೆಂದು ಏಣಿ ಹೊತ್ತು ಮುಂದೆ ಸಾಗುತ್ತಿದ್ದ ಮಾರ್ಯ್ಯಾನ ಕಡೆ ನೋಡಿದೆ. ಆ ಸ್ಥಳವನ್ನು ದಾಟಿ, ಆತ ಮುಂದೆ ಮುಂದೆ ಹೋಗುತ್ತಿದ್ದ. ಆತನಿಗೆ ಏನೂ ಅನಿಸಲೇ ಇಲ್ಲವೇ...?

ರತ್ನಯ್ಯ ಶೆಟ್ಟರು ತಮ್ಮ ಊರನ್ನು ಹೊಗಳಿಕೊಂಡಿದ್ದರು. ನಮ್ಮೂರ ಜನ ಕೊಕ್ಕರೆ ಬೆಳ್ಳೂರಿನ ಹಾಗೇ... ಹಕ್ಕಿಗಳನ್ನು ಪ್ರೀತಿಯಿಂದ ಕಾಣ್ತಾರೆ. ಅದಕ್ಕೇ ಬೆಳ್ಳಕ್ಕಿಗಳು ಕಳೆದ ಆರೆಂಟು ವರ್ಷಗಳಿಂದ, ನಿರ್ಭೀತವಾಗಿ ಎಲ್ಲಿಂದಲೋ ಇಲ್ಲಿ ಬರ್ತಾವೆ ಎಂದು ಬೆಳ್ಳಕ್ಕಿ ಜಾತ್ರೆ ವರ್ಣನೆ ಮಾಡ್ತಾ ಹೇಳಿದ್ರು.

'ಅರೇ, ಈ ಮಾರ್ಯ್ಯಾ ಏಣಿ ಹೊತ್ತು ಇನ್ನೆಷ್ಟು ದೂರ ಹೋಗ್ತಾನೆ' ಎಂದುಕೊಳ್ಳುತ್ತಿದ್ದಂತೆಯೇ, ಮಾರ್ಯ್ಯಾ, ಮುಂದೆ ಹೋದವನು, ತಿರುಗಿ ನಿಂತು, ಕೈಸನ್ನೆಯಿಂದಲೇ ಕರೆದ. ಬಾಯಿಗೆ ಅಡ್ಡ ಕೈಯಿಟ್ಟು, ಸದ್ದು ಮಾಡದೇ ಬನ್ನಿ ಎಂಬಂತೆ ಸಂಜ್ಞೆ ಮಾಡಿದ. ಆತನ ಮುಖದಲ್ಲಿ ಏನೋ ನಿಗೂಢತೆ.

ಒಂದು ಪುಟ್ಟ ಕೊಳ, ಅದರ ಸುತ್ತ, ನೂರಾರು ಚಿಕ್ಕ, ದೊಡ್ಡ ಬೆಳ್ಳಕ್ಕಿಗಳು ಹಾರುತ್ತಾ, ಕೂಡ್ರುತ್ತಾ, ಸಂಭ್ರಮದಿಂದಿದ್ದವು. ನಾವು ಉಸಿರು ಬಿಗಿಹಿಡಿದು ಅವುಗಳತ್ತ ದೃಷ್ಟಿಯನ್ನು ಕೇಂದ್ರೀಕರಿಸಿದೆವು. ನಾನು ಕ್ಯಾಮೆರಾ ಸಜ್ಜುಗೊಳಿಸತೊಡಗಿದೆ.

ತನಗೆ ಸರಿಯಾಗಿ ಕಾಣುತ್ತಿಲ್ಲವೆಂದು ಇನ್ನಷ್ಟು ಮುಂದೆ ಹೋದ ಆದಿತ್ಯನನ್ನು ಕಂಡ ಕೂಡಲೇ, ಬೆಳ್ಳಕ್ಕಿಗಳು ಭರ್ರನೇ ಹಾರಿಬಿಟ್ಟವು. 'ಅವು ಮರಿಗಳಿಗೆ ಮೀನು ಹಿಡಿಯೋದ್ನಾ ಹೇಳಿಕೊಡ್ತಾ ಇದ್ವು' ಎಂದು ಮಾರ್ಯ್ಯಾ ಹೇಳಿದ. 'ಥತ್... ಇವನ, ನೀಯೆಲ್ಲಿ ಗಂಟುಬಿದ್ಯೋ' ಎಂದು ಶ್ರೀನಿಧಿ, ಆದಿತ್ಯನಿಗೆ ಬಯ್ದ.

ಆದರೆ ನಮಗಿನ್ನೂ, ರತ್ನಯ್ಯ ಶೆಟ್ಟರು ಹೇಳಿದ ಬೆಳ್ಳಕ್ಕಿ ಜಾತ್ರೆ ಕಾಣಸಿಕ್ಕಿರಲಿಲ್ಲ. 'ಇದೇಯೇನೋ... ಬೆಳ್ಕಕ್ಕೀ ಜಾತ್ರೆ?', 'ಇಲ್ರಾ... ಇನ್ನೂ ಕೆರೆ ಹತ್ರಾ ಹೋಗ್ಬೇಕು' ಅದನ್ನು ನೋಡಿದ್ರೆ, ನೀವು ಏನು ಹೇಳ್ತೀರೋ ಏನೋ' ಎಂದ.

ಕೆರೆಯ ಅಂಚಿನ ಗದ್ದೆಯನ್ನು ಹಾಯ್ದು, ಅದಕ್ಕೆ ಹೊಂದಿಕೊಂಡ ತೋಟದ ಪಟ್ಟಿಯ ಹತ್ತಿರ ಬರುತ್ತಿದ್ದಂತೇ, ಒಂದು ಮಾವಿನ ಮರದ ಕೆಳಗೆ, ಮತ್ತೆ ಸುಟ್ಟ ಬೆಳ್ಳಕ್ಕಿಗಳ ಅವಶೇಷ. ಈ ಬಾರಿ ಮಾರ್ಯ್ಯಾನೇ ಅವುಗಳತ್ತ ನೋಡಿ ಪೆಚ್ಚಾದ. 'ಯಾರೋ ಮನೆಹಾಳ್ರು ಮಾಡಿದ ಕೆಲಸ' ಎಂದು ಸ್ವಲ್ಪ ದೊಡ್ಡ ಧ್ವನಿಯಲ್ಲೇ ನಮಗೆ ಕೇಳುವಂತೆ ಬಯ್ದು. 'ಪಾಪ, ಸತ್ತ ಹಕ್ಕಿಮರಿಗಳಿಗೆ ಯಾರು ಮೀನು ಹಿಡಿಯೋದ್ನ ಹೇಳ್ಕೊಡ್ತಾರೆ...?' ಎಂದ ಆದಿತ್ಯ. ಯಾರೂ ಮಾತಾಡಲಿಲ್ಲ.

'ಒಂದು ಫೋಟೋ ತೆಗೆದಿಟ್ಟುಕೋ, ಪೇಪರ್‌ಗೆ ಹಾಕ್ಸಿ ಬಿಡೋಣಾ' ಎಂದು ಶ್ರೀನಿಧಿ ಸಲ
ನೀಡಿದ. ಫೋಟೋ ಕ್ಲಿಕ್ಕಿಸಿದೆ, ಅದನ್ನೇ ನೋಡುತ್ತಿದ್ದ ಮಾರ್ಯಾ.

'ಪೇಪರ್‌ನಲ್ಲಿ ಬರ್ತದೇನ್ರೀ?' ಎಂದ ಆತನ ಮುಖದಲ್ಲಿ ಗಾಬರಿ ಇಣುಕಿದಂತಾಯಿತು. ಪ
ಹಂತಕರಲ್ಲಿ ಮಾರ್ಯಾನೂ ಇದ್ದಿರಬಹುದೇ... ಎಂದು ತಲೆಯಲ್ಲಿ ಹುಳ ಕೊರೆಯತೊಡಗಿತು.

ಹತ್ತು ಮಾರು ಉದ್ದದ ದಪ್ಪ ಮರವೊಂದು, ಕೆರೆಗೆ ಸೇರಲು ಹೊರಟ ಹಳ್ಳಕ್ಕೆ ಅಡ್ಡಲಾಗಿ, ಸಂಕದ
ಬಿದ್ದಿತ್ತು. ಅದನ್ನು ದಾಟಿ, ಹಳ್ಳದ ಗುಂಟ ಮೊಣಕಾಲುಮಟ್ಟ ನೀರಲ್ಲಿ, ಕೆರೆಯತ್ತ ಸಾಗಿದೆವು.

ಕೆರೆಯ ಬಳಿ, ಎಲ್ಲಿ ನೋಡಿದರೂ, ದಟ್ಟವಾಗಿ ಹಬ್ಬಿದ ಮುಂಡ್ಗೇಗಿಡಗಳು. ಎಚ್ಚರಿಕೆಯಿ
ಹೋಗಬೇಕು. ಇಲ್ಲವಾದ್ರೆ ಯಾವ್ಯಾವ ವಿಷದ ಹಾವುಗಳು ಸಿಕ್ತಾವೋ ಎಂದು ಶ್ರೀನಿಧಿಗೆ, ಆದಿತ್ಯ
ಎಚ್ಚರಿಸುತ್ತಾ ನಡೆದೆ.

ಮಾರ್ಯಾ, ಅಲ್ಲೇ ಒಂದು ಕಡೆ, ಹೆಗಲಲ್ಲಿದ್ದ ಏಣಿಯನ್ನು ಇಳಿಸಿ, ಅದನ್ನು ಒಂದು ಮಾ
ಮರಕ್ಕೆ ಆನಿಸಿಟ್ಟ.

ಈ ಮುಂಡಿಗೇಮಟ್ಟಿ ಒಳಗೆ ನುಗ್ಗೋದು ಹ್ಯಾಗೇ?... ಹಾಗೇನಾದರೂ ಉಮೇದು ಮಾಡಿದ
ಮೈ ಕೈ ತರಚಿಕೊಂಡು, ಬಟ್ಟೆ ಹರಿದುಕೊಂಡು ಹೊರಬರಬೇಕಾಗುತ್ತದೆ, ಅದಕ್ಕಿಂತ ಮಾಯ
ಹೊತ್ತುತಂದ ಏಣಿ ಏರಿ ನೋಡುವುದೇ ಸೂಕ್ತ ಎನಿಸಿತು. ಆದರೂ ಇಲ್ಲೀವರೆಗೆ ಬರೋ
ಬಂದಾಗಿದೆ, ಈ ಮುಂಡ್ಗೇ ಕೋಟೆಯೊಳಗೆ ಹೋಗಲು ಹೇಗಾದರೂ ಸಾಧ್ಯವೇ? ಎಂ
ವಿಚಾರಿಸುತ್ತಿದ್ದಂತೇ, ಮಾರ್ಯಾನಿಗೇನನಿಸಿತೋ, 'ಇಲ್ಬನ್ನೀ ಬುದ್ದೀ, ಈ ಕಡೆ ಒಂದು ಚಿಕ್ಕ ದಾರಿ ಇ
ಎಂದ. ಆತನ ಮುಖ ನೋಡಿದೆ, 'ಹುಶಾರಿಂದ ಈ ದಾರೀಲಿ ಹೋದ್ರೆ, ಕೆರೆ ನೋಡ್ಲೀಕಾಗ್ತದ
ಹೋಗ್ತೀರಾ?' ಎಂದ, 'ಹೂಂ' ಎಂದೆ, ಹುಂಬ ಧೈರ್ಯದಿಂದ.

ಅವನು ಹೇಳಿದ ಕಡೆ ಹೋದೆ, ನನ್ನ ಹಿಂದೆ ಶ್ರೀನಿಧಿ ಬಂದ. ಆದಿತ್ಯ ನೀರ ಮೇಲೆ ಸರಾಗವ
ಚಲಿಸುತ್ತಿದ್ದ ಚಿಕ್ಕ ಹುಳುವೊಂದನ್ನು ಹಿಡಿಯಲು ಹೊಂಚುಹಾಕುತ್ತಿದ್ದ.

'ನೀ ಇಲ್ಲೇ ಇರ್ತೀಯಾ...? ನಾವು ಸ್ವಲ್ಪ ಮುಂದೆ ಹೋಗಿ ಬರ್ತೇವೆ' ಎಂದೆ, ಆದಿತ್ಯನ ಹ
'ಇಲ್ರೀ... ನಿಮ್ಮ ಸಂಗ್ಡಾನೇ ಬರ್ತೀನಿ' ಎನ್ನುತ್ತ ನಮ್ಮ ಬೆನ್ನು ಹಿಡಿದ. ನಮ್ಮ ಪಾದರಕ್ಷೆಗಳನ್ನು ಹ
ದಂಡೆಯ ಮೇಲೆ ಬಿಟ್ಟೆವು. ದಾರಿ ಅಂದರೆ ಭಯಂಕರ ದಾರಿ ಅದು. ಮುಂಡ್ಗೇಗಿಡ, ಎಲೆಯಂಚು
ತಾಗದಂತೆ, ಆದರೆ ಅವುಗಳನ್ನೇ ಆಧರಿಸಿ, ನೀರಲ್ಲಿ ಮುಳುಗಿದ ಮುಳ್ಳಿನ ಮುಂಡ್ಗೇಗಿಡದ ಮೆ
ಬ್ಯಾಲೆನ್ಸ್ ಮಾಡುತ್ತಾ ನಡೆದೆವು. ಒಂದೆರಡು ಬಾರಿ ಕಾಲು ಜಾರಿದರೂ, ನೀರಿಗೆ ಬೀ
ಸಾವರಿಸಿಕೊಂಡೆ. ಕೆಲವೊಮ್ಮೆ ಅವನೇ ಕೈ ಹಿಡಿದು ದಾಟಿಸಿದ. 'ಈ ದಾರಿ ಮಾಡಿದ್ದು ಯಾರು?' ಎ
'ಯಾರೋ ಗೊತ್ತಿಲ್ಲ ಬುದ್ದಿ... ಒಂದಿನಾ ಏಡಿ ಹಿಡಿತಾ ಈ ಕಡೆ ಬಂದಾಗ, ಕಂಡ್ಸ ಇದ್ದಾ' ಎಂದ.

ಈಗ ಬೆಳ್ಳಕ್ಕಿ ಕಲರವ ಹೆಚ್ಚೆಚ್ಚು ಕೇಳತೊಡಗಿತು. ಆದರೂ ಕೆರೆಯ ಮುಖ್ಯ ಭಾಗಕ್ಕೆ ಇ
ದೂರವಿತ್ತು.

ಅಷ್ಟರಲ್ಲಿ ದುಢುಂ... ಎಂದ ಸದ್ದಾಗಿ, ಗಾಬರಿಯಿಂದ ತಿರುಗಿದರೆ, ಆದಿತ್ಯ ಕಾಲು ಜಾರಿ ನೀ
ಬಿದ್ದಿದ್ದ. ನಾವು, ಏ ಏ ಏನಾಯ್ತೋ... ಎನ್ನುವುದರೊಳಗೆ ಗುಳುಗುಳುಗುಡುತ್ತಾ ನೀರಿಂದೆದ್ದು ವ
ವರೆಸಿಕೊಳ್ಳುತ್ತಿದ್ದ.

'ಬ್ಯಾಡಾ ಅಂದ್ರೂ ಬಂದ್ಯಾ...? ಏನಾಯ್ತೋ ಮರೀ?' ಎಂದೆ.

'ಏನಿಲ್ರೀ, ಏನಾಗ್ಲಿಲ್ಲಾ...' ಎನ್ನುತ್ತಾ ನಗು ತೂರಿದ. ಅವನಿಗೆ ಬಿದ್ದದ್ದೂ ಒಂದು ಮಜವೇ. ಯ್ದು ತೊಪ್ಪೆಯಾದ ಅಂಗಿ, ಚಡ್ಡಿಯ ತುದಿ ಭಾಗವನ್ನು ಹಿಂಡಿಕೊಂಡ.

ಅಷ್ಟೇ ಸಾಕಾಯಿತು, ಶ್ರೀನಿಧಿ ಹಾಗೂ ಆದಿತ್ಯ, ಅಲ್ಲೇ ಒಂದು ಪಿಳ್ಳೆ ಮರಕ್ಕೆ ಆತುಕೊಂಡು ತರು.

ನಾನು, ಮಾರ್ಯಾ ಮುಂದಿದ್ದೆವು. ಬೆಳ್ಳಕ್ಕಿಗಳನ್ನು ಹತ್ತಿರದಿಂದ ನೋಡುವ, ಹಾಗೂ ಅವುಗಳ ಟೋ ತೆಗೆಯುವ ಅದಮ್ಯ ಆಸೆ ತಡೆಯಲಾರದೆ, ಕಷ್ಟಪಟ್ಟು ಮುಂದೆ ಹೋಗುತ್ತಿದ್ದೆ. ಆ ಸಾಹಸದ ನಡುವೆಯೇ ಏನೋ ನಿರೀಕ್ಷೆ. ಮಾರ್ಯಾ ನನ್ನನ್ನು ಅಚ್ಚರಿಯಿಂದ ನೋಡ್ತಾ ಇದ್ದ.

ಅಡ್ಡಾದಿಡ್ಡಿಯಾಗಿದ್ದ ಮುಂಡ್ಗೇಮಟ್ಟಿಯ ದಾರಿ. ಗುಹೆಯಲ್ಲಿ ಹೋದಂತೆ. ಎಷ್ಟು ಎಚ್ಚರ ಸಿದರೂ, ಅಲ್ಲಲ್ಲಿ, ಮೈಗೆ ತರಚಿದ ಗಾಯ. ಆದರೆ ಸ್ವಲ್ಪ ಸ್ವಲ್ಪವಾಗಿ ಕೆರೆ ಕಾಣ್ತಾ ಇತ್ತು.

ಇನ್ನೊಂದು ಮಾರು ಮುಂದೆ ಹೋದ್ರೆ ಕೆರೆಯ ವೈಶಾಲ್ಯ ಕಾಣ್ತದೆ. ಆದರೆ ಒಂದು ಮಾರನ್ನು ಟಲು ಯಾವ ಆಧಾರವೂ ಕಾಣ್ತಾ ಇಲ್ಲ. ಮಾರ್ಯಾ ಹಿಂದೆಯೇ ನಿಂತಿದ್ದ. ನನ್ನ ಅದೃಷ್ಟಕ್ಕೆ ಂದೊಂದು ಬಾಳೇ ಕುಂಟಿನ ತೆಪ್ಪವಿತ್ತು. ಬಾಗಿ ನಿಂತ ಒಂದು ಮುಂಡಿಗೆ ಗಿಡವನ್ನು ಹಿಡಿದು, ತೆಪ್ಪಕ್ಕೆ ಿದೆ. ಅಷ್ಟು ಸದ್ದಿಗೇ ಇರಬೇಕು, ಮಟ್ಟಿಯೊಳಗಿದ್ದ ನೂರಾರು ಹಕ್ಕಿಗಳು ಭರ್ರನೆ ಹಾರಿದವು. ಥತ್ ದು ನನ್ನನ್ನೇ ಬೈದುಕೊಂಡೆ.


ತೆಪ್ಪದ ಮೇಲೆ ಕುಳಿತು, ಸುತ್ತ ನೋಡಿದರೆ ಅದೊಂದು ಅದ್ಭುತವಾದ ಲೋಕ. ಇಷ್ಟು ದುರ್ಗಮವಾದ ಸ್ಥಳದಲ್ಲಿ ಬಾಳೇ ಕುಂಟಿನ ತೆಪ್ಪ ಕಟ್ಟಿಹೋದವರು ಯಾರಿರಬಹುದು ಎನಿಸಿತು.



ವಿಶಾಲವಾದ ಕೆರೆ, ಅದನ್ನು ಸುತ್ತುವರೆದ ದಟ್ಟಹಸಿರ ಮುಂಡಿಗೇ ಗಿಡಗಳು, ಅವುಗಳ ಆಶ್ರಯದಲ್ಲಿ ಸಹಸ್ರ ಸಹಸ್ರ ಬೆಳ್ಳಕ್ಕಿಗಳ ಜಾತ್ರೆ, ನೋಡಲು ಎರಡು ಕಣ್ಣು ಸಾಲದು, ಎತ್ತ ನೋಡಿದರೂ ಬೆಳ್ಳಕ್ಕಿಗಳದೇ ಸಾಮ್ರಾಜ್ಯ.

ರತ್ನಯ್ಯ ಶೆಟ್ಟರು ಹೇಳಿದ್ದು ನೂರಕ್ಕೆ ನೂರು ಸತ್ಯ ಎನಿಸಿದ್ದು ಆಗಲೇ.

ಲಲ್ಲೆಗರೆಯುವ ಜೋಡು ಹಕ್ಕಿಗಳು, ಮರಿಗಳಿಗೆ ಗುಟುಕು ನೀಡುವ ಹಕ್ಕಿಗಳು, ದೂರದಿಂದ ಚುಂಚಿನಲ್ಲಿ ಹುಳಹುಪ್ಪಡಿ ಕಚ್ಚಿಕೊಂಡು ಬರುತ್ತಿರುವ ಹಕ್ಕಿಗಳು, ಮರಿ ಹಕ್ಕಿಗಳ ಜೊತೆ ತಂದೆ-ತಾಯಿ ಹಕ್ಕಿಗಳು, ಭರ್ರನೆ ಒಂದು ಕಡೆಯಿಂದ ಇನ್ನೊಂದು



ಕಡೆಗೆ ಹಾರುವ, ಓಡುವ, ಆಡುವ ಹಕ್ಕಿಗಳು, ನಡುಹಗಲಲ್ಲೇ, ಇಡೀ ನಕ್ಷತ್ರ ಲೋಕ ಇಳ್ದಿಗೆ ಬಂದಂತೆ ಅನಿಸಿತು. ಮಳೆಗಾಲದ ಪ್ರಾರಂಭದಲ್ಲಿ ಎಲ್ಲೆಂದರಲ್ಲಿ ಕಾಣುವ, ದೊಡ್ಡ ಬಿಳಿ ತುತ್ತೂರಿ ಅರಳಿದಂತೆ ಗೋಚರಿಸಿತು.

ಕೆರೆಯ ಒಳಗಣ ಅದ್ಭುತವಾದ ಬೆಳ್ಳಕ್ಕಿ ಲೋಕ, ಹೊರಗಿನಿಂದ ನೋಡುವವರಿಗೆ ಊಹಿ ಸಾಧ್ಯವಿಲ್ಲ. ಈ ರಸ ಸನ್ನಿವೇಶವನ್ನು ಕ್ಯಾಮರಾದಲ್ಲಿ ಸೆರೆಹಿಡಿಯುವುದನ್ನೂ ಮರೆತು, ಎಷ್ಟೋ ಕ ಬೆರಗಾಗಿ ನೋಡುತ್ತಲೇ ಇದ್ದೆ. ಎತ್ತ ನೋಡಿದರೂ ಬೆಳ್ಳಕ್ಕಿಗಳು ಹಾಗೂ ಅವುಗಳ ಲೀಲೆ. ಲೋಕದಲ್ಲಿ ನಾನೋರ್ವ ಹುಲು ಮಾನವ ಎಂಬ ಭಾವನೆ ಆವರಿಸಿತು.

ಬಾಳೇ ಕುಂಟಿನ ತೆಪ್ಪವನ್ನು ಮುಂಡಿಗೆ ಗಿಡಗಳಿಗೆ ಕಟ್ಟಿದ್ದರಿಂದ, ಅದು ಚಲಿಸುವ ಭಯವಿ ಸುಮಾರು 15 ನಿಮಿಷಗಳ ಕಾಲ, ನನಗೆ ಬೇಕಾದಂತೆ, ಬೆಳ್ಳಕ್ಕಿ ಲೋಕವನ್ನು ಕ್ಯಾಮರಾದಲ್ಲಿ ಸೆರೆಹಿ ಮನಸ್ಸಿಲ್ಲದ ಮನಸ್ಸಿನಲ್ಲಿ, ಮತ್ತೆ ಸರ್ಕಸ್ ಮಾಡ್ತಾ, ಏಣಿ ಇಟ್ಟ ಜಾಗಕ್ಕೆ ಬಂದೆವು.

'ಮರ ಹತ್ತಿ ಮೇಲಿಂದ ಒಮ್ಮೆ ನೋಡಿ ಬುದ್ದೀ. ನಾವು ಇಲ್ಲಿಂದ್ಲೇ ಮೊದ್ಲು ನೋಡಿದ್ದು. ಆ ಕ ಸಂಸಾರ ನೋಡ್ತಾ ಇದ್ರೆ,' ಎನ್ನುತ್ತ, ಏಣಿಗೆ ತಾಗುತ್ತಿದ್ದ ಮುಂಡಿಗೆ ಎಲೆಗಳನ್ನು ಸವರಿ, ಮಾರ್ಯಾ ಏರಲು ಸುಗಮಗೊಳಿಸಿದ. ಮೇಲೆ ಏರಿದಾಗ, ಇಡೀ ಕೆರೆಯ 'ಏರಿಯಲ್ ವ್ಯೂ' ಸಿಕ್ಕಂತಾ ಮತ್ತೊಮ್ಮೆ ಅತ್ಯಾನಂದ ಅನುಭವಿಸಿದೆ. ಶ್ರೀನಿಧಿ, 'ವಾಹ್... ಅದ್ಭುತ' ಎಂದು ಕೂಗಿದ. ಗೂಡಿನಲ್ಲಿದ್ದ ಎರಡು ಮರಿ ಹಕ್ಕಿಗಳು ಪಟ ಪಟ ಸದ್ದು ಮಾಡಿದವು.

ಆದಿತ್ಯ ಮತ್ತೆ ಹಳ್ಳದಲ್ಲಿಳಿದು, ತನ್ನ ಹುಳ ಹಿಡಿಯುವ ಕಾಯಕಕ್ಕಿಳಿದಿದ್ದ.

ಮಾರ್ಯಾ ಎಚ್ಚರ ಹೇಳುತ್ತ ಕೆಳಗೇ ಉಳಿದ. ನಾವು ಮರವಿಳಿದು ತಿರುಗಿ ಹೊರಟಾಗ ಗಂಟೆ ದಾಟಿತ್ತು. ಬೆಳ್ಳಕ್ಕಿ ಲೋಕ, ಮುಂಡಿಗೇ ಗಿಡಗಳ ಕೋಟೆ, ಕೆರೆ ಕಾಣಿಸಲು ಮಾಡಿದ ಕಸ ಬಿಸಿಲು ತನ್ನ ಬಿಸಿ ತಾಗಿಸಲು ಸೋತು ಹೋಗಿತ್ತು.

ರತ್ನಯ್ಯ ಶೆಟ್ಟರ ಮನೆಯತ್ತ ಹೊರಟಾಗ, ಮಾರ್ಯಾ, ನಮ್ಮತ್ತ ನೋಡುತ್ತ, ಏನೋ ಕ ಹವಣಿಸುತ್ತಿರುವಂತೆ ಅನಿಸಿತು.

'ನೀನಿವತ್ತು ನಮ್ಜೊತೆ ಇಲ್ದೇ ಇದ್ದಿದ್ರೆ, ಕೆರೆ ನೋಡ್ತಿರ್ಲಿಲ್ಲ' ಎಂದು ಮೆಚ್ಚುಗೆ ಸೂಚಿಸಿದ ಕ್ಷೀಣವಾಗಿ ನಕ್ಕ.

'ಇದೆಲ್ಲಾ ಪೇಪರ್ನಾಗೇ ಬರ್ತದೇನ್ರೀ?' ಎಂದ.

'ಹೌದು ನಿನ್ನ ಸಹಾಯ, ಸಹಕಾರ ಕೂಡಾ', ಎಂದೆ ಅಭಿಮಾನದಿಂದ.

'ಛೆ...ಛೆ... ಅದೆಲ್ಲ ಬ್ಯಾಡ್ರೀ' ಎಂದಾಗ ಆತನ ಮುಗ್ಧತೆಗೆ ನಗುಬಂತು.




ರತ್ನಯ್ಯ ಶೆಟ್ಟರಿಗೆ ಧನ್ಯವಾದ ಹೇಳಿ ಬಂದ ಮೇಲೆ, ಒಂದು ತಿಂಗಳು ಸದ್ದಿಲ್ಲದೇ ಸರಿದು ೀಗಿದ್ದವು. ಆ ದಿನ ಅವಸರದಲ್ಲಿ ಪಕ್ಷಿಗಳ ಹತ್ಯೆ ಬಗ್ಗೆ ಹೇಳಲಾಗಿರಲಿಲ್ಲ. ಅಷ್ಟೆಲ್ಲ ಮಾರ್ಗದರ್ಶನ ಡಿಸಿದ ಮಾರ್ಯಾನ ಬಗ್ಗೆ ಅಭಿಮಾನವಿದ್ದರೂ, ಆತನ ಬಗೆಗೆ ಒಂದು ಸಂಶಯದ ಹುಳ ಯೊಳಗೆ ಹೊಕ್ಕಿದ್ದು ಹಾಗೇ ಇತ್ತು.

ಒಂದು ದಿನ ರತ್ನಯ್ಯ ಶೆಟ್ಟರು ಪೇಟೆಯಲ್ಲಿ ಸಿಕ್ಕರು. ಉಭಯ ಕುಶಲೋಪರಿ ನಂತರ ಅವರ ನೆಯಾಳು ಮಾರ್ಯಾನ ಮಾರ್ಗದರ್ಶನವಿಲ್ಲದಿದ್ದಿದ್ದರೆ ಅಂದು ಬೆಳ್ಳಕ್ಕಿ ಜಾತ್ರೆಯ ಪೂರ್ಣ ವೀಕ್ಷಣೆ ಧ್ಯವಾಗುತ್ತಿರಲಿಲ್ಲ. ಅವನನ್ನು ನೆನಪು ಮಾಡಿಕೊಂಡಿದ್ದೇನೆಂದು ಹೇಳಿ ಎಂದೆ.

ರತ್ನಯ್ಯ ಶೆಟ್ಟರು ವಿಷಾದದಿಂದ, 'ನೀವು ಬಂದುಹೋದ ಮೇಲೆ ಬೆಳ್ಳಕ್ಕಿ ಜಾತ್ರೆ ಮುಗಿದು, ಎಲ್ಲ ಸಾರ ಸಮೇತ ಜಾಗ ಖಾಲಿ ಮಾಡ್ತಾ ಇವೆ, ನೀವು ಬಂದ ಟೈಂ ಚೆನ್ನಾಗಿತ್ತು ನೋಡಿ. ಅದ್ಕೇ ಅಷ್ಟೆಲ್ಲ ಕ್ಕಿಗಳು ನೋಡ್ಲಿಕ್ಕೆ ಸಿಕ್ತು. ಆದರೆ ಮಾರ್ಯಾನ ಕಥೆಯೇ ಬೇರೆ. ಅವನೂ ಹೋಗ್ಬಿಟ್ಟ' ಎಂದರು.

'ಛೆ ಛೆ ಏನಾಯ್ತು ಅವನಿಗೆ?', ಎಂದೆ ಗಾಬರಿಯಿಂದ.

'ಏನೋ ಸರಿಯಾಗಿ ಗೊತ್ತಾಗ್ತಾ ಇಲ್ಲ. ಯಾರೋ ಮನೆಹಾಳರು ಹಕ್ಕಿಗಳನ್ನು ಕೊಂದು, ಸುಟ್ಟು, ದಿದ್ದ ಜಾಗದ ಫೋಟೋ ಹೊಡೆದಿದ್ರಂತಲ್ಲ.? ಪೇಪರ್ನಲ್ಲಿ ಬರತ್ತೆ ಅಂತ ಏನೇನೋ ಸುದ್ದಿ ಅವನ ರಿಯಲ್ಲೆಲ್ಲಾ ಹರಡಿತ್ತಂತೆ. ಸುದ್ದಿ ಕೊಟ್ಟವನು ಇವನೇ ಅಂತ ಅವನ ಕೇರಿಯ ಕೆಲವರು ಅವನಿಗೆ ಡೆದ್ರು. ಅವನಿಗೆ ಏನನಸ್ತೋ, ಅಡವಿಗೋಗಿ ನೇಣು ಹಾಕ್ಕೊಂಡ. ನೀವ್ ನಂಬ್ತೀರೋ ಇಲ್ಲೋ, ೀಟದ ಕೆಲ್ಸಕ್ಕೆ ಕಳಿಸಿದ್ರೆ, ಮರಹತ್ತಿ, ತಾಸುಗಟ್ಲೆ ಬೆಳ್ಳಕ್ಕಿ ಜಾತ್ರೆ ನೋಡ್ತಾ ಕುಂತುಬಿಡ್ತಿದ್ದ. ಆ ಮೇಲೆ ಂದಿನ ಸಿಕ್ಕಿಬಿದ್ದ. ಬಯ್ದೆ... 'ನೀವೊಂದ್ಸಾರಿ ಮರ ಹತ್ತಿ ನೋಡಿ ಬುದ್ದಿ' ಎಂದ ಅವನ ಒತ್ತಾಯಕ್ಕೆ ಹತ್ತಿ ೋಡ್ದೆ. ನಮ್ಮ ಮನೆ ಹತ್ರ ಇಂಥಾ ಅದ್ಭುತ ಬೆಳ್ಳಕ್ಕಿ ಜಾತ್ರೆ ನಡೀತಾ ಇದೆ ಅಂತ ಗೊತ್ತಾದ್ದೇ ಆವಾಗ. ೀಟಕ್ಕೆ ಹೋದಾಗೆಲ್ಲ ಮರ ಹತ್ತಿ ನೋಡ್ತಾ ಇದ್ದೆ. ಆಮೇಲೇ ನಿಮ್ಗೆ ಹೇಳಿದ್ದು. ನಮ್ಮಲ್ಲಿ ಬಹಳ ಜನರಿಗೆ ಳ್ಳಕ್ಕಿ ಮೇಲೆ ಪ್ರೀತಿ ಇದೆ. ಆದ್ರೆ, ಏನ್ ಮಾಡಿದ್ರೂ, ರಾತ್ರಿ ಹೊತ್ತು ಕಳ್ಳದಾರಿ ಮಾಡಿಕೊಂಡು ಕ್ಕಿಗಳನ್ನು ಕೊಂದು ತಿನ್ನೋವರ ಬಗ್ಗೆ ಗೊತ್ತಾಗೋದಿಲ್ಲ. ನೋಡಿ... ಈಗ ಎಲ್ಲ ತಿಳಿದಂಗಾಯ್ತಲ್ಲ. ಾರ್ಯಾನಂತ ಜನ ಮತ್ತೆ ಸಿಗೋದಿಲ್ಲ ಅಂತ ಚಿಂತೆ ನನಗೆ' ಎಂದರು ಶೆಟ್ಟರು. ■





ನ ನಟ ರಮೇಶ್‌ರೊಂದಿಗೆ ಲೇಖಕ



ಜಿ.ಎಸ್. ಸುಶೀಲಾದೇವಿ ಆರ್.ರಾವ

ತಂದೆಯೇ, ಅವರನ್ನು ಕ್ಷಮಿಸ

ಡಾ. ಪ್ರಶಾಂತಿ ನೈಟ್‌ಡ್ಯೂಟಿ ಮುಗಿಸಿ ಮನೆಗೆಂದು ಹೊರಟಾಗ ಬೆಳಗಿನ ಆರು ಗಂಟೆ. ಕಣ್ಣಲ್ಲಿ ನಿದ್ದೆ ತೂಗುತ್ತಿತ್ತು. ಡಾ|| ಮೀರಾ ರಜೆ ಹಾಕಿದ್ದರಿಂದ, ಅವಳ ಕೇಸೂ ನೋಡಿ, ಎರಡು ನಾರ್ಮಲ್ ಡೆಲಿವರಿ ನಡುವೆಯೇ ಸ್ಥಳೀಯ ಎಂ.ಎಲ್.ಎ. ಮಗಳ ಸಿಸೇರಿಯನ್ ಮಾಡಿ ಹೊರಬಂದಾಗ ದೇಹ ತೀರ ಸೋತಿತ್ತು.

ರಿಕ್ಷಾ ಹತ್ತಿ ಮನೆಯತ್ತ ಹೊರಟಾಗ, ಈಗೊಂದು ವಾರದಿಂದ ಶಿವಮೊಗ್ಗದಲ್ಲೇ ಉಳಿದ ಗಂಡನ ನೆನಪು ಕಾಡಿತ್ತು. 'ಆರಾಧ್ಯ ನರ್ಸಿಂಗ್ ಹೋಂ'ನಲ್ಲಿ ಮೂರು ವರ್ಷ ಜೊತೆಯಾಗಿ ದುಡಿದವರು. ಶಿವಾನಂದನಿಗೆ ಬಳ್ಳಾರಿಯ ಸುಡುಬಿಸಿಲು ಆಗದು. ಶಿವಮೊಗ್ಗದಲ್ಲಿ ಸ್ವಂತಮನೆ ಇದೆ. ಅಲ್ಲೇ ಕ್ಲಿನಿಕ್ ತೆಗೆಯೋಣ. ಇನ್ನೊಬ್ಬರ ನರ್ಸಿಂಗ್ ಹೋಂನಲ್ಲಿ ಎಷ್ಟು ದುಡಿದರೂ ಬೆಲೆ ಇಲ್ಲ. ಇಷ್ಟು ವರ್ಷದ ಅನುಭವ ಸಾಕು ಅಂತ ಅವನ ವಾದ.

ಬಳ್ಳಾರಿಯಲ್ಲೇ ಹುಟ್ಟಿ, ಬೆಳೆದ ತನಗೆ ಇಲ್ಲೇ ಇರುವ ಹಂಬಲ. ವಿರೂಪಾಕ್ಷಿ, "ಎಲ್.ಎಲ್.ಬಿ. ಮುಗಿಸಿ ಬಳ್ಳಾರೀಲೇ ಪ್ರಾಕ್ಟೀಸ್ ಮಾಡ್ತೀನಿ. ಎಲ್ರೂ ಒಟ್ಟಿಗೇ ಇರೋಣ. ಅಪ್ಪ ಆಸ್ತಿ ಮಾರಿದಾಗ ಕಟ್ಟಿಸಿದ ಮೂರು ಮನೆಯಲ್ಲಿ ಒಂದು ಎಲ್ಲರ ವಾಸಕ್ಕೆ. ಒಂದು ನನ್ನ ಆಫೀಸಿಗೆ, ಇನ್ನೊಂದು ನಿಮ್ಮ ಕ್ಲಿನಿಕ್ಕಿಗೆ" ಎಂದಾಗ, ಶಿವನಾನಂದ, "ನೀನೂ ಶಿವಮೊಗ್ಗೆಗೇ ಬಾ. ನಿಂಗೆ ಭರ್ಜರಿ ಕೇಸ್ ಕೊಡಿಸ್ತೀನಿ" ಅಂದಿದ್ದ.

ಶಿವಾನಂದ ದೃಢವಾಗಿ, "ನಂಗೆ ಶಿವಮೊಗ್ಗೆಯೇ ಬೇಕು. ನಿಂಗೆ ನಾನು ಬೇಕೋ... ಬಳ್ಳಾರಿ ಬೇಕೋ?" ಎಂದಾಗ ತಾನು ದ್ವಂದ್ವದಲ್ಲಿ ನರಳಿದ್ದೆ. ಶಿವಾನಂದ, ತಾನು ಮೆಡಿಕಲ್ ಓದುವಾಗಲೇ ಪ್ರೀತಿಸಿದವರು. ಲಗ್ನ ಆಗುವಾಗ, ಜಾತಿ ಬೇರೆ ಅಂತ ಸಮಸ್ಯೆ ಎದ್ದಾಗ, ಅಪ್ಪ ಹೇಳಿದ್ದರು, "ಮನುಷ್ಯಜಾತಿ ಎಲ್ಲ ಒಂದೇ ಮಗೂ, ಮನಸ್ಸು ಒಂದಾಗುವುದು ಮುಖ್ಯ." ಅವರದು ಒಳ್ಳೆಯ ಮನಸ್ಸು, ಎಲ್ಲರಿಗೂ ಶ್ರೇಯಸ್ಸು ಕೋರುವ ಬುದ್ಧಿ. ಗಾಂಧಿ ಎಂದರೆ ಅವರಿಗೆ ತುಂಬ ಗೌರವ. ಅವರು ಸ್ವಾತಂತ್ರ್ಯ ಹೋರಾಟಗಾರರಲ್ಲ. ಆದರೆ ಅಪ್ಪಟ ಗಾಂಧೀವಾದಿ.

'ಯರ್ರಿಸ್ವಾಮಿ ಕೃಪಾ'ದ ಮುಂದೆ ರಿಕ್ಷಾ ನಿಂತಾಗ, ಪ್ರಶಾಂತಿ ಕೆಳಗಿಳಿದಳು. ಎಳೆಬಿಸಿಲು ಹರಡುತ್ತಿತ್ತು. ಹೊಸ ಬಡಾವಣೆ. ಅಲ್ಲೊಂದು ಇಲ್ಲೊಂದು ಮನೆ ಏಳುತ್ತಿವೆ. ಗುಡಿಸದ, ನೀರು ಹನಿಸದ ಅಂಗಳ ಕಂಡು ಹುಬ್ಬೇರಿಸಿ ಬಾಗಿಲತ್ತ ನೋಡಿದಾಗ, ಹೊರಬಾಗಿಲ ಚಿಲುಕ ಹಾಕಿತ್ತು. ಸಂಜೆ ತಾನು ಹೊರಡುವಾಗ, "ಯಾಕೋ ಸುಸ್ತು ಅನ್ನಿಸುತ್ತೆ ಮಗೂ", ಎಂದಿದ್ದರು. ಆಸ್ಪತ್ರೆಗೆ ಏನಾದರೂ...? ಇಲ್ಲ ಲಾಕ್ ಮಾಡಿಲ್ಲ, ಚಿಲುಕ ಹಾಕಿದೆ ಎಂದುಕೊಳ್ಳುತ್ತಾ ಪ್ರಶಾಂತಿ ಚಿಲುಕ ಸರಿಸಿದಾಗ, ಬಾಗಿಲಲ್ಲೇ ಬಸವಳಿದು ಬಿದ್ದ ಸೂಗವ್ವ ಕಾಣಿಸಿದಳು. ಸೀರೆ ರಕ್ತದಲ್ಲಿ ತೊಯ್ದಿತ್ತು. ತೆವಳಿ ಬಂದಿದ್ದಳೇನೋ, ಹಾಲಿನಲ್ಲಿ ರಕ್ತದ ಹಾದಿ.

''ಸೂಗವ್ವಾ, ಏನಾತು?'', ಅವಳ ಚೀತ್ಕಾರದ ದನಿಗೆ, ಮುಚ್ಚುತ್ತಿದ್ದ ಕಣ್ಣರಳಿಸಿ ಆಕೆ, ಕೈ ಎತ್ತಿ ತೋರಿದೆಡೆ ಕಂಡಿದ್ದು, ಸೋಫಾದಿಂದ ಕೆಳಗೆ ಕುಸಿದು ಒರಗಿದ್ದ ತಂದೆಯ ಎದೆಯಲ್ಲಿ ನಾಟಿದ್ದ ಚೂರಿ, ನೋವಿನಿಂದ ವಿಕಾರವಾದ ಮುಖ.

''ಅಪ್ಪಾ...'' ಅಂತ ಧಾವಿಸಹೋದವಳನ್ನು ತಡೆದಳು ಸೂಗವ್ವ.

''ಹೋಗಬ್ಯಾಡ. ಅಪ್ಪ ಸತ್ತಾರೆ. ನಾನೂ ಈಗ ಸಾಯ್ತೀನಿ. ಅವರ ಕಡೇ ಮಾತು ಹೇಳಿ ಸಾಯ್ತೀನಿ...''

ಪ್ರಶಾಂತಿ ಕುಸಿದು, ಸೂಗವ್ವನ ಬಾಯ ಹತ್ತಿರ ಸರಿದಳು. ತೀರ ಕ್ಷೀಣದನಿ. ಉಸಿರು ನಿಲ್ಲುತ್ತಾ ಬಂದಿದೆ. ನಾನೀಗ ಪ್ರಯತ್ನಿಸಿದರೂ ಉಳಿಸಲಾರೆ.

''ಸೂಗವ್ವಾ, ಯಾರು... ಯಾರು... ಹೇಳು...''

''ಯವ್ವಾ, ಅವರೇ ಮನ್ನಿ ಬಂದಿದ್ರಲ್ಲಾ. ವಾರ ಉಳಕಂಡಿದ್ರಲ್ಲಾ... ಅದೇ ನಿಮ್ಮ ದೊಡ್ಡಪ್ಪನ ಇಬ್ರು ಮಕ್ಳು. 'ಸಣ್ಣಪ್ಪಾ, ಬಾಕ್ಲು ತೆಗಿ' ಅಂತ ತೆಗಿಸಿ ಒಳಾಕೆ ಬಂದ್ರು. ಅಪ್ಪಾರಿಗೆ ಚೂರಿ ಹಾಕಿದ್ರು. ನಾನು ಬಾಯಿ ಬಿಟ್ಟೇನು ಅಂತ ನನಗೂ ಚೂರಿ ಹಾಕಿದ್ರು. ಫೋನು ಕಿಡಿಸಿದ್ರು, ಕರೆಂಟು ತೆಗಿದ್ರು. ಬಾಗ್ಲ ಚಿಲುಕಾ ಹಾಕ್ಯಂಡು ಹೋದ್ರು. ಹತ್ರ ಮನಿಗಳಿಲ್ಲ. ಚೀರಿಕ್ಯಂಡ್ರೂ ಯಾರೂ ಬರಲಿಲ್ಲ. ಅಪ್ಪಾರು ಸಾಯಬೇಕಾರೆ ನಿಮಗೆ ಹೇಳೂ ಅಂದ್ರವ್ವ. ಅದಕ್ಕೇ ಜೀವ ಹಿಡಕಂಡೀನಿ.''

''ಏನು ಸೂಗವ್ವಾ, ಹೇಳು...'' ಉಸಿರು ನಿಲ್ಲುತ್ತ ಬಂದಿತ್ತು. ಸೂಗವ್ವ ಪ್ರಯಾಸದಿಂದ ಬಾಯಿಬಿಟ್ಟಳು. ''ಅಪ್ಪಾರು, ಅವ್ವ ಅಚ್ಚಿದ ಬೆಂಕಿ ನಮ್ಮನೀನ ಸುಡ್ತು. ನನ್ನ ಸಾವಿಗೇ ಈ ಬೆಂಕಿ ನಂದಿಹೋಗ್ಲಿ. ಕೊಲೀ ಮಾಡಿದೋರು ಯಾರು ಅಂತ ಹೇಳಬ್ಯಾಡ್ರಿ. ಅವ್ರು ನನ್ನ ನೆಂಟ್ರೂ ಅಂತ ಯಾರಿಗೂ ಗೊತ್ತಿಲ್ಲ. ಅಣ್ಣನ ವಂಶ ಉಳೀಸಿ. ನನ್ನ ತಲಿಗೇ ದ್ವೇಷದ ಬೆಂಕಿ ಆರಿಹೋಗ್ಲಿ. ನೀವು ದೂರ ಹೋಗ್ರಿ, ಅಂದ್ರವ್ವ. ಅಪ್ಪಾರು ಅವರ್ನ...'', ಸೂಗವ್ವ ಶಾಶ್ವತವಾಗಿ ಮಾತು ನಿಲ್ಲಿಸಿ ಗೋಣು ಚೆಲ್ಲಿದಳು. ಪ್ರಶಾಂತಿ ಒಳ ಹೆಜ್ಜೆ ಇಡದೆ ಅಲ್ಲೇ ನಿಂತಳು. ಉಕ್ಕಿ ಬರುತ್ತಿ ಸಂಕಟ ತಡೆಯುತ್ತಾ, ಹೆಜ್ಜೆ ಎತ್ತಿಡುತ್ತಾ, ತೂ ಡುತ್ತಾ ಸಮೀಪದ ಇಸ್ಮಾಯಿಲ್‌ಸಾಬರ ಮ ಹೋಗಿ, ನಡುಗುವ ಕೈಯಿಂದ ಫೋನ್ ಪೊಲೀಸರಿಗೆ, ವಿರೂಪಾಕ್ಷಿಗೆ, ಶಿವಾನಂದನ ಫೋನ್ ಮಾಡಿ, ಬಾಗಿಲ ಹೊರಗೆ ಕುಸಿದು ಕೂತ ಅಪ್ಪನೇ ಹೇಳಿದ್ದ ಕಥೆ ಕಣ್ಣೆದುರು ಸುಳಿಯಿತು.

ದೇವಲಾಪುರದ ಗೌಡ ಚೆನ್ನಾರೆಡ್ಡಿ ಆರ ಎತ್ತರದ ಆಜಾನುಬಾಹು ಮನುಷ್ಯ. ಎಂಥ ಕ್ರೂರಿ ಅಂದರೆ, ಅವನ ಹೆಸರು ಹೇಳಿದರ ಸಾಕು, ದೇವಲಾಪುರ ಸುತ್ತಮುತ್ತಲ ಮಟ ಜೌಕು, ಉಪ್ಪಾರಳ್ಳಿ, ದೇವಸಮುದ್ರದ ಜ ತ್ತತ್ತರ ನಡುಗುತ್ತಿದ್ದರು. ಅವನಿಗೆ ಎದುರಾದವ ಬಣವೆ ಹತ್ತಿ ಉರೀತಿತ್ತು. ಅವರ ಮನೆಯಾ ಹರೇದ ಹೆಣ್ಣುಮಕ್ಳು ಮಾನ ಕಳಕಂ ಸಾಯುತ್ತಿದ್ದರು. ಎದುರು ನಿಂತೋ ಮನಿಮಾರು ಮುಳುಗಿ ಹೋಗುತ್ತಿತ್ತು. ಅವ ಕಣ್ಣಿಗೆ ಬಿದ್ದ ಯಾವ ಹೆಣ್ಣೂ ಮರ್ಯಾದೆಯ ಬಾಳುವಂತಿರಲಿಲ್ಲ. ಹೆಂಡತಿ ದಾಕ್ಷಾಣ ಪರಮ ಸಾಧ್ವಿ. ಮೂರುಮಕ್ಕಳನ್ನು ಮಣ್ಣಿಗಿಟ್ಟ ಉರುಕುಂದಿ ಈರಣ್ಣನಿಗೆ ಹರಕೆ ಹೊತ್ತು ಹಡೆ ಮಗ ವೀರಾರೆಡ್ಡಿಗೆ ನಾಲ್ಕನೇ ವರ ನಡೀತಿದ್ದಾಗ ಕಟ್ಟಿಗೆ ರಾಶಿಯಲ್ಲಿದ್ದ ಹಾವು ಆಕೆ ಸತ್ತಳು. ಊರಿಗೂರೇ ಅಯ್ಯೋ ಅಂದಿತ್ತು

ಲೀಲಾದೇವಿ ವ್ಯವಹಾರಕ್ಕೆಂದು ಆದೋ ಹೋಗಿದ್ದ ಚೆನ್ನಾರೆಡ್ಡಿ, ಸುಮಂಗಳಮ್ಮನ ಹಿಡಿದಿದ್ದು ಅನಿರೀಕ್ಷಿತ. ಆಂಧ್ರದ ಕುಖ ನಕ್ಸಲೈಟ್ ವಾಸಿರೆಡ್ಡಿಗಾರು, ಪೊಲೀಸ್ ದ ಯಲ್ಲಿ ಗುಂಡೇಟು ತಿಂದು ಸಾಯುವಾಗ ಗೆಳೆ ವೆಂಕಟೇಶ್ವರಲುಗೆ ಹೇಳಿದ್ದನಂತೆ. ''ನ ಮಕ್ಕಳೂ ನಕ್ಸಲೈಟ್ ಆಗೋದು ಬೇಡ. ಮಗಳ ಲಗ್ನ ಮಾಡಿ ಅವಳ ಜೊತೆಗೇ ಇಟ್ಟ ತಮ್ಮಂದಿರನ್ನೂ ಇಲ್ಲಿಂದ ದೂರ ಕಳಿಸಿಬಿಡು.''

ಸುಮಂಗಳಮ್ಮ ತುಂಬಾ ಚೆಲುವೆ. ಬಿಡಿಕಾಸಿಗೂ ಗತಿ ಇಲ್ಲದ ಹೆಣ್ಣಿಗೆ ಗಂಡಾಗಿ ಸಿಕ್ಕಿದವ, ಚಿನ್ನಾರೆಡ್ಡಿ. ಅಪರೂಪದ ಸುಂದರಿಯ ಕೈ ಹಿಡಿದು, ಇಬ್ಬರು ಭಾವಮೈದುನರೊಡನೆ ದೇವಲಾಪುರಕ್ಕೆ ಬಂದ ಚಿನ್ನಾರೆಡ್ಡಿ, ಹೆಂಡತಿಯ ದಾಸಾನುದಾಸನಾಗಿಬಿಟ್ಟ. ಅವಳು ಹೇಳಿದಂತೆ ಕೇಳುವ ಗುಲಾಮನಾಗಿಬಿಟ್ಟ. ನರಭಕ್ಷಕ ಹುಲಿಯಂತಿದ್ದ ಗೌಡನನ್ನು ಮೂಗುದಾಣ ಹಾಕಿ ಕುಣಿಸತೊಡಗಿದಳು ಸುಮಂಗಳಮ್ಮ. ಅದ್ಯಾವ ನಾರುಬೇರು ತಂದು ಗೌಡನ ತಲೆಗೆ ತಿಕ್ಕಿದ್ದಳೋ, ಸುತ್ತಮುತ್ತಲ ಹೆಣ್ಣುಗಳು ಮರ್ಯಾದೆಯಾಗಿ ಬದುಕಿ ನಿಟ್ಟುಸಿರುಬಿಟ್ಟವು.

ಆದರೆ ಗೌಡನ ಇನ್ನುಳಿದ ಕ್ರೌರ್ಯಗಳು ಇನ್ನಷ್ಟು ಜೋರಿನಿಂದ ಮುಂದುವರೆದವು. ಗೌಡನ ಬಡ್ಡಿ, ಚಕ್ರಬಡ್ಡಿಗೆ ಸಿಕ್ಕಿ ಮನೆ ಮಾರು ಕಳೆದುಕೊಂಡವರೆಷ್ಟೋ... ಜೀತಕ್ಕೆ ಬಿದ್ದು ಗಾಣದೆತ್ತಿನಂತೆ ದುಡಿಯತೊಡಗಿದವರೆಷ್ಟೋ... ಗೌಡನ ಭಾವಮೈದುನರು ಈರನ್ನ, ತಿಕ್ಕನ್ನ ಮೀಸೆ ತಿರುವಿ ರಸ್ತೆಯಲ್ಲಿ ನಡೆಯತೊಡಗಿದರೆ ಜನ ಕಣ್ತಪ್ಪಿಸಿ ಅವಿತುಕೊಳ್ಳುತ್ತಿದ್ದರು. ಗೌಡನ ಅನ್ಯಾಯಕ್ಕೆ ಪೊಲೀಸರಿಗೆ ದೂರು ಕೊಟ್ಟ ಜನ ಇದ್ದಕ್ಕಿದ್ದಂತೆ ಕಣ್ಮರೆಯಾಗಿಬಿಡುತ್ತಿದ್ದರು. ಪೊಲೀಸರಂತೂ ಗೌಡನ ಎಂಜಲು ತಿಂದು ತಣ್ಣಗೆ ಕುಳಿತುಬಿಟ್ಟಿದ್ದರು.

ಸುಮಂಗಳಮ್ಮನ ಹದ್ದಿನ ಕಣ್ಣು ವೀರಾರೆಡ್ಡಿಯ ಮೇಲೆ ಬಿತ್ತು. ವಯಸ್ಸು ನಾಲ್ಕಾದರೂ ತಂದೆಯ ಮೈಕಟ್ಟು ಪಡೆದ ಹುಡುಗ ವಯಸ್ಸಿಗೆ ಮೀರಿ ಬೆಳೆದಿದ್ದ. ಇವನು ನನ್ನ ಸವತಿಯ ಮಗ. ಗಂಡನ ಆಸ್ತಿಗೆ ಹಕ್ಕುದಾರ ಎಂಬ ಅಸಮಾಧಾನಕ್ಕೆ, ಮಗು ವೀರಾರೆಡ್ಡಿ ಚಿತ್ರಹಿಂಸೆ ಅನುಭವಿಸತೊಡಗಿದ. ಹಳಸಿದ್ದು, ಅರೆಹೊಟ್ಟೆ ಹಾಕಿದರೂ ಸೊಂಪಾಗಿ ಬೆಳೆಯುತ್ತಿದ್ದ ಹುಡುಗ ಅವಳ ಕಣ್ಣಿಷ್ಟು ಕುಕ್ಕಿದ. ಗಂಡನಿಗೆ ಚಾಡಿ ಹೇಳಿ ಯಾವ ಪರಿ ಹೊಡೆಸುತ್ತಿದ್ದಳೆಂದರೆ, ಅಜಾನುಬಾಹು



ಗೌಡ ತನ್ನ ಪ್ರತಿಸ್ಪರ್ಧಿಗೆ ಬಾರಿಸುವಂತೆ ಹೊಡೆದಾಗ, ಆ ಹಸುಗಂದ ಲಿವಿಲಿವಿ ಒದ್ದಾಡುತ್ತಿತ್ತು. ಮೈಯೆಲ್ಲಾ ರಣಗಾಯ. ಯಾವ ಔಷಧಿಯೂ ಇಲ್ಲದೆ ತನಗೆ ತಾನೇ ಮಾಯುತ್ತಿತ್ತು. ಗೌಡನಿಲ್ಲದಾಗ, ಈರನ್ನ, ತಿಕ್ಕನ್ನ ಬಡಿಯುತ್ತಿದ್ದರು. ಇನ್ಯಾರಾದರೂ ಆಗಿದ್ದರೆ ಸತ್ತೇ ಹೋಗುತ್ತಿದ್ದರೇನೋ? ವೀರಾರೆಡ್ಡಿ ಗಟ್ಟಿಪಿಂಡ. ಹೇಗೋ ಬದುಕಿ ಬಂದ. ಜೀತದಾಳಿಗಿಂತ ಕಡೆಯಾಗಿ ದುಡಿದರೂ, ಸಿಕ್ಕುತ್ತಿದ್ದುದು ಅರೆಹೊಟ್ಟೆ ಕೂಳು. ಅಪ್ಪ ಅನ್ನಿಸಿಕೊಂಡವ ಎಂದೂ ಎದೆಗವಚಿಕೊಳ್ಳಲಿಲ್ಲ. ಪ್ರೀತಿಯ ಮಾತಾಡಲಿಲ್ಲ. ಅಪ್ಪನ ಮುಖ ಕಂಡರೇ ಕೂಸು ಹೆದರಿ ಉಚ್ಚೆ ಹೊಯ್ದುಕೊಳ್ಳುತ್ತಿತ್ತು.

ಶಾಲೆಯ ಮುಖ ಕಾಣದೆ ಬೆಳೆದರೂ, ದೊಡ್ಡವನಾಗುತ್ತಿದ್ದಂತೆ ವೀರಾರೆಡ್ಡಿ ಚುರುಕಾದ. ಊರಾಗಳ ಜನರ ಪ್ರೀತಿ ಗಳಿಸಿ, ಅವರಿಟ್ಟ ಊಟ ಉಂಡು, ಮೈದುಂಬಿಕೊಂಡು ಬೆಳೆದ. ಕದ್ದು ಕಾಯಿ ಮಾರಿ, ದುಡ್ಡು ಸೇರಿಸಿ, ಅಪ್ಪ ಬಡಿದಾಗ ಔಷಧಿ ಕೊಂಡು ಹಚ್ಚಿದ. ಸವತಿಯ

ಮಗ ಸುಮಂಗಳಮ್ಮನ ಕಣ್ಣಿಗೆ ಮುಳ್ಳಾಗಿ ಬೆಳೆಯತೊಡಗಿದ. ಆಕೆಯ ಹೊಟ್ಟೆಯಲ್ಲಿ ಹುಟ್ಟಿದ ಸದಾಶಿವ ನರಪೇತಲ. ಬೆಳ್ಳಗೆ ತಿದ್ದಿ ತೀಡಿದ ಕಣ್ಣು, ಮೂಗು. ಆದರೆ ಕತ್ತಲಿಗೇ ಹೆದರಿ ಸಾಯುವ ಪುಕ್ಕಲ. ಸವತಿಯ ಮಗನ ಭೀಮಕಾಯ ಅವಳ ಕಣ್ಣುಕುಕ್ಕಿತು. ಇವನು ಬದುಕಿದ್ದರೆ ತನ್ನ ಮಗನಿಗೆ ಸಿಗುವ ಅರ್ಧ ಆಸ್ತಿಯೂ ಉಳಿಯಲ್ಲ. ಅವನೂ ಉಳಿಯಲ್ಲ ಎಂದು ಕಳವಳಿಸಿದಳು.

ಗೌಡ ತನ್ನ ಮಾತು ಕೇಳಿ ಮಗನಿಗೆ ಹೀನಾಮಾನಾ ಚಚ್ಚಿದರೂ, 'ಪಾಪ, ತಾಯಿಲ್ಲದ ಕೂಸು. ವಯಸ್ಸಿಗೆ ಬಂದ ಕೂಡಲೆ ಲಗ್ನ ಮಾಡಿ ಅರ್ಧ ಆಸ್ತಿ ಕೊಡ್ತೀನಿ' ಅಂದದ್ದು ಕೇಳಿ ಸುಮಂಗಳಮ್ಮನ ಹೊಟ್ಟೆಗೆ ಕೆಂಡ ಬಿದ್ದಂಗಾಗುತ್ತಿತ್ತು. ವೀರಾರೆಡ್ಡಿ ಎರಡು ಮುಧೋಳದ ಬೇಟೆನಾಯಿಗಳನ್ನು ಸಾಕಿದ್ದ. ಅವನ ಹೊಟ್ಟೆಗೇ ಕೂಳಿಲ್ಲ. ನಾಯಿಗಳ ಹೊಟ್ಟೆಗೆ ಏನು ಹಾಕುತ್ತಿದ್ದನೋ. ಅವನೂ, ನಾಯಿಗಳೂ ಸೊಂಪಾಗಿ ಬೆಳೆದಿದ್ದರು. ಅವನ ಕೊಲೆಗಾಗಿ ಈರನ್ನ, ತಿಕ್ಕನ್ನ ಹೊಂಚುಹಾಕಿ ಕಾದರೂ ವೀರಾರೆಡ್ಡಿ ಪಾರಾಗಿ ಬಿಡುತ್ತಿದ್ದ. ನಾಯಿಗಳೋ ಒಡೆಯನಿಗೆ ಬೆಂಗಾವಲಾಗಿ ನಿಂತಿದ್ದವು.

ಗಂಡನ ಮನಸ್ಸು ಕೆಡಿಸಿ, ಅವನನ್ನು ಹೊರಗೆ ದಬ್ಬುವ ಯೋಚನೆಯಿಂದ, ತನ್ನ ಮೈಗೆ ತಾನೇ ಗೀರಿ, ಉಟ್ಟ ಬಟ್ಟೆ ಹರಿದು, ತಲೆ ಕೆದರಿಕೊಂಡು ವೀರಾರೆಡ್ಡಿ ತನ್ನ ಮೇಲೆ ಬಲಾತ್ಕಾರ ಮಾಡಲು ಬಂದಿದ್ದ ಅಂತ ಸುಮಂಗಳಮ್ಮ ಹುಯಿಲೆಬ್ಬಿಸಿ ಗಲಾಟೆ ಮಾಡಿದಾಗ, ಹದಿನಾರರ ಮಗ ಸದಾಶಿವ ಹೇಸಿದ್ದ. ಅವನಿಗೆ ತಾಯಿಯ ಬಗ್ಗೆ ಹೇಸಿಗೆ. ಅಣ್ಣನ ಬಗ್ಗೆ ಅನುಕಂಪ. ಕದ್ದುಮುಚ್ಚಿ ಅಣ್ಣನಿಗೆ ದುಡ್ಡು ಕೊಡುತ್ತಿದ್ದ. ಆದರೆ ತಾಯಿ ತಂದೆಯರ ಬಳಿ ನಿಂತು ಮಾತಾಡುವ ತಾಕತ್ತು ಅವನಿಗಿರಲಿಲ್ಲ. ಹೆಂಡ್ತಿಯ ಮಾತು ಕೇಳಿ ಚೆನ್ನಾರೆಡ್ಡಿ ರಾಕ್ಷಸನಾಗಿಬಿಟ್ಟಿದ್ದ. ವೀರಾರೆಡ್ಡಿ



ಅಂದು ಅವನ ಕೈಗೆ ಸಿಕ್ಕಿದ್ದರೆ ಕೊಲೆಯಾಗಿಯೆ ಬಿಡುತ್ತಿದ್ದ. ಅವನಿಗ ಸದಾಶಿವನಿಂದಲೇ ಸುಳಿ ಸಿಕ್ಕಿ ಊರುಬಿಟ್ಟು ಓಡಿಹೋಗಿದ್ದ. ಸದಾಶಿ ಆಗಾಗ ಯಾರ ಕೈಲೋ ಅಣ್ಣನಿಗೆ ದುಡ್ಡು ಕಳಿಸುತ್ತಿದ್ದ

ಸವತಿಯ ಮಗ ಓಡಿಹೋದಾಗ ಸುಮಂಗಳ ಖುಷಿಯಾದರೂ, ಸತ್ತೇ ಹೋಗಿದ್ದರೆ ನಿಶ್ಚಿ ಳಾಗಿರುತ್ತಿದ್ದನಲ್ಲಾ ಅಂತ ಕಳವಳಿಸಿದ್ದಳು.

ಕಾಲು ಹೆಬ್ಬೆರಳಿಗೆ ಮುಳ್ಳು ಚುಚ್ಚಿ ಆ ಗಾಯ, ಕೀತು ಕಾಲಿಡೀ ಕೊಳೆತು, ಆಸ್ಪತ್ರೆಯ ಕಾಲು ಕತ್ತರಿಸಿಕೊಂಡು, ಹೆಳವನಾಗಿ ಮೂ ಸೇರಿದ ಚೆನ್ನಾರೆಡ್ಡಿಗೆ ಪಾಪಪ್ರಜ್ಞೆ ಕಾಡತೊ ಗಿತು. ಗಂಡನಿಗೆ ಎದುರು ಮಾತಾಡದ ದೈವ ದಾಕ್ಷಾಣಮ್ಮ ಇನ್ನಿಲ್ಲದೆ ನೆನಪಾಗತೊಡಗಿದ ಸಕ್ಕರೆ ಕಾಯಿಲೆ ಹೆಚ್ಚಾದಂತೆಲ್ಲಾ ಗ ಮತ್ತಗಾಗುತ್ತಾ ಹೋದ. ದಾಕ್ಷಾಣಮ್ಮ ಮಾಡಿದ ಅನ್ಯಾಯ ತನಗೀ ಗತಿ ತಂದಿದೆ ಎಂ ನಂಬಿದ. ಯಾರ್‍ಯಾರ ಬಳಿಯೋ, ವೀರಾ ಸಿಕ್ಕರೆ ಕಳಿಸಿ ಎಂದು ಹಲುಬತೊಡಗಿದ.

ಸದಾಶಿವನಿಂದಲೇ ವೀರಾರೆಡ್ಡಿಗೆ ಸ ಮುಟ್ಟಿ, ಆತ ಮನೆಗೆ ಬಂದ. ಗೌಡ ಅವನ

ತಪ್ಪಿ. ಕಣ್ಣೀರಿಟ್ಟು ಊರ ಹತ್ತು ಜನರ ಎದುರಿನಲ್ಲಿ ಇಬ್ಬರು ಮಕ್ಕಳಿಗೂ ಆಸ್ತಿ ಹಂಚಿದ. ಕುಡುತಿನಿ ಹಂಪನ ಗೌಡನ ಮಗಳನ್ನು ತಂದು ವೀರಾರೆಡ್ಡಿಗೆ ಲಗ್ನ ಮಾಡಿಸಿ, ಕಾಯಿಲೆ ಹೆಚ್ಚಿ ಆಸ್ಪತ್ರೆಯಲ್ಲಿ ನರಳಿ ಸತ್ತುಹೋದ.

ಚಿನ್ನಾರೆಡ್ಡಿ ಸತ್ತಮೇಲೆ ಊರಲ್ಲಿ ಎರಡು ಬಣಗಳಾದವು. ವೀರಾರೆಡ್ಡಿ, ಸುಮಂಗಳಮ್ಮ ಪರಸ್ಪರ ದ್ವೇಷದ ಬೆಂಕಿ ಕಾರಿದರು. ಪರಸ್ಪರರ ಬಣವೆಗೆ ಬೆಂಕಿ ಇಟ್ಟರು. ಒಂದು ದಿನ ಹೊರಗೆಲ್ಲೋ ಹೋಗಿದ್ದ ಈರನ್ನ, ತಿಕ್ಕನ್ನ ಕಣ್ಮರೆಯಾದರು. ಗಾಬರಿಯಾಗಿ ಪೊಲೀಸರಿಗೆ ದೂರು ಕೊಟ್ಟು ಹುಡುಕಿಸಿದರೂ ಸುಳಿವು, ಸಾಕ್ಷಿ ಸಿಗಲೇ ಇಲ್ಲ. ಕನಿಷ್ಠ ಹೆಣಗಳೂ ಸಿಗಲಿಲ್ಲ. ವೀರಾರೆಡ್ಡಿ, ತಾನು ಆ ಸಮಯದಲ್ಲಿ ಚಳ್ಳಗುರ್ಕಿ ಯರ್ರಿಸ್ವಾಮಿ ದರ್ಶನಕ್ಕೆ ಹೋಗಿದ್ದೆ ಎಂದು ಪುರಾವೆ ಒದಗಿಸಿದ. ತನಗೇನೂ ತಿಳಿಯದು ಎಂದು ಸ್ಪಷ್ಟವಾಗಿ ಹೇಳಿಬಿಟ್ಟ. ಎರಡೂ ಕಡೆ ಮೇದು ಪೊಲೀಸರು ತೆಪ್ಪಗಾಗಿಬಿಟ್ಟರು.

ಸುಮಂಗಳಮ್ಮ ಹುಚ್ಚಿಯಾಗಿಬಿಟ್ಟಳು. ''ನಿನ್ನ ಮನೆ ನಾಶವಾಗ. ದೊಡ್ಡರೋಗ ಬಡಿದು ಸಾಯಿ. ನಿನ್ನ ವಂಶ ನಿರ್ವಂಶವಾಗ. ನಿನ್ನ ಮನೆಗೆ ಬೆಂಕಿ ಬೀಳ...'' ಎಂದೆಲ್ಲಾ ಹಿಡಿ ಮಣ್ಣು ತೂರಿ ವೀರಾರೆಡ್ಡಿಗೆ ಶಾಪ ಹಾಕುತ್ತಾ, ಒಂದು ದಿನ ನೇಣುಬಿಗಿದು ಸತ್ತಳು.

ವೀರಾರೆಡ್ಡಿಯ ವೈರಿಗಳೆಲ್ಲಾ ನಿರ್ನಾಮವಾಗಿದ್ದರು. ಉಳಿದವನು ಸದಾಶಿವರೆಡ್ಡಿಯೊಬ್ಬನೇ. ಕಾಲೇಜು ಮೆಟ್ಟಲು ಹತ್ತಿ, ಓದು ನಿಲ್ಲಿಸಿ ಹಳ್ಳಿ ಸೇರಿದ್ದ ಸದಾಶಿವರೆಡ್ಡಿ, ಪರಮ ಸಾತ್ವಿಕ. ಒಂದು ಹುಳವನ್ನೂ ಸಾಯಿಸದ ಅಹಿಂಸಾವಾದಿ.

ವೀರಾರೆಡ್ಡಿ, ''ಹೆಣ್ಣುಗ್ಯಾ ನನಮಗನೆ, ನರಪೇತಲ. ನಮ್ಮಪ್ಪನಂತ ಹುಲೀ ಹೊಟ್ಟ್ಯಾಗೆ ಹುಟ್ಟಿದೋನಲ್ಲ. ಯಾರೋ ಬ್ಯಾರೆಯೋರಿಗೆ ಹುಟ್ಟಿದ ಬೆರಕೀ ನನ್ಮಗ'' ಅಂತ ಅಪಹಾಸ್ಯ ಮಾಡಿದ. ಸದಾಶಿವ, ಅವನ ಕಷ್ಟಗಳಿಗೆ ಆಗಿದ್ದವ, ಈಗ ತನ್ನ ಪಾಡಿಗೆ ತಾನು ಇದ್ದರೂ, ತಮ್ಮನನ್ನು ಉರಿಉರಿಸಿ ಗೋಳಾಡಿಸಿದ. ಸುಮಂಗಳಮ್ಮನ ಮಗ ಎಂದೇ ಆತ ದ್ವೇಷದ ಬೆಂಕಿ ಕಾರಿದ. ಕೊಯಿಲಿಗೆ ನಿಂತ ಹೊಲಕ್ಕ ಬೆಂಕಿ ಇಟ್ಟ. ಅವನ ಹೋರಿಗಳಿಗೆ ವಿಷ ಇಕ್ಕಿ ಸಾಯಿಸಿದ. ಸದಾಶಿವರೆಡ್ಡಿ ತಣ್ಣಗಿದ್ದು ಎಲ್ಲಾ ನುಂಗಿಕೊಂಡ. ಆತ ತಣ್ಣಗಾದಷ್ಟೂ ವೀರಾರೆಡ್ಡಿಯ ದ್ವೇಷ ಹೆಚ್ಚುತ್ತಲೇ ಹೋಯಿತು. ತನ್ನ ಅವ್ವ ಮಾಡಿದ ಅನ್ಯಾಯಕ್ಕೆ ಇದು ಶಿಕ್ಷೆ ಎಂದೇ ಭಾವಿಸಿ, ಕಷ್ಟಗಳನ್ನನುಭವಿಸುತ್ತಲೇ ಬಾಳಿದ ಸದಾಶಿವರೆಡ್ಡಿ, ಎಂದೂ ತಿರುಗೇಟು ಕೊಡಲೇ ಇಲ್ಲ.

ಸದಾಶಿವರೆಡ್ಡಿಯ ಹೆಂಡತಿ ಯರ್ರಮ್ಮ ಗಂಡನಂತೆಯೇ ಸಾಧು. ಮನೆಯಲ್ಲಿ ತನ್ನ ಪಾಡಿಗೆ ತಾನಿದ್ದ ಆಕೆ, ಒಮ್ಮೆ ಒಂಟಿಯಾಗಿ, ಊರ ಹೊರಗೆ, ವೀರಾರೆಡ್ಡಿಯ ಕೈಗೆ ಸಿಕ್ಕಿಬಿದ್ದಳು. ದ್ವೇಷದಿಂದ ಕುರುಡಾಗಿದ್ದ ವೀರಾರೆಡ್ಡಿ, ಅವಳನ್ನು ಕೆಡಿಸಿ ಅಟ್ಟಹಾಸ ಮಾಡಿದ್ದ. ಯರ್ರಮ್ಮ ಬದುಕಲಾರದೆ ಬಾವಿಗೆ ಹಾರಿಕೊಂಡಿದ್ದಳು.

ಇದುವರೆಗೂ ನಿರ್ಲಿಪ್ತನಂತಿದ್ದ ಸದಾಶಿವರೆಡ್ಡಿ ತತ್ತರಿಸಿಬಿಟ್ಟ. ಹದಿನಾರರ ಮಗಳು ಪ್ರಶಾಂತಿ, ಹತ್ತರ ಮಗ ವಿರೂಪಾಕ್ಷ ಈ ದ್ವೇಷದ ಬೆಂಕಿಗೆ ನಲುಗಬಾರದು ಎಂದು ನಿರ್ಧರಿಸಿದವನೇ, ಮಾವನಮನೆ ಸೇರಿ ಅಲ್ಲಿಂದಲೇ ತನ್ನೆಲ್ಲ ಆಸ್ತಿಯನ್ನು ಮಾರಿ, ಬಳ್ಳಾರಿ ಸೇರಿದ. ಮಗಳು ಪ್ರಶಾಂತಿ ಓದಿ ಡಾಕ್ಟರಾಗಿ ಡಾಕ್ಟರ ಕೈ ಹಿಡಿದಳು. ವಿರೂಪಾಕ್ಷ ಲಾ ಓದುತ್ತಿದ್ದ.

ಎಷ್ಟೋ ವರ್ಷಗಳ ನಂತರ ಸದಾಶಿವರೆಡ್ಡಿ, ವೀರಾರೆಡ್ಡಿ ಮುಖಾಮುಖಿಯಾದರು. ಹೆಂಡತಿ ಹಂಪಮ್ಮನ ಕ್ಷಯರೋಗಕ್ಕೆ ಚಿಕಿತ್ಸೆ ಪಡೆಯಲು ಬಳ್ಳಾರಿಗೆ ಬಂದವನು, ಆಕಸ್ಮಿಕವಾಗಿ ತಮ್ಮನನ್ನು ಕಂಡಾಗ ವಿಶ್ವಾಸದಿಂದಲೇ ಮಾತಾಡಿಸಿದ. ಚಿಕಿತ್ಸೆಗೆ ತಮ್ಮನ ಸಹಕಾರ ಪಡೆದ. ತಮ್ಮನ ಮನೆಯಲ್ಲಿ, ಇಬ್ಬರು ಮಕ್ಕಳೊಂದಿಗೆ ಒಂದು ವಾರ ತಂಗಿದ್ದು ಆಸ್ಪತ್ರೆಗೆ ಓಡಾಡಿದ. ಸದ್ಯ ಹಳೇ

ದ್ವೇಷ ನಂದಿಹೋಗಿದೆ ಎಂದು ಸದಾಶಿವರೆಡ್ಡಿ ಖುಷಿಯಾಗಿಬಿಟ್ಟ. 'ಒಮ್ಮೆ ನಾವೆಲ್ಲ ಊರಿಗೆ ಹೋಗಿ ಬರೋಣ. ವಿರುಪಾಕ್ಷಿಗೆ ಹಂಪಮ್ಮನ ಅಣ್ಣನ ಮಗಳು ಲಕ್ಷ್ಮಿ ಬಂದಿದ್ದಳಲ್ಲ... ಅವಳನ್ನು ತಂದುಕೊಂಡರೆ ಹೇಗೆ....?' ಎಂದೆಲ್ಲಾ ಮಗಳ ಮುಂದೆ ಚರ್ಚಿಸಿ ಖುಷಿಪಟ್ಟ.


ಇದಾಗಿ ಬರೀ ಏಳು ದಿನ. ವಿಶ್ವಾಸ ತೋರಿ ಸಹಾಯ ಪಡೆದು, ಮನೆಗೆ ಬಂದು ಉಂಡು ಹೋದವರು, ಬೆನ್ನಲ್ಲಿ ಇರಿದಿದ್ದಾರೆ. ಅಪ್ಪನಿಗೆ ಬೆಳ್ಳಗಿರುವುದೆಲ್ಲ ಹಾಲು. ಸುಲಭವಾಗಿ ನಂಬಿ ಬಿಟ್ಟಿದ್ದಾನೆ. ಅದಕ್ಕೆ ಇಂಥ ಭಾರೀ ಬೆಲೆ ತೆರಬೇಕಿತ್ತೇ? ಪ್ರಶಾಂತಿ ಬಿಕ್ಕಿ ಬಿಕ್ಕಿ ಅತ್ತಳು.


ಅಪ್ಪ, ಅಮ್ಮ ಇಬ್ಬರ ಸಾವಿಗೂ ಕಾರಣರಾದವರನ್ನು ನಾವು ಕ್ಷಮಿಸಬೇಕೇ? ಮೈಯಿಡೀ ಭಗಭಗ ಉರಿಯುತ್ತಿದೆ. ಅಪ್ಪನ ಕೊನೆಯ ಆಸೆಯನ್ನು ಈಡೇರಿಸಬೇಕೇ? ಪ್ರಶಾಂತಿ ದ್ವಂದ್ವದಲ್ಲಿ ಸಿಕ್ಕಿ ನರಳುತ್ತಿದ್ದಂತೇ, ಪೊಲೀಸ್ ಜೀಪ್ ಬಂದು ನಿಂತಿತು. ಪೊಲೀಸ್ ಅಧಿಕಾರಿಗಳು, ವಿಚಾರಣೆಯಲ್ಲಿ, 'ನಿಮಗೆ ಯಾರ ಮೇಲಾದರೂ ಅನುಮಾನವಿದೆಯೇ?' ಎಂದು ಪ್ರಶಾಂತಿಯನ್ನು ಕೇಳಿದಾಗ, ಪ್ರಶಾಂತಿ ನಿಧಾನವಾಗಿ ಆದರೆ ದೃಢವಾಗಿ ಹೇಳಿದಳು. "ಇಲ್ಲ. ನಮ್ಮಪ್ಪನಿಗೆ ಯಾರೂ ವೈರಿಗಳಿರಲಿಲ್ಲ. ಬೀರಿನ ಬಾಗಿಲು ತೆರೆದೇ ಇದೆ. ಹಣ, ಒಡವೆ ಬ್ಯಾಂಕ್ ಲಾಕರ್‌ನಲ್ಲಿವೆ. ದರೋಡೆಗೆಂದು ಬಂದವರು ನಿರೀಕ್ಷಿಸಿದಷ್ಟು ಸಿಗದೆ ಹತಾಶೆಯಿಂದ ಕೊಲೆ ಮಾಡಿರಬೇಕು."



ಇದು ವರೆಗೂ ನಿರ್ಲಿಪ್ತನಂತಿದ್ದ ಸದಾಶಿವ ರೆಡ್ಡಿ ತತ್ತರಿಸಿಬಿಟ್ಟ. ಹದಿನಾರರ ಮಗಳು ಪ್ರಶಾಂತಿ, ಹತ್ತರ ಮಗ ವಿರುಪಾಕ್ಷ ಈ ದ್ವೇಷದ ಬೆಂಕಿಗೆ ನಲುಗಬಾರದು ಎಂದು ನಿರ್ಧರಿಸಿದವನೇ ಮಾವನ ಮನೆ ಸೇರಿ ಅಲ್ಲಿಂದಲೇ ತನ್ನೆಲ್ಲ ಆಸ್ತಿಯನ್ನು ಮಾರಿ ಬಳ್ಳಾರಿ ಸೇರಿದ.

—ಜಿ. ಎಸ್. ಸುಶೀಲಾದೇವಿ ಆರ್. ರಾವ್





ಪ್ರವಾಹದ ವಿರುದ್ಧ 'ನಡೆದು' ಬಂದ ರಾಮಶೇಷ

– ಎ.ಎನ್. ವೆಂಕಟಲಕ್ಷ್ಮಿ

ಕಣ್ಣೊಡೆದ ಶಿಶುವೂ, 'ಅಮೆರಿಕಾ ಅಮೆರಿಕಾ' ಎಂದು ಅಳುತ್ತಿರುವಂತೆ ಭಾಸವಾಗುತ್ತಿರುವ ಇಂದಿನ ದಿನಗಳಲ್ಲಿ, ಅಮೆರಿಕಾದಲ್ಲಿನ 'ಫಲಭರಿತ' ಹುದ್ದೆ ಜೀವನಶೈಲಿಯನ್ನು ಬಿಟ್ಟುಕೊಟ್ಟು, ಸಂಸಾರಸಮೇತ ಮರಳಿಬಂದು ಮೈಸೂರಿನಲ್ಲಿ ನೆಲೆಯೂರಿರುವ ಗಣಕ ತಜ್ಞ, ಎಂ.ಆರ್. ರಾಮಶೇಷ ನಮ್ಮ ಈ ಸಲದ ಅತಿಥಿ.

ಊಟದ ಕೊನೆಯ ತುತ್ತೆತ್ತುವಾಗ, ಆಫೀಸಿನಲ್ಲಿ ಕಡತ ಹುಡುಕುವಾಗ, ಹರಡಿಕೊಂಡ ಹುರುಳೀಕಾಯಿಯ ನಾರು ಬಿಡಿಸುವಾಗ, ಕಡೆಗೆ ಕೆಂಪಗೆ ಹೊಳೆವ ಮೆಣಸಿನಕಾಯನ್ನು ಬಾಣಲೆಯಲ್ಲಿ ಹುರಿಯುವಾಗ, 'ಛೆ ಸಾಕಿದೆಲ್ಲ ಅಥವಾ ಯಾಕೆ ಇದೆಲ್ಲ' ಎನ್ನುವ ಭಾವವೊಂದು ಸುಳಿದುಹೋಗುವುದು ಅನೇಕರಿಗೆ ಚಿರಪರಿಚಿತ. ಪ್ರೀತಿಪಾತ್ರರನ್ನು ಮನೆಗೆ ಕರೆದು, ಸತ್ಕರಿಸಿ, ಲೋಕಾಭಿರಾಮವಾಗಿ ಹರಟೆ, ದೇಶದ ದುಃಸ್ಥಿತಿಯ ಬಗ್ಗೆ ದುಃಖಿಸಿ, 'ರಾಜ್ ಬಿಡುಗಡೆ ಯಾವಾಗ? ಕಾಶ್ಮೀರದ ಸಮಸ್ಯೆಗೆ ಪರಿಹಾರ ಎಂತು? ಹೇಗೆ?' ಎಂದೆಲ್ಲಾ ಚರ್ಚಿಸುವಂತೆ ಶ್ರದ್ಧೆಯಿಂದ ಜೀವನ ನಡೆಸುತ್ತಿರುವಾಗಲೂ 'ಮೊಳೆಯದ ಮೂಕ ಮರ್ಮರಗಳಿಗೆ' ಕಿವಿಗೊಡುತ್ತಲೇ ಇರುತ್ತೇವೆ. 'ಸೃಷ್ಟಿಯ ರಹಸ್ಯ', 'ಬದುಕಿನ ಉದ್ದೇಶ', ಎಂದೆಲ್ಲಾ ದೊಡ್ಡ ಶಬ್ದಗಳಲ್ಲಿ ಚಿಂತಿಸುವುದರೊಂದಿಗೆ, ನಿತ್ಯಜೀವಿತಕ್ಕೂ ಆಧ್ಯಾತ್ಮಿಕ ಸ್ಪರ್ಶವಿರುವುದು ಭಾರತೀಯ ಜೀವನಕ್ರಮ.

ದಿನವಿಡೀ ಕಾಸಿಗೆ ಕಾಸು ಲೆಕ್ಕ ಹಾಕಿ ವ್ಯಾಪಾರ ಮಾಡುವ ಕೋಮಟಶೆಟ್ಟರು ಹರಿದಾಸರ ಪ್ರವಚನ ಕೇಳುತ್ತಾ ಉತ್ಕಂಠಿತರಾಗಿ ಕಣ್ಣೀರು ಹರಿಸುವುದು, ಅತ್ಯುನ್ನತ ಅಧಿಕಾರಿಯೊಬ್ಬರು ಒಮ್ಮೆಲೆ ಬೇಸತ್ತು

ಹಿಮಾಲಯಕ್ಕೆ ಹೋಗುವುದು, ಗ್ಲಾಮರ್ ತಾರೆಯರು ಆಶ್ರಮ, ಕುಟೀರಗಳಲ್ಲಿ ತಂಗಿದ್ದುಬರುವುದು ನಮ್ಮಲ್ಲಿ ಸರ್ವೇಸಾಮಾನ್ಯ. ಐಹಿಕ ಸುಖಭೋಗಗಳ ನಡುವೆ, ಎಚ್ಚರಿಕೆಯಿಂದ ಸಿದ್ಧಪಡಿಸಿಕೊಂಡ ಬಾಲ್ಯ-ಒಳ್ಳೆಯ ಶಿಕ್ಷಣ-ವೀಸಾ-ಬಡರಾಷ್ಟ್ರಗಳ 'ಎಲ್‌ಡೊರ್‍ಯಾಡೊ' ಆಗಿರುವ ಅಮೆರಿಕಕ್ಕೆ ಪ್ರಯಾಣ-ಅಲ್ಲೊಂದು ಗ್ರೀನ್‌ಕಾರ್ಡ್-ಇವೆಲ್ಲವುಗಳ ಯೋಜನೆಯಲ್ಲಿ ಮಿಂಚಿ ಮರೆಯಾಗುವ ಈ 'ವಿರಕ್ತತೆ', ಭೋರ್ಗರೆದು ಸಾಗುವ ಶ್ರೀಸಾಮಾನ್ಯನ ಬದುಕಿನಲ್ಲಿ ಆಗೀಗ correctiveನಂತೆ ಕೆಲಸ ಮಾಡಬಲ್ಲುದೂ ಹೌದು. 'ಜಗವೆಲ್ಲ ಮಲಗಿರಲು ಅವನೊಬ್ಬನೆದ್ದಿದ್ದ' (ಅದಷ್ಟೇ ಅಲ್ಲ, ಈ ಹೊತ್ತಿ ಸರಿ ಹೊಂದುವಂತೆ, 'ಎದ್ದು ನಡೆದಿದ್ದ') ಎಂದು ಬಣ್ಣಿಸಬಹುದಾದ ಅಪರೂಪದ ವ್ಯಕ್ತಿಗಳನ್ನ ಆಸಕ್ತಿಯಿಂದ ನಿರುಕಿಸುತ್ತೇವೆ.

ಅಂತಹವರಲ್ಲೊಬ್ಬರು ಡಾ. ಎಂ.ಆರ್. ರಾಮಶೇಷ. ಎಪ್ಪತ್ತರ ದಶಕದಲ್ಲಿ-ಆಗಿನ್ನೂ 'ಕಂಪ್ಯೂಟರ ಕ್ರಾಂತಿ'ಯ ಸೊಲ್ಲೂ ಇರಲಿಲ್ಲ-ಇಂಡಿಯದ ಎಲ್ಲ ಏರ್‌ಪೋರ್ಟ್‌ಗಳ ಕಾರ್ಯವೈಖರಿಯನ್ನ ಗಣಕೀಕೃತಗೊಳಿಸಿದ ಪ್ರಖರ ಬುದ್ಧಿಶಾಲಿಯ ಪ್ರೋಗ್ರಾಮರ್‌ಗಳಲ್ಲಿ ಒಬ್ಬರಾದ ರಾಮಶೇಷ ಹದಿಮೂರುವರ್ಷ ಝುಗಮಗಿಸುವ ಅಮೆರಿಕಾದಲ್ಲಿದ್ದವರು, ಒಂದು ತಣ್ಣನೆ ಮುಂಜಾನೆ, (ಅಥವ ಸಂಜೆ?!) 'ಸಾಕಿದೆಲ್ಲ' ಅಂದುಕೊಂಡು ಮೈಸೂರಿಗೆ ಬಂದುಬಿಟ್ಟರು! ಬಂದವರು, ಅಲ್ಲಿ ಎರಡು ಗಂಟೆ ಪಾಠ ಹೇಳುವುದು, ಇನ್ನೊಂದು ನಾಲ್ಕು ಗಂಟೆ ಓದು, ಮತ್ತೂ ಬೇಜಾರಾದರೆ ಪುಟ್ಟ ಕೈತೋಟದ ಕೆಲಸ ಎಂದೆಲ್ಲಾ ತಮ್ಮ ಜೀವನ ನಿರ್ದೇಶಿಸಿಕೊಂಡದ್ದು ಕೌತುಕದ ಸಂಗತಿಯೇ. 'ನನ್ನ ಕಸಿನ ಅಮೆರಿಕಾದಲ್ಲಿದ್ದಾನೆ. ನನ್ನ ಮಗ ಅಲ್ಲಿಯೇ ಕೆಲಸ ಗಿಟ್ಟಿಸಿದ; ಮಗಳಿಗೆ ಸದ್ಯ ಸ್ಟೇಟ್ಸ್‌ನಲ್ಲಿರೋ ಗಂಡು ಎಂಟೇ ದಿನಗಳ ಗಡುವಲ್ಲಿ ಸಿಕ್ಕು, ಹೂಸರ ಎತ್ತಿದ ಹಾಗೆ ಮದುವೆಯಾಗಿಬಿಟ್ಟಿತು, ಇನ್ನೇನಿದೆ ಬಿಡಿ ಎಂದೆಲ್ಲಾ ಬಡಬಡಿಸುವವರ ನಡುವೆ ಅವರೊಂದು ಅದ್ಭುತ ಅಪವಾದ.

''ಇದಕ್ಕೆಲ್ಲಾ ನನ್ನ ಮನೋಧರ್ಮ (temperament) ವೇ ಕಾರಣ'' ಅನ್ನುತ್ತಾರೆ ಅವರು. ''ಏನನ್ನೇ ಆಗಲಿ, ಪಟ್ಟುಹಿಡಿದು ಸಾಧಿಸಿ, ಅದರಲ್ಲಿನ 'ಸತ್ವ' (ಅದಕ್ಕೆ 'ಶಿವ', 'ಪರಬ್ರಹ್ಮವಸ್ತು', ಅಂತ ಏನೇ ಹೆಸರಿಡಿ)ವನ್ನು ಕಂಡುಕೊಂಡ ಮೇಲೆ ನನಗದರಲ್ಲಿ ಆಸಕ್ತಿ ಮುಗಿದುಹೋಗುತ್ತದೆ, ಆಟಿಕೆಯನ್ನು ಮನಸೋಕ್ತ ಆಡಿ, ಬಿಚ್ಚಿನೋಡಿ, ಮತ್ತೆ ಜೋಡಿಸಿ, ಕಡೆಗೆ ಎತ್ತೊಗೆಯುವ ಮಗುವಿನಂತೆ'' ಎನ್ನುವ ಅವರ ವಿಚಾರಧಾರೆ ವಿಭಿನ್ನ.

''ಪೊಲೀಸರ ಮಕ್ಕಳು ಸಾಮಾನ್ಯವಾಗಿ ಶುದ್ಧ ಶುಂಠಗಳು, ಪುಂಡರೂ ಆಗಿರುತ್ತಾರೆ ಎಂ ತಳವೂರಿರುವ ಅಭಿಪ್ರಾಯ ಸುಳ್ಳಾಗಿಸುವಂತೆ ಮಕ್ಕಳನ್ನು ಬೆಳೆಸಬೇಕು, ಅವರಿಗೆ ಒಳ್ಳೆಯ ವಿದ್ಯಾಭ್ಯಾ ಕೊಡಿಸಬೇಕು ಎಂದು ಹಟತೊಟ್ಟ ನಮ್ಮ ತಂದೆ, ತಮ್ಮ ಬಡ್ತಿಯನ್ನೂ ನಿರ್ಲಕ್ಷಿಸಿ, ಮಕ್ಕಳಿಗೆ ಉತ್ತಮ ಶಿಕ್ಷಣ ಸಿಗುವ ಜಾಗಗಳಿಗೆ ವರ್ಗ ಮಾಡಿಸಿಕೊಳ್ಳುತ್ತಾ ಹೋದದ್ದು ನನ್ನ ಮನಸ್ಸಿನಲ್ಲೊಂದು ಮಾರ್ಮಿ ಮಾದರಿಯಾಗಿ ನಿಂತಿದೆ. ಅಪ್ಪನ ನಿರೀಕ್ಷೆ ಹುಸಿ ಮಾಡದೆ, ನಾವೆಲ್ಲ ಬೆಳೆದು ದೊಡ್ಡ ದೊಡ್ಡ ಪದ ಪಡೆದೆವು. ಎಲೆಕ್ಟ್ರಿಕಲ್ ಇಂಜನಿಯರಿಂಗ್ ಪರೀಕ್ಷೆಯ 'ಕಂಪ್ಯೂಟರ್ ಪೇಪರ್'ನಲ್ಲಿ 'ಡಿ' ಗ್ರೇ ಬಂದಿದ್ದನ್ನು ಸವಾಲಾಗಿ ಸ್ವೀಕರಿಸಿದ ನಾನು, ಸಂದರ್ಶನಗಳಲ್ಲೆಲ್ಲ 'ಕಂಪ್ಯೂಟರ್ ಕುರಿತೇ ಪ್ರಶ್ನೆ ಕೇ ಎಂದು ಜುಲುಮೆ ಮಾಡಿ, ಸಂದರ್ಶಕರು ತೃಪ್ತಿ ಹೊಂದುವಂತೆ ಉತ್ತರಿಸಿ, ಗೆದ್ದೆ. ವಿವಿಧ ಕಂಪೆನಿಗಳ ಸೆಕ್ರೆಟರಿಯೇಟ್‌ನಲ್ಲಿ ದುಡಿದು 1989ರಲ್ಲಿ ಅಮೆರಿಕಾಗೆ ಹಾರಿದೆ. ನಾನಲ್ಲಿ ಹೋದದ್ದು ದು ಮಾಡಿಕೊಂಡು ಬರುವೆ ಅಂತಲೇ, ಆದರೆ ಎಲ್ಲೋ ಒಂದು ಕಡೆ ನನಗೆ ಬೇಕಾದ್ದು ಇದಲ್ಲ ಅನ್ನಿಸಿತು''.

ದೈತ್ಯನಾಡಿನ ಐಷಾರಾಮ, ಕಾರು, ಬಂಗಲೆಗಳನ್ನೆಲ್ಲಾ ಬದಿಗೆ ಸರಿಸಿ, ಮತ್ತದೇ ರೋಗರುಜಿನ



ಶುಭಾ, ಮಕ್ಕಳು - ಧೀವತ್ಸ ಮತ್ತು ಮೃಣ್ಮಯರೊಂದಿಗೆ

ಬೇಡೆಂದೆನಿಸಿಕೊಂಡ, ಭ್ರಷ್ಟಾಚಾರ, ಮೈಗಳ್ಳತನ ತಾಂಡವವಾಡುತ್ತಿರುವ 'ಬಡ' ಭಾರತಕ್ಕೆ ಮರಳಿ ಬಂದುಬಿಡಬೇಕೆನಿಸಿತು ಅವರಿಗೆ. ಮೈಸೂರಲ್ಲೊಂದು ಮನೆ, ಬಸ್, ಟ್ರೈನ್‌ಗಳಲ್ಲಿ ಓಡಾಟ... ಹತ್ತಿರದ ಶಾಲೆಗಳಲ್ಲೇ ಮಕ್ಕಳ ವಿದ್ಯಾಭ್ಯಾಸ ಎಲ್ಲದಕ್ಕೆ ಮನಸ್ಸು ಹೊಂದಿಕೊಂಡಿತು. 'ನೀವು ಈ ನಿರ್ಣಯ ತೆಗೆದುಕೊಂಡಾಗ ನಿಮ್ಮ ಮನೆಮಂದಿ ಸಹಕರಿಸಿದ್ದು ಹೆಚ್ಚಲ್ಲವೇ?' ಎಂದು ಕೇಳಿದರೆ ಅವರ ಉತ್ತರ: ''ನಾವದನ್ನು ಹಾಗೆ ಲಾಭ-ನಷ್ಟ, ಅನುಕೂಲ-ಅನಾನುಕೂಲ ಎಂಬ ದೃಷ್ಟಿಕೋನದಲ್ಲಿ ನೋಡಿಯೇ ಇಲ್ಲ. ನನ್ನ ಪತ್ನಿ ಶುಭಾ ಕೂಡ ಬೇರೊಂದು ಬಿಂದುವಿನಿಂದ ಪ್ರಾರಂಭಿಸಿ, ಕಡೆಗೆ ನನಗೆ ಒಪ್ಪಿತವಾಗಿರುವ ಈ ನಿಲುವಿಗೇ ಅಂಟಿಕೊಳ್ಳುವಾಕೆ. ಇನ್ನು ನಮ್ಮ ಆಧ್ಯಾತ್ಮಿಕ ಚಿಂತನೆಯಲ್ಲಿರುವ ವಿದ್ಯೆ (= ಆತ್ಮೋನ್ನತಿ)ಯ ಪರಿಕಲ್ಪನೆಗೆ ಹೊಂದುವ ಶಿಕ್ಷಣಕ್ಕಾಗಿ ಭಾರತವೇ ತಕ್ಕ ಜಾಗ ಅನಿಸಿತು. ಇಲ್ಲಿ ನನ್ನ ತಂದೆಯವರ 'ಮಾದರಿ' ಬಹುಶಃ ಮತ್ತೆ ಕೆಲಸ ಮಾಡಿರಬೇಕು.''

''ಅಮೆರಿಕದಲ್ಲಿರುವುದೆಲ್ಲಾ ಅತ್ಯದ್ಭುತ ಎಂಬ ಕೂಗು ಸತ್ಯಕ್ಕೆ ದೂರ. ಅಲ್ಲಿ ಶಿಕ್ಷಣ ಕೊಡಮಾಡಲು ಒಳ್ಳೆಯ ಸಲಕರಣೆಗಳಿರಬಹುದು. ಶಿಸ್ತು, ಸಮಯಪ್ರಜ್ಞೆ ಇತ್ಯಾದಿ ಮೌಲ್ಯಗಳಿರಬಹುದು ಆದರೆ ಅದಷ್ಟೇ ಎಲ್ಲವೂ ಅಲ್ಲ. ಪ್ರತಿಭಾವಂತರಲ್ಲಿ, ಎಳೆಯರಲ್ಲಿ ಪ್ರಾಥಮಿಕ ಹಂತದಿಂದ, ಅಮೆರಿಕದಲ್ಲಿ ಒಳ್ಳೆಯ ಕೆಲಸ, ತೃಪ್ತಿ ಕೊಡುವ ಕೆರಿಯರ್, ಉತ್ತೇಜನದಾಯಕ ವಾತಾವರಣ ಇರುತ್ತೆ ಅನ್ನೋ ಯೋಚನೆಗಳನ್ನು ಬಿತ್ತಲಾಗುತ್ತದೆ. ಆದರೆ ಹೊರನಾಡಿನಲ್ಲಿರುವುದು, 'ಕೆಲಸವೇ ದೇವರು!' 'ಕೆಲಸದಲ್ಲೇ ಇಹ-ಪರ' ಎಂದು ಧೃತಿಗೆಡದೆ ಸಾಧಿಸುವ ಪರಂಪರೆ. ಅಂತಹ ಮೌಲ್ಯ ಪ್ರಜ್ಞೆಯನ್ನು ನಾವೆಲ್ಲಾ ಮನಸ್ಸು ಮಾಡಿದರೆ ಇಲ್ಲಿಯೇ ಸೃಷ್ಟಿಸಿಕೊಳ್ಳಬಹುದು!''

''ಬಡತನ, ಇಕ್ಕಟ್ಟು, ಅಭಾವ ಸಹ ವ್ಯಕ್ತಿತ್ವವನ್ನು ಬೆಳೆಸುತ್ತವೆ. ಸುತ್ತಲೂ ಮುಕ್ಕರಿಯುವ ಅಪಾರ ಸಂಪತ್ತಿನ ನಡುವೆಯೂ ಪ್ರತ್ಯೇಕತೆ ಕಾಯ್ದುಕೊಳ್ಳುವ, ಸಿರಿಯ ಕುರಿತು ತಿರಸ್ಕಾರ ಹೊಂದಿರುವ ನಮ್ಮ ಜನಕನಂತಹ ರಾಜರ್ಷಿಗಳಲ್ಲಿರುವ ದೃಷ್ಟಿಕೋನ ಅಮೆರಿಕದ ಏಕಮೇವಾದ್ವಿತೀಯ ಸಂಪನ್ನ ಬಿಲ್‌ಗೇಟ್‌ನಲ್ಲಿ ಇಲ್ಲ''.

ನಮ್ಮಲ್ಲಿ, ಯಾವ ಬಿಕ್ಕಟ್ಟು, ಬಿಗಡಾಯಿಸಿದ ಪರಿಸ್ಥಿತಿ ಬಂದರೂ, ಆಯ್ದ ಕೆಲವೇ ಮಂದಿಯ ಕದತಟ್ಟಿ, ಮೈಕ್ ಹಿಡಿದು, ಅವರ ಅತಿಬುದ್ಧಿವಂತಿಕೆಯ, ಕೆಲವೊಮ್ಮೆ ಕುಚೋದ್ಯದ ಉತ್ತರ ಕೇಳಿ ಕೃತಾರ್ಥರಾಗುವ ಬೌದ್ಧಿಕ ದಿವಾಳಿತನವಿದೆ. ಅಂತಹವರ ನಡುವೆ ರಾಮಶೇಷ ಅವರು ಬೇರೆ ಬೇರೆ ಸಮಸ್ಯೆಗಳಿಗೆ ಪರಿಹಾರವಾಗಿ ಮಾಡಿದ 'ಲೌಡ್ ಥಿಂಕಿಂಗ್' ಕುತೂಹಲಕರವಾಗಿದೆ.

''ನಮ್ಮ ಈ ಜೀವನಕ್ಕೆ ಆದಿಭೌತಿಕ, ಆದಿದೈಹಿಕ ಮತ್ತು ಆಧ್ಯಾತ್ಮಿಕ ಸ್ತರಗಳಿವೆ ಎಂಬ ನಂಬಿಕೆ ನನ್ನದು. ನಮ್ಮ ಸುತ್ತಲಿನ ಭೌತಿಕ ಜಗತ್ತನ್ನು ವಿವರಿಸುವ, ವಿಶ್ಲೇಷಿಸುವ ಭೌತಶಾಸ್ತ್ರ ಕೂಡ ಕಟ್ಟಕಡೆಯ

'ಸತ್ಯ'ವಲ್ಲ, ಕೇವಲ 'ಭಾಸ' ಎಂಬುದು ನನ್ನನ್ನು ತುಂಬ ಪ್ರಭಾವಗೊಳಿಸಿದ ಪುಸ್ತಕಗಳಾದ ' Physic as a metaphor' ಮತ್ತು 'Tertium Organnum'. ಗಳಲ್ಲಿ ಇದೆ. ಈ ಚಿಂತಕರು, ನಮ ಪೌರ್ವಾತ್ಯ ಚಿಂತನೆಯನ್ನೇ ಇನ್ನೊಂದು ವಿಧದಲ್ಲಿ ಪುಷ್ಟಿಗೊಳಿಸುತ್ತಾರೆ. ಸಜೀವ ಜಗತ್ತಿಗೆ ಈಗ ಕಣ್ಣ ತೋರುವ ಮೂರನೇ ಆಯಾಮವಲ್ಲದೆ ನಾಲ್ಕನೇ ಆಯಾಮವೂ ಇದೆ, ಐದನೆಯದೊಂದು ಇರಬಹುದು ಎನ್ನುವುದು ರಷ್ಯನ್ ಭಾಷೆಯಲ್ಲಿ ಬರೆಯಲಾದ 'Tertium Organnum 'ನ ತಿರುಳ ಉದ್ದಗಲವಷ್ಟೇ ಇರುವ ಮರದ ಹಲಗೆಯ ಮೇಲೆ ತೆವಳುತ್ತಿರುವ ಹುಳುವಿಗೆ ಮೂರನೇ ಆಯಾಮದ ತಿರುಚಿಕೊಂಡಿರುವ ಒಂದು ಸ್ಪ್ರಿಂಗ್, ಹೇಗೆ ಬಿಂದು ಸಮುಚ್ಚಯವಾಗಿ ಕಾಣುತ್ತದೋ, ಅದರ ಕ ಮುಂದೆ ಮೇಲಿಂದ ಕೆಳಗೆ ಚಲಿಸುತ್ತಿರುವ ಮರ, ಮರದ ಚಿಗುರು, ಬಲಿತ ಎಲೆಗಳು ಹೇಗೆ ಬೇರೆ ಬೇ ಪ್ರತ್ಯೇಕ ಅಸ್ತಿತ್ವಗಳೆಂದು ಭಾಸವಾಗುತ್ತವೋ ಹಾಗೆ ಮೂರನೇ ಆಯಾಮವನ್ನು ಮಾತ್ರ ನೋಡು ಶಕ್ತಿಯುಳ್ಳ ನಾವು, ಜಗತ್ತನ್ನು ಅದರ ಅವಿಚ್ಛಿನ್ನ ಸ್ವರೂಪದಲ್ಲಿ ನೋಡಲಾಗದೇ ಒದ್ದಾಡುತ್ತೇವೆ. ಇ ಥೇಟ್ ಕುರುಡರು 'ಆನೆ'ಯನ್ನು ಅರ್ಥೈಸಿಕೊಂಡ ಸಂದರ್ಭ''

''ಸೃಷ್ಟಿಯ 'ಪರತತ್ವ' ಅರಿತುಕೊಂಡ ಮೇಲೆ ಕೊಳಕು, ದುರಾಸೆಯ ಜೀವನಕ್ಕಿಲ್ಲಿ ಎಡೆಯೇ ಇ ಮಂತ್ರಿ ನಿಸ್ಪೃಹನಾಗಿರಲಿ, ನಾವು ಆತನಿಂದ ಪ್ರಯೋಜನ ಹೊಂದಿ, ಅನುಕೂಲ ಗಳಿಸಿ, ಆಚೀ ನೋಡದೆ ಮಜವಾಗಿ ಜೀವನ ನಡೆಸುವಂತಾಗಲಿ ಎಂಬ ವಿತಂಡವಾದಕ್ಕಿಲ್ಲಿ ಆಸ್ಪದವಿಲ್ಲ. 'ನನ್ನ ಸುತ್ತಲಿನವರು' ಎಂಬ ಭಾವ ಮೈಗೂಡಿದ ಮೇಲೆ ನಾವು ಮಾಡಬಹುದಾದ ಒಳ್ಳೆಯ ಕೆಲಸಗ ಬಹಳಷ್ಟಿಲ್ಲದಿದ್ದರೂ ಹಾನಿ ಮಾತ್ರ ಬಹಳ ಕಡಿಮೆ ಪ್ರಮಾಣದಲ್ಲಿರುತ್ತದೆ. ಲಂಚ, ರುಷುವ ಸಂಪತ್ತಿನ ಕೇಂದ್ರೀಕರಣ, ಭ್ರಷ್ಟಾಚಾರ... ಇದೆಲ್ಲ ನಾವು ಹಣಕ್ಕೆ ನೀಡುವ ಅತಿಯಾ ಮಹತ್ವದಿಂದಷ್ಟೇ ಹುಟ್ಟಿಕೊಂಡಂಥವು. ಭ್ರಷ್ಟಾಚಾರ ನಿರ್ಮೂಲನೆಯಾದಾಕ್ಷಣ ಹಾಲಿನ ಹೊ ಹರಿಯೋಲ್ಲ. ನಾವು ದುಡ್ಡನ್ನು ನೋಡುವ ದೃಷ್ಟಿಕೋನ, ಅದಕ್ಕಾಗಿ ಹೊಡೆದಾಡುವ ಜೀವನ ಶೈಲಿಯ ಬದಲಾವಣೆಯಾದಾಗ ಮಾತ್ರ ಸುಧಾರಣೆ ಸಾಧ್ಯ.''

''ಒಬ್ಬ ಮನುಷ್ಯ ಕಂಡುಕೊಂಡ ಸತ್ಯ ಸಾರ್ವತ್ರಿಕ ಸತ್ಯ, ಒಬ್ಬನ 'ರಾಮರಾಜ್ಯ'ದ ಕಲ್ಪನೆ ಎಲ್ಲರನ ಸುಖವಾಗಿಡುತ್ತೆ, 'ನನಗೆ ಗೊತ್ತಾದ 'ಕಾಣ್ಕೆ'ಯಲ್ಲಿ ಇಡೀ ಪ್ರಪಂಚವನ್ನು ವ್ಯಾಖ್ಯಾನಿಸುತ್ತೀನಿ' ಅನು ಐರೋಪ್ಯ ಚಿಂತನೆ ಬದುಕಿನ ಸಂಕೀರ್ಣತೆಯನ್ನು ಮನಗಾಣುವುದರಲ್ಲಿ ಸೋಲುತ್ತದೆ. ಕಾಲ್ ಮಾರ್ಕ್ಸ್‌ನಂತಹ ಮೇಧಾವಿಯ ವಿಚಾರ ಕೂಡ ಎಲ್ಲೋ ಒಂದೆಡೆ ವಿಫಲವಾಗುತ್ತದೆ. ಆದರೆ ನಮ ಹಾಗಲ್ಲ. ವಿಭಿನ್ನ ಮನೋಧರ್ಮ, ಬುದ್ಧಿಮತ್ತೆ, ಜೀವನಶೈಲಿಯಲ್ಲಿರುವ ಜನತೆ-, ಅವರವ ಲಭ್ಯವಾಗಬಹುದಾದ ಫಲ, ಕಾಣ್ಕೆಗಳ ಕುರಿತು ಚರ್ಚಿಸಲಾಗಿದೆ. ಉಳ್ಳವರು-ಇಲ್ಲದವ ಮೇಲ್ವರ್ಗ-ಕೆಳವರ್ಗ, ಸುಶಿಕ್ಷಿತ-ಶ್ರಮಿಕ ವರ್ಗಗಳ ನಡುವಣ ಹೋರಾಟಗಳು ಏನೇ ಇರ ಇವೆಲ್ಲವನ್ನೂ ಮೀರಿದ ಘೋಷವಾಕ್ಯವೆಂದರೆ, don't be just, simply be kind!''

''ಲಿಂಗ ವೈಷಮ್ಯದ ಸಮಸ್ಯೆ ಕೂಡ ಒಂದು ತಪ್ಪಾಗಿ ಅರ್ಥೈಸಿಕೊಂಡ ಹೋರಾಟ. ' ಸ್ವಾತಂತ್ರ್ಯ' ಚಳವಳಿಯ ಹಿಂದಿರುವ ವ್ರತ, ನೇಮ, ನೋವು ಸ್ತ್ರೀಕೇಂದ್ರಿತ ವಾದಗಳಿಗಿಂತ ಹೆ ಮಹತ್ವದ್ದು. ಹೆಣ್ಣು ಗಂಡಾಗುತ್ತ ಹೋಗುವುದರ ಬದಲು 'ಸ್ತ್ರೀ-ಪುರುಷ' ಗುಣಗಳನ್ನು ಪ್ರತಿಯೊಬ್ಬ ಅಳವಡಿಸಿಕೊಳ್ಳುವುದರಲ್ಲಿ ಹೆಚ್ಚು ವಿವೇಕ ಇದ್ದೀತು. ಗಂಡಿನ ಸ್ವಾತಂತ್ರ್ಯವನ್ನು ಮೊಟಕುಗೊಳಿಸ ಮೂಲಕ ಹೆಣ್ಣಿಗೆ ಸ್ವಾತಂತ್ರ್ಯ ಬರಲಿ, ಆಗ ಸಮಾಜವೂ ಹೆಚ್ಚು ಕಾಲ ಸ್ವಸ್ಥವಾಗಿ ಜೀವಿಸಬಲ್ಲ ಇದೆಲ್ಲದರ ಹೊರತಾಗಿಯೂ ಕೆಲವು ಹಕ್ಕುಗಳು, ಹಲಬಗೆಯ ಅನಿರ್ಬಂಧಿತತೆ ಸಿಕ್ಕ ವಾ

ಹೆಂಗಸಿನೊಂದಿಗೆ ಹೋಲಿಸಿದರೆ ಭಾರತೀಯ ಹೆಣ್ಣುಮಕ್ಕಳಲ್ಲಿ ನನಗೆ ಅರಳಿದ ಆತ್ಮ ಗೋಚರಿಸುತ್ತದೆ. "If at all I'd be reborn, I want to be born as an Indian woman!"

"ದಿನ ಬೆಳಗಾದರೆ ನಮ್ಮ ಕಣ್ಣಿಗೆ ಹೊಡೆಯುವ, ಸಂವೇದನೆಯನ್ನು ಜಡಗೊಳಿಸುತ್ತಾ ಸಾಗಿರುವ ಭಯೋತ್ಪಾದಕರ ಸಮಸ್ಯೆ, ವಿದ್ರೋಹ, ಯುದ್ಧ, ಹಿಂಸೆಗೆ ಪರಿಹಾರ ಸಹ ಆಧ್ಯಾತ್ಮಿಕ ಚಿಂತನೆಯಲ್ಲಿದೆ. ವಿಪರೀತವಾಗಿ ಎಲ್ಲವನ್ನೂ ಉತ್ಪಾದಿಸಿ-ಮನುಷ್ಯರು, ಸಂಪತ್ತು ಎಲ್ಲ-ಪ್ರಪಂಚದ ಸಮತೋಲ ತಪ್ಪಿಸಿದ್ದೇವೆ. 'ಬದುಕಿ, ಬದುಕಲು ಬಿಡಿ' ತತ್ವಕ್ಕೆ ಬದಲಾಗಿ, ಬರಿದೇ 'ಆಸೆ' ಹೆಚ್ಚುತ್ತಾ ಹೋಗಿ 'ಮಾರ್ಗ' ಸೃಷ್ಟಿಯಾಗದೇ ಅಶಾಂತಿ, ವೈಮನಸ್ಸು ತಲೆದೋರಿವೆ."

"ಎಲ್ಲರನ್ನೂ ಮಟ್ಟಹಾಕುವ ಅಮೆರಿಕದ ಧೋರಣೆ ಅದಕ್ಕೇ ಮುಳುವಾಗಬಲ್ಲದು. ಮುಂದುವರೆದ ರಾಷ್ಟ್ರಗಳು ಹೊಸೆಯುವ 'ಮುಂದಿನ ದಿನಗಳ' ಚಿತ್ರ ಭಾರತದ ಮೇಲೂ ಪರಿಣಾಮ ಬೀರುತ್ತದೆ. ಆರ್ಥಿಕ ಉದಾರೀಕರಣ, ಬಂಡವಾಳಶಾಹಿ ನಿಯಂತ್ರಣ ಪ್ರಕ್ಷುಬ್ಧತೆಯನ್ನು ಇನ್ನೂ ಹೆಚ್ಚಿಸುತ್ತಿವೆ. ಅಗಾಧ ಜನಸಮೂಹದ ಕ್ಷೇಮ ಕಾಪಾಡಲು ನಮ್ಮೆಲ್ಲ ಸಲಕರಣೆ-ಸಿದ್ಧಾಂತಗಳು ಅಭೂತಪೂರ್ವ ಬದಲಾವಣೆ ಹೊಂದಬೇಕಾಗಿದೆ. ಈಗಿರುವ ಸಾಧನಗಳು ಮೊಂಡಾಗಿ, ನಿಷ್ಕ್ರಿಯವಾಗಿವೆ."

ನಮ್ಮಂಥ non-experts (ಅಪರಿಣತರು?) ತಿರುವಿಹಾಕಲೂ ಹೆದರುವ heights and sensitivity of international economics ಇತ್ತೀಚೆಗೆ ತಮ್ಮ ಆಸಕ್ತಿ ಕೆದರಿದೆ ಎಂದರು ರಾಮಶೇಷ. ಅದೇ ಉಸುರಿಗೆ,

"ಪಳಗಿದ್ದ ಮನೆ ಬಿದ್ದ ಕುಂಟ ಕುರುಡನ ತೆರದಿ ತಳಮಳಿಸುತಿದೆ ಲೋಕ ಮಂಕುತಿಮ್ಮ" -ಎಂದು ಮಂಕುತಿಮ್ಮನನ್ನೂ ಉದ್ಧರಿಸಿದರು.

ಮಾತು ಕಾವ್ಯದ ಕಡೆ ಹೊರಳಿತು. 'ಸೃಷ್ಟಿಕರ್ತ'ನನ್ನು 'ಕವೀನಾಂಕವಿಃ' ಎಂದು ಕರೆದಿರುವುದು ನೆನಪಾಯಿತು. 'ರಸಾನಂದ' 'ಬ್ರಹ್ಮಾನಂದ'ನ ಸೋದರ ಎಂದು ಕರೆದ 'ಧ್ವನ್ಯಾಲೋಕ'ದ ಅಬಿನವ ಗುಪ್ತನ ಪ್ರಸ್ತಾಪ ಬಂತು. 'ಅಂತಿಮ ಸತ್ಯ' ಕಾವ್ಯಾತ್ಮಕ ಸತ್ಯ, 'ವೈಚಾರಿಕ ಸತ್ಯ'ವಲ್ಲ ಎಂಬ ಹೊಳಹು ಮಿನುಗಿತು. ಈ 'ಕಾವ್ಯಾತ್ಮಕ ಸತ್ಯ'ದ ಅನ್ವೇಷಣೆಯೇ ಸಾಹಿತ್ಯದ ಪರಮಗುರಿ-ಬರೀ 'ರಸಾನಂದ'ದಲ್ಲೇ ಮೈಮರೆತರೆ, ಆತ್ಮಲಿಂಗ ತರುವಾಗ ಪಾರ್ವತಿಯ ಮೋಹಕತೆಗೆ ಪರವಶನಾಗಿ ದಾರಿ ತಪ್ಪಿದ ರಾವಣನಂತಾಗುತ್ತದೆ. ಸಾಹಿತ್ಯ ಕೂಡ ಅಂತಿಮವಾಗಿ ಅದರ ಪರಿಧಿ ದಾಟಿ ಇನ್ನೆಲ್ಲೋ ಸೇರುತ್ತದೆ, ಸೇರಬೇಕು ಎಂಬುದನ್ನವರು ಒತ್ತಿ ಹೇಳಿದರು. ಹಾಗೆಯೇ 'ಕಾವ್ಯಾತ್ಮಕ ಸತ್ಯ' ಹೊಂದಲು ಕಾವ್ಯವೊಂದೇ ಮಾರ್ಗವಲ್ಲ (ಭೌತಶಾಸ್ತ್ರವೂ ಆಗಬಹುದು) ಎಂದು ಹೇಳಲೂ ಮರೆಯಲಿಲ್ಲ.

ಚರ್ಚಿಸಿ, ಬಾಯಾರಿ, ಬಸವಳಿದು, ನೀರೋ ಪಾನೀಯವೋ ಕುಡಿದು ಮರಳಿ ಮೂರು ಆಯಾಮದ ಜಂಜಾಟಕ್ಕೆ ಸಿಲುಕಿಕೊಳ್ಳುವುದು ಹುಲುಮಾನವನ ಲಿಮಿಟೇಶನ್ ಅಲ್ಲವೇ ಎಂದದ್ದಕ್ಕೆ ಅವರು ಹೇಳಿದ್ದು: "ಅದೇ ಇದಲ್ಲ ಹುಡುಕಾಟದ ಹಿಂದಿನ ಸ್ವಾರಸ್ಯ. ಮಣ್ಣ ನೆಲದಲ್ಲಿ ಕಾಲಿಟ್ಟುಕೊಂಡೇ ನಕ್ಷತ್ರಗಳಿಗೆ ಕೈ ಚಾಚುವುದು ಮನುಷ್ಯನ ಸ್ವಾಭಾವಿಕ ಗುಣ. ನಕ್ಷತ್ರಗಳ ಹೊಳಪು, ಆಧ್ಯಾತ್ಮಿಕ ದರ್ಶನದ 'ಸಾಮರಸ್ಯ' ಆಗಾಗ ಅವನನ್ನು ತಾಕಿ ಪುಳಕಗೊಳಿಸುತ್ತದೆ. ಅದಷ್ಟೇ ಲಭ್ಯ ಮತ್ತು ಸಾಧ್ಯ"

ಅಂದ ಹಾಗೆ ಅವರ ಇಬ್ಬರು ಗಂಡು ಮಕ್ಕಳ ಹೆಸರು ಕ್ರಮವಾಗಿ ಧೀವತ್ಸ ಮತ್ತು ಮೃಣ್ಮಯ!

'ತಳಮಳಿಸುತ್ತಿರುವ ಲೋಕ'ದಲ್ಲಿ ಅಪರೂಪದ 'ನೆಮ್ಮದಿಯ ಕಾಲ್ದಾರಿ' ನಿರ್ಮಿಸಿಕೊಂಡಿರುವ ರಾಮಶೇಷರ ತಿಳಿವು ನಮ್ಮದೂ ಆಗಲಿ; ಮನಸ್ಸಿಗೆ ಹೊಸ ಬೆಳಕಿಂಡಿ ತೆರೆಯಲಿ.

■

ಕತೆಯೆಂಬ ಮರ, ಕಾದಂಬರಿಯೆಂಬ ತೋಟ



ವಿವೇಕ ಶಾನಭಾಗ

ಕಥನ ಕುತೂಹಲ

ಶಾಂತಿನಾಥ ದೇಸಾಯಿಯವರ ಹಾಗೆ ಆಧುನಿಕ ಮನಸ್ಸನ್ನು, ತಾರುಣ್ಯದ ಜೀವ ಚಾಂಚಲ್ಯವನ್ನು, ಆ ಆಭಾಸ ಆದರ್ಶಗಳನ್ನು ಹಿಡಿದ ಲೇಖಕರು ಕನ್ನಡದಲ್ಲಿ ಇಲ್ಲವೆನ್ನಬಹುದು. ಒಂದಿನಿಂತೂ ಒಜ್ಜೆಯೆನಿಸ ಹಾಗೆ ಅವರು ತರುಣ ಲೇಖಕರ ಜೊತೆ ಒಡನಾಡುತ್ತಿದ್ದರು. ಕತೆ, ಕಾದಂಬರಿ ಪ್ರಾಕಾರಗಳೆರಡರಲ್ಲ ಅವರು ಅತ್ಯುತ್ತಮದ ಕೊಡುಗೆ ಕೊಟ್ಟಿದ್ದರೂ ಕಾದಂಬರಿ ಅವರಿಗೆ ಪ್ರಿಯವಾದ ಮಾಧ್ಯಮವಾಗಿತ್ತು. ಅವ ಜೊತೆ ಮಾತಾಡಿದಾಗೆಲ್ಲ, 'ಕಾದಂಬರಿ ಬರಿ... ಅದರ ಮಜಾನೇ ಬೇರೆ...' ಎಂದು ಹೇಳುತ್ತಿದ್ದರ ಕತೆಯೆಂದರೆ, ಮರ ಹತ್ತಿ, ಹಣ್ಣು ತೆಗೆದು ತಿಂದ ಹಾಗೆ. ಯೋಚನೆ ಮಾಡಿ ಮರ ಹತ್ತಬೇಕು. ಒಮ್ಮೆ ಹತ್ತಿ ಮೇಲೆ ಅಲ್ಲಿರುವ ಹಣ್ಣೊಂದೇ ಸಿಗೋದು. ಕಾದಂಬರಿ ಅಂದರೆ, ತೋಟದಲ್ಲಿ ಇಡೀ ದಿನ ಅಡ್ಡಾ ಬೇಕಾದ ಮರ ಹತ್ತಿ, ಬೇಕಾದ್ದನ್ನು ತಿನ್ನೋದು. ಕೆಲವು ಸಲ ಬಿದ್ದಿರೋ ಹಣ್ಣುಗಳೂ ತಿನ್ನಲ ಯೋಗ್ಯವಾಗಿರುತ್ತವೆ. ಎಲ್ಲಿಂದಲೂ ಶುರುಮಾಡಬಹುದು. ಎಲ್ಲಿಯೂ ನಿಲ್ಲಿಸಬಹುದು. ತೋಟದ ಅಡ್ಡಾಡಲು ಪುರಸೊತ್ತು, ಅದನ್ನು ಸಾವಧಾನವಾಗಿ ಅನುಭವಿಸಲು ಸಿದ್ಧವಾದ ಮನಸ್ಸು ಇರಬೇಕಷ್ಟೆ ಎಂದು ವಿವರಿಸುತ್ತಿದ್ದರು. ಕನ್ನಡದ ಯುವ ಬರಹಗಾರರು ಕಾದಂಬರಿಯ ಬಗ್ಗೆ ಅಷ್ಟು ಆಸಕ್ತಿ ತೋರಿಸುತ್ತಿ ಎಂದು ಹೇಳುತ್ತಿದ್ದರು.

ಉತ್ತಮ ಕಾದಂಬರಿಗಳಲ್ಲಿ ಲೇಖಕ, ಅದರೊಳಗಿನ ಪ್ರತಿ ಜೀವದ ಜೊತೆ ಸಂಯಮದಿ ಕಾಲಕಳೆಯುತ್ತ, ಪ್ರತಿಯೊಂದಕ್ಕೂ ಅರ್ಥ ಹಚ್ಚಿಯೇ ತೀರುತ್ತೇನೆಂಬ ಹಟವಿಲ್ಲದೇ, ಪ್ರತಿಯೊಂದ ಅರ್ಥವಾಗೇತೀರುತ್ತದೆಂಬ ಅಹಂಕಾರವಿಲ್ಲದೇ ವಿಹರಿಸುವುದನ್ನು ಕಾಣಬಹುದು. ಈ ವಿಹಾ ಸ್ವಾತಂತ್ರ್ಯವನ್ನು ನಿಭಾಯಿಸುವಲ್ಲಿಯೇ ಅದರ ಯಶಸ್ಸಿನ ಗುಟ್ಟು ಅಡಗಿದೆ. ಎಲ್ಲಿ ಎಷ್ಟು ಓಡಾಡಬೇಕು, ನಿಲ್ಲಬೇಕು, ಯಾವ ಮೂಲೆಗಳಲ್ಲಿ ಹೋಗಬಾರದು, ಯಾವುದು ಅತ್ಯಾಕರ್ಷಕ ಮತ್ತು ಅಪಾಯ ಎಂಬುದನ್ನು ಕಂಡುಕೊಳ್ಳುತ್ತ ಹೋಗುವುದು ಕಾದಂಬರಿಕಾರನ ಶಕ್ತಿಯನ್ನು, ಧೈರ್ಯವನ್ನು ಅವಲಂಬಿಸಿ ತೋಟದ ರೂಪಕ ಇದಕ್ಕೆ ಬಹಳ ಒಪ್ಪುತ್ತದೆ. ಅಲ್ಲಿ ಇಲ್ಲಿ ಕಳೆ ಇರಬಹುದು, ಕೆಲವು ಕಡೆ ಗೊ ಸಾಲದಿರಬಹುದು, ಕೆಲವು ಕಡೆ ಹೊಸ ಫಲಗಳು ಹುಟ್ಟಬಹುದು, ಹಳೆಯ ಮರಗಳು ಕನಿಷ್ಠ ಫಲಕ್ಕೆ ಮೋ ಬರದಂತೆ ವಿಧೇಯತೆಯಿಂದಿರಬಹುದು. ಎಲ್ಲ ಗದ್ಯ ಲೇಖಕರಿಗೆ ಕಾದಂಬರಿ ಪ್ರಕಾರ ಒದಗಿಸ 'ಅವಕಾಶ' - ಸ್ಪೇಸ್ - ರೋಮಾಂಚವನ್ನೂ ಆತಂಕವನ್ನೂ ಉಂಟುಮಾಡುವಂಥದ್ದು. ವಿಹಾರದ ಸ್ವಾತಂತ್ರ್ಯ, ಕಾದಂಬರಿಯಲ್ಲಿ ಅನಿರೀಕ್ಷಿತಗಳನ್ನು, ಆಶ್ಚರ್ಯಗಳನ್ನು ತುಂಬುತ್ತದೆ. ಹೊಸ ನೆಲೆಗ ಹುಡುಕಲು ಪ್ರಚೋದಿಸುತ್ತದೆ. ಬಿರುಕುಗಳು ಬಿಡುತ್ತವೆ ಮತ್ತು ಅದರೊಳಗಿಂದ ಹೊಸ ದಾರಿ ಹುಟ್ಟಿಕೊಳ್ಳುತ್ತವೆ. 'ಸಂಸ್ಕಾರ'ದ ಪುಟ್ಟ, 'ಗಂಗವ್ವ ಗಂಗಾಮಾಯಿ'ಯ ಮೆಹಬೂಬಜಾನ್, 'ಮುಸ್ಸಂಜೆ'

ಶಿವಾಜಿ ಹೀಗೆ ಇಂಥ ಒಳದಾರಿಗಳತ್ತ ಬೆರಳು ಮಾಡುವ ಪಾತ್ರಗಳ ಸಾಲನ್ನು ಬೆಳೆಸುತ್ತಲೇ ಹೋಗಬಹುದು. ಕಾದಂಬರಿಕಾರನಿಗೆ, ನಿಂತು ನೋಡುವ, ಹೊಸ ದಾರಿಗಳನ್ನು ಹುಡುಕುವ, ಎಡವಿದರೂ ಸಾವರಿಸಿಕೊಳ್ಳುವ ಅವಕಾಶವಿದೆ. ಆದರೆ ಒಂದು ಕತೆ ಕೆಡಿಸಲು ತುಸು ಮೈಮರೆವು ಸಾಕು.

ಕನ್ನಡದಲ್ಲಿ ಕಥೆಗಳ ರೂಪ, ರಚನೆ, ನಿರ್ವಹಣೆಯ ಬಗ್ಗೆ ಚಿಂತನೆ, ಚರ್ಚೆ ನಡೆದಷ್ಟು ಕಾದಂಬರಿಗಳ ಬಗ್ಗೆ ನಡೆದಿಲ್ಲ. ನವ್ಯದ ಎಲ್ಲ ಮುಖ್ಯ ಲೇಖಕರು ಕಾದಂಬರಿ ಪ್ರಾಕಾರದಲ್ಲಿಯೂ ಬರೆದರು. ಆದರೆ ಅವರ ನಂತರದ ಪೀಳಿಗೆಯ ಬರಹಗಾರರಿಗೆ ಈ ಮಾಧ್ಯಮ ಅಷ್ಟು ಪ್ರಮುಖವಾಗಿ ಕಂಡಿಲ್ಲ. ಹೊಸ ಯುವ ಪ್ರತಿಭೆಗಳು ಕಥೆಗಳಿಗೆ ಕೊಟ್ಟಂಥ ಗಮನವನ್ನು ಕಾದಂಬರಿ ಕ್ಷೇತ್ರಕ್ಕೆ ಕೊಟ್ಟಿಲ್ಲ. ಈವತ್ತಿನ ಸಂಘರ್ಷಗಳನ್ನು, ರಸಾನುಭವದ ಭಿನ್ನಗ್ರಹಿಕೆಗಳನ್ನು ಸಶಕ್ತವಾಗಿ ಪ್ರತಿನಿಧಿಸಬಲ್ಲ ಕಾದಂಬರಿಯ ಸ್ವರೂಪಗಳನ್ನು ಕನ್ನಡದಲ್ಲಿ ಹುಡುಕಬೇಕಾಗಿದೆ. ನಮಗೆ ಸಾಧ್ಯವಾಗುವ ಮತ್ತು ನಾವು ಕಾದಂಬರಿಯೆಂದು ಭಾವಿಸಿಕೊಂಡ ಸ್ವರೂಪಗಳು, ರಚನಾಕ್ರಮಗಳು ಬಹುಶಃ ಈಗ ಸಾಲುವುದಿಲ್ಲ. ಜಗತ್ತಿನ ಎಲ್ಲೆಡೆ ನಡೆದಿರುವಂತೆ ಇಲ್ಲಿಯೂ ಕಾದಂಬರಿ ಪ್ರಾಕಾರದಲ್ಲಿ ಬರವಣಿಗೆಯ ಹೊಸ ಕ್ರಮಗಳ ಅಗತ್ಯವಿದೆ. ಅತಿ ವೇಗದಲ್ಲಿ ನಮ್ಮ ಜೀವನಕ್ರಮ ಬದಲಾಗುತ್ತಿರುವ ಈಗಿನ ಕಾಲದಲ್ಲಿ, ಪಾರಂಪರಿಕ ಸ್ವರೂಪದ ಮೂಲಕ ಈವತ್ತಿನ ಬದಲಾವಣೆಯ ಗತಿಯನ್ನು, ಆಧುನಿಕತೆಯನ್ನು ನಿರ್ವಹಿಸುವ ಮನಸ್ಸಿನ ಶಕ್ತಿಯನ್ನು, ಜಾಗತೀಕರಣದ ಅನಿವಾರ್ಯತೆಯ ಕಳವಳಗಳನ್ನು, ಹೊಸ ಮಾನದಂಡಗಳಲ್ಲಿ ಸಂಬಂಧಗಳನ್ನು ರೂಪಿಸಿಕೊಳ್ಳಲು ಒದ್ದಾಡುವ ನಮ್ಮ ಆತಂಕಗಳನ್ನು ಸಮರ್ಥವಾಗಿ ಹೇಳುವುದು ಕಷ್ಟ. ತೋಟಗಳು ವಿರಳವಾಗುತ್ತ ಹೋಗಿರುವ ಜಗತ್ತು, ನಮ್ಮನ್ನು ಸುತ್ತುವರಿದಿರುವ ಅಪಾರ ಮಾಹಿತಿಗಳ ಅರಣ್ಯ - ಈ ಕಾಲದಲ್ಲಿ ಭಿನ್ನವಾದ ಬರವಣಿಗೆಯ ರೀತಿಯನ್ನು ಬೇಡುತ್ತದೆ.

ತನ್ನ ಸ್ವರೂಪದಲ್ಲಿ ಕಾದಂಬರಿ, ಆಯಾ ಕಾಲದ ಜೀವನಕ್ರಮಕ್ಕೆ ಹತ್ತಿರವಾದದ್ದು. ಆದ್ದರಿಂದಲೇ ಹೊಸ ಪಲ್ಲಟಗಳು ಬಂದಾಗ ಸ್ವರೂಪದಲ್ಲಿ ಸ್ಪಷ್ಟವಾದ ಬದಲಾವಣೆಯಾಗದೇ ನಿಜವಾದ ಅರ್ಥದಲ್ಲಿ ಹೊಸ ಕಾದಂಬರಿ ಹುಟ್ಟುವುದು ಕಷ್ಟ. ಕನ್ನಡದಲ್ಲಿ 'ಕುಸುಮಬಾಲೆ'ಯನ್ನು ಇದಕ್ಕೆ ಉದಾಹರಣೆಯಾಗಿ ನೋಡಬಹುದು. ತಾವು ಚಿತ್ರಿಸುತ್ತಿರುವ ಜೀವನಕ್ಕೆ ಅಗತ್ಯವಾದ ದನಿ ಮತ್ತು ರಚನೆಯ ಸ್ವರೂಪವನ್ನು ಮಹಾದೇವ ಅತಿ ಜಾಗ್ರತೆಯಿಂದ ಆಯ್ದುಕೊಂಡಿದ್ದಾರೆ. ಕುಸುಮಬಾಲೆಯ ಆರಂಭದಲ್ಲೇ ಕತೆಯ ಸಾರಾಂಶ ಹೇಳುವ ಮಹಾದೇವ, ಕತೆಯ ಹಂಗಿಲ್ಲದೇ, ಇನ್ನು ಇದರ ಒಳಗಿನ ಲೋಕ ನೋಡಲು ಬನ್ನಿ ಎಂದು ಕೈಹಿಡಿದು ಕರೆದೊಯ್ಯುತ್ತಾರೆ. ಈ ಕೃತಿಯನ್ನು ಆಸ್ವಾದಿಸಲು ಅಗತ್ಯವಾದ ವಾತಾವರಣವನ್ನು, ಅದರ ರಚನೆಯ ಮೂಲಕವೇ ಸೃಷ್ಟಿಸುತ್ತಾರೆ. ಕೆಲವು ದೇವಸ್ಥಾನಗಳ ವಾಸ್ತುಶಿಲ್ಪಗಳು ತಮ್ಮ ರಚನೆಯಲ್ಲೇ ಒಳಗಿನ ಮೂರ್ತಿಯನ್ನು ಕಾಣಲು ಸಿದ್ಧತೆಯನ್ನು ಒದಗಿಸುತ್ತವೆ. ಗರ್ಭಗುಡಿಯವರೆಗೂ ಇಕ್ಕಟ್ಟಾಗುತ್ತ ಹೋಗುವ ದಾರಿ ಮನಸ್ಸನ್ನು ದರ್ಶನಕ್ಕೆ ಸಜ್ಜುಗೊಳಿಸುತ್ತ ಹೋಗುತ್ತದೆ. ಒಳಗೆ ಮೌನದಲ್ಲಿ ಮತ್ತು ಮಿಣುಕುವ ಎಣ್ಣೆದೀಪದ ಬೆಳಕಲ್ಲಿ ಮೂರ್ತಿಯನ್ನು ಕಂಡಾಗ ಆಗುವ ಅನುಭವ, ಕುಕ್ಕುವ ಬೆಳಕಲ್ಲಿ ಮತ್ತು ವಿಶಾಲವಾದ ಅವಕಾಶದಲ್ಲಿ ಆಗಲಾರದು. ಅಂಥ ಒಳಗನ್ನು, ಮೆಲುದನಿಯಲ್ಲಿ ಕಾಣಿಸುವಂಥ ಬರವಣಿಗೆ 'ಕುಸುಮಬಾಲೆ'ಯದು.

ಕನ್ನಡದಲ್ಲಿ ಕತೆಗಳಿಗೆ ಒಂದು ಪರಂಪರೆ ನಿರ್ಮಾಣವಾಗಿದೆ. ಕಾದಂಬರಿಯಲ್ಲದು ಇನ್ನೂ ಅಷ್ಟು ಸ್ಥಿರವಾಗಿ ಆಗಿಲ್ಲ. ಐವತ್ತು ವರ್ಷಗಳ ಹಿಂದೆ ಮೊಕಾಶಿಯವರು 'ಗಂಗವ್ವ ಗಂಗಾಮಾಯಿ'ಯ ಮುನ್ನುಡಿಯಲ್ಲಿ ಕನ್ನಡ ಕಾದಂಬರಿಯ ಕುರಿತು ಹೇಳಿರುವ ಮಾತು ನೆನಪಾಗುತ್ತದೆ: 'ಕನ್ನಡದಲ್ಲಿ ಪರಂಪರೆ ಹುಟ್ಟಲಿ ಮೊದಲು. ಆಮೇಲೆ ಅದನ್ನು ಮುರಿಯುವ ಸೊಗಸೇ ಬೇರೆ'. ■



ಗುಲ್ಜಾರ್

ಭಯ

ಕನ್ನಡಕ್ಕೆ : ವಸುಧೇಂದ್ರ


ಹೆದರಿಕೆಯಿಂದ ಅವನ ನರಗಳು ಬಿಗಿದುಕೊಂಡಿದ್ದವು. ಅವನು ಕುಳಿತಾಗ ಮೊಣಕಾಲು ಎಷ್ಟೊಂದು ನಡುಗುತ್ತಿತ್ತೆಂದರೆ, ಸ್ವಲ್ಪೇ ಸಮಯದಲ್ಲಿ ಅವನು ಮೂರ್ಛೆ ಬಂದು ಬೀಳಬಹುದೆಂದು ಅನುಮಾನವಾಗುತ್ತಿತ್ತು.

ಕಳೆದ ನಾಲ್ಕು ದಿನದಿಂದ ನಗರದಲ್ಲಿ ಕೋಮು ಗಲಭೆ ಪ್ರಾರಂಭವಾಗಿತ್ತು. ಬೆಳಗಿನ ಕೆಲವು ಗಂಟೆಗಳು ಮತ್ತು ಸಾಯಂಕಾಲ ಮಾತ್ರ ಕರ್ಫ್ಯೂವನ್ನು ಹಿಂತೆಗೆದುಕೊಳ್ಳಲಾಗುತ್ತಿತ್ತು. ಆ ಸಮಯದಲ್ಲಿ, ಕೆಲವು ಜನ, ಅವಸರದಲ್ಲಿ ಹೊರ ಬಂದು, ಅತ್ಯಾವಶ್ಯಕ ವಸ್ತುಗಳನ್ನು ಕೊಂಡೊಯ್ದರೆ, ಇನ್ನು ಕೆಲವರು ಅಷ್ಟೇ ಅವಸರದಲ್ಲಿ ಹೊರ ಬಂದು, ಬೆಂಕಿ ಹಚ್ಚಿ, ಚೂರಿ ಹಾಕಿ, ಒಂದೆರಡು ಹೆಣ ಉರುಳಿಸಿ ಮತ್ತೆ ಕರ್ಫ್ಯೂ ಜಾರಿಗೊಳ್ಳುವುದರೊಳಗೆ ಗೂಡು ಸೇರಿಕೊಳ್ಳುತ್ತಿದ್ದರು. ದೂರದರ್ಶನ ಮತ್ತು ಬಾನುಲಿಗಳು, ಏಕ ಪ್ರಕಾರವಾಗಿ 'ಶಹರದಲ್ಲಿ ಪರಿಸ್ಥಿತಿ ಹತೋಟಿಯಲ್ಲಿದೆ', 'ಜನಜೀವನ ಸಹಜ ಸ್ಥಿತಿಗೆ ಮರಳುತ್ತಿದೆ' ಎಂದು ಬಿತ್ತರಿಸುತ್ತಿದ್ದರೂ, ಮುಂಬಯಿ, ಬಿಸಿ ಬಿಸಿ ಸುದ್ದಿ ಮತ್ತು ಬಿಸಿ ಬಿಸಿ ರಕ್ತದಲ್ಲಿ ಮುಳುಗಿಹೋಗಿತ್ತು.

ಜನಜೀವನ ಸಹಜಸ್ಥಿತಿಗೆ ಬಂದಿದೆಯೆಂದು ಪ್ರಮಾಣೀಕರಿಸಲು ಲೋಕಲ್ ಟ್ರೇನುಗಳು ನಿನ್ನೆಯಿಂದ ಓಡಲಾರಂಭಿಸಿದ್ದವು. ಸಾಕಷ್ಟು ಬೋಗಿಗಳು ಖಾಲಿಯಾಗಿದ್ದರೂ, ರೈಲ್ವೇ
ಹಳಿಗುಂಟ ಹತ್ತಿದ್ದ ಹಲವಾರು ದೀಪಗಳು, ಕಳೆ
ಕೆಲವು ದಿನಗಳ ಗಾಢಾಂಧಕಾರವನ್ನು ಹೊ
ದೋಡಿಸಲು ಸಹಾಯಕವಾಗಿದ್ದವು. ಹಳಿ
ಮೇಲೆ ರೈಲು ಓಡಿದಾಗ ಉಂಟಾದ 'ಗಡ ಗ
ಸದ್ದು, ದಟ್ಟವಾದ ನಿಶ್ಶಬ್ದವನ್ನು ಅಲ್ಲಾಡಿಸಿ,
ಪಕ್ಕದ ಜನರಲ್ಲಿ ಜೀವನದ ಬಗ್ಗೆ ಆಶಾಕಿರಣವ
ಮೂಡಿಸಿತ್ತು.

ಯಾಸಿನ್, ರೈಲಿನ 'ಗಡ ಗಡ' ಸ
ಕೇಳುತ್ತಿದ್ದನಲ್ಲದೆ, ಆಗೊಮ್ಮೆ ಈಗೊಮ್ಮೆ ಹಾ
ಹೋದ ರೈಲನ್ನು ನೋಡಲು ಎದ್ದು ನಿಲ್ಲುತ್ತಿ
ಅವನು ಮನೆಯಿಂದ ಹೊರಬಿದ್ದು ನಾಳೆಗೆ ಐ
ದಿನಗಳಾಗುತ್ತಿದ್ದವು. ಬಹುಶಃ ಮನೆಯ
ಅವನಿಗಾಗಿ ಕಾಯುವುದನ್ನು ನಿಲ್ಲಿಸಿರಬ
ದೆಂದು ಅವನಿಗನ್ನಿಸಿತು. ತನಗಾಗಿ ಹುಡುಕ
ಪ್ರಾರಂಭ ಮಾಡಿರಬಹುದು. ಅವನ ಸಹನ
ಪರಾಕಾಷ್ಠೆಯನ್ನು ಮುಟ್ಟಿದಾಗ ಮುಸ್ಸ
ಯಾಗಿತ್ತು. ಕರ್ಫ್ಯೂವನ್ನು ಹಿಂತೆಗೆದುಕೊ
ತಕ್ಷಣ ಅವನು ಅಂಧೇರಿ ಸ್ಟೇಷನ್ನಿಗೆ ಬಂ
ಪ್ಲಾಟ್‌ಫಾರಂ 'ಬಿಕೋ' ಎನ್ನುತ್ತಿದ್ದರೂ, ರೈ
ಆಗಮನವನ್ನು ತಿಳಿಸುವ ಎಲೆಕ್ಟ್ರಾನಿಕ್ ವೇಳಾ
ಮಿನುಗುತ್ತಿತ್ತು.

ರೈಲು ತನ್ನ ಮಾಮೂಲೀ ರೀತಿಯನ್ನು ಬಿ
ಅದೂ ಹೆದರಿಕೊಂಡಿದೆಯೇನೋ ಎನ್ನುವ
ನಿಧಾನಕ್ಕೆ ಪ್ಲಾಟ್‌ಫಾರಂಗೆ ಬಂತು. ಹ



ಪ್ರಯಾಣಿಕರು ಆ ರೈಲಿನಲ್ಲಿದ್ದರು. ಅವನಿಗೆ ಯಾವ ಬೋಗಿಯಲ್ಲಿ ತೂರಬೇಕೆಂದು ನಿಶ್ಚಯಿಸಲಾಗಲಿಲ್ಲ. ಇಬ್ಬರೋ ಅಥವಾ ಮೂವರೋ ಗುಂಪು ಗುಂಪಾಗಿ ಸೇರಿದ್ದ ಆ ರೈಲಿನಲ್ಲಿ, ಹೆಚ್ಚಾಗಿ ಹಿಂದೂಗಳೇ ಕಂಡುಬಂದರು. ಕಡೆಯ ಗಳಿಗೆಯವರೆಗೂ ಅನುಮಾನಿಸುತ್ತಲೇ ನಿಂತಿದ್ದ ಅವನು, ರೈಲು ಪ್ರಾರಂಭವಾಗುತ್ತಲೇ ಖಾಲಿಯಾಗಿದ್ದ ಒಂದು ಬೋಗಿಯೊಳಗೆ ನುಗ್ಗಿಬಿಟ್ಟ. ಸುತ್ತಲೂ ಒಮ್ಮೆ ಸೂಕ್ಷ್ಮವಾಗಿ ಅವಲೋಕಿಸಿ, ಬೋಗಿಯ ಕಡೆಯ ಬರ್ತ್‌ನ ತುದಿಯಲ್ಲಿ, ಮುದುರಿ ಕುಳಿತುಕೊಂಡ. ಆ ಜಾಗದಿಂದ ಬೋಗಿಯ ಎಲ್ಲಾ ಭಾಗಗಳು ಸಂಪೂರ್ಣವಾಗಿ ಕಾಣುತ್ತಿದ್ದವು. ರೈಲು ವೇಗವನ್ನು ಪಡೆದುಕೊಂಡಂತೆ, ಅವನು ನೆಮ್ಮದಿಯಿಂದ ಉಸಿರಾಡಲಾರಂಭಿಸಿದ.

ಇದ್ದಕ್ಕಿದ್ದಂತೆ, ಯಾಸಿನ್‌ಗೆ, ಬೋಗಿಯ ಆ ತುದಿಯಲ್ಲಿ ಆಕೃತಿಯೊಂದು ಚಲಿಸಿದ್ದು ಕಂಡುಬಂತು. ಅವನಿಗೆ ಸ್ಮೃತಿ ತಪ್ಪಿದಂತಾಯ್ತು. ಮತ್ತೊಮ್ಮೆ ಅವನ ಮೊಣಕಾಲುಗಳು ನಡುಗಲಾರಂಭಿಸಿದವು. ಮೆತ್ತಗೆ ಪಕ್ಕಕ್ಕೆ ಜರುಗಿ, ಅವನೇನಾದರೂ ಎದುರಿಗೆ ಬಂದರೆ ಬರ್ತ್‌ನ ಕೆಳಗೆ ನುಸುಳಲು ಅನುಕೂಲವಾಗುವಂತೆ ಅಥವಾ ಅವನಿಗೆ ಎದುರಾಗಿ ಕುಳಿತುಕೊಳ್ಳಲು ಸಾಧ್ಯವಾಗುವಂತೆ ಯಾಸಿನ್ ಕುಳಿತುಕೊಂಡ.

ಬೋಗಿಯ ಬಾಗಿಲು ದೂರವೇನೂ ಇರಲಿಲ್ಲ. ಓಡುವ ರೈಲಿಂದ ಜಿಗಿದರೆ, ಯಾವ ಸಂಶಯವೂ ಇಲ್ಲದಂತೆ ಸಾವನ್ನಪ್ಪಬಹುದಾಗಿತ್ತು. ಒಂದು ವೇಳೆ ರೈಲು ತನ್ನ ವೇಗವನ್ನು ಕಡಿಮೆ ಮಾಡಿದರೂ, ಆ ವ್ಯಕ್ತಿ....

ಇದ್ದಕ್ಕಿದ್ದಂತೆಯೇ ಆ ವ್ಯಕ್ತಿ ಎದ್ದುನಿಂತ. ಅವನ ಮುಖದಲ್ಲಿ ಹೆದರಿಕೆಯಾಗಲಿ, ನಿಶ್ಶಕ್ತಿಯಾಗಲಿ ಇರಲಿಲ್ಲ. ಹಾಗಿದ್ದರೆ ಅವನು ಹಿಂದೂವೇ ಆಗಿರಬೇಕು ಎಂಬುದು ಯಾಸಿನ್‌ಗೆ ಬಂದ ಮೊದಲ ಆಲೋಚನೆಯಾಗಿತ್ತು. ಆ ವ್ಯಕ್ತಿ ನಿಧಾನಕ್ಕೆ ಬೋಗಿಯ ಆ ತುದಿಯ ಬಾಗಿಲ ಬಳಿ ನಡೆದು, ಅಲ್ಲಿ ನಿಂತುಕೊಂಡ. ಅವನ ಮಫ್ಲರ್, ಗಾಳಿಗೆ ಹರಿದ ಧ್ವಜದಂತೆ ಹಾರಾಡುತ್ತಿತ್ತು. ಸ್ವಲ್ಪ ಸಮಯ ಅವನು ಹೊರಗೆ ನೋಡುತ್ತಿದ್ದ. ಅನಂತರ ಆ ವ್ಯಕ್ತಿ ಯಾವುದರ ವಿರುದ್ಧವೋ ತನ್ನ ಶಕ್ತಿಯನ್ನು ಪರೀಕ್ಷಿಸಿಕೊಳ್ಳುವಂತೆ ಕಾಣುತ್ತಿತ್ತು. ಯಾಸಿನ್ ಕುಳಿತ ಜಾಗದಿಂದ ಆ ವ್ಯಕ್ತಿ ಸರಿಯಾಗಿ ಕಾಣುತ್ತಿರಲಿಲ್ಲ. ಆದರೆ ಆ ವ್ಯಕ್ತಿ ಏನನ್ನೋ ಎಳೆಯುತ್ತಿದ್ದಂತೆ ಅಥವಾ ಎತ್ತುತ್ತಿದ್ದಂತೆ ಇಲ್ಲ ಒತ್ತುತ್ತಿದ್ದಂತೆ ಕಂಡುಬರುತ್ತಿತ್ತು. ಇದ್ದಕ್ಕಿದ್ದಂತೆಯೇ ಜಂಗು ಹಿಡಿದ ಬಾಗಿಲೊಂದು ಕರ್ಕಶವಾಗಿ ಸದ್ದು ಮಾಡುತ್ತಾ ಮುಚ್ಚಿಕೊಂಡು ದೊಡ್ಡ ಸದ್ದನ್ನುಂಟುಮಾಡಿತು. ಆ ಸದ್ದಿಗೆ ಯಾಸಿನ್ ಕಿರುಚಲಿಲ್ಲದ್ದು ಅವನ ಅದೃಷ್ಟವೆಂದೇ ಹೇಳಬೇಕು. ಆ ವ್ಯಕ್ತಿಯೂ ಒಂದು ಕ್ಷಣ ನಿಬ್ಬೆರಗಾಗಿ ಸುತ್ತಲೂ ನೋಡಿದ. ಯಾಸಿನ್ ಬಚ್ಚಿಟ್ಟುಕೊಂಡ ದಿಕ್ಕಿನತ್ತ ಸುಮಾರು ಹೊತ್ತು ನೋಡುತ್ತಿದ್ದ. ಯಾಸಿನ್‌ಗೆ ಆ ವ್ಯಕ್ತಿ ತನ್ನನ್ನು ನೋಡಿಬಿಟ್ಟಿರಬೇಕೆಂದು ಅನುಮಾನವಾಗಲಾರಂಭಿಸಿತು.
ವ್ಯಕ್ತಿ ಬಲಶಾಲಿಯಾಗಿರುವುದು ನೋಡಿ ಇವ
ಹೆದರಿಕೆ ಇನ್ನಷ್ಟು ಹೆಚ್ಚಾಯಿತು. ಒಂದು ವೇ
ನಮ್ಮಿಬ್ಬರ ಮಧ್ಯೆ ಹೊಡೆದಾಟವಾದರೆ ತನ್ನ
ಅವನನ್ನು ಎದುರಿಸುವ ಶಕ್ತಿಯಿದೆಯೆ?....
ವ್ಯಕ್ತಿ ಬಾಗಿಲಿನ ಕಡೆ ನಡೆದು, ಅದರ ಹತ್ತಿರ
ನಿಂತುಬಿಟ್ಟ.

ರೈಲು ಜೋಗೇಶ್ವರಿ ನಿಲ್ದಾಣವನ್ನು ಹಾ
ಹೋದಾಗ ಅದು ಖಾಲಿ ಹೊಡೆಯುತ್ತಿತ
ಒಂದು ವೇಳೆ ಅದು ಅಲ್ಲಿ ನಿಂತಿದ್ದರೆ, ಯಾಸಿ
ಇಳಿದುಬಿಡುತ್ತಿದ್ದ. ಆದರೆ ಆ ಸ್ಥಳದಲ್ಲಿ ಕರ್ಫ್ಯೂ
ಜಾರಿಯಲ್ಲಿದ್ದರಿಂದ ರೈಲು ಅಲ್ಲಿ ನಿಲ್ಲಲಿ
ಬಹುಶಃ, ಕರ್ಫ್ಯೂ ಜಾರಿಯಲ್ಲಿದ್ದ ಸ್ಥಳಗ
ಸುರಕ್ಷಿತವೇನೋ? ಕಡೆಯ ಪಕ್ಷ ಪೊಲಿ
ರಾದರೂ ಅಲ್ಲಿ-ಇಲ್ಲಿ ತಿರುಗುತ್ತಿರುತ್ತಾರೆ! ಈ
ಶಹರದಲ್ಲಿ ಗಸ್ತು ಹೊಡೆಯಲು ಸೈನ್ಯವ
ತರಿಸಲಾಗಿತ್ತು. ಸೈನ್ಯದ ಹಸಿರು ಮತ್ತು ಖ
ಪಟ್ಟೆಯ ಟ್ರಕ್ಕುಗಳು, ಶಸ್ತ್ರಾಸ್ತ್ರದಿಂದ ಕೂಡಿ
ಸೈನಿಕರನ್ನು ತುಂಬಿಕೊಂಡು ಗಲಭೆ ಪೀ
ಪ್ರದೇಶದಲ್ಲಿ ಸುತ್ತಾಡುತ್ತಿದ್ದವು. ಸೈನಿಕರ ಬಂ
ಕಗಳು ಆ ಟ್ರಕ್ಕಿನಿಂದ ಹೊರಕ್ಕೆ ಗುರಿಯಿ
ಸಿದ್ಧವಾಗಿದ್ದವು. ಪೊಲೀಸರು ಕೆಲಸಕ್ಕೆ ಬ
ದಂತಾಗಿದ್ದರು. ಯಾರೂ ಅವರಿಗೆ ಹೆದರು

ಹಿಂದೀ ಕವಿ, ಕತೆಗಾರ, ಚಿತ್ರನಿರ್ದೇಶಕ ಗುಲ್ಜಾರ್ ಅವರ 'ರಾವೀ ಪಾರ್' ಸಂಕಲನದಿಂದ ಆಯ್ದ 'ಸೀಮಾ' ಕತೆಯನ್ನು ನಮ್ಮ ಮೊದಲ (ಏಪ್ರಿಲ್) ಸಂಚಿಕೆಯಲ್ಲಿ ಕೊಟ್ಟಿದ್ದೆವು. ಅದಕ್ಕೆ ನಿಮ್ಮಿಂದ ಬಂದ ಮೆಚ್ಚುಗೆ ಅಪಾರ. ಈಗ, ಕೋಮು ಗಲಭೆಯಿಂದ ತ್ರಸ್ತವಾದ ನಗರದ ಚಿತ್ರಣವನ್ನೀಯುವ ಅವರ 'ಭಯ' ಕತೆಯನ್ನು ಕೊಡುತ್ತಿದ್ದೇವೆ.


ಇದನ್ನು ಕನ್ನಡಕ್ಕೆ ತಂದಿರುವ ವಸುಧೇಂದ್ರ, ಈಗಾಗಲೇ ತಮ್ಮ 'ಮನೀಷೆ' ಸಂಕಲನದಿಂದ ಕನ್ನಡದ ಹೊಸ ಕತೆಗಾರರಾಗಿ ಗಮನ ಸೆಳೆದಿದ್ದಾರೆ.



ಲಿಲ್ಲ. ಗುಂಪುಗಳು ಪೊಲೀಸರ ಮೇಲೆ ಕಲ್ಲು ಮತ್ತು ಸೋಡಾ ಬಾಟಲಿಗಳನ್ನು ನಿರ್ಭಯವಾಗಿ ತೂರುತ್ತಿದ್ದರು. ಆಸಿಡ್ ತುಂಬಿದ ಬಾಟಲಿಗಳನ್ನೂ ತೂರುತ್ತಿದ್ದರು. ಪೊಲೀಸರು ಅಶ್ರುವಾಯು ಗುಂಡನ್ನೆಸೆದರೆ, ಗುಂಪಿನಲ್ಲಿದ್ದ ಜನರು ಅದನ್ನು ಒದ್ದೆಯಾದ ಕರವಸ್ತ್ರದಲ್ಲಿ ಹಿಡಿದುಕೊಂಡು ಪೊಲೀಸರ ಕಡೆಗೇ ಅದನ್ನು ತೂರಿ ಬಿಡುತ್ತಿದ್ದರು. ಇಂತಹ ಸ್ಥಿತಿಯಲ್ಲಿ, ಯಾಸಿನ್ ಕೆಲಸ ಮಾಡುತ್ತಿದ್ದ ಬೇಕರಿಗೆ ಬೆಂಕಿ ಇಟ್ಟಾಗ, ಪೊಲೀಸರು ಏನು ತಾನೆ ಮಾಡಿಯಾರು? ದೂರದಲ್ಲಿ ನಿಂತು ದೃಶ್ಯವನ್ನು ಕಣ್ತುಂಬ ನೋಡಿದ್ದರು. ತಮ್ಮ ಪ್ರಾಣವನ್ನು ರಕ್ಷಿಸಿಕೊಳ್ಳಲು ಓಣಿಗಳಲ್ಲಿ ಓಡಿ, ಪುಡಿ ಪುಡಿಯಾದ ಕಾರುಗಳಿದ್ದ ಗ್ಯಾರೇಜಿನೊಳಗೆ ನುಗ್ಗಿದ್ದರು. ಒಂದು ವೇಳೆ ಬಾಬು ಅಲ್ಲಿಗೆ ಬರದಿದ್ದರೆ ಯಾಸಿನ್ ಗತಿಯೇನಾಗುತ್ತಿತ್ತು? ದೇವರು ಬಾಬುವಿಗೆ ನೂರು ವರ್ಷ ಆಯುಷ್ಯವನ್ನು ಕೊಡಲಿ! ಇವನು ಓಡಿ ಹೋಗುವಾಗ, ಬಾಬು ಇವನ ಅಂಗಿಯನ್ನು ಹಿಡಿದೆಳೆದು, ಹತ್ತಿರದಲ್ಲಿದ್ದ ಚಿಕ್ಕ ಗುಡಿಸಲಿನೊಳಗೆ ನುಗ್ಗಿದ್ದ. ಪಕ್ಕದಲ್ಲಿಯೇ ಒಂದು ಚಹಾದಂಗಡಿಯೂ ಇತ್ತು. ಬಾಬುವಿಗೆ ಇವನು ಮುಸ್ಲಿಂ ಎನ್ನುವುದು ಗೊತ್ತು. ಬಾಬು ಹಿಂದೂ, ಆದರೆ ಅವನೂ ಪ್ರಾಣರಕ್ಷಣೆಗಾಗಿ ಓಡಿದ್ದ. ರಕ್ತದಾಹದ ಗುಂಪೊಂದು ವ್ಯಕ್ತಿಯೊಬ್ಬ ಹಿಂದೂ ಅಥವಾ ಮುಸ್ಲಿಂ ಎಂದು ತಿಳಿದುಕೊಳ್ಳುವಷ್ಟು ವ್ಯವಧಾನದಿಂದ ಕೂಡಿರುವುದಿಲ್ಲ. ಅದರ ದಾಹ ರಕ್ತ ಅಥವಾ ಬೆಂಕಿಯಿಂದಲೇ ತಣಿಯುತ್ತದೆ. ಅದನ್ನು ಸುಡು, ಇವನನ್ನು ಕೊಲ್ಲು, ಸರ್ವನಾಶ ಮಾಡು. ಅದರ ಮುಂದೆ ಏನೂ ಉಳಿಯದಿದ್ದಾಗಲೇ ಅದರ ಕೋಪ ಶಮನವಾಗುತ್ತದೆ.

ರೈಲಿನ 'ಗಡ ಗಡ' ಸದ್ದು ಯಾಸಿನ್ನನ್ನು ನಿಸ್ತೇಜಗೊಳಿಸುತ್ತಿತ್ತು. ಆ ವ್ಯಕ್ತಿ, ಈಗ, ಆ ಬದಿಯಲ್ಲಿದ್ದ ಎರಡೂ ಬಾಗಿಲುಗಳನ್ನು ಮುಚ್ಚಿ ಬಿಟ್ಟ. ಯಾಸಿನ್ ಕುಳಿತ ಕಡೆ ಕೆಲ ಕಾಲ ದಿಟ್ಟಿಸಿ ನೋಡಿದ. ಭಯ ಮತ್ತೊಮ್ಮೆ ಯಾಸಿನ್ನನ್ನು ಹಿಂಡಿ ಹಿಪ್ಪೆ ಮಾಡಿತು. ಆ ವ್ಯಕ್ತಿ ಬೋಗಿಯ ಬಾಗಿಲುಗಳನ್ನು ಮುಚ್ಚುತ್ತಿರುವುದೇಕೆ? ನನ್ನನ್ನು ಕೊಂದು, ರಕ್ತ ಸೋರುತ್ತಿರುವ ನನ್ನ ದೇಹವನ್ನು ಬೋಗಿಯಲ್ಲಿಯೇ ಕೊಳೆಯಲು ಬಿಟ್ಟು, ಮುಂದಿನ ಸ್ಟೇಷನ್‌ನಲ್ಲಿ ಇಳಿದುಹೋಗುವುದು ಅವನ ಉದ್ದೇಶವೆ? ರೈಲಿನ ವೇಗ ತಗ್ಗುತ್ತಿತ್ತು. ಯಾವುದೋ ಸ್ಟೇಷನ್ ಹತ್ತಿರದಲ್ಲಿರಬೇಕು. ಆ ವ್ಯಕ್ತಿಯ ನಡೆಯಲ್ಲಿ ಮೊದಲಿಗಿಂತಲೂ ಹೆಚ್ಚು ಆತ್ಮವಿಶ್ವಾಸ ಕಂಡುಬಂತು. ಯಾಸಿನ್‌ನ ಕಡೆಗೆ ನಿಧಾನವಾಗಿ ನಡೆದುಬರುತ್ತಿದ್ದ. ಯಾಸಿನ್‌ಗೆ ಉಸಿರಾಡಲೂ ಕಷ್ಟವಾಗುತ್ತಿತ್ತು. ಭಯದಿಂದ ಮೂಡಿದ ತಣ್ಣನೆಯ ಬೆವರ ಹನಿಗಳು ಮುಖದಿಂದುದುರಿದವು. ಉಸಿರಾಟದ ಸದ್ದು ಸ್ಪಷ್ಟವಾಗಿ ಕೇಳಲಾರಂಭಿಸಿತು. ಉಗುಳು ನುಂಗಲೂ ಅವನಿಂದಾಗಲಿಲ್ಲ. ಆ ಬರ್ತ್‌ನ ಕೆಳಗಡಗಿದ ಅವನಿಗೆ ಕೆಮ್ಮು ಅಥವಾ ಬಿಕ್ಕಳಿಕೆ ಬರದಿದ್ದರೆ ಮಾತ್ರ...





ರೈಲು ಯಾವುದೋ ಸ್ಟೇಷನ್‌ನಲ್ಲಿ ನಿಂತಿತು. ಆ ವ್ಯಕ್ತಿ ನಿರ್ಭಯವಾಗಿ ಬಾಗಿಲವರೆಗೆ ನಡೆದು, ಅದನ್ನು ತೆರೆದು, ರೈಲಿಂದ ಕೆಳಗಿಳಿದು, ಪ್ಲಾಟ್‌ಫಾರಂ ಮೇಲೆ ಬಾಗಿಲಿಗೆ ಹತ್ತಿರದಲ್ಲಿ ನಿಂತುಕೊಂಡ. ಅವನು ತನ್ನ ಒಂದು ಕೈಯನ್ನು ಪ್ಯಾಂಟಿನ ಜೇಬಿನಲ್ಲಿರಿಸಿಕೊಂಡಿದ್ದ. ಯಾವು ದಾದರೂ ಆಯುಧ ಅದರಲ್ಲಿರಬೇಕು- ಪಿಸ್ತೂಲ್, ಚಾಕು? ಯಾಸಿನ್‌ಗೆ ತತ್‌ಕ್ಷಣವೇ ಹೊರಬಂದು ಇನ್ನೊಂದು ಕಡೆಯ ಬಾಗಿಲಿನಿಂದ

ಎಗರಿ ತಪ್ಪಿಸಿಕೊಳ್ಳಬೇಕೆನ್ನಿಸಿತು. ಆದರೆ ಇವನು
ಅಡಗಿ ಕುಳಿತ ಜಾಗದಿಂದ ಹೊರಬರುತ್ತಲೇ, ಆ
ವ್ಯಕ್ತಿ ಇವನ ಹೊಟ್ಟೆಯನ್ನು ಬಗೆಯದೆ
ಬಿಟ್ಟಾನೆಯೆ? ಹೊಟ್ಟೆಯೊಂದೇ ಏಕೆ, ಇವನು
ಚೀರದಂತೆ ಗಂಟಲನ್ನೂ ಕತ್ತರಿಸಿಬಿಡುತ್ತಿದ್ದ.
ಯಾಸಿನ್ ಕಳ್ಳನಂತೆ ಹೊರಗಿಣುಕಿ ನೋಡಿದ. ಆ
ವ್ಯಕ್ತಿ ರೈಲಿನ ಆಚೆ ನೋಡುತ್ತಿದ್ದ. ಪ್ಲಾಟ್‌ಫಾರ
ತೀರಾ ನಿರ್ಜನವಾಗಿತ್ತು, ಕಾಲಿನ ಸಪ್ಪಳವೂ
ಕೇಳುತ್ತಿರಲಿಲ್ಲ. ಯಾಸಿನ್‌ಗೆ ಯಾರಾದರೂ ಈ
ಬೋಗಿಯಲ್ಲಿ ಹತ್ತಿಕೊಳ್ಳಬಾರದೇ ಎಂದೆನಿಸು
ತ್ತಿತ್ತು. ಆದರೆ ಹಾಗೆ ಹತ್ತಿಕೊಂಡವರು
ಯಾರೆಂದು ಹೇಗೆ ಹೇಳುವುದು? ಹಿಂದೂ?
ಮುಸ್ಲಿಂ? ಅವನು ಮತ್ತೊಬ್ಬ ಹಿಂದೂವಾಗಿ
ದ್ದರೂ ಪರವಾಯಿಲ್ಲ, ಆದರೆ ಬಾಬುವಿನ ತರಹ
ಹೃದಯವಂತನಾಗಿರಲಿ. ಎಷ್ಟೊಂದು ಚಾಕ
ಚಕ್ಯತೆಯಿಂದ ಬಾಬು ತನ್ನ ಕೊರಳಲ್ಲಿ
ಜನಿವಾರವನ್ನು ಇವನಿಗೆ ಹಾಕಿ, ಇವನನ್ನು ಟಿ
ದುಖಾನದ ಹತ್ತಿರದ ತನ್ನ ಗುಡಿಸಲಿಗೆ ಕರೆದ
ಕೊಂಡು ಹೋಗಿದ್ದ! ಯಾಸಿನ್‌ನನ್ನು ಅಲ್ಲಿ
ನಾಲ್ಕು ದಿನಗಳವರೆಗೆ ಇಟ್ಟುಕೊಂಡಿದ್ದ. ''ನಾನ
ಮರಾಠಿ. ಆದರೆ ನಾನು ದಿನನಿತ್ಯ ಮಾಂ
ತಿನ್ನುವುದಿಲ್ಲ. ನಿನಗೆ ಬೇಕೆಂದರೆ ನಾನು ಸ್ಟೇ
ಹೊರಗಿಂದ ತೆಗೆದುಕೊಂಡು ಬರುತ್ತೇನೆ. ಆದ
ಯಾವ ಮಾಂಸ ಸಿಗುತ್ತದೆಂದು ನನಗೆ ಖಂಡಿತ
ಗೊತ್ತಿಲ್ಲ. ನನಗೆ ಹಲಾಲ್-ವಲಾಲ್ ಎಂದ
ಗೊತ್ತಾಗುವುದಿಲ್ಲ. ಹೊರಗಡೆ ಪರಿಸ್ಥಿ
ಎಷ್ಟೊಂದು ಹದಗೆಟ್ಟಿದೆಯೆಂದರೆ ಅಂಧೇ
ಯಲ್ಲಿ ತರಕಾರಿಗಳು ಕೊಳೆಯುತ್ತಿದ್ದರೂ ಅದನ್ನ
ಮಾರುವವರಿಲ್ಲ. ನಿನಗೆ ಎಷ್ಟು ಬೇಕೋ ಅಷ್ಟ
ಲೂಟಿ ಮಾಡಬಹುದು'' ಎಂದಿದ್ದ.

ಅದೇನೇ ಇದ್ದರೂ ಬಾನುಲಿ ಏಕಪ್ರಕಾ
ವಾಗಿ ಬಿತ್ತರಿಸುತ್ತಲೇ ಇತ್ತು, 'ಶಹರದಲ್ಲಿ
ಪರಿಸ್ಥಿತಿ ಕ್ರಮೇಣವಾಗಿ ಸಹಜ ಸ್ಥಿತಿಗೆ ಮರಳ
ತ್ತಿದೆ. ರೈಲುಗಳು ಓಡಾಡುತ್ತಿವೆ. ಕೆಲವು ಕಡೆಗಳ

ಬಸ್ಸುಗಳೂ ಓಡಾಟವನ್ನು ಪ್ರಾರಂಭಿಸಿವೆ'. ಆ ನಾಲ್ಕು ದಿನಗಳಲ್ಲಿ ತನ್ನ ಕುಟುಂಬದ ಬಗ್ಗೆ ತುಂಬಾ ಚಿಂತೆಯಾಗಿತ್ತು. ಅವರೂ ತನ್ನ ಬಗ್ಗೆ ಚಿಂತಿಸುತ್ತಿರಬೇಕು. ಅವನಿಗೆ ಒಂದು ವಿಷಯದ ಬಗ್ಗೆ ತುಂಬಾ ಹೆದರಿಕೆಯಿತ್ತು. ಅಪ್ಪಿ ತಪ್ಪಿ ತನ್ನನ್ನು ಹುಡುಕಲೆಂದು, ಫಾತಿಮಾ, ಬೇಕರಿಯ ತನಕ ಬಂದುಬಿಟ್ಟರೆ? ಅವನು ಅಡಗಿಕೊಂಡ ಗುಡಿಸಲಿನಿಂದ ರೈಲ್ವೇ ಹಳಿಗಳು ಚೆನ್ನಾಗಿ ಕಾಣುತ್ತಿದ್ದವು. ರೈಲುಗಳು ಅಡ್ಡಾಡುತ್ತಿದ್ದರೂ ಬಾಬು ಅವನನ್ನು ಹೊರಹೋಗಲು ಬಿಟ್ಟಿರಲಿಲ್ಲ.

ರೈಲು ಮೈಕುಲುಕಿಸಿ ಪ್ರಾರಂಭವಾಗಿದ್ದರಿಂದ ಯಾಸಿನ್ ವಾಸ್ತವಕ್ಕೆ ಬಂದ. ಆ ವ್ಯಕ್ತಿ ಬಾಗಿಲನ್ನು ಎಡಗೈಯಿಂದ ಹಿಡಿದುಕೊಂಡು, ನೆಮ್ಮದಿಯಿಂದ ನಿಂತಿದ್ದ. ಅವನ ಬಲಗೈ ಇನ್ನೂ ಪ್ಯಾಂಟ್ ಜೇಬಿನಲ್ಲೇ ಇತ್ತು. ರೈಲು ಸ್ವಲ್ಪ ದೂರದ ತನಕ ನಿಧಾನಕ್ಕೆ ಚಲಿಸುತ್ತಿತ್ತು. ಯಾಕಾದರೂ ಇದು ವೇಗವನ್ನು ಪಡೆದುಕೊಳ್ಳುತ್ತಿಲ್ಲ? ಹಸಿರು ನಿಶಾನೆ ಸಿಕ್ಕಿಲ್ಲವೆಂದು ಹೇಳಲು, ಹೆಚ್ಚು ರೈಲುಗಳೂ ಚಲಿಸುತ್ತಿಲ್ಲ. ಇದುವರೆಗೆ ಯಾವುದೇ ರೈಲು ವಿರುದ್ಧ ದಿಕ್ಕಿನಿಂದ ಹೋಗಿರಲಿಲ್ಲ. ಆದರೂ ರೈಲು ಬಹುದೂರದವರೆಗೆ ನಿಧಾನಕ್ಕೆ ಚಲಿಸುತ್ತಿತ್ತು. ಮತ್ತಷ್ಟು ದೂರ ನಿಧಾನಕ್ಕೆ ಚಲಿಸಿದ ನಂತರ, ಕಡೆಗೆ, ಭಯಾಂದರ್ ಸೇತುವೆಯ ಬಳಿ ನಿಂತಿತು. ವೃತ್ತಪತ್ರಿಕೆಗಳ ಪ್ರಕಾರ, ಸೇತುವೆಯ ಕೆಳಗಿನ ಸಮುದ್ರದಲ್ಲಿ, ಹೆಣಗಳು ಮೀನಿನಂತೆ ಹರಿದಾಡುತ್ತಿದ್ದವು.

ಯಾಸಿನ್‌ಗೆ ಈಗ ಉಸಿರಾಡಲು ಕಷ್ಟವಾಗಲಾರಂಭಿಸಿತು. ಭಯದಿಂದ ಜೀವ ತತ್ತರಿಸುತ್ತಿತ್ತು. ಆ ವ್ಯಕ್ತಿ ಪ್ಯಾಂಟ್ ಜೇಬಿನಿಂದ ಕೈಯನ್ನು ಯಾಕೆ ತೆಗೆಯುತ್ತಿಲ್ಲ? ಅವನ ಕಣ್ಣನ್ನು ನೋಡಿದರೆ, ಅವನು ತನ್ನ ಮೇಲೆ ಎರಗಲು ಸಿದ್ಧನಾಗುತ್ತಿದ್ದಾನೆ ಎಂಬುದು ಸ್ಪಷ್ಟವಾಗಿತ್ತು. ಅವನು ಹಾಗೆ ಎರಗಿದಾಗ ಏನಾಗಬಹುದು? ಅವನು ನನ್ನನ್ನು ಹೊರಗೆ ಬಾ ಎಂದು ಹೇಳುತ್ತಾನೆಯೆ? ಅಥವಾ ನನ್ನ ಕೂದಲನ್ನು ಹಿಡಿದೆಳೆದು ಮಿಂಚಿನ ವೇಗದಲ್ಲಿ ಕುತ್ತಿಗೆಗೆ ಚೂರಿ ಹಾಕುತ್ತಾನೆಯೆ? ಏನು ಮಾಡುತ್ತಾನೆ? ಅವನು ಏನಾದರೂ ಯಾಕೆ ಮಾಡುತ್ತಿಲ್ಲ?


ಒಮ್ಮಿಂದೊಮ್ಮೆಲೆ, ಆ ವ್ಯಕ್ತಿ ಜೇಬಿನಿಂದ ತನ್ನ ಕೈಯನ್ನು ತೆಗೆದು, ಬಾಗಿಲನ್ನು ಹಿಂದಕ್ಕೆ ಮುಂದಕ್ಕೆ ಜರುಗಿಸುತ್ತಾ, ಮೂರನೆಯ ಬಾಗಿಲನ್ನೂ ಮುಚ್ಚಿಬಿಟ್ಟ. ಈಗ ಪಾರಾಗುವ ಎಲ್ಲಾ ದಾರಿಗಳು ಮುಚ್ಚಿಬಿಟ್ಟಿದ್ದವು. ಒಂದು ವೇಳೆ ಅವನು ತಪ್ಪಿಸಿಕೊಳ್ಳಲು ಎಗರಿದರೂ ಸಮುದ್ರಕ್ಕೆ ಬಿದ್ದು ಸಾಯುತ್ತಿದ್ದ. ಯಾಸಿನ್ ಭಯದ ತುತ್ತ ತುದಿಯನ್ನು ಮುಟ್ಟಿದ್ದ.

ಮಿಂಚಿನ ವೇಗದಲ್ಲಿ ಅವನು ಅಡಗಿ ಕುಳಿತಿದ್ದ ಸ್ಥಳದಿಂದ ಹೊರಬಂದ. ಆ ವ್ಯಕ್ತಿ ಇವನೆಡೆ ಆಶ್ಚರ್ಯ ತುಂಬಿದ ಕಂಗಳಿಂದ ನೋಡಿ, ಮತ್ತೆ ತನ್ನ ಕೈಯನ್ನು ಪ್ಯಾಂಟಿನ ಜೇಬಿಗೆ ಹಾಕಿದ. ಯಾಸಿನ್‌ಗೆ ತನಗಷ್ಟೊಂದು ಶಕ್ತಿ ಎಲ್ಲಿಂದ ಬಂತೆಂದು ನಿಜಕ್ಕೂ ಗೊತ್ತಿಲ್ಲ. ''ಯಾ ಅಲ್ಲಾ'' ಎಂದು ಕೂಗುತ್ತಾ ಆ ವ್ಯಕ್ತಿಯ ಕಾಲನ್ನು ಹಿಡಿದೆಳೆದು ಅವನನ್ನು ದಬ್ಬಿಬಿಟ್ಟ. ಆ ವ್ಯಕ್ತಿ ಸಮುದ್ರಕ್ಕೆ ಬೀಳುವಾಗ, ''ಅಲ್ಲಾ....'' ಎಂದು ಚೀರಿದ್ದು ಯಾಸಿನ್‌ಗೆ ಕೇಳಿಸಿತು.

ಯಾಸಿನ್ ನಿಶ್ಚಲನಾಗಿ ನಿಂತುಬಿಟ್ಟ. ರೈಲು ಚಲಿಸಲಾರಂಭಿಸಿತು. 'ಅವನೂ ಮುಸಲ್ಮಾನರವನೆ?' ಎಂದು ಯಾಸಿನ್‌ಗೆ ಆಶ್ಚರ್ಯವಾಯ್ತು. ಆದರೆ ಭಯದ ಕಪಿಮುಷ್ಟಿಯಿಂದ ಬಿಡುಗಡೆ ಹೊಂದಿದ್ದ ಯಾಸಿನ್‌ಗೆ ಸಾವಿನ ದವಡೆಯಿಂದ ತಪ್ಪಿಸಿಕೊಂಡಂತೆನ್ನಿಸುತ್ತಿತ್ತು.

ಆ ರಾತ್ರಿ ಅವನು ಫಾತಿಮಾಗೆ ''ಎಲ್ಲಾ ಹಾಗಾಗೋಯ್ತು. ನನಗೆ ತತ್‌ಕ್ಷಣದಲ್ಲಿ ಮುಸ್ಲಿಂ ಎಂದು ಹೇಳಿಕೊಳ್ಳಲಿಕ್ಕೆ ಯಾವುದೇ ಪುರಾವೆಯಿರಲಿಲ್ಲ'' ಎಂದು ಹೇಳಿದ.

ಬೆಳದಿಂಗಳಲ್ಲಿ ಕುಂಚ ಅದ



■ ಜಯಂತ

ಅಜ್ಜನೊಬ್ಬ ಕನ್ನಡಕವನ್ನು ಕೈಲಿ ಹಿಡಿದು, ಅದರ ಗಾಜಿನಲ್ಲಿ ತೇಲು
ತ್ತಿರುವ ಚಂದ್ರನ ಪುಟ್ಟ ಬಿಂಬವನ್ನು ಪಕ್ಕದಲ್ಲಿ ಕೂತ ಅಜ್ಜಿ
ತೋರಿಸುತ್ತಿದ್ದಾನೆ... ಬಟ್ಟೆ ಒಗೆಯುತ್ತಿರುವ ಹೆಂಗಸೊಬ್ಬ
ಬಕೆಟ್‌ನ ನೀರಿನಲ್ಲೂ ಪುಟ್ಟ ಚಂದ್ರಬಿಂಬ ತೇಲುತ್ತಿದೆ...


ಕೆನೆಯುವ ಕುದುರೆಯ ಬೆನ್ನಮೇಲೆ ನಿಂತ ಉನ್ಮತ್ತ ಅಭಿಸಾರಿ
ಜೋಲಿ ಹೋಗದಂತೆ ಚಂದ್ರನನ್ನೇ ಹಿಡಿದುಕೊಂಡಿದ್ದಾಳೆ...


ಕಲೆಗಾರ ಪ.ಸ.ಕುಮಾರ್, ಈಗ ಚಿತ್ರಿಸುತ್ತಿರುವ
'ಚಂದ್ರನನ್ನು ಹಿಡಿಯಲು' ಎಂಬ ಸರಣಿಯ ಬಿಂಬಗಳು ಇವ
ಚಂದ್ರನನ್ನು ಹಿಡಿಯಲು ಬಣ್ಣದ ಬಲೆ ಬೀಸುತ್ತಲೇ ಇರುವುದ
ಕಲಾವಿದ ಕುಮಾರ್‌ರ ನಿರಂತರ ಗೀಳು! ಮಾತಿಗೆ ನಿಲುಕ
ಬೆಳದಿಂಗಳು ಅವರ ಧ್ಯಾನ.

ಅಮ್ಮನೇ ಬೇರು

1949 ಅಕ್ಟೋಬರ್ 26ರಂದು ಮೈಸೂರಲ್ಲಿ ಹುಟ್ಟಿದ ಪ
ಸಂಪತ್‌ಕುಮಾರ್, ಬೆಳೆದದ್ದು ಬೆಂಗಳೂರಿನ ಇಕ್ಕಟ್ಟಾ
ರಾಮಚಂದ್ರಪುರದಲ್ಲಿ. ತಂದೆ ಪರಶುರಾಮ್, ಕಟ್ಟಡ








ಕೆಲಸಗಾರರಾಗಿದ್ದರು. ''ನನ್ನೆಲ್ಲ ಆಸಕ್ತಿಗಳ ಮೂಲ ರೂವಾರಿ ನನ್ನ ಅಮ್ಮ ಧನಲಕ್ಷ್ಮಿ. ಆಕೆ ತನ್ನ ಕಾಲದಲ್ಲೇ ಸೇಂಟ್ ಫಿಲೋಮಿನಾ ಶಾಲೆಯಿಂದ ಫಸ್ಟ್‌ಕ್ಲಾಸಲ್ಲಿ ಪಾಸಾದವಳು. ಚಂದದ ಚಿತ್ರ ಬಿಡಿಸ್ತಾ ಇದ್ದಳು. ಅಷ್ಟೇ ಸುಂದರವಾಗಿ ಹಾಡ್ತಾ ಇದ್ದಳು. ಈಗಲೂ ಹಾಗೇ ಇದ್ದಾರೆ. ಅವರು ಈಗಲೂ ಬಿಡಿಸುವ ಚಿತ್ರ ನೋಡಿದರೆ - ನನ್ನ ಹವ್ಯಾಸದ ಬೇರು ಎಲ್ಲಿದೆ ಅಂತ ನಿಮಗೆ ಗೊತ್ತಾಗುತ್ತೆ'' ಎನ್ನುವ ಕುಮಾರ್, ಶಾಲಾದಿನಗಳಿಂದಲೇ ಚಿತ್ರಗಳಲ್ಲಿ, ರೇಖೆಗಳಲ್ಲಿ ಆಸಕ್ತಿ ಹೊಂದಿದ್ದರು. ಎಲ್ಲದರಲ್ಲಿ ಚೂಟಿಯಾಗಿದ್ದ ಸಂಪತ್‌ಕುಮಾರ್ ಪಿಯುಸಿಯಲ್ಲಿ, ಇಂಗ್ಲಿಷ್ ವಿಷಯದಲ್ಲಿ ಫೇಲ್ ಆದಾಗ ಪುಟ್ಟ ಮನೆಯಲ್ಲಿ ಆಕಾಶವೇ ಕಳಚಿಬಿತ್ತು.

Get out

''ನನ್ನ ಜೀವನ ಒಂದು ವಿಸ್ಮಯಗಳ ಸರಮಾಲೆ. ಇನ್ನೇನು ಡೆಡ್ ಎಂಡ್ ಬಂತು, ದಾರಿಯೇ ಇಲ್ಲ ಎಂದಾಗ ವಿಚಿತ್ರವಾದ ರೀತಿಯಿಂದ ಹೊಸ ದಾರಿಗಳು ತೆರೆದಿವೆ'' ಅನ್ನುತ್ತಾರೆ ಕುಮಾರ್. ಈ ಮೊದಲ ವಿಸ್ಮಯ ಆದದ್ದೇ ಫೇಲಾಗಿ ಮನೇಲಿ ಕೂತಿದ್ದಾಗ. ''ಇಂಗ್ಲಿಷ್ ಕ್ಲಿಯರ್ ಆಗೋತನಕ ಮನೇಲಿ ಕೂತು ಏನ್ಮಾಡ್ತೀಯಾ ಬಾ'' ಎಂದು ನೆರೆಮನೆಯ







ಕವಿತೆಗಾಗಿ ಬಿಡಿಸಿದ
ರೇಖಾ ಪ್ರತಿಮೆಗಳು



ಅಪ್ಪಾಜಿರಾವ್ ಎಂಬುವವರು, ಬಾಳೆಬಂಡಿಯಲ್ಲಿದ್ದ ಶ್ರೀನಿವಾಸ್ ಎಂಬ ಸೈನ್ ಬೋರ್ಡ್ ಕಲಾವಿದರ ಬಳಿ ಕಳಿಸಿದರು. ಎರಡು ಬೆರಳುಗಳು ಇಲ್ಲದಿದ್ದರೂ ತಮ್ಮ ಮೊಂಡು ಕೈಯಿಂದಲೇ ಅದ್ಭುತವಾಗಿ ಸೈನ್ ಬೋರ್ಡ್ ಬರೀತಿದ್ದ ಶ್ರೀನಿವಾಸ್, ಅಕ್ಷರಗಳ ಹೊರ ಅಂಚು ಬರೆದು, "ನೀನೀಗ ತುಂಬು" ಅನ್ನುತ್ತಿದ್ದರು. ಅದರೊಳಗೆ, ತುಸುವೂ ಹೊರ ಚಾಚದಂತೆ ಬಣ್ಣ ತುಂಬಿದ್ದಕ್ಕೆ ದಿನಕ್ಕೆ ನಾಕಾಣೆ ಕಾಸು ಸಿಗುತ್ತಿತ್ತು. ಒಂದು ದಿನ, "ರೆಡೀ ಆಗಿರೋ ಬೋರ್ಡನ್ನು ಹೊತ್ಕೊಂಡು ಚಾಮರಾಜಪೇಟೆಗೆ ಹೋಗಿ ಕೊಟ್ಟು ಬಾ" ಅಂದ್ರು. "ಇಲ್ಲ" ಅಂದದ್ದಕ್ಕೆ, "ಕೊಬ್ಬು ನಿನಗೆ get out" ಅಂದ್ರು.

ನೆರೆಮನೆಯ ಅಪ್ಪಾಜಿರಾವ್ ಈಗ ಮತ್ತೆ ನೆರವಿಗೆ ಬಂದರು. ಪಕ್ಕದ ವಠಾರದಲ್ಲಿದ್ದ ಸಂಪಂಗಮ್ಮ ಎಂಬ ಸಜ್ಜನ ಮಹಿಳೆಯಲ್ಲಿಗೆ ಕರೆದೊಯ್ದರು. ಅವರ ಮಗಳು ಭವಾನಿ ಶಾಲೆಯೊಂದರಲ್ಲಿ ಡ್ರಾಯಿಂಗ್ ಟೀಚರ್ ಆಗಿದ್ರು. ಪುಂಡಪೋಕರಿಗಳ ತಂಡದಿಂದ ಬಂದಂತಿದ್ದ ಹುಡುಗನನ್ನು ನೋಡಿ ಹಿಂಜರಿದರೂ ನಂತರ ಭವಾನಿ ಮಾರ್ಗದರ್ಶನ ಮಾಡಿದರು "ಆರ್ಟ್ ಪರೀಕ್ಷೆ ಪಾಸಾಗಬೇಕು ನೀನು" ಎಂದು ಈ ಸಂಪಂಗಮ್ಮನವರೇ, ಹಡಪದ್ ಅವರ ಬಳಿಗೆ ಹುಡುಗನನ್ನು ಕರೆದೊಯ್ದು ಪರೀಕ್ಷೆಯ ಫೀಸ್ ಕಟ್ಟಿದರು... ಪರೀಕ್ಷೆಗೆ ಹೊರಟಾಗ ಭವಾನಕ್ಕ ತ[illegible] ಶಾಲೆಯಿಂದ ಗುಟ್ಟಾಗಿ ಬಣ್ಣಗಳ ಪೆಟ್ಟಿಗೆ ತಂದುಕೊಟ್ಟು "ಪರೀಕ್ಷೆ ಆದದ್ದೇ- ಹಾಗೇ, ಹಾಳು ಮಾಡದೆ ವಾಪಾಸು ಕೊಡು" ಎಂದು ಪೋರ್ಟ್ ಶಾಲೆಯ ಸೆಂಟರ್‌ಗೆ ತಲುಪಿಸಿ ಹೋದರು. ಅದೇ ವೇಳೆಗೆ ಅ[illegible] ಚಂದ್ರನಾಥ ಆಚಾರ್ಯ ಸಹ ಪರೀಕ್ಷೆಗೆ ಕೂಡಲ ಬಂದಿದ್ದರು. ಅದಾಗಲೇ 'ಮಲ್ಲಿಗೆ'ಯಲ್ಲಿ ಅವ[illegible] ಚಿತ್ರಗಳನ್ನು ನೋಡಿ ಮರುಳಾಗಿದ್ದ ಕುಮಾರ್[illegible] ಅವರನ್ನು ಕಂಡು ರೋಮಾಂಚನ ಆಯಿತು. ಇ[illegible] ಆರ್ಟ್ ಮೊದಲ ದರ್ಜೆಯಲ್ಲಿ ಪಾಸಾದರೆ, ಅ[illegible] ಇಂಗ್ಲಿಷ್ ಕೂಡ ಕ್ಲಿಯರ್ ಆಯ್ತು.

ಒಂದು ದಿನ ಮನೆ ಸಮೀಪದ ರೇಲ್ವೆ ಹಳಿಗ[illegible] ಮೇಲಿಂದ ನಡೆದುಕೊಂಡು ಬರುತ್ತಿದ್ದಾಗ, ಅಲ್ಲೇ ಇದ[illegible] ಬೋಡೇ ಕಾರ್ಖಾನೆಯ ಗೇಟಿನ ಹೊರ[illegible] ಉದ್ಯೋಗಾರ್ಥಿಗಳ ಹಿಂಡೇ ಇತ್ತು. ಹಠಾತ್ತನೆ ಗೇಟು ತೆಗೆದಾಗ ಉಂಟಾದ ನೂಕುನುಗ್ಗಲಲ್ಲಿ ತೇಗೂ


ಕುಮಾರ್ ಸಹ ಸಿಕ್ಕುಬಿದ್ದು, ಕಾರ್ಖಾನೆಯ ಒಳಗೆ ಹೋಗಿಬಿಟ್ಟರು! ಒಳಗೆ ಸಂದರ್ಶನ ನಡೆಯುತ್ತಿತ್ತು. 'ಯಾಕೆ ಒಂದು ಕೈ ನೋಡಬಾರ್ದು?' ಅನಿಸಿತು. ''ಇಂಗ್ಲಿಷ್ ಬರುತ್ತಾ?'' ಅಂತ ಕೇಳಿದರು. ''ಯೆಸ್'' ಎಂದಾಗ, ಒಂದಿಷ್ಟು ಓದಲು ಹೇಳಿ, ''ನಾಳೆಯಿಂದ ಬಾ. ಸ್ಟೋರ್ಸ್ ಇನ್‌ಚಾರ್ಜ್. ತಿಂಗಳಿಗೆ 300 ರೂ.'' ಎಂದರು. 1968ರಲ್ಲಿ ಅದೊಂದು ಮಹಾ ಲಾಟರಿ! ವಿಸ್ಮಯ ನಂಬರ್ ಟೂ. ಒಂದು ದಿನ ಸ್ಟೋರ್‌ನಲ್ಲಿ ತನ್ನೆದುರೇ, ಹೇಳದೇ ಕೇಳದೇ ವ್ಯಕ್ತಿಯೊಬ್ಬ ಏನನ್ನೋ ಕೈಹಾಕಿ ತೆಗೆಯುತ್ತಿರುವುದನ್ನು ಕಂಡು ಕುಮಾರ್, ''ರೀ... ಯಾರ್ರೀ ಅದು. ನನ್ನ ಕೇಳದೆ ಕೈಹಾಕೋರು'' ಎಂದು ಗದರಿಸಿದಾಗ, ಆ ವ್ಯಕ್ತಿ ಉತ್ತರಿಸುವ ತೊಂದರೆಯನ್ನು ತಗೊಳ್ಳದೆ ರಪ್ಪನೆ ಕೆನ್ನೆಗೆ ಏಟು ಬಿಗಿದರು. ಆತ ಪೋಡೇ ಸೋದರರಲ್ಲಿ ಒಬ್ಬರು ಅಂತ ನಂತರ ಗೊತ್ತಾಯಿತು. ''ನನ್ನ ಕೆಲಸ ನಾನು ಮಾಡ್ದೆ. ನೀವ್ಯಾರು ಅಂತ ನನಗೆ ಹ್ಯಾಗೆ ಗೊತ್ತಾಗೋದು ಸಾರ್'' ಎಂದು ಕೇಳಿದಾಗ, ''Get out'' ಅಂದರು. ಹೀಗೆ get out ನಂಬರ್ ಟೂ ಸಹ ಆಯ್ತು.

ಹಡಪದ್ ಇಫೆಕ್ಟ್

ಈ ಮಧ್ಯೆ ಹಡಪದ್‌ರ ಶಾಲೆಯಲ್ಲಿ ಕಲಿಕೆ ನಡೆದಿತ್ತು. ಅದಕ್ಕೆ ನೆರವಾಗುವಂತೆ, ಹಡಪದರು ಕೆಲಸ ಬಿಟ್ಟಿದ್ದ ಶಿಷ್ಯನಿಗೆ, 'ಟೆಕ್ಸ್‌ಟೈಲ್ ಡಿಸೈನಿಂಗ್' ಕೆಲಸವೊಂದನ್ನು ಕೊಡಿಸಿದರು. ''ಅದು ನನಗೆ ಗೊತ್ತಿಲ್ಲ ಸಾರ್'' ಎಂದರೆ, ''ಬಳೇಪೇಟೆಗೆ ಹೋಗೋ. ನಾಕಾರು ಸೀರೆ ಅಂಗಡಿ ಸುತ್ತಾಡು. ಸೀರೆ ಮೇಲಿನ ನಕ್ಷಾ ನೋಡು. ಅದರ ಅಪ್ಪನಂಥ ಚಿತ್ರ ಬರೀಬಲ್ಲೆ ನೀನು'' ಎಂದು ಹುರಿದುಂಬಿಸಿ ಕಳಿಸಿದರು. ''ಸಂತೋಷವಾಗಿರಬೇಕು. ಅದೇ ಕಲೆಯ ಮರ್ಮ'' ಎನ್ನುವ ಹಡಪದರು ತಮ್ಮ ಶಾಲೆಗೆ ವಿಜ್ಞಾನಿಗಳನ್ನು, ರಂಗಭೂಮಿಯ ಕಲಾವಿದರನ್ನು, ಸಾಹಿತಿಗಳನ್ನು ಅತಿಥಿಗಳನ್ನಾಗಿ ಕರೆಯುತ್ತಿದ್ದರು. ಇಂಥ ವಿಭಿನ್ನ, ವಿಶಾಲ ಕ್ಷೇತ್ರಗಳಿಂದ ಬಂದ ಪ್ರತಿಭಾವಂತರ ಮನಸ್ಸುಗಳ ಸಂಗಮದಿಂದ ಅಲ್ಲೊಂದು ಡೈನಾಮಿಕ್ ಆದ ವಾತಾವರಣವಿತ್ತು. ಇಲ್ಲೇ, ಜಗತ್ತು, ಬದುಕು ಮತ್ತು ಸೌಂದರ್ಯದ ಬಗ್ಗೆ ಕುಮಾರ್‌ರ ಒಳನೋಟವೊಂದು ಖಚಿತವಾಗಿ ರೂಪುಗೊಂಡಿತು.



ಏಕ ವರ್ಣ





ಕುಶಾಲ್ ಬಿಡಿಸಿದ 'ಮನೆ'



ಪತ್ನಿ ಪ್ರೇಮಕುಮಾರಿ, ಮಕ್ಕಳು- ಕುಶಾಲ್, ಪ್ರತಿಭಾ ಮತ್ತು ಕುಸುಮ

ಈ 'ಹಡಪದ್ ಇಫೆಕ್ಟ್' ಅವರ ಜೀವನ ಶೈಲಿಯನ್ನು ಪ್ರಭಾವಿಸತೊಡಗಿತು. ಸಂಗೀತ, ಮತ್ತು ಸಾಹಿತ್ಯ ದಲ್ಲೂ ಅಪಾರವಾದ ಹುಚ್ಚು ಬೆಳೆಯಿತು.

ಜೀವನರೇಖೆ


'ಪ್ರಜಾವಾಣಿ' ಬಳಗದಲ್ಲಿ ಆಗಲೇ ಇದ್ದ ಕಲಾವಿದ 'ಶ್ರೀ' ಕುಮಾರ್‌ರ ರೇಖೆಗಳನ್ನು ನೋಡಿ ಅವರನ್ನು 'ಪ್ರಜಾಮತ'ಕ್ಕೆ ಪರಿಚಯಿಸಿದರು. ಹೀಗಾಗಿ, 1972ರಲ್ಲಿ, ಪಿ.ಸಂಪತ್ತುಮಾರ್ ಪ.ಸ.ಕುಮಾರ್ ಆಗಿ 'ಪ್ರಜಾಮತ'ದ ಮೂಲಕ 'ರೇಖಕ'ರಾದರು. 1986ರ ತನಕ ಅಲ್ಲಿದ್ದ ಕುಮಾರ್, 'ತುಳಸೀದಳ' ಕಾದಂಬರಿಯ ತಮ್ಮ ಚಿತ್ರಗಳ ಮೂಲಕ ಕರ್ನಾಟಕದ ಮನೆಮಾತಾದರು. ಹೋದಲ್ಲೆಲ್ಲ ಪ.ಸ.ಕುಮಾರ್ ಅಂದ ತಕ್ಷಣ, ''ನೀವು ತುಳಸೀದಳದ ಚಿತ್ರಕಲಾವಿದರಲ್ಲವೇ?'' ಎಂದು ಜನ ಕೈಕುಲುಕುತ್ತಿದ್ದರು.

''ಕಲಿಯುತ್ತಿದ್ದಾಗ ರಾವುಂಡ್ ಇಷ್ಟವಾಗುತ್ತಿದ್ದ. ನಂತರ ಕೆಲಸ ಮಾಡುತ್ತ ಹೋದ ಹಾಗೆ ಪಿಕಾಸೋ, ಸೆಜಾನ್, ಪಾಲ್‌ಕ್ಲೀ ಇಷ್ಟವಾದರು'' ಎನ್ನುವ ಕುಮಾರ್, ಆಯ್ಲ್ ಬ್ರಶ್‌ನಲ್ಲಿ ಪೋಸ್ಟರ್ ಕಲರನ್ನು ಬಳಸಿ, ಕುತೂಹಲಕಾರಿ ಪರಿಣಾಮಗಳನ್ನು ಸಾಧಿಸುವಲ್ಲಿ ನಿಸ್ಸೀಮರಾಗಿದ್ದರು. ಆಗಲೇ ಐಬಿಎಚ್‌ದಂಥ ಎಷ್ಟೋ ಪ್ರತಿಷ್ಠಿತ ಪ್ರಕಾಶನಗಳ ಪುಸ್ತಕ ಮುಖಚಿತ್ರ ವಿನ್ಯಾಸದ ಕೆಲಸ ಇವರ ಮಡಿಲಿಗೆ ಬಂದು ಬೀಳತೊಡಗಿತು. ಕೆಲಸದ ಒತ್ತಡ ಜಾಸ್ತಿಯಾದಾ ಕುಮಾರ್, 'ಪ್ರಜಾಮತ'ವನ್ನು 1986ರಲ್ಲಿ ಬಿಟ್ಟು ಸ್ವತಂತ್ರವಾಗಿ 'ಸ್ಟುಡಿಯೋ ಸ್ನೇಹಾ' ಮಾಡಿಕೊಂಡ ಚಿತ್ರಗಳನ್ನು ಮಾಡತೊಡಗಿದರು. ಆ ವೇಳೆಗ 'ಆಸ್ಫೋಟ', 'ಶಿಕಾರಿ', 'ಪಂಚಮವೇದ'ದಂ ಚಿತ್ರಗಳ ಭಿತ್ತಿಚಿತ್ರಗಳನ್ನು ಹೊಸ ರೀತಿಯ ರಚಿಸಿದರು.

ತಮ್ಮ ಈ ಕಸುಬಿನ ಜತೆ ನಾಡಿನ ಕಲ ಚಳವಳಿಗಳಲ್ಲೂ ತುಂಬ ಸಕ್ರಿಯವಾಗಿ ತೊಡಗಿ ಕೊಂಡರು. 'ಮನೋಳಿ, ಹುಬ್ಳೀಕರ್, ಹಡಪದ ಮತ್ತು ಪಟೇಲ್'-ಈ ನಾಲ್ವರ V4 ಕೂಟ ಕಲಾಪದಿಂದ ಸ್ಫೂರ್ತಿಪಡೆದರು. ಕೆ.ಟಿ. ಶಿ ಪ್ರಸಾದ್, ಚಂದ್ರಶೇಖರ್, ಮತ್ತು ಮಣಿ ಇವ ಜತೆಗೆ ಕಲಾಮೇಳದಲ್ಲಿ ಪಾಲ್ಗೊಂಡು, ಕರ್ನಾಟಕ ಮೂಲೆ ಮೂಲೆಗೆ ಹೋಗಿ ಪ್ರಾತ್ಯಕ್ಷಿಕೆ ಮಾಡಿದರು.

''ನಾಲ್ಕು ವರ್ಷ, ಸಾವಿರಾರು ಪುಸ್ತಕಗಳ ಮು ಪುಟ ಮಾಡಿ ಮಾಡಿ ಸುಸ್ತಾಗಿ, ಒಂದು ದಿನ ಸಾಕ ಎಂದು ನಿಲ್ಲಿಸಿಬಿಟ್ಟೆ. ನಾನು ತುಂಬಾ ಗೌರವಿಸು ವೈಎನ್ಕೆ ಕರೆದರು. 'ಕನ್ನಡಪ್ರಭ' ಸೇರಿಕೊಂಡೆ. ಇ ನನ್ನ ರೇಖಾಜೀವನದ ಮೂರನೆಯ ಸ್ಟೇಜು. ಇ


ತಾಯಿ ಧನಲಕ್ಷ್ಮಿ ಮತ್ತು ಅವರು ಬಿಡಿಸಿದ ಚಿತ್ರ.







ಎಡಗೈಯಿಂದ ಬಿಡಿಸಿದ ಚಿತ್ರ



ತೈಲವರ್ಣ



ಸ್ಪ್ರೇವರ್ಕ್ (ತುಂತುರು ಬಣ್ಣ)




ಜಲವರ್ಣ

ನನಗೆ ತುಂಬಾ ಸ್ವಾತಂತ್ರ್ಯ, ಅವಕಾಶ ಮತ್ತು ವೈಎನ್ಕೆ ಯಂಥ ಅದ್ಭುತ ಎಡಿಟರ್ ಸಿಕ್ಕರು'' ಎನ್ನುವ ಕುಮಾರ್, ಈಗ ಅಲ್ಲೇ ಕಲಾವಿಭಾಗದ ಮುಖ್ಯಸ್ಥರಾಗಿದ್ದಾರೆ.


ತಮ್ಮ ಪತ್ರಿಕಾ ಬಳಗದ್ದೇ ಆದ 'ಸಂಗೀತಗಾರರ ಕೂಟ'ವೊಂದನ್ನು ಕಟ್ಟಿಕೊಂಡಿರುವ ಹಾಡುಗಾರ, ಸಿನೆಮಾಪ್ರೇಮಿ ಕುಮಾರ್, ಟೀವಿ ಸೀರಿಯಲ್‌ಗಳಲ್ಲೂ ನಟಿಸಿದ್ದಾರೆ. ತಾವು ಬರೆದ 'ವಿದಾಯ' ಎಂಬ ಕತೆಯನ್ನು ಕೀಶವ ಮಳಗಿ ಮೆಚ್ಚಿ 'ಸಂಗಾತಿ'ಯಲ್ಲಿ ಪ್ರಕಟಿಸಿದ್ದನ್ನು, ಅದಕ್ಕೆ ಟಿ.ಕೆ.ರಾಮರಾವ್ ಹೊಗಳಿ ಪತ್ರ ಬರೆದದ್ದನ್ನು, ಇಂದಿಗೂ ಖುಷಿಯಿಂದ ನೆನೆಯುತ್ತಾರೆ.

ಮನೇಲಿ ಅಥವಾ ಸ್ಟುಡಿಯೋದಲ್ಲಿ ಅವರು ಆಲಾಪವೊಂದನ್ನು ಗುಣುಗುಣಿಸುತ್ತಿದ್ದಾರೆ ಎಂದರೆ, ಅವರು ಚಿತ್ರರಚನೆಯಲ್ಲಿ ತನ್ಮಯರಾಗಿದ್ದಾರೆ ಎಂದೇ ಅರ್ಥ.

''ಕೋಬಾಲ್ಟ್ ಬ್ಲೂ-ನನ್ನ ಅತ್ಯಂತ ಇಷ್ಟದ ಬಣ್ಣ. ಆಕಾಶದ ನೀಲಿ ಎಷ್ಟೊಂದು ಹಿತ ಕೊಡುತ್ತಲ್ಲ. ನಾವದನ್ನು ನೋಡ್ತಾನೇ ಇರಬಹುದು'' ಎನ್ನುವ ಕುಮಾರ್, ತಮ್ಮ ಜಲವರ್ಣಗಳ ಅಪ್ರತಿಮ ಹಿಡಿತ, ಚಲನಶೀಲ ಅನಾಟಮಿ ಮತ್ತು ಚೈತನ್ಯಶಾಲಿ ರೇಖೆಗಳಿಂದಾಗಿ ಅತ್ಯಂತ versatile ಕಲಾವಿದ ರೆನಿಸಿಕೊಂಡಿದ್ದಾರೆ. ಕವಿತೆಗಳಿಗೆ ಅವರು ಕೆಲವೇ ಸೂಕ್ಷ್ಮ ರೇಖೆಗಳಿಂದ ಬಿಡಿಸುವ ಪ್ರತಿಮೆಗಳದ್ದೇ ಒಂದು ಲಾವಣ್ಯ ಇದೆ. ಕೇವಲ ಏಕ ವರ್ಣದಲ್ಲೇ ನೆಳಲು ಬೆಳಕಿನ ಆಳವಾದ ಅನುಭವವನ್ನು ಮೂಡಿಸುವ ಪ್ರತಿಭೆ ಅವರದು. ತುಂತುರು ಬಣ್ಣ (ಸ್ಪ್ರೇ ವರ್ಕ್)ದಲ್ಲಿಯೂ ಪ್ರಯೋಗಗಳನ್ನು ಮಾಡಿರುವ ಕುಮಾರ್‌ಗೆ ತೈಲವರ್ಣ ಹೆಚ್ಚು ಇಷ್ಟ.



ಏಕ ವರ್ಣ




ಖ್ಯಾತ 'ತುಳಸೀ ದಳ'ದ ಒಂದು ಚಿತ್ರ.


"ಲೆಫ್ಟ್ ಹ್ಯಾಂಡ್ ಡ್ರೈವ್"

ಈಚೆಗೆ, 1998ರಲ್ಲಿ, ಅಪಘಾತವೊಂದರಲ್ಲಿ ಅವರ ಬಲಗೈ ಮುರಿಯಿತು. ಪ್ಲಾಸ್ಟರ್ ಕಟ್ಟಿಕೊಂಡು ಆಸ್ಪತ್ರೆಯಲ್ಲಿದ್ದಾಗ, ಮುಂದೇನು ಎಂದು ವಿಭ್ರಾಂತರಾದರು. ಆದರೆ ಒಳಗಿನ ಕಲಾವಿದ ಸುಮ್ಮನಿರಲಿಲ್ಲ. "ಒಂದು ವೇಳೆ ಬಲಗೈ ಮರಳಿ ಬಳಸಲಾಗದೇ ಹೋದರೆ" ಎಂಬ ಆತಂಕದಿಂದ, ಮೆಲ್ಲಗೆ, ಎಡಗೈಯಿಂದ, ಆಸ್ಪತ್ರೆಯಲ್ಲೇ ಕೂತು ಚಿತ್ರ ರಚಿಸತೊಡಗಿದರು. ಅವರ ಈ ವಿಶಿಷ್ಟ 'ಲೆಫ್ಟ್ ಹ್ಯಾಂಡ್ ಡ್ರೈವ್' ಚಿತ್ರಗಳು, ಸರಿಹೋಗಿರುವ ಬಲಗೈಯನ್ನು ಅಣಕಿ... ವಷ್ಟು ಕಸುವನ್ನು ಹೊಂದಿವೆ.

"ನಾನು ನನ್ನ ಕ್ಯಾನ್‌ವಾಸ್‌ಗೆ ಪ್ರಾಮಾಣ... ನಾಗಿರಬೇಕು. ನನಗಿಂತ ದೊಡ್ಡವರು ನನ್ನ ಕಣ್ಣ... ರೋತನಕ ಖಂಡಿತ ನನ್ನ ಅಹಂಕಾರ ಬೆಳೆಯೋದಿ... ನಾನು ಹೊಸದಾಗಿ ಏನು ಮಾಡಬಲ್ಲೆ, ನನ್ನ ಅತ್ಯುತ್ತ... ವನ್ನು ಹೇಗೆ ಕೊಡಬಲ್ಲೆ ಎಂಬುದೇ ಕಲಾವಿದ... ಗುಂಗಾಗಿರಬೇಕು. 'ನಾನು ಏನಾಗಿ ಮೆರೀತಿದೀ... ಎನ್ನುವ ಮೈಮರೆವು, ಕಲೆಯ ಜೀವವನ್ನೇ ಕಸಿ... ಬಹುದು" ಎನ್ನುವ ಅವರ ವಿನೀತ ಭಾವ, ಈ... ಮೇಲಿನ ಘಟನೆ ಉತ್ತಮ ಉದಾಹರಣೆ!

ವರುಷವೊಂದರ ಹಿಂದೆ ಅವರ ಮಗ ಹಠಾತ್... ತೀವ್ರ ಅನಾರೋಗ್ಯಕ್ಕೊಳಗಾದ. ಅನಿವಾರ್ಯವಾ... ಕಿಡ್ನಿ ಕಸಿ ಶಸ್ತ್ರಚಿಕಿತ್ಸೆಗೆ ಬೇಕಾದ ಭಾರೀ ಮೊತ್ತವ... ವಾರದಲ್ಲಿ ಹೊಂದಿಸಿಕೊಳ್ಳಬೇಕಾದ ಪರಿಸ್ಥಿತಿ ಬಂ... ಆಗ ನಿಂತಕಾಲಲ್ಲಿ ಓಡಿ ಬಂದ ಚಂದ್ರನಾ... ಶಿವಪ್ರಸಾದ್‌ರಂಥ ಎಷ್ಟೆಲ್ಲ ಕಲಾವಿದ ಗೆಳೆಯರು ತ... ತಮ್ಮ ಕೃತಿಗಳನ್ನು ಕಲೆಹಾಕಿ, ಧಿಡೀರ್ ಪ್ರದರ್ಶ... ಏರ್ಪಡಿಸಿದರು, ಪೊಲೀಸ್ ಅಧಿಕಾರಿಗಳಾ... ರೇವಣಸಿದ್ದಯ್ಯ ಮಾರಾಟದ ವ್ಯವಸ್ಥೆ ಮಾಡಿಸಿದ... ಎಷ್ಟೆಲ್ಲ ಅಜ್ಞಾತ ಕಲಾಪ್ರೇಮಿಗಳು ಸಕಾಲದಲ್ಲಿ ... ಬಂದು, ಶಸ್ತ್ರಕ್ರಿಯೆ ಪೂರೈಸಿತು. ದುಬಾರಿ ಚಿ...






ಬಲಗೈ ಪ್ಲಾಸ್ಟರ್‌ನಲ್ಲಿದ್ದಾಗ ಎಡಗೈಯಿಂದ ಚಿತ್ರಿಸಿದ 'ಕುಟುಂಬ ಚಿತ್ರ'ಗಳು.

ಇನ್ನೂ ನಡೆಯುತ್ತಿದೆ; ಮುದ್ದು ಕುಶಾಲನ ಶುಶ್ರೂಷೆಗೆ, ಹೀಗೆ ಕಾರ್ಯಕಾರಣ ಸಂಬಂಧವಿಲ್ಲದೆ ಅಂತಃಕರಣ ಪೂರ್ವಕವಾಗಿ ನೆರವಿಗೆ ಬಂದ ಜನರನ್ನು ನೆನೆಯುತ್ತಾ ಕುಮಾರ್ ಮೂಕರಾಗುತ್ತಾರೆ. ಕುಶಾಲ್ ಸುಂದರವಾಗಿ ಚಿತ್ರ ಬರೆಯುತ್ತಾನೆ. ಪುಟ್ಟ ಕುಸುಮಾ ಕೂಡ.

ಕಿಸೆಯಲ್ಲಿ ಪೆನ್ನು


ಬಾಲ್ಯದ ಕಷ್ಟದ ದಿನಗಳು, ಅತ್ಯಂತ ಅನಿಶ್ಚಿತತೆಯಿಂದ ತುಂಬಿದ ಯೌವನದ ದಿನಗಳು ಮತ್ತು ಈಗ ಮನೆಯಲ್ಲಿ ಕವಿದಿರುವ ಆತಂಕ, ಅವರ ಮನವನ್ನು ರೂಕ್ಷವಾಗಿಸಿಲ್ಲ, ಕೋಮಲವಾಗಿಸಿವೆ. "1966ರಲ್ಲಿ ರೈಲ್ವೇ ಸ್ಟೇಷನ್ನಿಗೆ ಎಲ್ಲಿಂದಲೋ ತಾಳೆಹಣ್ಣಿನ ಬುಟ್ಟಿಗಳು ಬರುತ್ತಿದ್ದವು. ಒಂದು ಬುಟ್ಟಿ ಹರಾಜಿನಲ್ಲಿ ಕೊಂಡು, ತೊಳೆಗಳನ್ನು ಮಾರಿ, ಆಗ ಎರಡೂವರೆ ರೂ.ಗೆ ಬರುತ್ತಿದ್ದ ಜನತಾ ಚಪ್ಪಲ್‌ಗಾಗಿ ಹಣ ಉಳಿಸುತ್ತಿದ್ದೆ. ಮಾರಾಟವಾಗದೆ ಉಳಿದ ತೊಳೆಗಳನ್ನು ಮಣ್ಣಿನ ಮಡಕೆಯಲ್ಲಿ ನೀರು ಹಾಕಿ ಇಟ್ಟರೆ ಮರುದಿನವೂ ಅವು ತಾಜಾ ಆಗಿ ಕಾಣುತ್ತವೆ, ಬೇರೆ ಪಾತ್ರೆಯಲ್ಲಿಟ್ಟರೆ ಕಪ್ಪಾಗುತ್ತವೆ ಎಂಬ ಪರಮಸತ್ಯವನ್ನು ನಾವು, ತಾಳೆಹಣ್ಣು ಮಾರುವ ಹುಡುಗರು ಕಂಡುಹಿಡಿದಿದ್ದೆವು. ನಾನು ಎಸ್ಸೆಸ್ಸೆಲ್ಸಿ ಪಾಸಾದವನಾಗಿದ್ದರಿಂದ ಉಳಿದ ಆ ಹುಡುಗರಿಗಿಂತ ಬೇರೆ ಎಂದು ತೋರಿಸಲು ಕಿಸೆಯಲ್ಲಿ ಪೆನ್ನು ಇಟ್ಟುಕೊಂಡೇ ಹೋಗುತ್ತಿದ್ದೆ" ಎಂದು ನೆನೆದು ನಗುತ್ತಾರೆ ಪ.ಸ. ಕುಮಾರ್.



ಕುಶಾಲ್

ಆ ಪೆನ್ನು ಮಾತ್ರ ಬೇರೆ ಬೇರೆ ರೂಪಗಳಲ್ಲಿ ಇಂದಿಗೂ ಅಪ್ರತಿಮ ಬಿಂಬಗಳನ್ನು ಚಿತ್ರಿಸುತ್ತಲೇ ಇದೆ. ತಾಳೆಯ ತೊಳೆಯಂಥ ತಾಜಾ ಚಂದಿರನನ್ನು ಹಿಡಿಯಲು ಹವಣಿಸುತ್ತ.

ಅಜ್ಜಿ, ಮಗ, ಮೊಮ್ಮಕ್ಕಳು ಒಟ್ಟಿಗೆ ಚಿತ್ರ ಬಿಡಿಸುತ್ತಿರುವ ಜೆಟ್ಟನೆ ಮನೆಯಲ್ಲಿ, ಅನಾರೋಗ್ಯದೊಡನೆ ಮೂಕವಾಗಿ ಹೋರಾಡುತ್ತಿರುವ ಘನವಾದ ಚೈತನ್ಯವೊಂದು ನೆಲೆಗೊಂಡಿದೆ. ಅದಕ್ಕೆ ಅಗತ್ಯವಾದ ಸ್ಥೈರ್ಯ, ಭೌತಿಕ ಅನುಕೂಲಗಳು ಅವರಿಗೆ ಒದಗಿಬಂದು, ಕುಶಾಲ ಬಲುಬೇಗ ಪೂರ್ತಿ ಗುಣಮುಖನಾಗಲಿ. ಕುಂಚಗಳ ವರ್ಣರಾಗ ಸರಾಗವಾಗಲಿ. ■



ಸವಿತಾ ಎಸ್.

ವಿಜೇತೆ

"ಶಾರದೆ..."

"ಏನಪ್ಪ..." ಎನ್ನುತ್ತ, ಬಾಳೆ ಎಲೆಗೆ ನೀರು ಹಾಕಿ ತೊಳೆದು, ಉಪ್ಪು, ಉಪ್ಪಿನಕಾಯಿ ಬಡಿಸುತ್ತಿದ್ದ ಮಗಳನ್ನೇ ನೋಡಿದರು.

ಮಧ್ಯಾಹ್ನ ಒಂದು ಗಂಟೆ, ರಾತ್ರಿ ಎಂಟು ಗಂಟೆಯಲ್ಲಿ ಒಂದು ನಿಮಿಷವೂ ವ್ಯತ್ಯಾಸವಾಗದಂತೆ, ಮನೆಯಿಂದ ಊಟ ತಂದು, ಅಕ್ಕರೆಯಿಂದ ಬಡಿಸಿ, ಊಟ ಮಾಡಿ ತಾನು ಮಲಗುವವರೆಗೂ ಅದೂ ಇದೂ ಮಾತನಾಡುತ್ತಿದ್ದು, ಮತ್ತೆ ಬೆಳಿಗ್ಗೆ ಆರು ಗಂಟೆಗೇ ಬಂದು, ದೇವರೆದುರು ದೀಪ ಬೆಳಗಿ, ನೆಲ ಒರೆಸಿ, ರಂಗೋಲಿಯಿಟ್ಟು, ಬೆಳಗಿನ ಚಾ-ತಿಂಡಿ, ಮತ್ತೆ ಸಾಯಂಕಾಲ ಲಘು ಉಪಹಾರ-ಚಾ ಎಂದು...

"ನಿನಗೆ ತುಂಬ ತ್ರಾಸು ಕೊಡುತ್ತಿದ್ದೇನೆ ಮಗಳೇ" ಎಂದರೆ

"ಮಗಳಾಗಿ ಅಪ್ಪನ ಸಲುವಾಗಿ ಇಷ್ಟರ ಮಟ್ಟಿಗಿನ ತ್ರಾಸು ತೆಗೆದುಕೊಳ್ಳುವಲ್ಲಿ ನಂಗೆ ತುಂಬ ಖುಷಿಯಿದೆ" ಎಂಬುವಳು...

"ಏನಾದರೂ ಹೇಳಬೇಕಿತ್ತೇ ಅಪ್ಪಾ..."

ಮಗಳ ಮಾತಿನಿಂದ ಅವರು ವಾಸ್ತವಕ್ಕೆ ಬಂದರು.

"ಏನಿಲ್ಲ... ರಾತ್ರಿ ಶಂಕರನಿಗೆ ಫೋನು ಮಾಡಿದ್ದೆ. ನಾಡದ್ದು ರವಿವಾರ ನೀವು ಆರೂ ಜನ ಮಕ್ಕಳು ಇಲ್ಲಿರಬೇಕು, ಎಲ್ಲರಿಗೂ ಫೋನು ಮಾಡಿ ನೀನೇ ತಿಳಿಸಿಬಿಡು ಎಂದೆ. ಯಾಕಪ್ಪ, ಏನು ವಿಶೇಷ ಎಂದ. ಈ ಜಮೀನಿನದೊಂದು ನಿರ್ಧಾರವಾಗಬೇಕಲ್ಲ, ಎಲ್ಲರಿಗೂ ಹಾಗೇ ಹೇಳಿಬಿಡು ಎಂದಿದ್ದೇನೆ"


ರಾಯರ ಮಾತಿಗೆ ಮಗಳು ಏನನ್ನೂ ಹೇಳಲಿಲ್ಲ. "ಶಾರದೆ..." ಮತ್ತೆ ಅವರೇ ಕರೆದರು.

"ಹೆಂಡತಿ-ಮಕ್ಕಳನ್ನು ಕರೆದುಕೊಂಡು ಬರುತ್ತಾರೋ ಇಲ್ಲವೋ ಗೊತ್ತಿಲ್ಲ... ರವಿವಾರ ಬಂದವರು, ಬಹುಶಃ ಸೋಮವಾರ ಸಂಜೆಗೆಲ್ಲ ತಿರುಗಿ ಹೊರಡಬಹುದು, ಅಲ್ಲಿಯವರೆಗೆ ಅವರಿಗೆ ಊಟ-ತಿಂಡಿ..."

"ಅದಕ್ಯಾಕೆ ಯೋಚನೆ ಅಪ್ಪಾ, ನಾನಿಲ್ಲವೇ"

"ಊಟ-ತಿಂಡಿ ಈ ಮನೆಯಲ್ಲೇ ಆಗಲಿ. ಸಾಮಾನು ಏನಿಲ್ಲದಿದ್ದರೂ 'ಸುಕ್ರ'ನತ್ರ ಹೇಳಿ ತರಿಸು... ಮತ್ತೆ... ಅಪರೂಪಕ್ಕೆ ಎಲ್ಲಾ ಒಟ್ಟಿಗೆ ಬರುತ್ತಿದ್ದಾರೆ... ಏನಾದರೂ ವಿಶೇಷ..."

"ನಾ ಮಾಡುತ್ತೇನೆ ಅಪ್ಪ"



ರಾಠೋಡ್

''ನಿಂಗೆ ಒಬ್ಬಳಿಗೇ ತೊಂದರೆಯಾಗುವಂತಿದ್ದರೆ ಆಚೆ ಮನೆ ಲಕ್ಷ್ಮಿಗೆ ಹೇಳು ಆಗದೇ''
''ಏನು ಮಹಾ ಕೆಲಸ ಎಂದು... ನೀ ಏನೂ ಚಿಂತೆ ಮಾಡಬೇಡ''

ರವಿವಾರ ಬೆಳಿಗ್ಗೆ, ಮಕ್ಕಳು ಬರಲಿದ್ದಾರೆಂದು ರಾಯರಿಗೆ ರಾತ್ರಿ ಸರಿ ನಿದ್ರೆ ಬಂದಿರಲಿಲ್ಲ. ಬೆಳಿಗ್ಗೆ ಐದಕ್ಕೇ ಬಂದ ಶಾರದೆ, ಒಳಗೆ ಇಡ್ಲಿ, ಚಟ್ನಿಯ ತಯಾರಿಯಲ್ಲಿದ್ದರೆ, ರಾಯರ ದೃಷ್ಟಿ ಗಳಿಗೆಗೊಮ್ಮೆ ಅಂಗಳದತ್ತ ಹಾಯುತ್ತಿತ್ತು.

ಎಷ್ಟು ವರ್ಷಗಳಾದುವು ಅವರೆಲ್ಲ ಒಟ್ಟಿಗೆ ಊರಿಗೆ ಬರದೇ! ಎಂಟು ವರ್ಷಗಳ ಹಿಂದೆ ಅವರಮ್ಮ ತೀರಿಕೊಂಡಾಗ ಎಲ್ಲರೂ ಬಂದದ್ದು. ಆಮೇಲೆ ಆಗಾಗ ಒಬ್ಬೊಬ್ಬರು ಬರುತ್ತಿದ್ದರಷ್ಟೇ.

ಹಿರಿಯವ ಗಣೇಶ, ಎಂ.ಕಾಂ. ಓದಿ ಬ್ಯಾಂಕಿನಲ್ಲಿ ಮ್ಯಾನೇಜರನಾಗಿ ಈ ವರ್ಷವಷ್ಟೇ ಎಂ.ಡಿಯಾಗಿ ಬಡ್ತಿ ಹೊಂದಿದ್ದಾನೆ. ಸದ್ಯಕ್ಕೆ ಇರುವುದು ಮದ್ರಾಸು. ಬೆಂಗಳೂರಲ್ಲಿ ಸ್ವಂತ ಮನೆ. ಅವನ ಹೆಂಡತಿ ದೇವಲೋಕದಲ್ಲಿ ಇರಬೇಕಾದವಳು, ತಪ್ಪಿ ಭೂಲೋಕದಲ್ಲಿ ಜನಿಸಿಬಿಟ್ಟಿದ್ದಾಳೆ ಎಂದು ರಾಯರು ಅಂದುಕೊಂಡಿದ್ದಾರೆ. ಹಳ್ಳಿಯ ಧೂಳಲ್ಲಿ ಇರಿಸುವ ಪಾದವಲ್ಲ ಅವಳದ್ದು. ಗಂಡ-ಮಕ್ಕಳನ್ನೂ ಕಳಿಸುವವಳಲ್ಲ. ಆದರೆ ಈ ಬಾರಿ ಗಂಡನನ್ನು ಕಳಿಸಬಹುದು. ಎಷ್ಟೆಂದರೂ ಜಮೀನಿನ ವಿಷಯ!

ಎರಡನೆಯವ ಸುರೇಶ, ಎಂ.ಎಸ್.ಸಿ., ಪಿಎಚ್.ಡಿ. ಗುಲ್ಬರ್ಗಾದಲ್ಲಿ ಇರುವುದು. ಕಾಲೇಜಿನಲ್ಲಿ ಕಲಿಸುವ ಕೆಲಸ.

ಮೂರನೆಯವ ಶಂಕರ, ನಾಲ್ಕನೆಯವ ವಿಘ್ನೇಶ, ಆರನೆಯವ ವಿಷ್ಣು. ಮೂರೂ ಜನ ಓದಿದ್ದು ಬಿ.ಇ. ಬೆಂಗಳೂರಲ್ಲಿ ಬೇರೆ ಬೇರೆ ಕಂಪನಿಯಲ್ಲಿ, ಒಳ್ಳೆಯ ಕೆಲಸ. ಐದನೆಯವ ವಿನಾಯಕ ಹುಬ್ಬಳ್ಳಿಯಲ್ಲಿ.

ಕಿರಿಯವನನ್ನು ಬಿಟ್ಟು ಎಲ್ಲರ ಹತ್ತಿರವೂ ಸ್ವಂತ ವಾಹನವಿದೆ. ಆದರೆ ಯಾರ ಗಾಡಿಗೂ ಈ ಹಳ್ಳಿಯ ರಸ್ತೆಯಲ್ಲಿ ಬರುವ ತಾಕತ್ತಿಲ್ಲ. ಅಕಸ್ಮಾತ್ ತಂದರೂ, ಗಾಡಿ ಮನೆಯವರೆಗೆ ಬರುವುದಿಲ್ಲ. 'ಹಡಿನಬಾಳ'ದಲ್ಲಿ ನಿಲ್ಲಿಸಿ, ಮೂರು ಕಿ.ಮೀ. ನಡೆದುಕೊಂಡು ಬರಬೇಕು.

ಅಂದುಕೊಂಡಂತೆಯೇ, ಬೆಳಿಗ್ಗೆ ಒಂಬತ್ತು ಗಂಟೆಗೆ ಮದ್ರಾಸು ಮತ್ತು ಬೆಂಗಳೂರು ಬಂತು ಮನೆ ಬಾಗಿಲಿಗೆ. ಎಲ್ಲಾ ಒಟ್ಟಿಗೆ, ಒಂದೇ ಬಸ್ಸಿಗೆ ಬಂದಿದ್ದರು. ಶಂಕರ ಮತ್ತು ವಿಷ್ಣು ಮಾತ್ರವೇ ಹೆಂಡತಿ ಮಕ್ಕಳನ್ನು ಕರೆತಂದಿದ್ದರು.

''ಅಬ್ಬಾ ಹನ್ನೆರಡು ತಾಸು ಬಸ್ಸಲ್ಲಿ ಕುಳಿತುಕೊಳ್ಳುವುದೂ, ಆಮೇಲೆ ಈ ಹಾದಿಯಲ್ಲಿ ನಡೆದುಕೊಂಡು ಬರುವುದೂ ಯಾರಿಗೂ ಬೇಡ'' ಹೇಳಿದವ ಗಣೇಶ.

ಹೌದು! 'ಹಡಿನಬಾಳ'ದಲ್ಲಿ ಬಸ್ಸಿನಿಂದ ಇಳಿದರೆ, ಸದಾಕಾಲ ತುಂಬಿ ಹರಿವ ಗುಂಡ ಬಾಳಾ ಹೊಳೆಯ ದಂಡೆಯ ಗುಂಟ ನಡೆದು ಬರಬೇಕು, ತೆಂಗಿನ ಮರಗಳ ನಡುವೆ. ಹೊಳೆ ದಂಡೆಗೆ ಕೂಡ ಅದರದ್ದೇ ಆದ ವಿಶಿಷ್ಟ ವಾಸನೆ ಯಿರುತ್ತದೆ. ಆಮೇಲೆ ಸಿಗುವುದು ಗದ್ದೆ. ಉದ್ದಾನುದ್ದಕ್ಕೆ ಹಬ್ಬಿಕೊಂಡು, ಇಕ್ಕೆಲಗಳಲ್ಲೂ ಹಸಿರಿನಿಂದ ತುಂಬಿಕೊಂಡಿರುವ ಗದ್ದೆಯ ನಡುವಿನ ಕಿರಿದಾದ ಬದುವಿನಲ್ಲಿ ನಡೆದು ಬಂದರೆ, ಎದುರಾಗುವುದು ಗುಡ್ಡ. ಆ ಗುಡ್ಡಹತ್ತಿ ಬಂದು, ಫರ್ಲಾಂಗು ದೂರ ಅಡಿಕೆ ತೋಟದಲ್ಲಿ ನಡೆದು ಬರಬೇಕು. ನಡುವೆ ಸಂಕ ದಾಟಬೇಕು ದಣಪೆ ಹಾರಬೇಕು. ಹಳ್ಳಿಯಲ್ಲೇ ಹುಟ್ಟಿ ಬೆಳೆದವರಾದರೂ, ಈಗ ಪೇಟೆಯಲ್ಲಿ ಬದುಕ ಕಾಣುತ್ತಿರುವವರಿಗೆ ಇವೆಲ್ಲ ಕಷ್ಟದಾಯಕವೆ ಎಂದುಕೊಂಡರು ರಾಯರು.

''ಹೇಗಿದ್ದೀಯಪ್ಪ...'' ಎಂದು ಮಕ್ಕಳೂ ''ಅಜ್ಜಾ...'' ಎನ್ನುತ್ತ ಮೊಮ್ಮಕ್ಕಳೂ, ''ಮಾವ ಚೆನ್ನಾ[illegible] ದ್ದೀರಾ'' ಎಂದು ಸೊಸೆಯಂದಿರೂ ನಮಸ್ಕರಿಸಿದ್ದಾಯ್ತು

''ಎಲ್ಲ ನಡೆಯಿರಿ, ಮೊದಲು ಕೈಕಾಲ ತೊಳೆದು ಚಾ-ತಿಂಡಿ ತಗೊಳ್ಳಿ... ನಡೆಯಿರಿ' ಎಪ್ಪತ್ತೆಂಟರ ರಾಯರಿಗೆ ಮಕ್ಕಳು ಬಂದಿರು[illegible] ರೆಂದು ಇಪ್ಪತ್ತರ ಉಮೇದಿ.

ಹಿತ್ತಲ ಬಚ್ಚಲಲ್ಲಿ, ಎಲ್ಲ ಕೈ ಕಾಲು ಮು[illegible] ತೊಳೆದುಕೊಂಡು ಬರುವಷ್ಟರಲ್ಲಿ, ಶಾರದ ಹೊರಗೆ ಬಂದವಳು, ''ಚೆನ್ನಾಗಿದ್ದೀರಾ ಎಲ್ಲ. ಬನ್ನಿ ಒಳಗೆ'' ಎಂದು ಎಲ್ಲರನ್ನೂ ಒಳ ಕರೆದುಕೊಂಡು ಹೋದಳು.

ಯಾರ್‍ಯಾರಿಗೆ ಏನೆಂದು ಕೇಳಿಕೊಂಡ ಚಾ-ಕಾಫಿ-ಹಾರ್ಲಿಕ್ಸ್-ತಿಂಡಿಯ ಸಮಾರಾಧ ಯಾಗುವಷ್ಟರಲ್ಲಿ, ಉಳಿದಿಬ್ಬರು ಗಂಡು ಮಕ್ಕಳ ಮನೆಗೆ ಬಂದರು.

''ಚೆನ್ನಾಗಿದ್ದೀಯ ಶಾರದೆ'', ವಿಚಾರ ಕೊಂಡ ಸುರೇಶ.

''ಇದ್ದೀನಲ್ಲ... ಎಲ್ಲಿ ಅತ್ತಿಗೆ, ಮಕ್ಳು...''

''ನಾನೊಬ್ನೇ ಬಂದೆ... ಮಕ್ಕಳಿಗೆ ಪರೀಕ್ಷೆ ಸಮಯ... ಅದ್ಕೇ...''

ಅಣ್ಣ-ತಮ್ಮಂದಿರ ಮಾತುಕತೆ, ಮ[illegible] ಗಲಾಟೆಯಲ್ಲಿ, ಅಷ್ಟು ದಿನ ಮೌನ ತು[illegible] ಕೊಂಡಿದ್ದ ಮನೆಗೆ ಜೀವಕಳೆ ಬಂದಿದೆಯೆನ್ನಿಸಿ ರಾಯರಿಗೆ.

ಎಲ್ಲರೂ ಒಬ್ಬೊಬ್ಬರಾಗಿ ಸ್ನಾನ ಮುಗಿ ವಷ್ಟರಲ್ಲಿ, ಅಡಿಗೆಯೂ ತಯಾರಾಗಿತ್ತು.

'ಓಹೋ... ಎಷ್ಟೊಂದು ಮಾಡಿಬಿಟ್ಟಿ ಯಲ್ಲ ಶಾರದೇ' ಎಂದರೂ, ಯಾರೂ ದಾಕ್ಷಿ[illegible]

ಮಾಡಿಕೊಳ್ಳಲಿಲ್ಲ. ಹೆಚ್ಚು ಮಾತಾಡದಿದ್ದರೂ, ಬಡಿಸುವಾಗ ಮಾತ್ರ ಶಾರದೆಯದು ಹೆತ್ತಮ್ಮನ ಅಕ್ಕರೆ. ಅವಳ ಒತ್ತಾಯಕ್ಕೆ ಹೊಟ್ಟೆಬಿರಿ ಉಂಡು ಮಲಗಿದವರಿಗೆ, ಸಂಜೆ ಐದಕ್ಕೆ, ಚಾ ಮಾಡಿ ಏಳಿಸಿದಾಗಲೇ ಎಚ್ಚರ.

ಸಂಜೆ ಮುಂದೆ ಎಲ್ಲ ತೋಟ ಸುತ್ತಾಡಿ ಬಂದರು. ಶಾರದೆಯ ಮನೆ, ತೋಟ ನೋಡಲು ಹೋದವರಿಗೆ ಮಾತ್ರ ತಿರುಗಿ ಬರಬೇಕು ಅನ್ನಿಸುವಂತಿರಲಿಲ್ಲ. ಮನೆ ಪುಟ್ಟದಾದರೂ, ಎದುರಿನ ಹೂದೋಟ ವಿಶಾಲವಾಗಿತ್ತು. ತೋಟ ಕೂಡ ಬಾಳೆ, ಅಡಿಕೆ, ತೆಂಗು, ಲಿಂಬು, ಚಿಕ್ಕು, ಮಾವು' ಎಂದು ಹಸಿರಿನಿಂದ ಸಮೃದ್ಧವಾಗಿತ್ತು. ತೋಟದ ತಂಪಿಗೆ, ಕಂಪಿಗೆ ಎಲ್ಲ ಕ್ಷಣಕಾಲ ಮೈಮರೆತು ಅಲ್ಲೇ ನಿಲ್ಲುವಂತಾಯ್ತು.

ಸಂಜೆಯ ಊಟವೂ ಆಗಿ, ಎಲ್ಲ ಎಲೆಯಡಿಕೆ ಹಾಕಿಕೊಳ್ಳುತ್ತಿರುವಾಗ, ಹಿರಿಯವ ಮಾತು ತೆಗೆದ.

''ಅಪ್ಪ... ನಾವೆಲ್ಲ ನಾಳೆ ಸಂಜೆ ಹೊರಡುತ್ತೇವೆ... ವಿಷಯ ಏನೆಂದು ಇಂದೇ ಹೇಳಿಬಿಟ್ಟರೆ ಚೆನ್ನು... ಇಲ್ಲಿ ನೀ ಒಬ್ಬನೇ ಯಾಕಿರುವುದು, ಜಮೀನಿಗೆ ಒಂದು ವ್ಯವಸ್ಥೆ ಮಾಡಿ, ನಮ್ಮೊಂದಿಗೇ ಬಂದು ಇದ್ದುಬಿಡು ಎಂದು ನಾವೆಲ್ಲ ಎಷ್ಟು ಹೇಳಿದರೂ ಕೇಳಿದವನಲ್ಲ ನೀನು... ಇನ್ನೂ ನಿನ್ನನ್ನು ಇಲ್ಲಿ ಒಬ್ಬನೇ ಬಿಡುವುದು ನಮಗೂ... ನೋಡುವವರಿಗೂ ಚೆನ್ನಲ್ಲ... ನಿನ್ನ ಮನಸ್ಸಿನಲ್ಲಿ ಏನಿದೆಯೋ...''

''ಅದಕ್ಕೇ ನನಗೂ ಇನ್ನು ಎಷ್ಟು ದಿನವೋ... ಅಷ್ಟರೊಳಗೆ ಒಂದು ವ್ಯವಸ್ಥೆಯಾಗಿಬಿಡಲಿ ಎಂದೇ ನಿಮ್ಮನ್ನೆಲ್ಲ ಕರೆಸಿದ್ದು ಮಗನೇ... ಹೇಳುತ್ತೇನೆ... ಎಲ್ಲಿ... ಎಲ್ಲರೂ ಬಂದಿದ್ದಾರೆಯೋ ನೋಡು, ಶಾರದೆಗೂ ಬರಲು ಹೇಳು''

ರಾಯರು ಅಷ್ಟು ಹೇಳಿದ್ದೇ, ಒಬ್ಬೊಬ್ಬರು ಒಂದೊಂದು ಕಡೆ ಇದ್ದವರೆಲ್ಲಾ, ಹಜಾರಕ್ಕೆ ಬಂದು ಕುಳಿತರು. ಒಳಗೆ ಕೆಲಸ ಮಾಡುತ್ತಿದ್ದ ಶಾರದೆ ಯನ್ನು ಒತ್ತಾಯಮಾಡಿ ಕರೆತಂದು ಕೂರಿಸಿದ ಶಂಕರ.

''ಬಂದಿರಾ ಎಲ್ಲರೂ... ಕೇಳಿ... ನಂಗೀಗ ಎಪ್ಪತ್ತೆಂಟು ವರ್ಷ. ನಿಮ್ಮಮ್ಮ ತೀರಿಕೊಂಡ ಮೇಲೆ ತಮ್ಮೊಂದಿಗೇ ಬಂದು ಇದ್ದುಬಿಡು ಎಂದು ನೀವೆಲ್ಲ ಹೇಳಿದ್ದು ಸತ್ಯವೇ. ಆದರೆ ಇಷ್ಟು ವರ್ಷ ಈ ನೆಲದಲ್ಲಿ, ಇಲ್ಲಿಯ ಗಾಳಿಯಲ್ಲಿ ಉಸಿರಾಡಿದ್ದೇನೆ... ಈಗ ಎಲ್ಲಿಯೋ ಹೋಗಿ ಇದ್ದುಬಿಡುವುದು ನನಗೆ ಸಾಧ್ಯವಾಗುವಂಥದ್ದಲ್ಲ... ಜೊತೆಗೆ, ನಂಗೆ ಇಲ್ಲಿ ಯಾವುದರ ಕೊರತೆಯೂ ಇಲ್ಲ. ನಿಮ್ಮಮ್ಮ ಹೊರಟುಹೋದ ಮೇಲೆ, ಈ ಹತ್ತು ವರ್ಷಗಳಲ್ಲಿ, ಶಾರದೆ, ಒಬ್ಬ ಮಗಳಾಗಿ, ಮಗನಾಗಿ, ಕಡೆಗೆ ಹೆತ್ತ ತಾಯಂತೆ ನನ್ನನ್ನು ನೋಡಿಕೊಂಡಿದ್ದಾಳೆ. ಅವಳ ಆರೈಕೆಯಲ್ಲಿ, ಉಪಚಾರದಲ್ಲಿ ನಂಗೆ ಎಪ್ಪತ್ತೆಂಟು ಆಗಿದೆ ಎಂಬುದನ್ನು ನಾನು ಮರೆತಿದ್ದೇನೆ... ಮತ್ತೆ ನಿಮಗೆಲ್ಲ ಗೊತ್ತಿರುವಂತೆ... ನನ್ನ ಹನ್ನೆರಡು ಎಕರೆ ಸಮೃದ್ಧವಾದ ತೋಟದಲ್ಲಿ ಬರೀ ಎರಡು ಎಕರೆ ಮಾತ್ರ ಪಿತ್ರಾರ್ಜಿತವಾದದ್ದು. ಉಳಿದದ್ದೆಲ್ಲ ನನ್ನ ಸ್ವಯಾರ್ಜಿತ... ಇನ್ನು ಮೂವರು ಹೆಣ್ಣು ಮಕ್ಕಳಲ್ಲಿ, ಹಿರಿಯ ಇಬ್ಬರು ಹೆಣ್ಣುಮಕ್ಕಳಿಗೆ ಕೈತುಂಬ ಕೊಟ್ಟು, ಶ್ರೀಮಂತರನ್ನೇ ನೋಡಿ ಮದುವೆ ಮಾಡಿಬಿಟ್ಟಿದ್ದೇನೆ. ಆರ್ಥಿಕವಾಗಿ ಅವರಿಗ್ಯಾವ ತೊಂದರೆಯೂ ಇಲ್ಲ. ಆದರೂ ಆಸ್ತಿಯ ಬಗ್ಗೆ ನಿರ್ಧಾರ ತೆಗೆದುಕೊಳ್ಳಬೇಕು, ನೀವೂ ಬನ್ನಿ ಎಂದರೆ, ಅಪ್ಪ, ನೀ ಹೇಗೆ ಮಾಡಿದರೆ ಹಾಗೆ... ನಮ್ಮದ್ಯಾವ ತಕರಾರೂ ಇಲ್ಲ... ಜೊತೆಗೆ ನಮಗ್ಯಾವ ಆಸೆಯೂ ಇಲ್ಲ ಎಂದು ಅವರಿಬ್ಬರೂ ಬರದೇ, ದೂರವೇ ಉಳಿದುಬಿಟ್ಟರು. ಇನ್ನು ನೀವು ಗಂಡುಮಕ್ಕಳು... ನಿಮಗೆಲ್ಲ ಎಷ್ಟು ಸಾಮರ್ಥ್ಯವಿದೆಯೋ, ಆಸೆಯಿದೆಯೋ ಅಷ್ಟನ್ನೂ ಕಲಿಸಿಬಿಟ್ಟಿದ್ದೇನೆ. ಒಳ್ಳೆಯ ಹುದ್ದೆಯಲ್ಲಿದ್ದೀರಿ... ಕೈತುಂಬ ಸಂಪಾದಿಸುತ್ತಿದ್ದೀರಿ... ಆದರೆ... ಅಪ್ಪನಾಗಿ ನಾನು ನನ್ನ ಕರ್ತವ್ಯವನ್ನು ಏನೂ ಮಾಡದಿದ್ದುದು ಶಾರದೆಗೆ ಮಾತ್ರ... ಹಾಗಾಗಿ, ಪಿತ್ರಾರ್ಜಿತವಾದ ಎರಡೆ

ಕರೆ ತೋಟದಲ್ಲಿ ಗಂಡುಮಕ್ಕಳಿಗೆ ಪಾಲು ಮಾಡಿ, ಉಳಿದ ನನ್ನ ಸ್ವಯಾರ್ಜಿತವಾದ ಎಲ್ಲವನ್ನೂ ಶಾರದೆಯ ಹೆಸರಿಗೆ ಮಾಡಬೇಕೆಂದಿದ್ದೇನೆ... ನಿಮ್ಮ ಅಭಿಪ್ರಾಯವೇನಿದ್ದರೂ ತಿಳಿಸಬಹುದು.''

ರಾಯರು ಮಾತು ಮುಗಿಸಿ ಸುಮಾರು ಹೊತ್ತಾದರೂ, ಆದ ಆಘಾತದಲ್ಲಿ ಯಾರೂ ಮಾತಾಡಲಿಲ್ಲ. ಕಡೆಗೆ, ಹಿರಿಯವ ಗಣೇಶ ಎದ್ದು ಅಂಗಳಕ್ಕೆ ಹೋದ. ಅವನ ಬೆನ್ನಿಗೇ ಗಂಡು ಮಕ್ಕಳೆಲ್ಲ ಎದ್ದು ಅಂಗಳಕ್ಕೆ ಹೋದರು.

''ನಾವೆಲ್ಲ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳೇ ಸುಳ್ಳು ಎಂಬ ತರ ಮಾಡಿಬಿಟ್ಟನಲ್ಲ ಅಪ್ಪ!''

''ಎದುರಿಗೆ ಪ್ರೀತಿ ಮಾಡಿ, ಹೀಗೆ ಬೆನ್ನಿಗೆ ಚೂರಿ ಹಾಕುತ್ತಾನೆ ಅಂದುಕೊಂಡಿರಲಿಲ್ಲ.''

''ನಮಗ್ಯಾಕೆ ಆ ಪಿತ್ರಾರ್ಜಿತ ಆಸ್ತಿ, ಅದನ್ನೂ ಅವಳ ಹೆಸರಿಗೇ ಮಾಡಲಿ.''

''ಅವಳಿಗೆ ಈಗಾಗಲೇ ಅಷ್ಟು ಚೆನ್ನಾಗಿರುವ ತೋಟ ಕೊಟ್ಟಿದ್ದಾನೆ. ಅದೇ ಹೆಚ್ಚು... ಮತ್ತೆ ಈಗ ಎಲ್ಲವನ್ನೂ ಅವಳಿಗೇ ಕೊಡುತ್ತಾನಂತೆ... ಅವಳಿಗ್ಯಾಕೆ ಅಷ್ಟೊಂದು... ಅವಳಿಗೇನು ಗಂಡನಾ, ಮಕ್ಕಳಾ...''

''ಇದೆಲ್ಲಾ ಅವಳದೇ ಕಿತಾಪತಿ... ಅಪ್ಪನನ್ನು ಚೆನ್ನಾಗಿ ನೋಡಿಕೊಳ್ಳುವ ನೆಪದಲ್ಲಿ, ಅಪ್ಪನ ತಲೆಯನ್ನು ಹೇಗೆ ತಿರುಗಿಸಿದ್ದಾಳೆ... ಇಲ್ಲದಿದ್ದರೆ ಅಪ್ಪ ಹೀಗೆ ಮಾಡುವವನೇ ಅಲ್ಲ... ಗೊತ್ತಿಲ್ಲವಾ... ಅಪ್ಪನಿಗೆ ನಾವು ಗಂಡುಮಕ್ಕಳೆಂದರೆ ಪ್ರಾಣವಾಗಿತ್ತು... 'ನುಣ್ಣಗಿದ್ದಕ್ಕನ ಬಣ್ಣ ಬೇರೆ' ಅಂದಂತೆ ಒಂದೂ ಮಾತಾಡುವವಳಲ್ಲ ಎಂದು ನಾವು ಸುಮ್ಮನಿದ್ದದ್ದೇ ಹೆಚ್ಚಾಯ್ತು...''

''ಅಪ್ಪನ ಈ ನಿರ್ಧಾರವೇ ಅಂತಿಮವಾದರೆ, ನಂಗೆ ಪಾಲೇ ಬೇಡ... ನಾವೆಲ್ಲ ಇಂದು ದುಡಿಯುತ್ತಿದ್ದೇವೆ ಎಂದರೆ ಅದು ನಾವು ಕಷ್ಟಪಟ್ಟು ವಿದ್ಯೆ ಕಲಿತಿದ್ದಕ್ಕಲ್ಲವಾ... ಈಗ ಅಪ್ಪ ಎಲ್ಲವನ್ನೂ ಅವಳಿಗೇ ಕೊಡುತ್ತಾನೆ ಅಂತಾದರೆ ನಾವು ಮಕ್ಕಳಾಗಿ ಏನು ಬಂದಂತಾಯ್ತು.''

ಹೊರಗೆ ಎಲ್ಲಾ ಒಬ್ಬೊಬ್ಬರು ಒಂದೊಂದ
ತರ ಮಾತನಾಡಿದರೂ, ಒಳಗೆ ಹೋಗಿ, ಎಲ್ಲ
ಪರವಾಗಿ ಹಿರಿಯವನೇ ಮಾತಾಡಿದ.

''ಅಪ್ಪ... ಗಂಡು ಮಕ್ಕಳೆಂದರೆ ನಿನಗೆಂತ
ಪ್ರೀತಿಯಿತ್ತು, ಅಭಿಮಾನವಿತ್ತು ಎಂಬುದ
ನಾವು ಕಂಡಿದ್ದೇವೆ, ಅನುಭವಿಸಿದ್ದೇವೆ. ಈ
ಶಾರದೆ ನಿನಗೆ ಎರಡು ಹೊತ್ತಿನ ಊ
ಹಾಕುತ್ತಾಳೆ ಎಂದ ಮಾತ್ರಕ್ಕೆ ಅವಳೇ ನಿನ
ಎಲ್ಲರಿಗಿಂತಲೂ ಹೆಚ್ಚಾಗಿ ಕಾಣುತ್ತಿರಬಹುದ
ಆದರೆ, ನೀನು ನಮ್ಮೊಂದಿಗೆ ಇದ್ದಿದ್ದರೆ, ಅವ
ಗಿಂತಲೂ ಎಷ್ಟೋ ಚೆನ್ನಾಗಿ ನಾವು ನೋ
ಕೊಳ್ಳುತ್ತಿದ್ದೆವು. ಅಪ್ಪನನ್ನು ತಾನು ನೋ
ಕೊಳ್ಳುತ್ತೇನೆ ಎಂದು ಇಟ್ಟುಕೊಂಡು, ಇವಳು
ಪರಿ ನಿನ್ನನ್ನು ಬುಟ್ಟಿಯಲ್ಲಿ ಹಾಕಿಕೊಳ್ಳಬಹು
ಎಂದು ನಾವು ಕೂಡ ನಿರೀಕ್ಷೆ ಮಾಡಿರಲಿ
ಆದರೆ ಒಂದು ಮಾತ್ರ ಸತ್ಯ ಅಪ್ಪ...
ಸ್ವಯಾರ್ಜಿತ ಆಸ್ತಿ, ನಿನ್ನ ಇಷ್ಟ. ಆದರೆ ನಾ
ಕೂಡ ಅವಳಂತೇ ನಿನ್ನ ಮಕ್ಕಳೇ ತಾನೆ
ಹಾಗೊಮ್ಮೆ, ಬರೀ ಪಿತ್ರಾರ್ಜಿತವಾದು
ಮಾತ್ರ, ನಾವು ಗಂಡುಮಕ್ಕಳ ಪಾಲಿಗಾದ
ನಮಗದರ ಅಗತ್ಯವೇ ಇಲ್ಲ. ಅದನ್ನೂ
ಮುದ್ದಿನ ಮಗಳಿಗೇ ಕೊಡಬಹುದು. ನಾ
ನಿನ್ನ ಮಕ್ಕಳೇ ಅಲ್ಲ ಎಂದುಕೊಂಡು ನ
ಪಾಡಿಗೆ ನಾವಿದ್ದುಬಿಡುತ್ತೇವೆ.''

''ಆಯಿತು ಮಕ್ಕಳೇ... ನಿಮ್ಮ ಇಷ್ಟ. ಆ
ಅವಳ ಮಟ್ಟಿಗೆ ಮಾತ್ರ ನನ್ನ ನಿರ್ಧಾರ ಅಚ
ನಾನು ನಿಮ್ಮನ್ನೆಲ್ಲ ಓದಿಸಿದೆ. ನೌಕರಿ ಪಡೆದ
ಹೆಂಡತಿ-ಮಕ್ಕಳು ಎಲ್ಲವನ್ನೂ ಕಂಡಿರಿ... ಆ
ಅವಳಿಗೆ ಮಾತ್ರ ಅಪ್ಪನಾಗಿ ನಾನು ಏನ
ಮಾಡಲಿಲ್ಲ... ಅವಳಿಗೂ ನಿಮ್ಮಂತೆ ಓದ
ಆಸೆಯಿತ್ತು... ಹೆಣ್ಣೆಂದು ಅಲಕ್ಷ್ಯ ಮಾಡಿಬಿಟ್ಟೆ
ಕಡೆಗೆ ವಯಸ್ಸಿಗೆ ಬಂದಾಗ ಅವಳಿಗೊಂ
ಮದುವೆಯನ್ನು ಮಾಡುವುದೂ ನನಗೆ ಸ
ವಾಗಲಿಲ್ಲ... ನಾ ಅವಳಿಗೆ ಮಾಡಿದ ಅನ್ಯಾ



ವನ್ನು ಈಗಲಾದರೂ ಸರಿಪಡಿಸಬೇಕಾಗಿದೆ...''

''ಅವಳಿಗ್ಯಾಕಪ್ಪ ಅಷ್ಟೊಂದು... ಒಬ್ಬಳಿಗೆ... ನಿನ್ನಲೆಕ್ಕಾಚಾರಕ್ಕಾದರೂ ಒಂದು ಅರ್ಥ ಬೇಡವಾ?''

''ಅದು ಅವಳ ಇಷ್ಟ. ಏನು ಬೇಕಾದರೂ, ಎಷ್ಟು ಬೇಕಾದರೂ ಅನುಭವಿಸಲಿ. ಗಂಡು ಮಕ್ಕಳಾಗಿ ಈ ಮನೆಗಾಗಿ ಒಂದು ನಯಾಪೈಸೆ ಕೆಲಸ ಮಾಡಿದವರಲ್ಲ ನೀವು. ಇಲ್ಲಿಯ ಆಗುಹೋಗುಗಳ ಬಗ್ಗೆ ಒಂದು ದಿನವಾದರೂ ತಲೆ ಕೆಡಿಸಿಕೊಂಡವರಲ್ಲ. ಆದರೆ ಅವಳು ಮಾಡಿದ್ದಾಳೆ... ದುಡಿಸಿಕೊಂಡಿದ್ದೇವೆ ನಾವು, ಮನೆಯ ಒಳಗೆ-ಹೊರಗೆ.''

ರಾಯರ ಮಾತಿನ ಖಚಿತತೆ ತಂದ ಅಸಮಾಧಾನದಲ್ಲಿ ಒಬ್ಬೊಬ್ಬರೂ ಒಂದೊಂದು ರೀತಿ ಮಾತಾಡುತ್ತ, ಮುಸುಮುಸುಗುಡುತ್ತಿರುವಾಗ ಬಾಯ್ತೆರೆದವಳು ಶಾರದೆ.

''ಅಪ್ಪ...''

''ನೀ ಸುಮ್ಮನಿರು ಮಗಳೇ, ನಿನ್ನ ಅಣ್ಣಂದಿರ ಮಾತುಗಳನ್ನೆಲ್ಲ ನೀನು ತಲೆಗೆ ಹಚ್ಚಿಕೊಳ್ಳಬೇಡ''

''ಹಾಗಲ್ಲ ಅಪ್ಪ...''

''ನೀ ಸುಮ್ಮನಿರು ಅಂದೆನಲ್ಲ ಶಾರದೇ... ನಾ ಮಾಡಿದ ಅನ್ಯಾಯವನ್ನು ನಾನೇ ಸರಿಪಡಿಸಬೇಕು. ನನ್ನ ತಪ್ಪಿಗೆ ಪ್ರಾಯಶ್ಚಿತ್ತ ಬೇಡವೇನೇ ಮಗಳೇ... ಈ ವಿಷಯದಲ್ಲಿ ಮಾತ್ರ ನನ್ನ ನಿರ್ಧಾರವೇ ಅಂತಿಮ. ಯಾರೂ ಮಧ್ಯೆ ಬಾಯಿ ಹಾಕುವಂತೆಯೇ ಇಲ್ಲ.''

ರಾಯರ ಖಡಾಖಂಡಿತ ಮಾತಿಗೆ ಪ್ರತಿ

ಯಾಗಿ ಸೂಜಬಿದ್ದರೂ ಕೇಳಿಸುವ ನಿಶ್ಯಬ್ದ ಮತ್ತೆ ಮಾತಾಡಿದ್ದು ಶಾರದೆಯೇ.

''ಅಪ್ಪ... ಬದುಕಿನ ಕಡೆಯ ದಿನಗಳಲ್ಲಾದರೂ ನಿನಗೆ, ನಿನ್ನ ಮಗಳೊಂದು ಮನುಷ್ಯ ಪ್ರಾಣಿಯೇ ಎನ್ನುವುದು ಅರಿವಿಗೆ ಬರುತ್ತಿರುವುದಕ್ಕಾಗಿ, ನಾನು ಧನ್ಯೆ ಎಂದುಕೊಳ್ಳುತ್ತಿದ್ದೇನೆ. ಆದರೆ... ನೀನೇ ಅಂದಂತೆ, ನೀ ನಿನ್ನ ತಪ್ಪಿಗೆ ಪ್ರಾಯಶ್ಚಿತ್ತ ಮಾಡಿಕೊಂಡು ನಿಶ್ಚಿಂತನಾಗಬಹುದು. ಆದರೆ ಇಂದು ನೀ ಕೊಡಮಾಡಿರುವ ಯಾವುದೂ, ನಾ ಉಂಡ ನೋವಿಗೆ, ತಿಂದ ಅಪಮಾನಕ್ಕೆ, ಒಳಗೊಳಗೇ ಬೆಂದು ಬೂದಿಯಾಗಿದ್ದಕ್ಕೆ ಉತ್ತರವಾಗಲಾರವು. ನಾ ಕಳೆದುಕೊಂಡಿದ್ಯಾವುದನ್ನೂ ತಿರುಗಿ ಕೊಡಲಾರವು.

ಅಪ್ಪ... ಕಲಿಯುವುದರಲ್ಲಿ ಅಣ್ಣಂದಿರಿಗಿಂತಲೂ ಹೆಚ್ಚಿನ ಆಸಕ್ತಿಯಿತ್ತು, ಆಸೆಯಿತ್ತು, ಕನಸಿತ್ತು ನನಗೆ. ಆದರೆ ಹೆಣ್ಣು ಹುಡುಗಿ, ನಿನಗ್ಯಾಕೆ ಓದು, ಲಕ್ಷಣವಾಗಿ ಅಡಿಗೆ ಕಲಿತುಕೊಂಡಿದ್ದರೆ ಸಾಕು ಎಂದುಬಿಟ್ಟಿರಿ ನೀನೂ, ಅಮ್ಮ ಇಬ್ಬರೂ. ಗೋಗರೆದೆ, ಕಾಡಿದೆ, ಬೇಡಿದೆ, ಕಡೆಗೆ ಮನೆಯ ಕೆಲಸವನ್ನೆಲ್ಲ ಮಾಡಿಕೊಂಡೇ ಓದುತ್ತೇನೆ ಎಂದೆ... ಇಲ್ಲ... ನನ್ನ ನಿರ್ಧಾರವೇ ಅಂತಿಮ ಎಂದೆ ನೀನು. ಕಡೆಗೆ ನಾನೂ ಒಂದು ಸಾಧನವಾಗಿ ಹೋದೆ. ಮಾಡುವ-ನೀಡುವ, ತೊಳೆಯುವ - ಬಳಿಯುವ ಸಾಧನ!

ಅಣ್ಣಂದಿರೆಲ್ಲ ಓದುವಾಗ ಎಷ್ಟು ಪ್ರೋತ್ಸಾಹ, ನಿನ್ನಿಂದ, ಅಮ್ಮನಿಂದ! ಅವರೆಲ್ಲ ಒಂದೊಂದೂ ಡಿಗ್ರಿ ಪಡೆದು, ಹಂತಹಂತವಾಗಿ ಮೇಲೇರುತ್ತಾ ಹೋದಂತೆ, ನೀ ಅಭಿಮಾನಿಸಿದ್ದೇನು, ಅಮ್ಮ ಸಂಭ್ರಮಿಸಿದ್ದೇನು! ಕಡೆಗೆ ಒಬ್ಬೊಬ್ಬರೂ ತಮ್ಮ ಸಾಧನೆಗೆ ಪ್ರತಿಫಲವಾಗಿ ಉನ್ನತ ಹುದ್ದೆಯನ್ನೇ ಅಲಂಕರಿಸಿದಾಗ, ಗಂಡು ಮಕ್ಕಳೆಂದರೆ ದೇವಲೋಕದಿಂದ ಇಳಿದುಬಂದವರಂತೆ ನೀನು, ಅಮ್ಮ ನೆಲಬಿಟ್ಟು ಹಾರಿದ್ದೇನು!

ಬದಲು, ಕೈಗೂಡದ ಆಸೆಯಲ್ಲಿ, ಅಡಿಗೆ ಮನೆಯ ನಾಲ್ಕು ಗೋಡೆಗಳ ನಡುವೆ ಕೊರ
ಕೊರಡಾಗಿ ಹೋದ ನನ್ನ ಮದುವೆಗಾ
ಪ್ರಯತ್ನಿಸುತ್ತಾ, ಅವರಿವರಲ್ಲಿ, 'ನಮ್ಮನೆ
ಹುಡುಗಿಗೊಂದು ಗಂಡು ಎಲ್ಲಾದರೂ ಇದ್ದ
ಹುಡುಕಿಕೊಡಿ. ಕೆಲಸ ಚೆನ್ನಾಗಿ ಮಾಡ್ತಾ
ಎನ್ನುತ್ತಾ, ಕಡೆಕಡೆಗೆ ಮದುವೆ ಮಾಡಲಾಗದ
ಒದ್ದಾಡಿ, ಎಲ್ಲರೆದುರು ನೀನು ದೀನವಾಗಿದ್ದೇನ
'ಮನೆಯಲ್ಲಿ ಹೆಣ್ಣಿದ್ರೇ ಹಾಗೇ' ಎಂ
ಎಲ್ಲರೆದುರು ಹೇಳಿದ್ದೇನು!

ಅಪ್ಪ... ನಿಮ್ಮ ಪಾಲಿಗೆ ನಾ ಹುಣ್ಣಾ
ಬೇಕಾದ ಅಗತ್ಯವಿರಲಿಲ್ಲ. ಕಂಡಕಂಡವರೆದು
ತಲೆಬಗ್ಗಿಸಿ ಕುಳಿತುಕೊಳ್ಳುವ, ಬಿಕರಿಗಿಟ್ಟ ಮಾ
ಗುವ ಅಗತ್ಯವಿರಲಿಲ್ಲ.

ಆತ್ಮಾಭಿಮಾನವುಳ್ಳ ಯಾವ ಹೆಣ್ಣೂ, ಕಷ್ಟಕ್ಕೋ
ಬಡತನಕ್ಕೋ, ಸಮಸ್ಯೆಗೋ ಹೆದರುವುದಿ
ಅಪ್ಪ. ಕಣ್ಣೆದುರೇ ಹರಾಜಾಗುತ್ತಿರುವ ಮರ್ಯಾ
ದೆಗೆ ಹೆದರುತ್ತಾಳೆ. ಹಾಡಹಗಲೇ ಎಲ್ಲರೆದು
ಬಟಾಬಯಲಾಗುವುದಕ್ಕೆ ಹೆದರುತ್ತಾಳೆ. ಈ
ಏನು ಹೇಳಿ ಏನು ಪ್ರಯೋಜನ....''

ಅವಳು ದೀರ್ಘ ನಿಟ್ಟುಸಿರಿಟ್ಟಳು.

''ಅಣ್ಣಂದಿರಾ, ತಾವೆಂದರೆ ತಮ್ಮ ಬದು
ಭವಿಷ್ಯ, ಕಡೆಗೆ ತಮ್ಮ ಹೆಂಡತಿ-ಮಕ್ಕ
ಮಾತ್ರವೇ ಎಂಬ ತತ್ವದಡಿ ಬದುಕುತ್ತಿರು
ನಿಮ್ಮಂತಹ ಪುರುಷ ಸಿಂಹಗಳಿಗೆ ಅಪ್ಪ-ಅ
ಅಕ್ಕ-ತಂಗಿ ಮುಂತಾದ ಸಂಬಂಧಗಳ ಕುರಿ
ನಾ ಏನನ್ನೂ ಹೇಳಲು ಇಷ್ಟಪಡುವುದಿಲ್ಲ. ಆ
ನೀವೆಲ್ಲ ಹೇಳುತ್ತಿರುವಂತೆ, ನಾನು ಅ
ತಲೆತಿರುಗಿಸಿ ಈ ಆಸ್ತಿಯನ್ನೆಲ್ಲ ನನಗಾಗಿ ಮ
ಕೊಳ್ಳುತ್ತಿಲ್ಲ. ಬದಲು, ಇಂದು ಅಪ್ಪ ಕೊಡಮಾ
ರುವ ಆಸ್ತಿಯನ್ನು ವಿನಯದಿಂದಲೆ ನಿರಾಕರಿ
ತ್ತಿದ್ದೇನೆ. ಹೇಳಿದೆನಲ್ಲ, ಅದು ಯಾವುದೂ
ಕಳೆದುಕೊಂಡಿದ್ದಕ್ಕೆ, ಪಟ್ಟಿದ್ದಕ್ಕೆ ಪರಿಹಾರವಾಗುವುದಿ

ನೀವೆಲ್ಲ ತಿಳಿದುಕೊಂಡಿರುವಂತೆ
ತೋಟ... ಅಪ್ಪ ಕೊಟ್ಟಿದ್ದಲ್ಲ. ನಿಮ್ಮೊಂದಿಗೆ ರ

ಮಾಂಸ ಹಂಚಿಕೊಂಡು ಹುಟ್ಟಿದ ಹೆಣ್ಣು ಹೆಂಗಸು, ಹತ್ತು ವರ್ಷ ಬೆವರು ಸುರಿಸಿ, ರಕ್ತ ತನಿಸಿ ಮಾಡಿದ್ದು... ಬಂಜರು ಭೂಮಿಯನ್ನು ದುಡ್ಡಿಗೆ ಕೊಂಡುಕೊಂಡೆ. ದುಡ್ಡನ್ನು ಅಪ್ಪನಲ್ಲಿ ಸಾಲವೆಂದು ತೆಗೆದುಕೊಂಡೆ. ಬೆಳೆ ಕೈಗೆ ಬಂದ ಮೇಲೆ ಅದೆಲ್ಲವನ್ನೂ ಹಿಂದಿರುಗಿಸಿದ್ದೇನೆ. ಅಪ್ಪ ಬೇಡವೆಂದ. ತಿರುಗಿ ಕೊಟ್ಟಿದ್ದಕ್ಕೆ ಬೇಸರವನ್ನೂ ಪಟ್ಟಿರಬಹುದು. ಹೇಳಿದೆನಲ್ಲ... ಕೊಡುವ ಕಾಲದಲ್ಲಿ, ನಾ ಬಯಸಿದ ಕಾಲದಲ್ಲಿ ಕಿಂಚಿತ್ ಕೊಡುವುದು ಯಾರಿಂದಲೂ ಸಾಧ್ಯವಾಗಲಿಲ್ಲ.

ನನ್ನ ಬದುಕಿನ ಅಮೂಲ್ಯ ಸಮಯವನ್ನೆಲ್ಲಾ ಈ ಮನೆಯ ಕತ್ತೆ ಚಾಕರಿಯಲ್ಲಿ ಕಳೆದಿದ್ದೇನೆ. ಕನಿಷ್ಠ... ಕನಿಷ್ಠ ಒಂದು ಹಿಡಿ ಪ್ರೀತಿ, ಒಂದಿಷ್ಟು ಗೌರವ ಮನೆಯ ಯಾವುದೇ ಮೂಲೆಯಿಂದ ಸಿಗುವಂತಿದ್ದರೂ, ಮನೆ ನನ್ನದೆಂಬ ಅಭಿಮಾನ ದಿಂದ, ಪ್ರೀತಿಯಿಂದ ಎಲ್ಲ ಕೆಲಸವನ್ನೂ ಮಾಡುತ್ತಿದ್ದೆ.

ಈಗ ನೋಡಿ... ನನ್ನ ತೋಟದಲ್ಲಿ ಒಂದು ಸಲ ಹೋಗಿ ನಿಂತರೆ ಸಾಕು... ಏನಿಲ್ಲ ಅಲ್ಲಿ? ಹಣಕ್ಕಿಂತಲೂ ಮಿಗಿಲಾದ ಮಾನಸಿಕ ಸಮಾಧಾನವನ್ನು ಅದು ನನಗೆ ಕೊಟ್ಟಿದೆ. ಆಸೆಯಿದ್ದೂ ಕಲಿಯಲು ಸಾಧ್ಯವಾಗದಿರು ವಂತಹ ಹತ್ತು ವಿದ್ಯಾರ್ಥಿಗಳಿಗೆ ಕಲಿಯಲು ಎಲ್ಲ ರೀತಿಯ ಅನುಕೂಲ ಒದಗಿಸಿಕೊಡುತ್ತಿದ್ದೇನೆ. ಆಶ್ರಯ ತಪ್ಪಿದ ನಾಲ್ಕು ಮಂದಿ ಹೆಣ್ಣಕ್ಕಳು ನನ್ನ ಕಾರ್ಯದಲ್ಲಿ ನೆರವಾಗಿ ನೆಮ್ಮದಿಯ ಬದುಕು ನಡೆಸುತ್ತಿದ್ದಾರೆ.

ಅಪ್ಪ, ಮುಲಾಜಿಲ್ಲದೇ ನಾ ಮಾತಾಡುತ್ತಿ ದ್ದೇನೆಂದು ಬೇಸರಪಟ್ಟುಕೊಳ್ಳಬೇಡ. ಕಡೆಗೂ ನನಗೆ ದೊರೆತ ಅಪ್ಪನ ಪ್ರೀತಿಗಾಗಿ ಹೃದಯ ತುಂಬಿ ಬರುತ್ತಿದೆ. ಹೆಣ್ಣಿನ ಹೃದಯ, ಎಂದಿಗೂ ತನ್ನ ಅಪ್ಪ-ಅಮ್ಮನನ್ನು, ಒಡಹುಟ್ಟಿದವರನ್ನು ದ್ವೇಷಿಸುವಷ್ಟು ಕೆಳಮಟ್ಟಕ್ಕೆ ಇಳಿಯುವುದು ಸಾಧ್ಯವೇ ಇಲ್ಲ. ಇಂದು ನನ್ನಲ್ಲಿರುವುದೇನಿದ್ದರೂ ವಿಷಾದ ಮಾತ್ರ.

ಅಮ್ಮ ಹೋದಮೇಲೆ ನಿನ್ನ ಸೇವೆಯನ್ನು ನನ್ನ ಪಾಲಿನ ಭಾಗ್ಯ ಎಂದುಕೊಂಡೇ ಮಾಡಿದ್ದೇನೆ.

ನನ್ನೆಲ್ಲ ಕೆಲಸಗಳಿಗೆ ಪ್ರತಿಯಾಗಿ ನನ್ನಲ್ಲಿ ಆತ್ಮತೃಪ್ತಿಯಿದೆ ಸಾಕು... ಗಂಡುಮಕ್ಕಳಿಗೆ ಅವರದ್ದೇ ಆದ ಭವಿಷ್ಯವಿದೆ... ನಾಳಿನ ಗುರಿಯಿದೆ... ಮತ್ತೆ ಅಮ್ಮನಿಗೆ ಗಂಡು ಮಕ್ಕಳೆಂದರೆ ಅದೆಂತಹಾ ಮೋಹವಿತ್ತಲ್ಲ.. ಅವಳ ಆತ್ಮಕ್ಕೂ ತೃಪ್ತಿಯಾಗಲಿ... ಈ ಆಸ್ತಿಯೆಲ್ಲ ನಿನ್ನ ಗಂಡು ಮಕ್ಕಳಿಗೇ ಇರಲಿ...''



[illegible]

[illegible]


[illegible]

[illegible]

ಸವಿತಾ ಎನ್.



ಶಶಿಧರ



ಸಿ. ನಂದಿನಿ

ಸಮೀರ ಬಂದ ರಾತ್ರಿ

ಎತ್ತರೆತ್ತರಕ್ಕೂ ಮರಳು, ಬೀಸುವ ಗಾಳಿ ಗುರುಗುಟ್ಟುತ್ತಾ, ರಾಶಿ ರಾಶಿ ಮರಳಿನ ಗುಡ್ಡಗಳ ಆಕಾರವನ್ನು ಬದಲಿಸುತ್ತಿದೆ. ಪ್ರಳಯವಾಗಿ, ಭೂಮಿ ಬಾಯಿ ತೆರೆದು ಪ್ರಕೃತಿಯನ್ನು ನುಂಗಿ ಹಾಕಿದ ನಂತರದ ಅವಶೇಷದಂತಿದೆ, ಅಲ್ಲಿನ ವಾತಾವರಣ. ಅಲ್ಲೊಂದು ನಗುವಿಲ್ಲ, ಅಳುವಿಲ್ಲ, ಅಗಲಿಕೆಯ ರೋದನವಿಲ್ಲ. ಹಾಗೆಂದು ಯಾರೂ ವಾಸಮಾಡದ ಸ್ಥಳ ಅದಲ್ಲ.

ಅದೊಂದು ಯುದ್ಧ ನಿರಾಶ್ರಿತರ ತಾಣ!

ಅಲ್ಲಿ ಹಸಿವಿದೆ, ಅಭದ್ರತೆಯ ಭಯವಿದೆ, ಅದರೊಂದಿಗೆ, ಚಿಗುರಿ ನಿಂತ ಸುಂದರ ಹೆಣ್ಣುಗಳ ಕೌಮಾರ್ಯಕ್ಕೆ ಕುಂದು ಬಂದರೆ ಎಂಬ ಆತಂಕವಿದೆ.

ಬಾರ್‌ಮಿರ್‌ನ ಮರಳುಗಾಡು. ರಾಜಸ್ಥಾನದ ಸಣ್ಣದೊಂದು ಊರು. ಅಲ್ಲಿಂದ ಕೇವಲ 120 ಕಿಲೋ ಮೀಟರ್‌ಗಳನ್ನು ಕ್ರಮಿಸಿದರೆ ಪಾಕಿಸ್ಥಾನ. ಸಣ್ಣ ಸಣ್ಣ ಟೆಂಟ್‌ಗಳೊಳಗೆ ತೂರಿಕೊಂಡುಬಿಟ್ಟಿರುವ ಸಂಸಾರಗಳು ಸುತ್ತ ಮುತ್ತಲು ಮನುಷ್ಯರು ವಾಸಿಸುವ ಬಗ್ಗೆ ಅನುಮಾನಿಸುವಂತೆ ಮಾಡುತ್ತವೆ.

ಭಾರತದ ಇನ್ಯಾವುದೊ ಗಡಿಯಲ್ಲಿ ಗುಂಡಿನ ಚಕಮಕಿ, ಷೆಲ್ ದಾಳಿ ನಡೆದು ಯುದ್ಧ ಘೋಷಿತವಾಗೇಬಿಟ್ಟಿದೆ. ಅಂಥಾ ಪ್ರಕ್ಷುಬ್ಧ ವಾತಾವರಣ ಇರುವಾಗ, ಗಡಿಗೆ ಕೇವಲ ಒಂದುವರೆ-ಎರಡು ಕಿಲೋ ಮೀಟರ್ ದೂರದಲ್ಲಿರುವ ಊರುಗಳಾದ ಮುನಬಾ, ಗಡ್ರಾರಸ್ತೆ, ಮಲಾನಗಳಲ್ಲಿ ವಾಸ ಮಾಡುವ ಜನರು ನೆಮ್ಮದಿಯಾಗಿ ಅಲ್ಲಿರಲು ಸಾಧ್ಯವೇ ಇಲ್ಲ. ರಾಜಸ್ಥಾನದಲ್ಲಿಯೇ, ಭದ್ರತೆ ನೀಡುವ ಯಾವುದಾದರೊಂದು ಸ್ಥಳವನ್ನು ಹುಡುಕಿಕೊಳ್ಳಬೇಕು. ಹೆಚ್ಚಿನವರು ಬಾರ್‌ಮಿರ್, ಜೋಧ್‌ಪುರ್‌ಗಳಿಗೆ ವಲಸೆ ಹೋಗಿಬಿಡುವರು.

ಹತ್ತರಿಂದ ಹದಿನೆಂಟು ಇಪ್ಪತ್ತು ಕಿಲೋಮೀಟರ್ ದೂರಗಳಲ್ಲಿರುವ ಸುಂದರ್, ರೋಹರಿ, ಗದಸ್, ಜೆಸಿಂದರ್‌ನಂತಹ ಸಣ್ಣಪುಟ್ಟ ಊರುಗಳವರೂ ಸ್ಥಾನಪಲ್ಲಟ ಮಾಡದೆ ವಿಧಿ ಇಲ್ಲ.

ನೆಮ್ಮದಿಯಾಗಿ ತಿಂದುಂಡು ಬದುಕುತ್ತಿದ್ದ ಅಲ್ಲಿನ ಸಂಸಾರಗಳಿಗೆ, ಆಪರೇಷನ್ ಸುರುವಾಗುತ್ತಿದ್ದಂತೆ ತೆರವುಗೊಳಿಸುವಂತೆ ಆರ್ಡರ್ ಬರುತ್ತದೆ. ಹಿರಿಯ ಜೀವಗಳ್ಯಾವುವೂ ನಿಟ್ಟುಸಿರು ಬಿಡುವುದಿಲ್ಲ. ಅಂದು ಗಂಟು ಮೂಟೆ ಸಿದ್ಧಗೊಳ್ಳುತ್ತದೆ. ಸಂಸ್ಕಾರವಂತ ಸಂಸಾರಗಳು, ತಾವು ಎದುರುಗೊಳ್ಳುವ ಯೋಧರಿಗೆ ಮನಃಪೂರ್ವಕವಾಗಿ ಶುಭ ಹಾರೈಸಿ, ವಂದಿಸಿ, ಹೆಗಲಮೇಲೆ ಕೈಯಿಟ್ಟು ಆತ್ಮೀಯತೆ ತೋರಿಸಿ, ಅವರಲ್ಲಿ ಆತ್ಮವಿಶ್ವಾಸ ತುಂಬುತ್ತಾರೆ. ಬೆಳೆದು ನಿಂತ ಸಜ್ಜೆಯನ್ನಾಗಲೀ, ಕಲ್ಲಂಗಡಿಹಣ್ಣು ಹೊತ್ತು, ಬಳ್ಳಿಗಳು ಭಾರ ಹೊರಲಾರದ ಬಸುರಿಯಂತೆ ನಿಂತಿರುವುದನ್ನಾಗಲೀ, ತೊರೆದು ಹೋಗುವಾಗ ನಿಟ್ಟುಸಿರು ಬಿಡುವವರೇ ಇಲ್ಲ. ಅಷ್ಟೇ ಯಾಕೆ, ದಶಕಗಳಿಂದ ವಾಸವಾಗಿರುವ, ಕೈಯಾರೆ ನಿರ್ಮಿಸಿರುವ ಮನೆಗಳನ್ನು ಅಗಲಿ ಹೋಗುವಾಗ ದುಃಖದ ಕಣ್ಣೀರೇನೂ ಕೆನ್ನೆಯನ್ನು ತೊಯ್ಯಿಸುವುದಿಲ್ಲ. ಬದಲಿಗೆ, ಸಂಸಾರ ತೊರೆದು, ಮರಳುಗಾಡಿನಲ್ಲಿ ದೇಶ ರಕ್ಷಣೆಗಾಗಿ ಕ್ಷಣಕ್ಷಣವೂ ಹುರಿಯಾಗಿ ನಿಂತ ಯೋಧರ ತ್ಯಾಗಗಳಿಗೆ ತಮ್ಮ ಈ ಯಾತ್ರೆ, ಅತ್ಯಲ್ಪ ಕೊಡುಗೆ ಎಂದುಕೊಳ್ಳುವ ಹೃದಯವಂತರವರು.

ಭಾರತೀಯ ಸೇನೆಗೆ ಸೈನಿಕರು ನೇಮಕಗೊಳ್ಳುತ್ತಿರುವ ವಿಷಯ ತಿಳಿಯುತ್ತಲೇ ಮನ್ಸೂರ್ ಖಾನ್, ಟೆಂಟಿನ ಒಳಗೆ, ಲೋಕದ ಆಗುಹೋಗುಗಳ ಬಗ್ಗೆ ತಲೆ

ಕೆಡಿಸಿಕೊಳ್ಳದೆ, ಆರು ಮೂರಾದರೂ ಸರಿಯೇ, ಕುಳಿತು ತಿಂದೇ ಕಾಲ ಕಳೆಯುತ್ತೇನೆ ಎನ್ನುವ ಮಗನ ಮುಂದೆ ನಿಂತಿದ್ದರು.

''ಬೇಟಾ, ಇಂಥಾ ಅವಕಾಶ ಮುಂದೆ ಯಾವಾಗ ಬರುತ್ತದೆಯೊ; ಇದೊಂದೇ ಒಂದು ಬಾರಿ ನನ್ನ ಮಾತು ಕೇಳಿಬಿಡು'', ಕೈಯಲ್ಲಿದ್ದ ನ್ಯೂಸ್ ಪೇಪರನ್ನು ಮಗನ ಮುಂದೆ ಹಿಡಿದರು.

ಸಮೀರ್ ನಿರ್ಲಕ್ಷ್ಯದ ನೋಟ ಬೀರಿದ. ''ತಿಂಗಳಿಗೊಮ್ಮೆ ಈ ಸರ್ಕಾರ ಕೊಡೊ ಸಂಬಳಕ್ಕೆ ಬಾಯಿ ಬಿಟ್ಟುಕೊಂಡು, ಜೀವಮಾನದ ಅರ್ಧ ಆಯಸ್ಸನ್ನು ಬಿಸಿಲು ಚಳಿ ಎನ್ನದೆ, ಯಾವುದನ್ನೂ ಲೆಕ್ಕಿಸದೆ, ಸುಡುಗಾಡುಗಳಲ್ಲಿ ಕಳೆಯಬೇಕಾ? ಸುಡುಗಾಡು ಕಾಯುವವನೂ ಒಂದೇ, ದೇಶವನ್ನು ಕಾಯುವವನೂ ಒಂದೇ. ಅವರಿಬ್ಬರಿಗೂ ವ್ಯತ್ಯಾಸ ಏನೂಂದ್ರೆ, ಸುಡುಗಾಡು ಕಾಯುವವನು ನೆಲದಲ್ಲಿ ಹುಗಿದಿಟ್ಟ ಹೆಣಗಳಿಗೆ ಕಾವಲು ಕಾಯುತ್ತಾನೆ. ದೇಶ ಕಾಯುವವನು ಜೀವಂತ ಹೆಣಗಳ ಕಾವಲು ಕಾಯುತ್ತಾನೆ'', ಅವನು ಕೆರಳಿದ.

ಮನ್ಸೂರ್‌ಖಾನ್ ತಲೆಗೆ ಕೈಯಿಟ್ಟು ಕುಳಿತುಬಿಟ್ಟರು. ಮಗನನ್ನು ಬದಲಿಸುವುದು ಸಾಧ್ಯವಿಲ್ಲದ ಮಾತೆಂದು ನಿರ್ಧರಿಸಿ, ಟೆಂಟಿನಿಂದ ಹೊರಗೆ ಹೋಗಿಬಿಟ್ಟರು.

ಸುಕ್ಕುಗಟ್ಟಿದ ಕೆನ್ನೆಗಳು ಜಾರಿದ ಎರಡು ಹನಿ ಕಣ್ಣೀರಿನಿಂದ ಬೆಚ್ಚಗಾದವು. ನಡುಗುವ ಕೈಗಳಿಂದ ಅವುಗಳನ್ನು ತಡೆದರು.

ಅವರಿಗೆ ಆ ದಿನಗಳೆಲ್ಲಾ ನೆನಪಿದೆ. 1971ರ ಯುದ್ಧ ಕಾಲದ ಘೋರ ದಿನಗಳು. ನಿರಾಶ್ರಿತರಾಗಿ, (ಈಗ ಪಾಕಿಸ್ಥಾನದಲ್ಲಿರುವ) ಗಡ್ರಾ ಗ್ರಾಮದಿಂದ ಹಿಂಡು ಹಿಂಡಾಗಿ ಬಂದು, ಗಡ್ರಾ ರಸ್ತೆಯಂಚಿನಲ್ಲಿ ನಿಂತಿದ್ದ ಕುಟುಂಬಗಳಲ್ಲಿ ತಮ್ಮದೂ ಒಂದು.

ಅಂದೇನೊ ಯುದ್ಧ ಮುಗಿದಿತ್ತು. ವಿಜಯ ಯಾರ ಪಾಲಿನದಾಗಿತ್ತೊ?! ನಿರಾಶ್ರಿತರಿಗೆ ಮಾತ್ರ ಒಂದೇ ಫಲ! ಎಲ್ಲವನ್ನೂ ಕಳೆದುಕೊಂಡ ಅಭದ್ರತೆ!!

ಗಡ್ರಾದಲ್ಲಿ ಒಂದ್ಹೊತ್ತಿನ ಊಟಕ್ಕೂ ಪರದಾಟವಾದಾಗ, ಅಲೆಮಾರಿಗಳಂತೆ, ಗಂಟು ಮೂಟೆ ಹೊತ್ತುಕೊಂಡು ಭಾರತ ಸರಹದ್ದಿನಲ್ಲಿರುವ ಗಡ್ರಾ ರಸ್ತೆಯಂಚಿನವರೆಗೂ ನಡೆದು ಬಂದು ತಳವೂರಿದ ಸಂಸಾರಗಳಲ್ಲಿ ಖಾನರದು ಒಂದು.

ಸರಿಸುಮಾರು ಹತ್ತುವರ್ಷಗಳೇ ಗಡಿಂ... ಮರಳು ದಿಣ್ಣೆಗಳಲ್ಲಿ, ಸಣ್ಣ-ಪುಟ್ಟ ವಾಸಯೋ... ಗೂಡು ಕಟ್ಟಿಕೊಂಡು ದಿನ ತಳ್ಳಿದ್ದು ಮನ್ಸೂ... ಖಾನ್‌ರಿಗೆ ಚೆನ್ನಾಗಿ ನೆನಪಿದೆ. ನಿಗಿನಿಗಿ ಎನ್ನುತ್ತಿ... ಯೌವನ ಸದ್ದಿಲ್ಲದೆ ಸರಿದು ಹೋಗಿ... ಅದೊಂದು ಪ್ರೌಢತೆ ಹೊಕ್ಕು, ಮನೆ, ಮ... ಮಕ್ಕಳು ಎನ್ನುವ ಕಾಲಕ್ಕೆ ಸರ್ಕಾರದಿಂ... ದೊರಕಿದ 75 ಎಕರೆಗಳ ಜಮೀನು, ... ಬೆಳೆಯಿತು. ವರ್ಷಕ್ಕೆ ಎರಡು ಮಳೆಯಾದ... ನಿಧಿ ಮೊಳೆತಂತೆ ಸಜ್ಜೆ ಬೆಳೆದು ನಿಲ್ಲುತ್ತಿ... ಅಪ್ಪಿತಪ್ಪಿ ಮಳೆ ಇಲ್ಲವಾದರೆ ಅಂಥದ್ದೇನ... ದರಿದ್ರವಿರುತ್ತಿರಲಿಲ್ಲ. ಹಿಂದಿನ ಬೆಳೆ ತಂ... ಕೊಟ್ಟ ಅಗಾಧ ಹಣ ಇರುತ್ತಿತ್ತು.

ಒಂದು ನೆಮ್ಮದಿಯ ಜೀವನ ಕೊ... ಭಾರತದ ನೆಲದ ಮೇಲೆ ಅತೀವ ಅ... ಅವರಿಗೆ. ಅದೆಲ್ಲಿಂದ ತಲೆಗೆ ತುಂಬಿಸಿಕೊಂ... ಬಂದಿದ್ದನೊ, ಯಾರು ಕಟುವಾಗಿ ಉಪದ... ಮಾಡಿದ್ದರೊ, ಸಮೀರ್ ಮಾತ್ರ ತಾನು ಭಾರತೀ... ನೆಂದು ಒಪ್ಪಿಕೊಳ್ಳಲು ಸಿದ್ಧನಿಲ್ಲ. ಅವನಿ... ಭಾರತ ವಿರೋಧಿ ಮಾತುಗಳು ಕೇಳುವಾಗೆ... ಬೆಳೆದು ಎತ್ತರಕ್ಕೆ ನಿಂತ ಮಗನ ಕೆನ್ನೆಗಳಿಗ... ರಪನೆ ತಟ್ಟಿಬಿಡಬೇಕೆನಿಸುತ್ತದೆ ಮನ್ಸೂರ್ ಖಾನ್‌ರಿ...

ಗೊಣಗುತ್ತಿರುವ ಸಮೀರ್‌ನ ದನಿ ಟೆಂ... ಹೊರಗೆ ನಿಂತವರ ಕಿವಿಯನ್ನು ಅಪ್ಪಳಿಸಿ... ಅದೆಲ್ಲಿತ್ತೊ ಸಿಟ್ಟು, ಮಗನ ಮುಂದೆ ಪ್ರತ್ಯಕ್ಷರಾ... ''ತಾಕತ್ತಿದ್ದರೆ ಹೋಗೊ, ಎಲ್ಲಿಗೆ ಹೋಗ್ತೀಯ... ನೋಡ್ತೀನಿ. ನೀನು ಹುಟ್ಟಿದ್ದು ಇದೇ ನೆಲದ... ಒಂದು ಸೂಜಿ ಮೊನೆಯಷ್ಟು ನಿಯತ್ತೀ...

ನಿಮ್ಮಂಥವರು, ಯಾರ ನಂಬಿಕೆಗೂ ಅರ್ಹ ರಲ್ಲ'' ಎಂದು ಕೂಗಾಡಿಬಿಟ್ಟರು.

ಬರಿಗೈಯಲ್ಲಿ, ಸುಡುವ ನೆಲದ ಮರಳ ರಾಶಿಯಲ್ಲಿ ಹೆಜ್ಜೆ ಹಾಕುತ್ತಾ ಬಂದವರಿಗೆ, ನೆಲೆ ಕೊಟ್ಟು, ಒಂದೊಳ್ಳೆ ಹಸನಾದ ಬದುಕು ನೀಡಿದ ನೆಲಕ್ಕೆ, ಕನಸಿನಲ್ಲೂ ಎರಡು ಬಗೆಯರು.

ಅದೇಕೊ ಮಗನ ಮೇಲೆ ಅನುಮಾನ. ಅನ್ನವಿಟ್ಟ ನೆಲಕ್ಕೆ ಮೋಸ ಮಾಡುವನೇನೊ ಎಂಬ ಶಂಕೆ! ಎಂದಾದರೂ ಒಂದು ದಿನ ಅವನಿಂದಾಗಿ ಮುಖ ಮರೆಸಿಕೊಳ್ಳುವಂತಾಗ ಬಹುದೇನೊ ಎಂಬ ಭಯ.

ಗಡಿ ಪ್ರದೇಶಗಳಲ್ಲಿ ತೆಂಗಿನ ಮರದಂತೆ ಬೆಳೆದುನಿಂತ ಯುವಕರನ್ನು ದಾರಿತಪ್ಪಿಸುವ ಮಂದಿಗೇನೂ ಕಡಿಮೆ ಇಲ್ಲ. ಕಣ್ಣು ತಂಪಾಗಿಸು ವಷ್ಟು ಹಣದ ಕಂತೆಗಳನ್ನು ಸುರಿದರಾಯಿತು. ನಿಯತ್ತಿನ ಯವಕರು. ಬಿಸಿರಕ್ತದ ಹುರುಪಿನಲ್ಲಿ ಹಸ್ತ ಚಾಚಿ ಬಿಡುವರು. ತಮ್ಮದೇನಿದ್ದರೂ ಶೋಷಣೆಗಳ ವಿರುದ್ಧ ಹೋರಾಟ, ಸಂಘರ್ಷ, ಎನ್ನುವರು. ಅವರುಗಳ ದೃಷ್ಟಿಯಲ್ಲಿ ಅದೊಂದು ಸಂಗ್ರಾಮ! ಆದರೆ ಲೋಕದ ದೃಷ್ಟಿಗೆ ಟೆರರಿಸಂ!!

ಕೂಗಾಡಿಯೇನೊ ಕೂಗಾಡಿಬಿಟ್ಟಿದ್ದರು ಮನ್ಸೂರ್ ಖಾನ್‌ರು. ಅನಂತರ ದೊಡ್ಡ ದೊಡ್ಡ ಹೆಜ್ಜೆ ಹಾಕುತ್ತಾ ಹೋದ ಸಮೀರ್‌ನನ್ನು ನೋಡಿ ನಡುಗಿಬಿಟ್ಟರು. 'ಏನೂ ಆಗದಿರಲಿ.' ಪ್ರತೀ ಬಾರಿ ಅವನು ಸಿಟ್ಟು ಮಾಡಿಕೊಂಡು ಹೋಗು ವಾಗಲೂ, ಇದೇ ರೀತಿ, ಮನದಲ್ಲೇ ಹೇಳಿ ಕೊಳ್ಳುತ್ತಾರೆ. ಸಂಜೆ ಹೊತ್ತಿಗೆ, ಕೈಯಲ್ಲೊಂದು ಸಿಗರೇಟು ಹಿಡಿದು, ಏನೂ ನಡೆದೇ ಇಲ್ಲ ಎನ್ನುವಂತೆ ಹಿಂತಿರುಗುವವನನ್ನು, ತಂದೆಯನ್ನು ಕಂಡಕೂಡಲೇ ಸಿಗರೇಟು ಎಸೆದು ಬಿಡುವವ ನನ್ನು ನೋಡಿದ್ದಾರೆ. ಮಗ ಹಿಂತಿರುಗಿದ ಸಮಾಧಾನ, ಕಣ್ಣಾರೆ ಕಂಡ ತಪ್ಪನ್ನು ಕ್ಷಮಿಸುತ್ತದೆ.

ಹಸಿವಿನಿಂದ ಚುರುಗುಟ್ಟುತ್ತಿದ್ದ ಹೊಟ್ಟೆ, ಊಟ ಮಾಡಲು ಮನಸ್ಸು ಬರಲಿಲ್ಲ. ಅಚ್ಚುಕಟ್ಟಾಗಿ ನಮಾಜು ಮಾಡಿ ಎದ್ದರು. ನಮಾಜು ಮಾಡಲು ಹಾಸಿಕೊಂಡಿದ್ದ ಬಟ್ಟೆಯನ್ನು ಸುತ್ತಿಡಲು ಬಾಗಿದವರ ಕಣ್ಣಂಚಿನಿಂದ ಎರಡು ಹನಿ ಜಾರಿಬಿತ್ತು.

ಸಮೀರ್‌ನ ಆಗಮನದ ನಿರೀಕ್ಷೆಯಲ್ಲೇ ಎರಡು ದಿನ ಊಟ, ನಿದ್ದೆ ಇಲ್ಲದೆ ಕಳೆದರು. ಅವರ ಹೆಂಡತಿ, ತಮ್ಮ ದುಗುಡವನ್ನು ಮುಚ್ಚಿಟ್ಟು ಕೊಂಡು, ಖಾನ್‌ರಿಗೆ ಸಮಾಧಾನ ಹೇಳಿದರು.

ದಿನಗಳು ಉರುಳಿ, ತಿಂಗಳುಗಳೇ ಕಳೆದವು. ಖಾನ್‌ರ ಸಂಸಾರ, ಬಾರ್‌ಮಿರ್‌ನ ಟೆಂಟನಿಂದ, ಗಡ್ರಾ ರಸ್ತೆಯಂಚಿನ ಅವರ ಜಮೀನಿನಲ್ಲಿರುವ ಮನೆಗೆ ವರ್ಗಾಯಿಸಲ್ಪಟ್ಟಿತು.

ಕಾಲ ಹೇಗೊ ಉರುಳಿತು. ದಿನವೂ, ರಸ್ತೆ



ಯಂಚಿಗೆ ನಿಂತು, ಮುಳ್ಳು ತಂತಿಯಿಂದ ಬೇರ್ಪಟ್ಟ ಒಂದು ಸಣ್ಣ ರಸ್ತೆಯನ್ನು ನೋಡುವಾಗ ಖಾನ್‌ರಿಗೆ ಕರುಳು ಹಿಂಡಿಬರುತ್ತದೆ. ಪಾಕಿಸ್ಥಾನದ ಒಂದು ಅಂಚಿನಿಂದ ಭಾರತದ ಒಂದು ಅಂಚಿಗೆ ಬಂದು ನೆಲೆಸಿಯಾಗಿತ್ತು. ಅಲ್ಲಿಂದ ಬರುವಾಗ ಇದ್ದ ಭದ್ರತೆ ನಂತರ ಇರಲಿಲ್ಲ. ತಮಗೊಂದು ಉತ್ತಮ ಜೀವನ ನೀಡಿದ್ದಕ್ಕೆ, ಭಾರತದ ನೆಲಕ್ಕೆ ಅವರೆಂದೂ ಋಣಿ. ಮಗ ಸಮೀರ್, ದಿನ ದಿನಕ್ಕೂ ಭಾರತ ವಿರೋಧಿಯಾಗಿ, ಪಾಕಿಸ್ಥಾನದ ಪರವಾಗಿ ಮಾತನಾಡತೊಡಗಿದಾಗ ನಡುಗಿ ಬಿಟ್ಟಿದ್ದರು. ಅವನ ಮಾತುಗಳು, ಅದರಲ್ಲಿದ್ದ ಕಠೋರತೆ, ಅವನಿಂದ ಮಾಡಬಾರದ ಕೆಲಸ ಮಾಡಿಸುವುದೇನೊ ಎಂಬ ಭಯ ಅವರ ಉಸಿರಾಟವನ್ನು ತಡೆತಡೆದು ಹಿಂಸಿಸತೊಡಗಿತು.

ಆ ದಿನ ಸಮೀರ್ ಕಣ್ಮರೆಯಾಗಿ ಸರಿಯಾಗಿ ಒಂದು ವರ್ಷ. ಪ್ರತಿ ಬಾರಿ, ಅವನ ನೆನಪನ್ನು ಮನದಿಂದ ಅಳಿಸಿಹಾಕಲು ನಿರ್ಧರಿಸಿ, ಸೋತು ಹೋಗುವರು.

ಹಿಂದೆಲ್ಲಾ ಗಡ್ರಾ ರಸ್ತೆಯಂಚಿನಲ್ಲಿ ನಿಂತರೆ, ದೂರದಲ್ಲಿ ಕಾಣುವ ಗಡಿಗೆ ಬಿಗಿದ ಮುಳ್ಳುತಂತಿ ನೂರಾರು ನೆನಪು ಹೊತ್ತು ತರುತ್ತಿತ್ತು. ಇತ್ತೀಚೆಗೆ ದೃಷ್ಟಿಯೇ ಮಂದವಾಗಿಬಿಟ್ಟಿದೆ. ದೃಷ್ಟಿ ಹಾಯಿಸಿದಷ್ಟೂ ಮರಳರಾಶಿಯೇ ಕಾಣುವುದು!

"ಎಲ್ಲೋ ನೋಡ್ತಾ ನಿಂತುಬಿಟ್ರಲ್ಲಾ ಯಾ
ಬಂದಿದ್ದಾರೆ ನೋಡಿ"-ಹೆಂಡತಿಯ ದ
ಎಚ್ಚರಿಸಿತು.

ಕಣ್ಣಿಗೆ ಒಂದು ಪರದೆಯನ್ನೇ ಎಳೆ
ಬಿಟ್ಟಂತಾಗಿತ್ತು. ಖಾನ್‌ರಿಗೆ. ಕಣ್ಣು
ಕೊಂಡು, ತಲೆ ಎತ್ತಿ ನೋಡಿದರು. ಕಳೆಕಳೆಯಾ
ಮುಖವನ್ನು ಅರ್ಧ ಮರೆಮಾಡಿದ್ದ ಗ
ತಲೆಗೊಂದು ಟೋಪಿ, ಜೀನ್ಸ್‌ಪ್ಯಾಂಟ್, ಅದ
ಮೇಲೊಂದು ಉದ್ದನೆಯ ಸಡಿಲವಾ
ಷರ್ಟ್... ಆ ವ್ಯಕ್ತಿಯನ್ನು, ನಿಮ್ಮ ಮಗನೆಂ
ಇನ್ನೊಬ್ಬರು ಪರಿಚಯಿಸಬೇಕಿತ್ತು!

ಸಮೀರ್ ಬಂದ ಸಂಭ್ರಮಕ್ಕೆ ಮನೆ ತುಂ
ಹಬ್ಬದ ವಾತಾವರಣ. ಮನೆಯಲ್ಲಿ ಯಾರೂ ನಿ
ಮಾಡದೆ, ಸಮೀರ್‌ನ ಸುತ್ತಲೂ ಕುಳಿ
ಅವನು ಹೇಳುವ ಅದ್ಭುತಗಳನ್ನು ಕಣ್ಣರ
ಕೇಳುತ್ತಾ ತಲೆದೂಗಿದರು, ಮನ್ಸೂರ್ ಖಾ
ರನ್ನು ಹೊರತುಪಡಿಸಿ. ಎಲ್ಲರೂ ನಿದ್ದೆಗಿಳಿದಿ
ಮಧ್ಯರಾತ್ರಿಯ ನಂತರ. ಖಾನ್‌ರಿಗೆ ಮ
ನಿದ್ದೆಯೇ ಹತ್ತಿರ ಸುಳಿಯಲಿಲ್ಲ. ಲೈಟ್ ಕೂ
ಹಾಕಿಕೊಳ್ಳದೆ, ಬಲಹೀನಗೊಂಡಿರುವ
ಯಲ್ಲೂ, ತಡಕಾಡಿ, ಮಗನ ಕೋಣೆಯ
ತಲುಪಿದರು.

ಮನೆಯವರಿಗೆಲ್ಲಾ ಸಮೀರ್ ತಂದುಕೆ
ಉಡುಗೊರೆಗಳೇ ಸಾವಿರಾರು ರೂಪಾ
ಗಳದ್ದು. ಎಲ್ಲರೂ ಸಂತಸದಿಂದ ಸ್ವೀಕರಿಸಿದ್ದ
ಅಷ್ಟೆಲ್ಲಾ ಹಣ ಎಲ್ಲಿಂದ ತಂದ? ಅದೇ
ಮಾನ ಖಾನ್‌ರಿಗೆ.

ವರಾಂಡದ ದೀಪದ ಬೆಳಕು ಕೊ
ಯೊಳಗೆ ತೂರಿಬರುತ್ತಿದೆ. ಗಾಢವಾದ
ಯಲ್ಲಿರುವ ಮಗ. ಒಂದರ ಮೇಲೊಂ
ಪೇರಿಸಿಟ್ಟಿದ್ದ ಸಮೀರ್‌ನ ಏರ್‌ಬ್ಯಾಗ್‌ಗ
ಸದ್ದಾಗದಂತೆ ತೆರೆದು ನೋಡಿದರು.
ಅವನು ಧರಿಸುತ್ತಿದ್ದ ವಸ್ತ್ರಗಳಿಗಿಂತ ಭಿನ್ನವಾದ
ಬ್ಯಾಗಿನ ತುಂಬ ತುಂಬಿತ್ತು. ಇನ್ನೊಂದು

ಎಳೆದು ನೋಡಿದರು. ಕೈಗೇನೋ ವಸ್ತು ತಗುಲಿದಂತಾಯಿತು. ರಭಸದಿಂದ ಮೇಲೆತ್ತಿದರು. ಪವಿತ್ರ ಗ್ರಂಥ ಕುರಾನ್! ಅದೇಕೋ ಅನುಮಾನಗಳೆಲ್ಲಾ ಒಂದೇ ಸಲಕ್ಕೆ ದೂರವಾಗಿ, ನಗುವೊಂದು ಅವರ ತುಟಿಗಳಲ್ಲಿ ತೇಲಿಬಂತು. ನಿದ್ದೆಯಲ್ಲಿದ್ದ ಮಗನನ್ನು ನೋಡಿ ಸಮಾಧಾನಗೊಂಡರು. 'ನನ್ನ ಮಗ ದೇಶದ್ರೋಹಿಯಾಗಲಿಲ್ಲ', ನೆಮ್ಮದಿಯ ಉಸಿರುಬಿಟ್ಟರು.

ಢಣ್, ಢಣ್... ಮನೆಯ ಗಡಿಯಾರ ರಾತ್ರಿ ಎರಡು ಗಂಟೆ ಎಂದು ಜೋರಾಗಿ ಸದ್ದು ಮಾಡಿತು. ಕತ್ತಲಿನಲ್ಲಿ ಬಂದ ಆ ಸದ್ದಿಗೆ ಅವರ ಎದೆಬಡಿತ ಹೆಚ್ಚಿತು. ಸಣ್ಣಗೆ ನಡುಗುತ್ತಾ, ಮುಂದೆ ಹೆಜ್ಜೆ ಇಡಲಾಗದೆ ಕುಸಿದು ಕುಳಿತರು. ಮಬ್ಬು ಬೆಳಕಿನಲ್ಲಿ ಮಗನಿಗೆ ಎಚ್ಚರವಾದರೆ? ತಾನೀಗ ಕಳ್ಳನಂತೆ ಬಂದುದು ತಿಳಿದುಬಿಟ್ಟರೆ?!

ಮುಜುಗರದಿಂದ ಗೋಡೆ ಹಿಡಿದೇ, ತೆವಳುತ್ತಾ ಸಾಗಿದರು. ಮೂಟೆಯೊಂದು ಕಾಲಿಗೆ ಅಡ್ಡ ಸಿಕ್ಕಂತಾಗಿ ಬೆಚ್ಚಿದರು. ಉಸಿರು ಬಿಗಿಹಿಡಿದು, ಅವಸರದಿಂದ ತೆಗೆದು ನೋಡಿದರು. ಅವರ ಅನುಮಾನದಂತೆಯೇ ಇತ್ತು. ಎರಡು ಗನ್, ಬುಲೆಟ್‌ಗಳು, ಇನ್ನೂ ಏನೇನೊ, ನೋಡುತ್ತಲೇ ಸುಸ್ತಾಗಿಬಿಟ್ಟರು.

ಮರುಕ್ಷಣದಲ್ಲೇ, ಲೋಡಾದ ಗನ್ ಅವರ ಕೈಸೇರಿತು. ನೆಮ್ಮದಿಯ ನಿದ್ದೆಯಲ್ಲಿರುವ ಮಗ. ಇನ್ನೊಂದು ಯೋಚನೆ ಮಾಡದೆ ನಡುಗುವ ಕೈಗಳಲ್ಲಿ ಅವನ ಎದೆಗೆ ಹಿಡಿದರು. ಮರಳುಗಾಡು ಭೀಕರವಾಗಿ ಸದ್ದು ಮಾಡುತ್ತಾ, ಪ್ರಳಯವಾಗಿಬಿಟ್ಟಿತೇನೊ ಎಂಬಂತೆ, ಕ್ಷಣಮಾತ್ರದಲ್ಲಿ ಮನೆ ತುಂಬ ಊರ ಜನ ಸೇರಿಬಿಟ್ಟರು.

ಮುಂಜಾನೆ ಇನ್ಸ್‌ಪೆಕ್ಟರ್ ಮುಂದೆ ಕುಳಿತ ಮನ್ಸೂರ್‌ಖಾನ್‌ರ ಮೊಗದಲ್ಲಿ ಯಾವ ಭಾವನೆಗಳೂ ಇಲ್ಲ, ''ಅವನಿಗೆ ಹೇಳಿದ್ದೆ, ದೇಶದ್ರೋಹದ ಕೆಲಸ ಬೇಡ. ನಮಗೊಂದು ನೆಲೆ, ಅನ್ನ ಕೊಟ್ಟ ದೇಶ ಇದು. ಒಳ್ಳೆಯದು ಮಾಡೋದಿಕ್ಕೆ ಸಾಧ್ಯವಿಲ್ಲದಿದ್ದರೆ ಬೇಡ, ಕೆಟ್ಟದ್ದು ಮಾಡೋದು ಬೇಡ. ನನ್ನನ್ನು ಭಯೋತ್ಪಾದಕ ಅಂತ ನೀವು ಆರೋಪಿಸಿದರೆ ನನ್ನಲ್ಲಿ ಮಾತೇ ಇಲ್ಲ.'' ಕಿರುಚಾಡದೆ, ತಣ್ಣಗೆ ಹೇಳಿ ಸುಮ್ಮನಾದರು.


ಇಂದಿಗೂ ಜೈಲಿನ ಸರಳುಗಳ ಹಿಂದೆ ನಿಂತು, ಭೇಟಿಯಾದವರನ್ನು ಕಂಡ ಕೂಡಲೇ 'ವಂದೇ ಮಾತರಂ' ಎನ್ನುತ್ತಾರೆ ಮನ್ಸೂರ್ ಖಾನ್

ಢಣ್, ಢಣ್..... ಮನೆಯ ಗಡಿಯಾರ ರಾತ್ರಿ ಎರಡು ಗಂಟೆ ಎಂದು ಜೋರಾಗಿ ಸದ್ದು ಮಾಡಿತು. ಕತ್ತಲಿನಲ್ಲಿ ಬಂದ ಆ ಸದ್ದಿಗೆ ಅವರ ಎದೆ ಬಡಿತ ಹೆಚ್ಚಿತು.

ಸಿ. ನಂದಿನಿ.



ಮುಂಚಪು



ಕಾವ್ಯ ಅನಿವಾರ್ಯ ಕರ್ಮ

ಪ್ರಿಯ ವಿವೇಕ,

ಇತ್ತೀಚೆಗೆ, ನಿನ್ನ 'ಕಥನ ಕುತೂಹಲದ' ಅಂಕಣದ ಮೂರು ನಾಲ್ಕು ಲೇಖನಗಳನ್ನು ಒ ಅವಲೋಕಿಸಿದೆ. ಆಗಸ್ಟ್ ತಿಂಗಳ ಬರಹದಲ್ಲಿ, ಕಥನ ಕ್ರಮದ ವೈಶಿಷ್ಟ್ಯಗಳು, ರಸೋತ್ಪತ್ತಿ ಸೂಕ್ಷ್ಮಗಳನ್ನು ನೀನು ಬಿಡಿಸಿ ತೋರಿಸಿರುವುದು ನಿನ್ನ ಸೂಕ್ಷ್ಮಜ್ಞತೆಯನ್ನು ಎತ್ತಿ ತೋರಿಸುತ್ತದೆ. ಆದರೆ ಲೇಖನದ ಹಿಂದೆ 'ಬುದ್ದಿಯ ಹಿಡಿತದ ಮನಸ್ಸು' ಇರುವಂತೆ, ಮೆಕ್ಯಾನಿಕ್‌ನೊಬ್ಬ ಯಂತ್ರದ ಭಾಗಗಳನ್ನು ಬಿಡಿಸಿ ಅವುಗಳ ಕಾರ್ಯವೈಖರಿಯನ್ನು ಹಾಗೂ ಸೂಕ್ಷ್ಮವಿಶೇಷಗಳನ್ನು ವಿವರಿಸುವ ಅನುಭವವಾಗುತ್ತದೆ.

ಆ ಪ್ರಬಂಧ ರಸೋತ್ಪತ್ತಿಯ ವೈಶಿಷ್ಟ್ಯವನ್ನು ಗುರುತಿಸುತ್ತಲೇ ಅದಕ್ಕೆ ಬೇಕಾದ ಒದು ಪೂರ್ವಸಿದ್ದತೆಯತ್ತ ಬೆಟ್ಟು ಮಾಡುತ್ತಾ, ಆ ಸಿದ್ಧತೆಗೆ ಶ್ರಮ ಬೇಕೆಂಬ observation ಮುಗಿಯುತ್ತದೆ.

ಅದೇನೋ ಸರಿ. ನಿರುದ್ದಿಶ್ಯ ರಸಸೃಷ್ಟಿಯಾದ ಜಾನಪದ ಕಾವ್ಯವನ್ನು ಕ್ಷಣಮಾತ್ರ ಸವಿಯಬಲ್ಲವರಾಗಿದ್ದ ಜನಪದರ ಜೀವನ ಧೋರಣೆ-ಭೌತಿಕ, ಭೌದ್ಧಿಕ ಹಾಗೂ ರಸಾತ್ಮಕದ ಮೂರು ಆಯಾಮದ ಪ್ರಪಂಚವೇ ಪರಮಸತ್ಯವೆಂಬ ತಿಳುವಳಿಕೆಯ ಆಧಾರದ ಮೇಲೆ ನಿಂತಿದೆ. ಬದಲಾದ 'ನಾಗರೀಕೃತ' ಸಮಾಜ, ಅದರಿಂದ ಹುಟ್ಟಿದ ಹೊಸ (ಜೀವನ) ಕಾವ್ಯಧೋ ರಸ-ಭಾವದಿಂದ ಸೊಕ್ಕಿದ ವಾಸ್ತವದ ಕಡೆಗೇ ಒತ್ತು ನೀಡಿದ್ದರಿಂದ ತಾನೆ ಇಂದು ಆ 'ಶ್ರಮ ಅವಶ್ಯಕತೆ ಮೂಡಿದ್ದು?

ಅದೇ ಸಂಚಿಕೆಯ, 'ಅನುಭಾವ'ದ ಕುರಿತು ಜಯಂತ ಬರೆದ 'ಶಬ್ದತೀರ'ವನ್ನು ನೋ ಅನುಭಾವದ ಬಗ್ಗೆ ಮಾತಾಡುತ್ತಾ ಅದು, ನಮ್ಮನ್ನು ಆಳ ಅಗಲದ, ಗುರಿ ನೆಲೆಯಿಲ್ಲದ ಕಡ ನೇರವಾಗಿ ಎಳೆದೊಯ್ಯುತ್ತದೆ. ಕಥನ ಕ್ರಮದ ನಟ್‌ಬೋಲ್ಟ್‌ಗಳನ್ನು ಬಿಡಿಸಿತೋರಿ, ನಮ್ಮ ತಿ ಹೆಚ್ಚಿಸಿ ಅಚ್ಚರಿಪಡಿಸುವ ದೃಷ್ಟಿಯ ಲೇಖನ ನಿನ್ನದಾದರೆ, ಲೇಖಕನ 'ಪ್ರಸವ ವೇದನೆ ಹ ರೋಮಾಂಚನ'ಗಳನ್ನು ನೇರವಾಗಿ, subjective ಆಗಲು ಹಿಂದುಮುಂದು ನೋ ಹೇಳಹೊರಡುವ 'ಶಬ್ದತೀರ' design engineer ನ ದೃಷ್ಟಿಕೋನದಂತೆ ತೋರುತ್ತದೆ.

ಜಯಂತ, ಕವಿಯ ಆಯ್ಕೆಯ ಬಗ್ಗೆ ಬರೆಯುತ್ತಾ 'ಸೈಕಲ್ಲೇರಿ ಹಳ್ಳ-ತಿಟ್ಟು, ನೆಲ-ಜ ಅನುಭವವನ್ನ ನೇರ ಅನುಭಾವಿಸುವ' ಚಿತ್ರಣವನ್ನು ಕವಿಯ ಆಯ್ಕೆ ಎಂದಿದ್ದಾರೆ. ನಾನು ಇದನ್ನು ಇ ವಿಸ್ತರಿಸಬಯಸುತ್ತೇನೆ.

ಬೆಟ್ಟಗುಡ್ಡಗಳಲ್ಲಿ ಹನಿಹನಿಯಾಗಿ ಜಿನುಗಿ, ಹಳ್ಳಕೊಳ್ಳಗಳಲ್ಲಿ ಝರಿಯಾಗಿ ಭೋರ್ಗ ಮೈದಾನದಲ್ಲಿ, ಎರಡು ದಡಗಳ ನಡುವೆ ಶಾಂತವಾಗಿ ನಿಂತಂತೆ ಕಂಡರೂ, ಬಿಡದೇ ಪ್ರವಹಿಸಿ ಕ ಸಮುದ್ರದಲ್ಲಿ ಅಸ್ತಿತ್ವವನ್ನು ಲೀನವಾಗಿಸಿಯೂ, ಪ್ರತಿ ಗಳಿಗೆ, ಪ್ರತಿ 'ಪಾತ್ರ'ದಲ್ಲೂ ನವನವೀನ

ಉಳಿಯುವ 'ತಾನು ತನ್ನದು' ಎಂಬುದನ್ನು ಅರಿಯದಂತಿರುವ 'ನದಿ'ಯಂತೆ ಕಾವ್ಯ ಇರಬೇಕು. ಇದು ಕವಿಗೆ ಆಯ್ಕೆಯ ವಸ್ತುವಲ್ಲ, 'ಅನಿವಾರ್ಯ ಕರ್ಮ'ವಾಗಬೇಕು. 'ಓದುಗನ ಅದೃಷ್ಟ' ಮಾತ್ರ ಅಲ್ಲ. 'ಸಹೃದಯಿಯ ಸಾಧನೆ'ಯಾಗಬೇಕು.

ಎಂ. ಆರ್. ರಾಮಶೇಷ

ಅನುಭಾವ ವಿನ್ಯಾಸ

ಗೆಳೆಯ ಚಿಂತಾಮಣಿ ಹೇಳಿದಂತೆ ಆಧ್ಯಾತ್ಮಿಕನಾಗಿರುವುದೆಂದರೆ ಒಂದು ಮನಃಸ್ಥಿತಿ. ಮುಂದುವರಿದು ಹೇಳುವುದಾದಲ್ಲಿ ಅದು ಜಗತ್ತಿನ ಸ್ಥಿತಿ. ಮನಃಸ್ಥಿತಿಯ ಜೊತೆಗೆ ಜಗತ್ತಿನ ಸ್ಥಿತಿ ಸಮೀಕರಿಸಿಕೊಳ್ಳುವಾಗ ಒಬ್ಬೊಬ್ಬರದು ಒಂದೊಂದು ಬಗೆ. ಪ್ರತಿ ಅಣು ಅಣುವಿನಲ್ಲೂ ಕ್ಷಣಕ್ಷಣದಲ್ಲೂ ಅಪಾರ ಕಾಣ್ಕೆಗಳು ಅಡಗಿವೆ. ಅವು ನಮ್ಮನ್ನು ಅಣಕಿಸುತ್ತಲೇ ಇರುತ್ತವೆ. ನಮ್ಮ ಅಹಂಕಾರಗಳನ್ನು ಕಳಚಿಕೊಂಡ ಕ್ಷಣದಲ್ಲಿ, ತೋರಿಕೆಗಳಿಂದ ಮುಕ್ತರಾದ ಕ್ಷಣದಲ್ಲಿ ನಮ್ಮ ಜೋಳಿಗೆ ಒಂದಷ್ಟು ತುಂಬಬಹುದು. ಹೀಗೆ ತುಂಬಿಕೊಳ್ಳುವ ಜೋಳಿಗೆಯಿಂದ ಹೆಕ್ಕಿ, ಹಂಚುವ ಗಳಿಗೆಯಲ್ಲಿ ಚೈತನ್ಯವನ್ನು ಹೇಗೆ ಹಿಡಿಯುವುದು? ಹೇಗೆ ಹಂಚುವುದು?

ಈ ಗೊಂದಲಗಳಿದ್ದರೂ ಹಂಚುವ ಕ್ರಿಯೆ ನಿಲ್ಲುವುದಿಲ್ಲ. ನಿಲ್ಲಬಾರದು. ದಾಸ, ಶರಣ, ಸಂತ ಸೂಫಿಗಳು ಬೀದಿಬೀದಿಗಳಲ್ಲಿ ಹಂಚಿದಂತೆ, ಕೋಣೆಯ ಕದವಿಕ್ಕಿಕೊಂಡು ಏಕಾಂತದಲ್ಲಿ ಬರೆದವರೂ ಸಾಹಿತ್ಯದಲ್ಲಿ ಉಳಿದಿದ್ದಾರೆ. ಇಂತಹ ವಿಸ್ತೃತ ವಿನ್ಯಾಸದಲ್ಲೇ, ಒಂದು ಕಾಲಘಟ್ಟದ ಆಚೆ-ಈಚೆ ಕಾವ್ಯಸಂಗತಿ ಚಾಚಿಕೊಂಡು, ಬಾಳುತ್ತದೆ. ಹುಲುಮಾನವರಾದ ಕವಿಗಳು ತಮ್ಮ ಕಣ್ಣ ಮುಂದೆ ಎಲ್ಲ ಜರುಗಬೇಕೆಂದು ಭಾವಿಸಿದರೆ ಸೋಲು ಗೆಲುವುಗಳ ಭ್ರಮೆ ಹುಟ್ಟಬಹುದು.

ಯಾವ ಭಾವ ಅತಿರೇಕವಾದರೂ ಅದು ಸಮ್ಮತವಲ್ಲ. ಅದಕ್ಕೆ ಅನುಭಾವವೂ ಹೊರತಲ್ಲ. ಅದಕ್ಕೆ ನಮ್ಮ ಸ್ವಭಾವವೂ ಹೊರತಾಗಬಾರದು. ಚೈತನ್ಯವನ್ನು ಹಿಡಿದಿಡುವಾಗ ನಮ್ಮ ಜೋಳಿಗೆಯೊಳಗೂ ಅಷ್ಟಿಷ್ಟು ಹೃದಯವಂತಿಕೆ ಇರುವಂತೆ ನೋಡಿಕೊಂಡರೆ ಸಾಕು.

ಜಿ.ಕೆ. ರವೀಂದ್ರಕುಮಾರ್

ನಗರಲೇಖಕರ ಹಳ್ಳಿ

ವಿವೇಕ್‌ರ 'ಯಕ್ಷಗಾನ' ಓದಿದೆ.

ಭಾರತದ ಹಳ್ಳಿಗಳ ಮನಸ್ಸು ಬದಲಾಗಿಲ್ಲ, ಕೆಲವು ಕಟ್ಟಡಗಳು ನಗರದಂತೆ ನಿರ್ಮಾಣಗೊಂಡಿರಬಹುದು, ಹೆಚ್ಚು ಪತ್ರಿಕೆಗಳು ಬರುತ್ತಿರಬಹುದು, ವಾಹನಗಳ ಬಳಕೆ ಮುಂತಾಗಿ ಆಧುನಿಕ ಸೌಲಭ್ಯಗಳು ನುಸುಳುತ್ತಿದ್ದರೂ ಮನಸ್ಸು, ಹಾಗೇ ಇದೆ. ಜಾತಿ ಪದ್ಧತಿ ಹಾಗೇ ಇದೆ. ನಾಟಕ, ಯಕ್ಷಗಾನ ಆಟ ಮುಂತಾದವು ಬಹಳ ಬದಲಾಗಿದೆ ಎಂದು ಹಳ್ಳಿಯಲ್ಲೇ ಇರುವ ನನಗೆ ಅನಿಸಿಲ್ಲ.

ಹಳ್ಳಿಯ ಗಾಢ ಅನುಭವ ಇರುವ ಮತ್ತೀಗ ನಗರವಾಸಿಗಳಾಗಿರುವ ಎಷ್ಟೋ ಸೂಕ್ಷ್ಮ ಲೇಖಕರು ಹಳ್ಳಿಗಳ ಬಗ್ಗೆ ಬರೆಯುವಾಗ ತುಂಬಾ ಹಳಹಳಿಸುತ್ತಾರೆ ಎಂದು ನನ್ನ ಅನಿಸಿಕೆ. ಇದು ಹಳ್ಳಿಗೆ ಸಂಬಂಧಿತ ಸತ್ಯಕ್ಕಿಂತ ಮಿಗಿಲಾಗಿ ಅವರವರ ವ್ಯಕ್ತಿಗತ ಅಳಲಿನಂತೆ ತೋರುತ್ತದೆ.

ಬಂದಗದ್ದೆ ರಾಧಾಕೃಷ್ಣ



ಶಬ್ಬೀರ್

ಲಿಫ್ಟ

ಲಿಫ್ಟು! ಕೂರಿಯರ್ ಹುಡುಗನ ಬೆವರು, ಕಸಬರಿಗೆ ಹೊಡೆಯುವವಳ ಮಲ್ಲಿಗೆ ಮತ್ತು ಏರುವ, ಇಳಿಯು ನಾಗರಿಕರು ಹೊರಬಿದ್ದು ಹೋದರೂ, ನೆಲೆ ನಿಂತು ತಲೆತಿರುಗಿಸುವ ಅಲೆ ಅಲೆ 'ನರಗಂಪು'. ಲಿಫ್ಟಿಗೆ ಆಂ ಇಲ್ಲ.

ಅದರೊಳಗೊಂದು ಸ್ಟೂಲು. ಅದರ ಮೇಲೆ ಒಬ್ಬ ಅದೃಶ್ಯ ಜಾದೂಗಾರ ಕೂತೆ ಇರುತ್ತಾನೆ. ಅವ ಯಾರಿಗೂ ಕಾಣುವುದಿಲ್ಲ. ಆದರೆ ಎಲ್ಲರೂ ಅವನಿಗೆ ಕಾಣುತ್ತಾರೆ. ಇರುವ ಎರಡೇ ನಿಮಿಷದಲ್ಲಿ ಆತ್ಮದೊಂದಿಗೇ ಸ್ಪರ್ಶ ಸಾಧಿಸುವವಳಂತೆ, ಸೆರಗಿನಲ್ಲಿ ಕೈಹಾಕಿ ಬ್ಲೌಸೆಳೆದುಕೊಂಡು, ಬ್ರಾ ಪಟ್ಟಿಯ ಸ್ವಸ್ಥಾನಕ್ಕೆ ತಳ್ಳಿದ್ದು, ಇಂಟರ್‌ವ್ಯೂಗೆ ಬಂದ ಹುಡುಗ ಕಿಸೆಯಿಂದ ಗೋಲ ಬಾಚಣಿಗೆ ತೆಗೆದು ಕನ್ನಡಿಯಿ ಸೌಂದರ್ಯ ಪ್ರಜ್ಞೆಯಲ್ಲಿ ತಲೆ ಬಾಚಿಕೊಂಡಿದ್ದು, ಹಣ ಇಸಕೊಂಡು ಎದುರೇ ಎಣಿಸಲು ಮುಜುಗರ ಗೆಳೆಯ ಇಲ್ಲಿ ಶರವೇಗದಲ್ಲಿ ಎಣಿಸಿನೋಡಿದ್ದು-ಇವೆಲ್ಲವನ್ನು ನೋಡುತ್ತ ಇರುವ ಈ ಅದೃಶ್ಯ ವ್ಯಕ್ತಿ ಪ್ಲಾಸ್ಟಿಕ್ ಸ್ಟೂಲು ಬಿಸಿಲು ತಾಗದೆಯೂ ಇದ್ದಲ್ಲೇ ತನ್ನ ಹೊಳಪು ಕಳಕೊಳ್ಳುತ್ತಿದೆ.

ಬಾರದ ಯಾರಿಗೋ ಕಾದು, ಯಾರೋ ಬೇಸರಪಟ್ಟು ಹೋದಂತಿದೆ. ಅಥವಾ ದೊಡ್ಡದ ಜಗಳಮಾಡಿ ಮರೆಯಾದಂತಿದೆ. ಜಗಳವನ್ನು ಸರಿಯಾಗಿ ಆಡಲಾಗದೆ ಹೋದಂಥ ವ್ಯಗ್ರತೆ ಒಂ ಅಶಾಂತ ಮೌನವಾಗಿ ನಿಂತಿದೆ. ಲಿಫ್ಟಿನ ಬಾಗಿಲು ತೆಗೆದೇ ಇದೆ, ಅಶ್ಲೀಲವಾಗಿ. ಲಿಫ್ಟು ಏರುತ್ತಿ ಇಳಿಯುತ್ತಿರಲಿ, ಮುಚ್ಚಿಯೇ ಇರಬೇಕು ಹೆರಿಗೆ ಕೋಣೆಯಂತೆ. ಇರವು ಮತ್ತು ಅರಿವು ಎರಡರ ನಡು ಉಯ್ಯಾಲೆ ತಟಕ್ಕನೆ freeze ಆದಂತೆ.

ಮೊದಲಬಾರಿಗೆ ಅದ ನೋಡಿದ ಪುಟ್ಟನಿಗೆ ಅದೊಂದು ಪುಷ್ಪಕ ವಿಮಾನ. ಗುಂಡಿಯೊತ್ತಿದರೆ ಸ ಆತನ ಎದೆ ಡವಗುಟ್ಟಿ, ಅಪ್ಪನ ಕಾಲನ್ನು ಆತುಹಿಡಿಯುವ. ಅವನದು ಒಂದೇ ಪ್ರಶ್ನೆ. ಲಿಫ್ಟಿನೊಳ ಮಾತನಾಡುತ್ತ, ನಗುತ್ತ, ಚಲ್ಲಾಡುತ್ತ ಬರುವ ನಾಗರಿಕರು ಲಿಫ್ಟ್‌ನ ಬಾಗಿಲು ಮುಚ್ಚಿಕೊಳ್ಳುತ್ತಿರುವಂತೆ ಯಾಕೆ ಗಂಭೀರರಾಗುತ್ತಾರೆ? ಇದ್ದಲ್ಲೇ ಸೆಟೆದು, ವೀರಮರಣಕ್ಕೆ ಸಿದ್ಧರಾದ ಯೋಧರಂತೆ ಅಥ ಬೇರೊಂದು ಉಪಗ್ರಹಕ್ಕೆ ನೆಗೆಯಲಿರುವ ಗಗನಗಾಮಿಗಳಂತೆ.

ಎಷ್ಟೆಲ್ಲಾ ಜನ ಒಟ್ಟಿಗಿದ್ದೂ ಒಟ್ಟಿಗಿಲ್ಲದಿರುವ ಪವಾಡ ಇಲ್ಲಿ ಮಾತ್ರ ಸಾಧ್ಯ. ಕೂದಲೆಳೆಯಷ್ಟು ಜಾಗ ಎಚ್ಚರದಿಂದ ನಡುವೆ ಕಾದಿಟ್ಟು, ಶ್ವಾಸ ಕೂಡ ಆಡದಂತೆ, ಕೆಮ್ಮದಂತೆ, ಸೀನದಂತೆ, ಮೇಲಿರುವ ತ ತಗಡಿನ ಮುಚ್ಚಳವನ್ನೇ ನಿಗೂಢ ಆಗಸದಂತೆ ನಿಟ್ಟಿಸಿ ನೋಡುತ್ತ ನಿಂತ ಯೋಗಗ್ರಸ್ತರು ಎಲ್ಲ. ತನ್ನ ಪರ್ಸ್ ತೆರೆದು, ಇನ್ನೂ ಪುಟ್ಟ ಕನ್ನಡಿಯಲ್ಲಿಣುಕಿ ಲಿಪ್‌ಸ್ಟಿಕ್ ಹಚ್ಚಿಕೊಂಡವಳ ಸೊಂಪುಗೂದಲ ಶಾ ಗಾಳಿಯೂ ತಪೋಭಂಗ ಮಾಡುತ್ತಿಲ್ಲ. ಕಂಕುಳಲ್ಲಿ ಎತ್ತಿಕೊಂಡ ಮಗುವೂ ಹೆದರುತ್ತಲೇ ನೋಡುತಿದೆ. ಸ್ತಬ್ಧ ಬುರುಡೆಗಳನ್ನು. ನಕ್ಕರೆಲ್ಲಿ ನಿಂತುಬಿಡುವುದೋ, ಅಲ್ಲಾಡಿದರೆಲ್ಲಿ ತುಂಡಾಗಿ ಬಿದ್ದು ಬಿಡುವುದ ಲೋಹದ ಬಾವಿಯಲ್ಲಿ ಲೋಹ ಪಂಜರ.

ಒಂದೊಂದೇ ಫ್ಲೋರುಗಳು ಹಾಯುವಾಗ - ಆಯಾ ಫ್ಲೋರುಗಳಲ್ಲಿ ಕಾದುನಿಂತ ಮುಖಗ ಭಂಗಿಗಳಿವೆ. ಇಲ್ಲ. ಲಿಫ್ಟು ನಿಲ್ಲುವುದಿಲ್ಲ ಎಲ್ಲೂ. ಸೀದಾ ನಮ್ಮನ್ನು ಮೊದಲು ಗುರಿತಲುಪಿಸಿಯೇ ತೀರಪ

ಆಮ - ಎಂಬಂತೆ ಗುಂಡಿಯನ್ನು ಒತ್ತಿ ಹಿಡಿಯಲಾಗಿದೆ. 'ಅಯ್ಯೋ, ನನ್ನ ಫ್ಲೋರು ದಾಟಿಹೋಯಿತು' ಎನ್ನುವವನ ಆರ್ತನಾದಕ್ಕೂ ಒಂದು ಮಿತಿ ಇದೆ ಇಲ್ಲಿ. ಕೈಕಾಲು ಅಲ್ಲಾಡಿಸದೇ ಕುಂಯ್‌ಗುಡಬೇಕಾಗಿದೆ. ಪಕ್ಕದಲ್ಲಿ ಕಸೂತಿ ಫೈಲ್ ಎದೆಗೊತ್ತಿ ನಿಂತವಳ ಗಂಜಿ ಸೀರೆಯ ಅಲಗು ಅವನ ಕೈಯನ್ನೇ ಕುಯ್ದೀತು.

ಲಿಫ್ಟಿನಿಂದ ಹೊರಬಿದ್ದವರು ಕಾಲು ಹೊರಗಿಟ್ಟದ್ದೇ ಆ ಪ್ರಪಂಚದವರಾಗಿ ಹೋಗಿದ್ದಾರೆ, ಹಿಂತಿರುಗಿ ನೋಡುವುದೇ ಇಲ್ಲ. ಲಿಫ್ಟು ಸರಿ ಇಲ್ಲ ಎಂದು ಮೆಟ್ಟಲುಗಳನ್ನು ಏರಿಯೇ ಬಂದವರು ಎಷ್ಟೋ ವರುಷಗಳಿಂದ ಮೆಟ್ಟಲುಗಳನ್ನು ಹತ್ತುತ್ತಲೇ ಇದ್ದವರಂತೆ ಭಾಸವಾಗುತ್ತಾರೆ. ಯಾವ ಮಾತುಕತೆಯೂ ಈಗವರ ಜತೆ ಶಕ್ಯವಿಲ್ಲ.

ಲಿಫ್ಟು ನಿಜವಾಗಿ ಲಿಫ್ಟಾಗುವುದು ಒಳಗೆ ಒಬ್ಬನೇ ಇದ್ದಾಗ, ವಿದ್ಯುಚ್ಛಕ್ತಿ ಹೊರಟುಹೋದಾಗ. ಆಗ ಅದು ಅಜ್ಞಾತದ ನಡುವೆ ಸಿಕ್ಕ ವಿಭ್ರಾಂತ ಉಪಗ್ರಹ. ಯಾವ ದನಿಗಳೂ ಬಂದು ತಲುಪದ ಅಭೇದ್ಯ ಕಾಲಕೋಶ. ಕೈಕಾಲುಗಳು ಮೆಲ್ಲಗೆ ಬೆವರುತ್ತ, ದನಿ ಗೊಗ್ಗರಾಗುತ್ತ, ಕಣ್ಣಿನಲ್ಲಿ ಚಿತ್ರವಿಚಿತ್ರ ನೀಲಿ ಹಳದಿ ಬೆಳಕು ಕವಿಯುತ್ತ... ಅರಕ್ಷಣ, ನಿರ್ವಾಣ.

ಇಡೀ ನಾಗರಿಕತೆ, ಒಂದು ಆರುತ್ತಿರುವ, ನಿಸ್ತೇಜ ಪುಟ್ಟ ಕುಟುಕುಟು ಫ್ಯಾನಿನ ರೆಕ್ಕೆಯಂತಾಗುತ್ತಿದೆ ಈಗ. 'ಹಲೋ' ಎಂದು ಕೂಗಲು ಹೊರಟರೆ, ನಾನೇ ನನ್ನನ್ನೇ 'ಲೋ' ಎಂದು ಕರೆದಂತೆ. ಧ್ವನಿ ಯಾವುದು? ಪ್ರತಿಧ್ವನಿ ಯಾವುದು? ಮೈ ಯಾವುದು? ಮನಸ್ಸು ಯಾವುದು?

ಬೂದಿಬಣ್ಣದ ನಿಶ್ಶಬ್ದದಲ್ಲಿ ಕೇಳಿಬರುತ್ತಿವೆ, ಮೆಟ್ಟಿಲಮೇಲಿಂದ ಬಗೆಬಗೆ ಸಪ್ಪಳಗಳು. ಇದ್ಯಾವ ಲಯಹೀನ ಹೆಜ್ಜೆ? ವಿವಾಹ ವಿಚ್ಛೇದನ ಮುಗಿಸಿಕೊಂಡು ಕೋರ್ಟಿನ ಮೆಟ್ಟಲು ಇಳಿಯುತ್ತಿರುವ ದಂಪತಿಗಳದ್ದೆ? ಇದ್ಯಾವದಿದು ಝಿಂಕ್‌ಶೀಟಿನ ಮೇಲೆ ಆಲಿಕಲ್ಲು ಬಿದ್ದಂತೆ ಟಪಟಪ? ಉದ್ದಾನುದ್ದ ಜನರಲ್‌ವಾರ್ಡಿನಲ್ಲಿ 'ಭೇಟಿಯ ಸಮಯ' ತೆರೆದದ್ದೇ, ಅಜ್ಜನನ್ನು ನೋಡಲು ಎಲ್ಲರಿಗಿಂತ ಮುಂದೆ ಓಡಿದ ಪುಟ್ಟಿಯ ಬೇಬಿಶೂಸ್‌ಗಳದ್ದೆ? ಎಲ್ಲ ಸಪ್ಪಳಗಳು ಕ್ರಮೇಣ ಇಲ್ಲವಾದ ನೀರವದಲ್ಲೂ ಯಾಕೆ ಇನ್ನೂ ಯಾರೋ ಚಲಿಸುತ್ತಿರುವ ಭಾಸ.

ಸ್ಟೂಲಿನಲ್ಲಿದ್ದ ಅದೃಶ್ಯಮಾನವ ಮೆಲ್ಲಗೆ ಕಿವಿಯಲ್ಲುಸುರುತ್ತಾನೆ. 'ಯಾಕೆ, ಏನು ನಿನ್ನ ಒದ್ದಾಟ?'

'ಏನಿಲ್ಲ. ಇಪ್ಪತ್ತು ವರುಷಗಳ ಹಿಂದೆ, ಕಾಲೇಜಿನಲ್ಲಿದ್ದಾಗ ನನ್ನ ರೂಮಿನ ಪಾರ್ಟ್‌ನರ್‌ಗೆ ನೂರು ರೂಪಾಯಿ ಮೋಸ ಮಾಡಿದ್ದೆ... ನಂತರ ಕೆಲಸಕ್ಕೆ ಸೇರಿಕೊಂಡಾಗ ಸಹೋದ್ಯೋಗಿಯೊಬ್ಬಳ ಬಳಿ ಸಾಲ ತಗೊಂಡೆ. ನಾಲ್ಕು ಕಂತುಗಳಲ್ಲಿ ತೀರಿಸಬೇಕಾಗಿತ್ತು. ಎರಡೇ ಕಂತು ಕೊಟ್ಟು ನಿಲ್ಲಿಸಿಬಿಟ್ಟೆ... ಅವಳು ಕೇಳಿದರೆ ಕೊಡುವಾ ಅಂತಿದ್ದೆ... ಅವಳು ಕೇಳಲೇ ಇಲ್ಲ. ಯಾಕೆ? ಯಾಕೆ?''

'ಶ್...ಶ್... ಮೆಲ್ಲಗೆ ಮಾತಾಡು. ನಿನ್ನ ಧ್ವನಿ ನಿನ್ನನ್ನೇ ತಿಂದುಬಿಟ್ಟೀತು.'

''ಇಲ್ಲ. ಅವರಷ್ಟೇ ಅಲ್ಲ ಎಷ್ಟೋ ಜನರಿಗೆ, ಏನೆಲ್ಲಾ ಮರಳಿಸಬೇಕು ನಾನು. ಅವರೆಲ್ಲಾ ಎಲ್ಲಿದ್ದಾರೆ? ಇದು ಯಾವಾಗ ಚಲಿಸುತ್ತೆ?''


''ಶ್‌ಶ್‌ಶ್... ನೋಡು ನೀನಿದ್ದಲ್ಲೇ ಹೇಗೆ ಬಂದುಬಿಟ್ಟರು ಅವರು ವರುಷಗಳ ನಂತರ. ಅಂತರಾಳದಿಂದ ಮುತ್ತು ಹೆಕ್ಕಿ ಬಂದಂತೆ. ಸುಮ್ಮಗಿರು. ನೀನಿದ್ದಲ್ಲೇ ಬರುತ್ತದೆ ಎಲ್ಲ. ಸುಮ್ಮಗಿರು ನಿನ್ನಿಂದಾಗೇ ಚಲಿಸುತ್ತಿದೆ ಎಲ್ಲ. ನೋಡು, ನೋಡು, ಚಲಿಸುತ್ತಿದೆ ಲಿಫ್ಟು.''



ಜಯಂತ ಕಾಯ್ಕಿಣಿ

jayant kaikini@vsnl.net

ತೆರೆದ ಅಂಚೆ



ಭಾವನಾ ಪತ್ರಿಕೆ ಅದ್ಭುತವಾಗಿ ಹೊರಬರುತ್ತಿದೆ. ಮೊಟ್ಟ ಮೊದಲನೆಯ ಬಾರಿಗೆ ಇಷ್ಟು ಕುತೂಹಲ ದಿಂದ ನಾನು ಕತೆಗಳನ್ನು ಓದುತ್ತಿರುವುದು.

ಬೀದರ ವೀರೇಂದ್ರ ಸಿಂಪಿ

ಕತೆಗಳು ರಮ್ಯವಾಗಿವೆ. ಓದಲು, ಸವಿಯಲು ಬಹಳೇ ಗ್ರಾಹ್ಯವಾಗಿವೆ.

ಧಾರವಾಡ ಶಂಕರ ಮೊಕಾಶಿ ಪುಣೇಕರ

ರುಚಿಯಾಗಿ ಅಡುಗೆ ಮಾಡೋಕೆ ಬರೋರು ರುಚಿಸುವ ಹಾಗೆ ಬಡಿಸುತ್ತಾರೆ. ಕಥಾ ಪ್ರಧಾನವಾದ 'ಭಾವನಾ'ನೂ ಹಾಗೇ ಇದೆ.

ಶ್ರೀನಿವಾಸಪುರ ಸ. ರಘುನಾಥ

ಏಳು ರೂಪಾಯಿಗೆ ಎಷ್ಟೊಂದು ಊಟ ನೀಡುತ್ತಿದ್ದೀರಿ!

ಮಾಲೂರು ಸತ್ಯನಾರಾಯಣ ಎಚ್.ಎಸ್.

ಕನ್ನಡ ಸಾರಸ್ವತ ಲೋಕ ಕಳೆದುಕೊಂಡ ಹಳೇ ಭಾವನೆಗಳನ್ನು ಹುಡುಕಹೊರಟಿರುವ ನಿಮ್ಮ ಪ್ರಯತ್ನದಲ್ಲಿ ಯಶಸ್ವಿಯಾಗಿದ್ದೀರಿ.

ಕೊಟ್ಟೂರು ಅ.ವಿ.ನಾಥ್

'ಭಾವನಾ' ಅದೇ ತಾನೇ ಸರಸ್ವತಿಯ ಮುಂದೆ ಶ್ರದ್ಧೆಯಿಂದ ಹಚ್ಚಿಟ್ಟ ದೀಪದಂತಿದೆ.

ಬೆಂಗಳೂರು ಎಸ್.ಆರ್. ದೀಪಾಶ್ರೀನಿವಾಸ್

'ಭಾವನಾ' ಸುದ್ದಿದ್ದರ ಭಾಗ್ಯಕ್ಕೇನು ಕಮ್ಮಿ?- ಇದು ಜನಪದ ಗಾದೆ. ಅಭಿನಂದನೆಗಳು.

ಬನಹಟ್ಟಿ ಕೆ. ಆರ್. ಪೋಲೀಸ್ ಪಾಟೀಲ

2000 ಅಗಸ್ಟ್ ತಿಂಗಳ ಆಕರ್ಷಕ ಮು ಪುಟ ನೋಡಿ ಬಹಳ ಸಂತೋಷವಾಯಿತು. ನಾವಿಕ ಕೆ.ಎನ್. ರಾಮಚಂದ್ರನ್‌ರಿಗೆ ಕೃತಜ್ಞತೆಗ

ಸಿಂಧನೂರು ಚಿದಾನಂದ ಕಂಡಕ್ಟರ್ 71

ಗಣೇಶನ ಆಕರ್ಷಕ ಮುಖಪುಟ ಹೊ ಬಂದ ಸೆಪ್ಟೆಂಬರ್ ಸಂಚಿಕೆ ಮುಟ್ಟಿದರೇನೆ ಪು ವುಂಟಾಯಿತು.

ಹುಮನಾಬಾದ್ ಮುರಲೀಧರ ಕುಲಕ

ಮುಖಪುಟದ ವರ್ಣಸಂಯೋಜನೆ ತುಂ ಸೊಗಸಾಗಿ ಬಂದಿದೆ.

ಬಳ್ಳಾರಿ ಶ್ಯಾಮ

ಮುಕುಂದ್‌ರ ಅದ್ಭುತವಾದ ಛಾಯಾ ಇಡೀ ಸಂಚಿಕೆಯ ಹೈಲೈಟ್. ಒಂದು ಕ್ಷಣ ನ ಹಿಡಿದು ನಿಲ್ಲಿಸಿತು.

ಸಂಡೂರು ಶ್ರೀಕಾಂತ್

ಶಾಂತಾರಾಮ ಸೋಮಯಾಜಿ 'ಎಂ ಬೆಳೆಯದ ಹುಡುಗನನ್ನು" ಎಷ್ಟೊಂದು ಮ ಸರಳ ನಡಿಗೆಯಲ್ಲಿ ಬೆಳೆಸಿ, ಉಳ್ಳಾಲದ ಸ ಹಾರಮಾಗಿಸಿದ್ದಾರಲ್ಲ! ಅನ್ನಿಸಿ ಕತೆಯ ತಂತ್ರಕ್ಕೆ ಬೆರ

ಅಂಕೋಲಾ ವಿಷ್ಣು ನಾ

ಹೌದು, ಆ ಹುಡುಗ ಕೊನೆಗೂ ಬೆಳೆ ಇಲ್ಲ. ಕೋಡೂರಿನ ಕತ್ತಲೆಯಲ್ಲಿ ಯಾರದ ಉದ್ಧಾರಕ್ಕಾಗಿ ಕರಗಿ ಹೋಗಿಯೇಬಿಟ್ಟ. ಇದ ಶಾಂತಾರಾಮ ಸೋಮಯಾಜಿ ಯವರು ಎ ನೋಡಿದರು? ಏನೇ ಆಗಲಿ, 'ಎಂ ಬೆಳೆಯದ ಹುಡುಗ'ನನ್ನು ಕತೆಯ ಜೀವಂತವಾಗಿರಿಸಿದ ಲೇಖಕರಿಗೆ ಕೃತಜ್ಞತೆ.

ಕೋಡೂರು ಕೆ. ಗ

ಆಸೆಗಳ ಚಿಗುರು ಚಿಗುರುವ ಮುನ್ನ ಭಯಂಕರವಾದ (ಮೂಢನಂಬಿಕೆಯ) ಬಿಸಿಲಿಗೆ ಮುರುಟಿ ಹೋದದ್ದು ಕಣ್ಣಿಗೆ ಕಟ್ಟಿದಂತಿದೆ.

ಹರಿಹರ — ಎನ್.ಕೆ. ಸಿದ್ದವೀರಪ್ಪ

ಚಿಕ್ಕವರಿದ್ದಾಗ ನಾವೂ ಕೂಡ ಅವನಂತೆಯೇ ಯೋಚಿಸಿದ್ದೆವಲ್ಲ, ಅದರ ನೆನಪು ನವಿರು ಅಲೆಯ ಹಾಗೆ. ಕತೆಯ ಕೊನೆ ವೇದನೆ ಉಂಟು ಮಾಡಿತು.

ಯಲ್ಲಾಪುರ — ಗಣಪತಿ ಬಾಳೆಗದ್ದೆ

ಓದುಗರಿಗೆ ಪ್ರಶ್ನೆಗಳನ್ನೆಸೆದು ಉತ್ತರಿಸುವ ಪರಿ ಮೋಜೆನಿಸುತ್ತದೆ.

ಜಾನೇರ — ಚಂ. ಚನ್ನಬಸವ ಪಾಟೀಲ್

'ಎಂದೂ ಬೆಳೆಯದ ಹುಡುಗ' ಕತೆಯನ್ನು ಒಂಬತ್ತು ಬಾರಿ ಓದಿದೆನೆಂದರೆ ನಂಬುವಿರಾ?

ಕಿರೆಗುಡಿಹಳ್ಳಿ — ಎಚ್. ಆರ್. ಸುರೇಶ್‌ಪಾಟೀಲ್

'ದುಸ್ತೀನ್‌ಬಾಯಿಯ ಮನೆಮಾರು' ಮನ ಮುಟ್ಟುವ ಒಂದು ಸಂಸಾರದ ದುರಂತಕತೆ. ಸರಳ ಬರವಣಿಗೆ ಹಿತವೆನಿಸಿತು.

ಶಿವಮೊಗ್ಗ — ಅನ್ನೇಹಾಳ್ ಈಶ್ವರಪ್ಪ

ಕಾದಂಬರಿಗಾಗುವಷ್ಟು ವಸ್ತುವನ್ನು ಕಥಾ ಚೌಕಟ್ಟಿಗೆ ಒಗ್ಗಿಸಿ, ಚೊಕ್ಕ ಕತೆಯನ್ನಾಗಿಸಿದ ಜಿ.ಕೆ. ಐತಾಳರ ಶೈಲಿ ಮೆಚ್ಚಿಕೆಯಾಯಿತು.

ಬೆಂಡರವಾಡಿ — ತಟ್ಟೆ ಕಾಶೀಮ ಅಲಿ

ಮೊಗಳ್ಳಿ ಗಣೇಶರ 'ದಿಬ್ಬವ ಕತ್ತಲಲ್ಲಿ ಇಳಿದು' ಕತೆಯನ್ನು ಓದಿ ಕಾಲಾಂತರದ ಕನಸುಗಳ ಕಾಳುಗಳು, ಎಲ್ಲೆಂದರಲ್ಲಿ ತುಂಬಿಕೊಂಡು ಬಂದು ಚೆಲ್ಲಾಡಿದಂತೆ, ಅವುಗಳನ್ನು ತುಳಿಯುತ್ತಾ ನಾವು, ಹಿಂಡು ಹಿಂಡು ಜನ ಹಸಿದ ಬಟ್ಟಲನ್ನು ಹಿಡಿದ ವರು ನಡೆದಿಳಿದುಬಂದಂತೆ ಅನಿಸಿತು.

ಶಿಗ್ಲಿ — ಶಿವಲಿಂಗು ಬಳಿಗಾರ್

ಕತೆ ಓದಿದ ಬಳಿಕ ದೊಡ್ಡದೊಂದು ನಿಟ್ಟುಸಿರು ಹಾಯ್ದು ಕೆಲ ಕ್ಷಣಗಳ ಕಾಲ ಕಣ್ಮುಚ್ಚಿ ಒರಗಿದೆ. ಎಂತಹ ಅದ್ಭುತ ವಸ್ತು ಮತ್ತು ನಿರೂಪಣೆ ಎಂದೆನಿಸಿತು.

ಧಾರವಾಡ — ಕ. ವೀರೇಶ್

ಸಾದತ್ ಹಸನ್ ಮಾಂಟೋ ಅವರ ಕತೆಗಳನ್ನು ಓದಿ ಮಧ್ಯರಾತ್ರಿಯಲ್ಲಿ ದಂಗಾಗಿ ಕೂತೆ.

ಧಾರವಾಡ — ತುರುವೀಹಾಳ ಚಂದ್ರು

'ಚ್ಯುತ' ಕತೆ ಜೀವನದುದ್ದಕ್ಕೂ ಆಲೋಚನೆ ಹಾಗೂ ಕೃತಿಗಳನ್ನು ಕಡಿವಾಣವಿಲ್ಲದ ಕುದುರೆಯಂತೆ ಹರಿಯಗೊಟ್ಟ ವ್ಯಕ್ತಿ, ಕೊನೆಗೆ ಹೇಗೆ ಸಂಬಂಧಗಳ ಗೊಂದಲ ಹಾಗೂ ಅಪರಾಧಿ ಭಾವದಿಂದ ಒದ್ದಾಡುತ್ತಾನೆ ಎನ್ನುವುದಕ್ಕೆ ಉದಾಹರಣೆ.

ಧಾರವಾಡ — ನರೇಂದ್ರ ಕುಲಕರ್ಣಿ

'ಮಧುವನ'ದಲ್ಲಿ ಬಂದ 'ನಾಣಿ' ಪಾತ್ರ ಚಿತ್ರಣ ವಿಷಾದ, ಕಂಬನಿಗಳ ಮಿಶ್ರಣ.

ಕೆ. ಆರ್. ನಗರ — ನಂದಿನಿ

'ಗುರುವಂದನೆ', ಗುರುಗಳು ಕೇವಲ ಪಾಠವನ್ನಷ್ಟೇ ಅಲ್ಲ, ವಿದ್ಯಾರ್ಥಿಗಳಿಗೆ ಬದುಕುವ ಮಾರ್ಗವನ್ನು ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಕಲಿಸಬಹುದು ಎಂಬ ಸತ್ಯ ಹೊರಗೆಡವಿತು.

ದಾವಣಗೆರೆ — ಕೆ. ರವೀಂದ್ರ

'ಮುದ್ದು ತಪ್ಪು' ವಿಭಾಗದ 'ಕಣ್ಣಾಮುಚ್ಚಾಲೆ' ಆಟದಲ್ಲಿ ನನ್ನದು ದೊಡ್ಡಪಾತ್ರ. ನನ್ನ ಕಣ್ಣು ಮುಚ್ಚಿ, ಪೆಟ್ಟು ತಿಂದು, ನಮ್ಮ ಪ್ರಾಣ ಉಳಿಸಿದ ರಾಮಕೃಷ್ಣ ಹೆಬ್ಬಾರ್ ಅವರಿಗೆ ನಾನು ಚಿರಋಣಿ.


ಶಿರಸಿ — ಅರ್ಪಣಾ ವಿ.ಭಟ್ಟ

ಹೊಸ ಅಂಕಣ 'ಮಂಟಪ' ಚೆನ್ನಾಗಿದೆ.

ಚೊಕ್ಕಾಡಿ — ಸುಬ್ರಾಯ ಚೊಕ್ಕಾಡಿ

ಚಿಕಣಿ ಕಲೆಯನ್ನು 'ಗರುಡಾದ್ರಿ ಕಲೆ' ಎಂದು ಸಹ ಕರೆಯುತ್ತಾರೆ. ಸುರಪುರದ ಬಾನಯ್ಯ ಗರುಡಾದ್ರಿ, ಈ ಕಲಾಪ್ರಕಾರವನ್ನು ಪ್ರಸಿದ್ಧಿಗೆ ತಂದುದರಿಂದ ಈ ಹೆಸರು. ಸ್ವತಃ ಗರುಡಾದ್ರಿ ರಚಿಸಿದ ಅತ್ಯಮೋಘ ಕಲಾಕೃತಿಗಳು ಸುರಪುರದ ಅವರ ವಂಶಸ್ಥರ ಮನೆಯಲ್ಲಿವೆ. ಇಂತಹ ಅಪರೂಪದ ಕಲೆಯನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಸಿದ್ಧಿಗೆ ತಂದ ಆಧುನಿಕ ಗರುಡಾದ್ರಿ ವಿಜಯ್‌ರನ್ನು ಪರಿಚಯಿಸಿದ್ದಕ್ಕೆ ಧನ್ಯವಾದ.

ಸುರಪುರ — ಕನಕಪ್ಪ ವಾಗಣಗೇರಿ



ಕೊನೇ-ಸಿಪ್

ವಾಚ್ಯಾರ್ಥ-ವ್ಯಂಗ್ಯಾರ್ಥ-ಧ್ವನ್ಯಾರ್ಥಗಳನ್ನು ಬೆಸೆದ ಕೆಲ ನುಡಿ 'ಲಿಕ್'ಗಳು:

- ಮೊದಲು ''ಕನ್ನಡ ಕವಿಕುಲತಿಲಕ ಗುಂಡಂ.... ಕನ್ನಡ ಪ್ರಹಸನ ಪ್ರಪಿತಾಮಹ'' ಕೈಲಾಸ 'ಭೀಮಸೇನನ ಅಡ್ರೆಸ್ಸೂ', ಅಂತೊಬ್ಬರು ಕೆಣಕಿದಾಗ, ಪದಗಳ ಜೊತೆ ಇರಲಿ, ಅಂಕೆ ಸಂಖ್ಯೆ ಜೊತೆಯೂ ಆಟವಾಡಬಲ್ಲ 'ಕೈ' ಹೇಳಿದ್ರು: ಬರ್‍ಕೊಳ್ಳೋ ಭೀಮಸೇನನ ನಂಬ್ರರು: 88248 ಡಬಲ್ ಏಟೂ ಫಾರ್ ಏಟೂ.
- ಕೈಲಾಸಂಗೆ ಸ್ಫೂರ್ತಿ ಖ್ಯಾತ ನಾಟಕಕಾರ ಬರ್ನಾಡ್ ಷಾ. ಸಂದರ್ಶನಕನೊಬ್ಬ 'ನಿಮ್ಮಿಬ್ಬರಲ್ಲಿರು ಕಾಮನ್ ಎಲಿಮೆಂಟ್ ಹೇಳಿ' ಅಂತ ಕೇಳಿದಾಗ ಫಟ್ಟನೆ ಉತ್ತರಬಂತು: ಷಾ Irish, ನಾ ಅಯ್ಯರಿಶ್!
- ಕೆಲಕಾಲ ಮಂಗಳೂರಿನಲ್ಲಿದ್ದು ಬಂದ ಕೈಲಾಸಂರನ್ನು 'ಕೊಂಕಣಿ ಭಾಷೆ ಕಲ್‌ತ್ರಾ?' ಎಂ ಕೇಳಿದಾಗ, ಅದರ ಕುಂಯ್ ಕುಂಯ್ ಧ್ವನಿಯನ್ನು ಆಡಿಕೊಳ್ಳುತ್ತಾ ಹೇಳಿದರವರು, ''yes, I c play it on my violin.''
- 'ನೆಲದ ಮ್ಯಾಲೆ ನಡೀಲಿಕ್ಕೆ ಬರವೊಲ್ಲದು, 'ಅಂತ'ರಿಕ್ಷಾದೊಳಗೆ ಹೋಗಿದ್ದೆ' -ಬೇಂದ್ರೆ.
- ಚತುರೋಕ್ತಿ ಅಂದ್ರೆ, ನೆನಪಾಗೋದು ಗೋರಿಕಲ್ಲುಗಳ ಮೇಲೆ ಕೆತ್ತಿದ 'ಕಗ್ಗಾವ್ಯ'. ದಂತ ವೈ ಸಮಾಧಿಯ ಮೇಲಿದ್ದ ಒಂದು ಹೀಗಿದೆ: ಅಪರಿಚಿತನೇ ಈ ಗೋರಿಯನ್ನು-grave ಅ ಗಂಭೀರವಾಗಿ- with gravity ತಲುಪು! ಡಾ|| ಜಾನ್ ತನ್ನ ಕಡೇ 'ಕ್ಯಾವಿಟೀ' ತುಂಬುತ್ತಿದ್ದಾ
- ವಯಾಗ್ರಾ ಮಾತ್ರೆ ಕುರಿತು ಎಚ್ಚರ, ಕಟ್ಟಳೆ, ನಿಯಮ ಬರೆದ ಕಾಪಿ ರೈಟರ್, ಬಹಳ ಯೋಚ ತಲೆಕೆರೆದು, ಕತ್ತಲಾವರಿಸುತ್ತಿರುವಾಗ 'look before you leap' ಶೀರ್ಷಿಕೆ ಕೊಟ್ಟ.
- ಬುದ್ಧ ಮರಳಿ ಬಂದಾಗ ಯಶೋಧರೆ, 'ನಡುರಾತ್ರಿ ಹಾಗೆ ಹೋಗೋ ಮೊದಲು ನನಗೊಂ ಮಾತು ಹೇಳಬಾರದಿತ್ತೆ' ಎಂದು ಕೇಳಿದ್ದಳಂತೆ. ಇದನು ಚತುರ ಕವಿ ವಿ.ಜಿ. ಭಟ್ಟರು ಹೀ ಮುಂದುವರೆಸುತ್ತಾರೆ.
  ಬುದ್ಧ: ನಾನು ಹೇಳಿದ್ದರೆ ನೀನೇನು ಮಾಡುತ್ತಿದ್ದೆ?
  ಯಶೋಧರೆ: ಏನಿಲ್ಲ, ಬಾಗಿಲನ್ನಾದರೂ ಮುಚ್ಚಿ ಚಿಲಕ ಹಾಕಿಕೊಳ್ಳುತ್ತಿದ್ದೆ!
- **ಕಚಗುಳಿ:** ಸೌತ್ ಎಂಡ್ ಸರ್ಕಲ್ ಎಲ್ಲಿದೇಂತ ಬೆಂಗಳೂರಿಗರಿಗೆಲ್ಲ ಗೊತ್ತು. ಆದ್ರೆ ನಮ್ಮ ದೇ 'ಸೌತ್ ಎಂಡ್ ಸರ್ಕಲ್'?

Printed, published and owned by **Vijay Sankeshwar**, Published at 1st Floor, "Giriraj Annexe", P.W.D. Circuit House Road, HUBLI - 580 029 Karnataka Ph: 253656, 253657, 253658. Fax: 0836-25
Printed at Anand Printers & Publishers, 6/127, 5th Cross, KPN Extn., Bangalore - 560 002
Editor: **Jayant Kaikini**

ಭಾವನಾ

ಕಲಾಕೃತಿ: ಗೀತಾ ಸಾಳುಂಕೆ



BHAVANA - Monthly October 2000 AFD. CR. 1/2000-01

ಮುದ್ರಣ: ರಾಜ್‌ಹನ್ಸ್ ಎಂಟರ್‌ಪ್ರೈಸಸ್, ಬೆಂ.- 44, ☏ 3357070